
ಶನಿವಾರ, ಮಾರ್ಚ್ 13, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 72 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



**ಭೂಮಿಕಾ**
ಮಕ್ಕಳ ಸಾಮಾಜಿಕ ಜಾಲತಾಣಗಳ ಬಳಕೆ ಬಗ್ಗೆ ಪೋಷಕರು ನಿಗಾ ವಹಿಸುವ ಜೊತೆಗೆ ಅದರಿಂದಾಗುವ ತೊಂದರೆಗಳ ಬಗ್ಗೆ ಅರಿವು ಮೂಡಿಸಬೇಕು.

ಆಳ–ಅಗಲ: ಚೀನಾದಿಂದ ಮತ್ತೆ ಉಪಟಳ: ಗಡಿ ಸನಿಹ ಅಣೆಕಟ್ಟೆ

ಆಗಸ್ಟ್ 1ಕ್ಕೆ ನೀಟ್ ಪರೀಕ್ಷೆ 11

‘ಬಲಿಷ್ಠ’ ಅಧ್ಯಕ್ಷರ ಹುಡುಕಾಟಕ್ಕೆ ಮುಂದಾದ ಬಿಜೆಪಿ? 7

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 50,792 ▼ | 15,030 ▼ | 72.79 ▲ |




**ಇಂದಿನ ಪಾಡ್‌ಕಾಸ್ಟ್ ವಿಶೇಷ**
**ವಚನವಾಣಿ**
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

## ದ್ವಿತೀಯ ಪಿಯುಸಿ ಪರೀಕ್ಷೆ: ಅಂತಿಮ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಆಕ್ಷೇಪಣೆಗಳ ಪರಿಶೀಲನೆಯ ನಂತರ ಪದವಿ ಪೂರ್ವ ಶಿಕ್ಷಣ ಇಲಾಖೆಯು ದ್ವಿತೀಯ ಪಿಯುಸಿ ಪರೀಕ್ಷೆಯ ಅಂತಿಮ ಪರಿಷ್ಕೃತ ವೇಳಾಪಟ್ಟಿಯನ್ನು ಶುಕ್ರವಾರ ಪ್ರಕಟಿಸಿದೆ. 6

## ಮೊಯಿಲಿ, ಬ್ಯಾಕೋಡ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ನವದೆಹಲಿ: ಮಾಜಿ ಮುಖ್ಯಮಂತ್ರಿ, ಸಾಹಿತಿ ಎಂ.ವೀರಪ್ಪ ಮೊಯಿಲಿ ಅವರ ‘ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ’ ಮಹಾಕಾವ್ಯವು ಕೇಂದ್ರ ಸಾಹಿತ್ಯ ಅಕಾಡೆಮಿಯ 2020ನೇ ಸಾಲಿನ ಕನ್ನಡ ವಿಭಾಗದ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದೆ. 10

## ಸಿ.ಡಿ ಪ್ರಕರಣ: ವರದಿಗಾರರು, ಶಿಕ್ಷಕಿ ಸೇರಿ ಐವರ ವಿಚಾರಣೆ

ಬೆಂಗಳೂರು: ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟದ್ದು ಎನ್ನಲಾದ ಸಿ.ಡಿ ಪ್ರಕರಣದ ವಿಚಾರಣೆಗಾಗಿ ಬೆಂಗಳೂರು ಹೆಚ್ಚುವರಿ ಪೊಲೀಸ್ ಕಮಿಷನರ್ ಸೌಮೆಂದು ಮುಖರ್ಜಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್ಐಟಿ) ರಚನೆಯಾಗಿದ್ದು, ಶುಕ್ರವಾರ ಸುದ್ದಿವಾಹಿನಿಗಳ ನಾಲ್ವರು ವರದಿಗಾರರು ಹಾಗೂ ರಾಮನಗರದ ಶಿಕ್ಷಕಿಯೊಬ್ಬರನ್ನು ವಿಚಾರಣೆಗೆ ಒಳಪಡಿಸಲಾಗಿದೆ. 10

**ಚಿನಕುರಳಿ**
ಪ್ರಕಾಶ್ ಶೆಟ್ಟಿ




ಪರಿಷ್ಕೃತ ಮಾರ್ಗಸೂಚಿ ಪ್ರಕಟಿಸಿದ ರಾಜ್ಯ ಸರ್ಕಾರ


# ಕೋವಿಡ್ 2ನೇ ಅಲೆ ಭೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ದಿಢೀರ್ ಹೆಚ್ಚಳ ಕಂಡುಬಂದಿದ್ದು, ಎರಡನೇ ಅಲೆಯ ಭೀತಿ ಎದುರಾಗಿದೆ.

ಹರಡುವಿಕೆಯ ವೇಗಕ್ಕೆ ಕಡಿವಾಣ ಹಾಕಲು ಪರೀಕ್ಷಾ ಪ್ರಮಾಣ ಹೆಚ್ಚಳ, ಸಭೆ, ಸಮಾರಂಭಗಳಿಗೆ ಜನಸಂಖ್ಯೆ ಮಿತಿ ಪರಿಷ್ಕರಣೆ ಸೇರಿದಂತೆ ಆರೋಗ್ಯ ಇಲಾಖೆ ಶುಕ್ರವಾರ ಹೊಸ ಮಾರ್ಗಸೂಚಿ ಹೊರಡಿಸಿದೆ.

ಅಂತರ ರಾಜ್ಯ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವ ಜಿಲ್ಲೆಗಳು, ಸೋಂಕಿತರ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿರುವ ಪ್ರದೇಶಗಳು ಹಾಗೂ ಸಂಪರ್ಕಿತರಲ್ಲಿ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿರುವ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಲಾಗಿದೆ.



ಬೆಂಗಳೂರು ನಗರ, ಮೈಸೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ದಿನ ಕಳೆದಂತೆ ಗಣನೀಯವಾಗಿ ಏರುತ್ತಿದೆ. ಗುರುವಾರ ಸಭೆ ನಡೆಸಿದ್ದ ರಾಜ್ಯಮಟ್ಟದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಈ ಕುರಿತು ಪರಿಶೀಲನೆ ನಡೆಸಿ, ಎರಡನೇ ಅಲೆಯ ಅಪಾಯ ತಡೆಯಲು ಕೆಲವು ಶಿಫಾರಸುಗಳನ್ನು ಮಾಡಿತ್ತು. ಅದರಂತೆ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಸುತ್ತೋಲೆ ಹೊರಡಿಸಲಾಗಿದೆ.

ಹೊಸ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿರುವ ಜಿಲ್ಲೆಗಳಲ್ಲಿ ಕೋವಿಡ್ ಪರೀಕ್ಷಾ ಪ್ರಮಾಣದ ಗುರಿ ಹೆಚ್ಚಿಸಲಾಗಿದೆ.

12ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 9,15

**ಕೋವಿಡ್ ಪರೀಕ್ಷೆ ಪರಿಷ್ಕೃತ ಗುರಿ**


| | |
|---|---|
| ಬೆಂಗಳೂರು ನಗರ ಜಿಲ್ಲೆ ಮತ್ತು ಬಿಬಿಎಂಪಿ | 40,000 |
| ಮೈಸೂರು | 5,000 |
| ತುಮಕೂರು | 3,500 |
| ಬೆಳಗಾವಿ | 3,000 |
| ದಕ್ಷಿಣ ಕನ್ನಡ | 3,000 |
| ಉಡುಪಿ | 2,000 |
| ವಿಜಯಪುರ | 2,000 |
| ಕೊಡಗು | 1,000 |

**ಸಭೆ, ಸಮಾರಂಭಗಳಿಗೆ ಜನಸಂಖ್ಯೆಯ ಮಿತಿ**

| ಆಚರಣೆ/ ಸಮಾರಂಭ | ತೆರೆದ ಪ್ರದೇಶ | ಮುಚ್ಚಿದ ಪ್ರದೇಶ |
|---|---|---|
| ಮದುವೆ | 500 | 200 |
| ಜನ್ಮದಿನ ಮತ್ತು ಇತರ | 100 | 50 |
| ಅಂತಿಮ ದರ್ಶನ | 100 | 50 |
| ಅಂತ್ಯಕ್ರಿಯೆ | 50 | -- |
| ಇತರ ಸಮಾರಂಭ | -- | 100 |
| ಧಾರ್ಮಿಕ ಆಚರಣೆ/ ಸಮಾರಂಭ | 500 | -- |
| ರಾಜಕೀಯ ಸಮಾರಂಭ | 500 | -- |

### ‘ಮಾಸ್ಕ್ ಧರಿಸದಿದ್ದರೆ ಕ್ರಿಮಿನಲ್ ಮೊಕದ್ದಮೆ’

ಬೆಂಗಳೂರು: ಕೋವಿಡ್ ನಿಯಮ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ತಾಕೀತು ಮಾಡಿರುವ ಹೈಕೋರ್ಟ್, ಮಾಸ್ಕ್ ಧರಿಸದ, ಅಂತರ ಕಾಪಾಡದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಸೂಚಿಸಿದೆ.



ಫೆಬ್ರುವರಿ 21ರಂದು ಪಂಚಮಸಾಲಿ ಸಮುದಾಯ ಆಯೋಜಿಸಿದ್ದ ರ‍್ಯಾಲಿ ಸಂಬಂಧ ರಾಜ್ಯ ಸರ್ಕಾರ ಸಲ್ಲಿಸಿದ್ದ ಹೇಳಿಕೆ ಅವಲೋಕಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಕಟ್ಟಪ್ಪಣೆ ಮಾಡಿತು.

12ನೇ ಪುಟ ನೋಡಿ



**ರಥೋತ್ಸವ** ಹುಬ್ಬಳ್ಳಿಯಲ್ಲಿ ಶುಕ್ರವಾರ ಜರುಗಿದ ಉತ್ತರ ಕರ್ನಾಟಕದ ಆರಾಧ್ಯ ದೈವ ಸಿದ್ಧಾರೂಢ ಸ್ವಾಮೀಜಿಯ ರಥೋತ್ಸವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

# ಆರ್‌ಬಿಐ ಆರ್ಥಿಕ ನಿರ್ಬಂಧಕ್ಕೆ ಒಳಗಾದ ಬ್ಯಾಂಕ್‌ಗಳಿಗೆ ನೆರವು

ನವದೆಹಲಿ (ಪಿಟಿಐ/ರಾಯಿಟರ್ಸ್): ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ (ಆರ್‌ಬಿಐ) ಕಠಿಣ ಸ್ವರೂಪದ ಆರ್ಥಿಕ ನಿರ್ಬಂಧಗಳಿಗೆ (ಪಿಸಿಎ) ಒಳಗಾಗಿರುವ ಬ್ಯಾಂಕ್‌ಗಳಿಗೆ ಕೇಂದ್ರ ಹಣಕಾಸು ಸಚಿವಾಲಯವು ₹ 14,500 ಕೋಟಿ ನೆರವನ್ನು ಮುಂದಿನ ಕೆಲವು ದಿನಗಳಲ್ಲಿ ನೀಡುವ ನಿರೀಕ್ಷೆ ಇದೆ. ಈ ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿ ಸುಧಾರಿಸಲು ಸಚಿವಾಲಯವು ಈ ನೆರವು ನೀಡಲಿದೆ.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಯುಕೋ ಬ್ಯಾಂಕ್ ಈಗ ಆರ್‌ಬಿಐನ ನಿರ್ಬಂಧಗಳನ್ನು ಎದುರಿಸುತ್ತಿವೆ. ಸಾಲ ವಿತರಣೆ, ಬ್ಯಾಂಕ್ ಆಡಳಿತ ಮಂಡಳಿಯ ನಿರ್ದೇಶಕರ ಶುಲ್ಕ ಪಾವತಿ ಸೇರಿದಂತೆ ಹಲವು ವಿಚಾರಗಳಲ್ಲಿ ಈ ಬ್ಯಾಂಕ್‌ಗಳ ಮೇಲೆ ನಿರ್ಬಂಧಗಳು ಇವೆ.

ಯಾವ ಬ್ಯಾಂಕ್‌ಗಳಿಗೆ ಹಣಕಾಸಿನ ನೆರವು ಸಿಗಲಿದೆ ಎಂಬುದನ್ನು ಸಚಿವಾಲಯವು ಬಹುತೇಕ ಅಂತಿಮಗೊಳಿಸಿದೆ ಎಂದು ಮೂಲಗಳು ತಿಳಿಸಿವೆ. ಹಣಕಾಸಿನ ನೆರವು ಪಡೆದು ಈ ಬ್ಯಾಂಕ್‌ಗಳು ನಿರ್ಬಂಧಗಳಿಂದ ಹೊರ ಬರಬಹುದು ಎಂಬ ನಿರೀಕ್ಷೆ ಇದೆ.

ಸರ್ಕಾರವು ಎರಡು ಬ್ಯಾಂಕ್‌ಗಳನ್ನು ಮಾರಾಟ ಮಾಡಲು ಮುಂದಾಗಿದೆ. ಒಟ್ಟು ನಾಲ್ಕು ಬ್ಯಾಂಕ್‌ಗಳ ಹೆಸರು ಇರುವ ಪಟ್ಟಿಯನ್ನು ಸರ್ಕಾರ ಸಿದ್ಧಪಡಿಸಿದ್ದು, ನಾಲ್ಕು ಬ್ಯಾಂಕ್‌ಗಳ ಪೈಕಿ ಎರಡು ಬ್ಯಾಂಕ್‌ಗಳು ಮಾರಾಟ ಆಗಲಿವೆ ಎಂದು ಈ ಹಿಂದೆ ರಾಯಿಟರ್ಸ್ ವರದಿ ಮಾಡಿತ್ತು. ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮತ್ತು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹೆಸರು ಈ ಪಟ್ಟಿಯಲ್ಲಿ ಇದೆ ಎಂದು ವರದಿ ಹೇಳಿತ್ತು. ಈ ಎರಡು ಬ್ಯಾಂಕ್‌ಗಳಿಗೆ ಸರ್ಕಾರದಿಂದ ನೆರವು ಸಿಗುವ ನಿರೀಕ್ಷೆ ಇದೆ.

### ಶೇ 5ಕ್ಕೆ ತಲುಪಿದ ಹಣದುಬ್ಬರ

ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಲ್ಲಿ ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇಕಡ 5.03ಕ್ಕೆ ಏರಿಕೆ ಆಗಿದೆ. ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ಹೆಚ್ಚಳವು ಇದಕ್ಕೆ ಮುಖ್ಯ ಕಾರಣ ಎಂದು ಸರ್ಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇ 4.06ರಷ್ಟು ಆಗಿತ್ತು.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇ 1.89ರಷ್ಟು ಇದ್ದಿದ್ದು ಫೆಬ್ರುವರಿಯಲ್ಲಿ ಶೇ 3.87ಕ್ಕೆ ಏರಿಕೆ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಹೇಳಿದೆ.

# ಸಿರಿಧಾನ್ಯಕ್ಕೆ ಜಾಗತಿಕ ಮನ್ನಣೆ!

• ಎಸ್. ರವಿಪ್ರಕಾಶ್

**ಪ್ರಜಾವಾಣಿ ವಿಶೇಷ**

ಬೆಂಗಳೂರು: ಒಂದುಕಾಲದಲ್ಲಿ ಕಡು ಬಡವನ ಆಹಾರ ಎಂದೇ ಕರೆಯುತ್ತಿದ್ದ ಸಿರಿಧಾನ್ಯಕ್ಕೆ ಈಗ ಜಾಗತಿಕ ಮನ್ನಣೆ ಸಿಕ್ಕಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ (ಎಫ್‌ಎಒ) 2023 ಅನ್ನು ‘ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ’ವಾಗಿ ಆಚರಿಸುವುದಾಗಿ ಘೋಷಿಸಿದೆ.

ವಿಶ್ವಸಂಸ್ಥೆಯ ಭಾರತದ ರಾಯಭಾರಿ ತಿರುಮೂರ್ತಿ ಟ್ವೀಟ್ ಮೂಲಕ ಈ ಮಾಹಿತಿ ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಟ್ವೀಟ್ ಮಾಡಿ ಹರ್ಷ ವ್ಯಕ್ತಪಡಿಸಿದ್ದಾರೆ. ಆದರೆ, ಈ ಘೋಷಣೆಗೆ ಕಾರಣವಾದ ಕರ್ನಾಟಕ ಸರ್ಕಾರದಿಂದ ಈವರೆಗೂ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಕೃಷಿ ಇಲಾಖೆ, ಸಾವಯವ ಕೃಷಿ ಮಿಷನ್ ಕೂಡ ‘ಮೌನ’ವಾಗಿವೆ.



ಸಿರಿಧಾನ್ಯಗಳ ರಂಗೋಲಿ

2017–18 ರಲ್ಲಿ ಕೃಷಿ ಸಚಿವರಾಗಿದ್ದ ಕೃಷ್ಣ ಬೈರೇಗೌಡ ಅವರು ಕೇಂದ್ರ ಸರ್ಕಾರಕ್ಕೆ ಈ ಸಂಬಂಧ ಪ್ರಸ್ತಾವನೆ ಕಳಿಸಿದ್ದರು. ಅಲ್ಲದೇ ಆಹಾರ ಮತ್ತು ಕೃಷಿ ಒಕ್ಕೂಟದ ಆಹ್ವಾನದ ಮೇರೆಗೆ ರೋಮ್‌ನಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿ, ಸಿರಿಧಾನ್ಯಗಳ ಮಹತ್ವ ವಿವರಿಸಿ, ಸಿರಿಧಾನ್ಯಗಳ ವರ್ಷಾಚರಣೆಗೆ ಘೋಷಣೆಗೆ ಮನವಿ ಮಾಡಿದ್ದರು. ರಾಜ್ಯದ ಮನವಿ ಪುರಸ್ಕರಿಸಿ ವಿಶ್ವಸಂಸ್ಥೆಯ ಎಫ್‌ಎಒಗೆ ಕೇಂದ್ರ ಸರ್ಕಾರವೂ ಪ್ರಸ್ತಾವನೆ ಸಲ್ಲಿಸಿತ್ತು.

ಕರ್ನಾಟಕಕ್ಕೆ ಸೀಮಿತವಾಗಿದ್ದ ಸಿರಿಧಾನ್ಯಗಳ ಚಟುವಟಿಕೆಯನ್ನು ಹೊರ ರಾಜ್ಯಗಳು ಮತ್ತು ಹೊರ ದೇಶಗಳಿಗೆ ವಿಸ್ತರಿಸುವ ಕೆಲಸ 2016 ರಿಂದ 2018ರ ಅವಧಿಯಲ್ಲಿ ನಡೆಯಿತು. ರಾಷ್ಟ್ರ ಮಟ್ಟದ ಮತ್ತು ಜಾಗತಿಕ ಸಿರಿಧಾನ್ಯಗಳ ಮೇಳವನ್ನೂ ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು.

10ನೇ ಪುಟ ನೋಡಿ

# ‘ಸರ್ಕಾರಿ ಅಧಿಕಾರಿ ರಾಜ್ಯ ಚುನಾವಣಾ ಆಯುಕ್ತ ಆಗುವಂತಿಲ್ಲ’

ನವದೆಹಲಿ (ಪಿಟಿಐ): ರಾಜ್ಯ ಚುನಾವಣಾ ಆಯುಕ್ತರನ್ನಾಗಿ (ಎಸ್ಇಸಿ) ಸರ್ಕಾರಿ ಅಧಿಕಾರಿಗಳನ್ನು ನೇಮಿಸುವಂತಿಲ್ಲ ಎಂಬ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ಶುಕ್ರವಾರ ನೀಡಿದೆ.

ರಾಜ್ಯ ಚುನಾವಣಾ ಆಯುಕ್ತರನ್ನಾಗಿ ರಾಜ್ಯದ ಕಾನೂನು ಕಾರ್ಯದರ್ಶಿಗೆ ಹೆಚ್ಚುವರಿ ಹೊಣೆಗಾರಿಕೆ ವಹಿಸಿಕೊಟ್ಟಿದ್ದ ಗೋವಾ ಸರ್ಕಾರವನ್ನು ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ರಾಜ್ಯ ಚುನಾವಣಾ ಆಯುಕ್ತರು ಸ್ವತಂತ್ರ ವ್ಯಕ್ತಿಯಾಗಿರಬೇಕು. ರಾಜ್ಯ ಸರ್ಕಾರದ ಅಧೀನದ ಯಾವುದೇ ಹುದ್ದೆಯಲ್ಲಿ ಇರಬಾರದು. ಸರ್ಕಾರದ ಹುದ್ದೆಯಲ್ಲಿರುವ ವ್ಯಕ್ತಿಯು ಎಸ್ಇಸಿ ಆಗಿ ನೇಮಕವಾದರೆ, ಅಧಿಕಾರ ವಹಿಸಿಕೊಳ್ಳುವುದಕ್ಕೆ ಮೊದಲೇ ಅವರು ಸರ್ಕಾರಿ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ನ್ಯಾಯಮೂರ್ತಿಗಳಾದ ಆರ್.ಎಫ್. ನರಿಮನ್ ಮತ್ತು ಬಿ.ಆರ್. ಗವಾಯಿ ಅವರ ಪೀಠವು ಹೇಳಿದೆ.



ಸರ್ಕಾರದ ಹುದ್ದೆಯಲ್ಲಿರುವ ವ್ಯಕ್ತಿಯನ್ನು ಎಸ್ಇಸಿಯಾಗಿ ಯಾವ ಸರ್ಕಾರವೂ ನೇಮಿಸುವಂತಿಲ್ಲ ಎಂದು ಪೀಠವು ತಿಳಿಸಿದೆ.

‘ಸಂವಿಧಾನದ ಪ್ರಕಾರ, ರಾಜ್ಯ ಚುನಾವಣಾ ಆಯೋಗದ ಕಾರ್ಯ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ನಡೆಸದೇ ಇರುವುದು ರಾಜ್ಯ ಸರ್ಕಾರದ ಕರ್ತವ್ಯ’ ಎಂದೂ ಪೀಠವು ಹೇಳಿದೆ.

ಮಹಿಳೆಯರಿಗೆ ವಾರ್ಡ್‌ಗಳನ್ನು ಮೀಸಲು ಇರಿಸಿಲ್ಲ ಎಂಬ ಕಾರಣಕ್ಕೆ ಐದು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಬಾಂಬೆ ಹೈಕೋರ್ಟ್ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಗೋವಾ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿತ್ತು. ಚುನಾವಣಾ ಪ್ರಕ್ರಿಯೆಯಲ್ಲಿ ಹೈಕೋರ್ಟ್ ಮಧ್ಯಪ್ರವೇಶಿಸಬಾರದಿತ್ತು ಎಂದೂ ಗೋವಾ ಸರ್ಕಾರ ವಾದಿಸಿತ್ತು. ಹೈಕೋರ್ಟ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಜತೆಗೆ, ಕಾನೂನು ಕಾರ್ಯದರ್ಶಿಗೆ ರಾಜ್ಯ ಚುನಾವಣಾ ಆಯುಕ್ತರಾಗಿ ಹೆಚ್ಚುವರಿ ಹೊಣೆ ವಹಿಸಿದ್ದನ್ನು ಟೀಕಿಸಿದೆ.

ಸುಪ್ರೀಂ ಕೋರ್ಟ್‌ನ ತೀರ್ಪು, ರಾಜ್ಯ ಚುನಾವಣಾ ಆಯೋಗಗಳ ಸ್ವಾಯತ್ತೆಯನ್ನು ಸಂರಕ್ಷಿಸುವ ಕ್ರಮ ಎನ್ನಲಾಗಿದೆ.

**ಮುಖ್ಯಾಂಶಗಳು**

- ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪು
- ಗೋವಾದ ಕಾನೂನು ಕಾರ್ಯದರ್ಶಿಗೆ ಚುನಾವಣಾ ಹೊಣೆ ವಹಿಸಿದ್ದಕ್ಕೆ ಆಕ್ಷೇಪ
- ರಾಜ್ಯ ಚುನಾವಣಾ ಆಯೋಗದಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ಇಲ್ಲ

ಮಹಿಮೆ ಎಂಬ ಕುಗ್ರಾಮದ ಜನರ ವ್ಯಥೆ

# 8 ಕಿ.ಮೀ ನಡೆದು ಬಸ್ ಏರುವ ವಿದ್ಯಾರ್ಥಿಗಳು!

• ಸದಾಶಿವ ಎಂ.ಎಸ್

ಕಾರವಾರ: ಈ ಗ್ರಾಮದ ‘ಮಹಿಮೆ’ ಹೆಸರಿನಲ್ಲಷ್ಟೇ ಇದೆ. ಆದರೆ, ಇಲ್ಲಿನ ವಿದ್ಯಾರ್ಥಿಗಳು, ಉದ್ಯೋಗಿಗಳು, ಗ್ರಾಮಸ್ಥರು ಬಸ್ ನೋಡಬೇಕೆಂದರೂ ಎಂಟು ಕಿಲೋಮೀಟರ್ ನಡೆಯಬೇಕು!

ಇದು ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹಿಮೆ ಎಂಬ ಕುಗ್ರಾಮದ ವ್ಯಥೆ. ಒಂದೂವರೆ ವರ್ಷದಿಂದ ಈ ಊರು ಬಸ್ ಕಂಡಿಲ್ಲ. ಶಾಲೆಗಳು ಹಂತ ಹಂತವಾಗಿ ಪುನಃ ಆರಂಭವಾಗುತ್ತಿದ್ದರೂ ಗ್ರಾಮಕ್ಕೆ ಸಾರಿಗೆ ಸೌಲಭ್ಯವಿಲ್ಲ. ಹೀಗಾಗಿ ಸುಮಾರು 40 ವಿದ್ಯಾರ್ಥಿಗಳು ನಿತ್ಯವೂ ಕಾಡಿನ ನಡುವೆ ನಡೆದುಕೊಂಡೇ ಸಾಗುತ್ತಿದ್ದಾರೆ. ಇವರಲ್ಲಿ ಅರ್ಧದಷ್ಟು ಬಾಲಕಿಯರೇ ಇದ್ದಾರೆ.

ರಾಷ್ಟ್ರೀಯ ಹೆದ್ದಾರಿ 206ರಲ್ಲಿ ಮಹಿಮೆ ಕ್ರಾಸ್ ಎಂಬಲ್ಲಿಗೆ ಅವರು ತಲುಪಲು ಸುಮಾರು ಒಂದು ತಾಸು ಬೇಕು. ಅಲ್ಲಿಂದ ಬಸ್ ಹಿಡಿದು ಶಾಲೆ, ಕಾಲೇಜುಗಳಿಗೆ ತಲುಪುತ್ತಿದ್ದಾರೆ. ಮಹಿಮೆಯಲ್ಲಿ ಪ್ರೌಢಶಾಲೆಯಿಲ್ಲ. ವಿದ್ಯಾರ್ಥಿಗಳು 20 ಕಿಲೋಮೀಟರ್ ದೂರದ ಅಳ್ಳಂಕಿ, 25 ಕಿಲೋಮೀಟರ್ ದೂರದ ಜಲವಳಕರ್ಕಿ, 16 ಕಿಲೋಮೀಟರ್ ದೂರದ ಗೇರುಸೊಪ್ಪಕ್ಕೆ ಹೋಗುತ್ತಾರೆ. ಕವಲಕ್ಕಿ ಎಂಬಲ್ಲಿ ಪಿ.ಯು ಕಾಲೇಜು ಇದೆ. ಪದವಿ ಅಧ್ಯಯನಕ್ಕೆ 40 ಕಿಲೋಮೀಟರ್ ದೂರದಲ್ಲಿರುವ ಹೊನ್ನಾವರ ಪಟ್ಟಣವೇ ಅತ್ಯಂತ ಸಮೀಪವಾಗಿದೆ.

‘ಊರಿನಲ್ಲಿರುವ ಬಹುತೇಕರು ಬಡವರು. ದ್ವಿಚಕ್ರ ವಾಹನಗಳನ್ನು ಅನಿವಾರ್ಯವಾಗಿ ಇಟ್ಟುಕೊಂಡಿದ್ದರೂ ಕೆಲಸಕ್ಕೆ ಹೋಗಲು ಬಳಕೆಯಾಗುತ್ತವೆ. ಆ ಸಂದರ್ಭದಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಲು, ಪುನಃ ಬರಲು ಕಷ್ಟವಾಗುತ್ತದೆ. ಮಹಿಮೆ ಕ್ರಾಸ್‌ನಲ್ಲಿ ಆಟೊಗಳಿವೆ. ಆದರೆ, ₹ 300, ₹ 400 ಬಾಡಿಗೆ ಕೊಡಲು ನಾವು ಶಕ್ತರಾಗಿಲ್ಲ. ಹೀಗಾಗಿ ನಡೆದು ಸುಸ್ತಾಗುವ ಮಕ್ಕಳು ತರಗತಿಯಲ್ಲೂ ಏಕಾಗ್ರತೆ ಹೊಂದಲು ಕಷ್ಟವಾಗುತ್ತಿದೆ’ ಎನ್ನುತ್ತಾರೆ ಗ್ರಾಮಸ್ಥ ರಾಜೇಶ ನಾಯ್ಕ ಹಾಗೂ ಇತರರು.



ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯಿತಿಯ ಮಹಿಮೆ ಗ್ರಾಮದಿಂದ ವಿದ್ಯಾರ್ಥಿನಿಯರು ಬಸ್‌ಗಾಗಿ ನಡೆದುಕೊಂಡು ಬರುತ್ತಿರುವುದು

ಈ ಗ್ರಾಮದ ಬಳಿ ಇರುವ ಹಳ್ಳ ಮಳೆಗಾಲ ಪೂರ್ತಿ ಉಕ್ಕಿ ಹರಿಯುತ್ತದೆ. ಆಗ ಇಲ್ಲಿನವರು ಹೊರ ಜಗತ್ತಿನೊಂದಿಗೆ ಸಂಪರ್ಕ ಕಡಿದುಕೊಳ್ಳುತ್ತಾರೆ. ಮಳೆಗಾಲಕ್ಕೂ ಮೊದಲೇ ಅಷ್ಟೂ ಅವಧಿಗೆ ಬೇಕಾದ ದಿನಸಿಯನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು ಅವರಿಗೆ ರೂಢಿಯಾಗಿದೆ.

ಕಳೆದ ವರ್ಷ ಫೆ.1ರಂದು ಮಹಿಮೆಯ ಹಿರಿಯ ಪ್ರಾಥಮಿಕ ಶಾಲೆಯ ಸುವರ್ಣ ಮಹೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಿಕ್ಷಣ ಸಚಿವ ಸುರೇಶ ಕುಮಾರ್, ಶಾಸಕ ಸುನೀಲ ನಾಯ್ಕ ಊರಿನ ಸಮಸ್ಯೆಗಳನ್ನು ಕಂಡಿದ್ದರು. ಅಲ್ಲದೇ ಬಸ್, ರಸ್ತೆಯ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದರು. ಅದು ಆದಷ್ಟು ಬೇಗ ಕಾರ್ಯರೂಪಕ್ಕೆ ಬರಬೇಕು ಎಂದು ಗ್ರಾಮಸ್ಥರು ಒತ್ತಾಯಿಸುತ್ತಾರೆ.

### ‘ಸಮಸ್ಯೆ ಪರಿಹಾರಕ್ಕೆ ಯತ್ನ’

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕುಮಟಾ ಘಟಕದ ವ್ಯವಸ್ಥಾಪಕಿ ದೀಪಾ ನಾಯಕ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿ, ‘ಕೊರೊನಾ ನಂತರ ಸಿಬ್ಬಂದಿ ಹಾಗೂ ಬಸ್‌ಗಳ ಕೊರತೆಯಿದೆ. ಇದರ ನಡುವೆಯೂ ಗ್ರಾಮೀಣ ಮಾರ್ಗಗಳಿಗೆ ಸೇವೆ ನೀಡಲು ಪ್ರಯತ್ನಿಸಲಾಗುತ್ತಿದೆ. ಸಮಸ್ಯೆಯನ್ನು ಪರಿಶೀಲಿಸಿ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದು’ ಎಂದು ತಿಳಿಸಿದ್ದಾರೆ.

**ಮಹಿಮೆಯ ಮಹಿಷಾಸುರ ಮರ್ದಿನಿ ದೇವಸ್ಥಾನದ ಬಳಿ ರಸ್ತೆ ನಿರ್ಮಾಣಕ್ಕೆ ₹ 25 ಲಕ್ಷ ಹಾಗೂ ಒಂದು ಸೇತುವೆಗೆ ₹ 80 ಲಕ್ಷ ಮಂಜೂರಾಗಿದೆ. ಶೀಘ್ರವೇ ಕೆಲಸ ಶುರುವಾಗಲಿದೆ**
**ಸುನೀಲ ನಾಯ್ಕ,** ಭಟ್ಕಳ– ಹೊನ್ನಾವರ ಶಾಸಕ

# ‘ಭೂ ಮಾಫಿಯಾ ಬೆಳೆಯಲು ರಾಷ್ಟ್ರೀಯ ಪಕ್ಷಗಳೇ ಕಾರಣ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ಜಮೀನು ನುಂಗುವುದಕ್ಕೆ ಪ್ರೇರಣೆ ನೀಡುವುದು ಮತ್ತು ಭೂ ಕಬಳಿಕೆ ದಂಧೆ ಬೆಳೆಸುವಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳ ಪಾಲು ಸಮಾನವಾಗಿದೆ ಎಂದು ಬಿಜೆಪಿ ಹಾಗೂ ಕಾಂಗ್ರೆಸ್ ವಿರುದ್ಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟ್ವಿಟರ್‌ನಲ್ಲಿ ವಾಗ್ದಾಳಿ ನಡೆಸಿದ್ದಾರೆ.



ಎಚ್.ಡಿ. ಕುಮಾರಸ್ವಾಮಿ

‘ಭೂಕಬಳಿಕೆ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ’ ಎಂಬ ಕಂದಾಯ ಸಚಿವ ಆರ್. ಅಶೋಕ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಕುಮಾರಸ್ವಾಮಿ, ‘ವಿರೋಧ ಪಕ್ಷದಲ್ಲಿದ್ದಾಗ ಭೂ ಮಾಫಿಯಾ ವಿರುದ್ಧ ಹೋರಾಟ ಮಾಡಿದ್ದ ನಮಗೇ ಈಗ ಕೈ ಕಟ್ಟಿ ಹಾಕಿದಂತಾಗಿದೆ. ಅದನ್ನು ನಿಯಂತ್ರಿಸಲು ಅಸಾಧ್ಯವಾಗಿದೆ ಎಂದು ಸಚಿವರು ಹೇಳಿದ್ದಾರೆ. ವ್ಯವಸ್ಥೆ ಹದಗೆಡಲು ಕಾರಣವನ್ನೂ ಸಚಿವರು ಪ್ರಸ್ತಾಪಿಸಿದ್ದರೆ ಚೆನ್ನಾಗಿರುತ್ತಿತ್ತು’ ಎಂದಿದ್ದಾರೆ.

‘ಅಕ್ರಮದಲ್ಲಿ ತೊಡಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡರೆ ಅವರು ಮತ್ತೆ ಅದೇ ಸ್ಥಾನದಲ್ಲಿ ಬಂದು ಕೂರುತ್ತಾರೆ’ ಎಂದು ಸಚಿವರು ಹೇಳಿದ್ದಾರೆ. ಅಧಿಕಾರಿಗಳು ಈ ಮಟ್ಟಿಗಿನ ಭಂಡತನ ತೋರಲು ರಾಜಕಾರಣಿಗಳು ಹುಟ್ಟುಹಾಕಿದ ವ್ಯವಸ್ಥೆಯೇ ಕಾರಣ. ಸರ್ಕಾರ ಅಸಹಾಯಕತೆ ಪ್ರದರ್ಶಿಸಿ, ದುರ್ವ್ಯವಸ್ಥೆಯನ್ನು ಪ್ರೋತ್ಸಾಹಿಸದೇ ಶುದ್ಧೀಕರಣ ನಡೆಸಬೇಕು. ಕಠಿಣ ನೀತಿ ರೂಪಿಸಿ, ಜಾರಿಗೊಳಿಸಿದರೆ ಯಾವ ಮಾಫಿಯಾ ಆದರೂ ಏನು ಮಾಡಲು ಸಾಧ್ಯ? ಅದಕ್ಕೆ ಇಚ್ಛಾಶಕ್ತಿ ಬೇಕಷ್ಟೆ ಎಂದು ಹೇಳಿದ್ದಾರೆ.

ಭೂ ಮಾಫಿಯಾ ಬೃಹದಾಕಾರವಾಗಿ ಬೆಳೆದು ನಿಲ್ಲಲು ಪಕ್ಷಗಳ ಹಿಂಬಾಲಕರು, ಬಾಲ ಬಡುಕರೇ ಕಾರಣವಲ್ಲವೆ. ಪ್ರೋತ್ಸಾಹ ಕೊಟ್ಟು, ಈಗ ‘ನಿಯಂತ್ರಿಸಲು ಆಗುತ್ತಿಲ್ಲ’ ಎನ್ನುವುದು ಹೊಣೆಗೇಡಿತನ ಎಂದು ಕುಮಾರಸ್ವಾಮಿ ಟೀಕಿಸಿದ್ದಾರೆ.

## ನಾಳೆ ಕ್ಷತ್ರಿಯ ಏಕತಾ ರಥ ಯಾತ್ರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕ್ಷತ್ರಿಯ ಜನಾಂಗದ ಎಲ್ಲ ಪಂಗಡಗಳನ್ನೂ ಒಗ್ಗೂಡಿಸುವ ಸಲುವಾಗಿ ಇದೇ 14ರಂದು ಕ್ಷತ್ರಿಯ ಏಕತಾ ರಥ ಯಾತ್ರೆ ಹಮ್ಮಿಕೊಳ್ಳಲಾಗಿದೆ’ ಎಂದು ಜನ ಸಮೃದ್ಧಿ ಸಂಘದ ಸಂಸ್ಥಾಪಕ ಅಧ್ಯಕ್ಷ ಶೈಲೇಶ್ ನಾಜರೆ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಭಾನುವಾರ ಬೆಳಿಗ್ಗೆ 9.30ಕ್ಕೆ ಭಾಷ್ಯಂ ವೃತ್ತದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುತ್ತದೆ. ಅಲ್ಲಿಂದ ನಾಡದೇವಿ ಚಾಮುಂಡೇಶ್ವರಿ ದೇವಿ, ಶಿವಾಜಿ ಮಹಾರಾಜ ಹಾಗೂ ಆರಾಧ್ಯ ದೈವ ಪಾಂಡುರಂಗನ ರಥವು ಹೊರಡಲಿದೆ. ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಈ ಯಾತ್ರೆ ಕೊನೆಗೊಳ್ಳಲಿದ್ದು ಅಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.





ಸಮಾವೇಶದಲ್ಲಿ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳ ಶಿಕ್ಷಣ ತಜ್ಞರು, ಕಾರ್ಪೊರೇಟ್ ಕಂಪನಿಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು

# ಸಮಕಾಲೀನ ನಿರ್ವಹಣಾ ವಿಷಯಗಳ ಮೇಲೆ ಬೆಳಕು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಎಕ್ಸಲೆನ್ಸ್ (ಐಎಸ್‌ಎಂಇ) ಇತ್ತೀಚೆಗೆ ಮ್ಯಾನೇಜ್‌ಮೆಂಟ್‌ಗೆ ಸಂಬಂಧಿಸಿದಂತೆ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಸಮಾವೇಶವು ನಿರ್ವಹಣಾ ಕ್ಷೇತ್ರದಲ್ಲಿನ ಸಮಕಾಲೀನ ವಿಷಯಗಳ ಮೇಲೆ ಬೆಳಕು ಚೆಲ್ಲಿತು.

ಅಮೆರಿಕದ ವೆಸ್ಟ್‌ಕ್ಲಿಫ್ ವಿಶ್ವವಿದ್ಯಾಲಯ ಮತ್ತು ನಾರ್ತ್ ಕೊರೊಲಿನಾ ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಡೆದ ಈ ಸಮಾವೇಶದಲ್ಲಿ ದೇಶ–ವಿದೇಶಗಳ ನಿರ್ವಹಣಾ ತಜ್ಞರು ಭಾಗವಹಿಸಿದ್ದರು.

ಕೋವಿಡ್‌ನಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಮ್ಯಾನೇಜ್‌ಮೆಂಟ್ ವಲಯವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಚರ್ಚೆ ನಡೆಯಿತು. ಜಗತ್ತಿನಾದ್ಯಂತ ತಾಂತ್ರಿಕವಾಗಿಯೂ ತ್ವರಿತಗತಿಯಲ್ಲಿ ಬದಲಾವಣೆಗಳು ಸಂಭವಿಸುತ್ತಿದ್ದು, ನಿರ್ವಹಣಾ ಸಂಸ್ಥೆಗಳು ಯಾವ ರೀತಿ ಕಾರ್ಯನಿರ್ವಹಿಸಬೇಕು ಎಂಬುದರ ಬಗ್ಗೆ ವಿಚಾರಗೋಷ್ಠಿಗಳು ನಡೆದವು. ಇದಲ್ಲದೆ, ಆರ್ಥಿಕತೆ, ಪರಿಸರ ಮತ್ತು ಎಲ್ಲ ವಲಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ನೀತಿಗಳು ಮತ್ತು ಅವುಗಳ ಪರಿಣಾಮದ ಬಗ್ಗೆಯೂ ಚರ್ಚಿಸಲಾಯಿತು.

ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳ ಶಿಕ್ಷಣ ತಜ್ಞರು, ಕಾರ್ಪೊರೇಟ್ ಕಂಪನಿಗಳ ಮುಖ್ಯಸ್ಥರು ಕೂಡ ನಿರ್ವಹಣಾ ವಲಯದ ಸಮಕಾಲೀನ ವಿಷಯಗಳ ಕುರಿತು ಮಾಹಿತಿ ಹಂಚಿಕೊಂಡರು.

# ಕೌಶಲ ತರಬೇತಿ ಕಾರ್ಯಾಗಾರ 15ರಿಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಇದೇ 15ರಿಂದ 20ರವರೆಗೆ ನಿಮ್ಹಾನ್ಸ್ ಆವರಣದಲ್ಲಿ ಜೀವನ ಕೌಶಲ ತರಬೇತಿ ಕಾರ್ಯಾಗಾರ ಹಮ್ಮಿಕೊಂಡಿದೆ.


ವಿಶ್ವವಿದ್ಯಾಲಯದ ರಜತ ಮಹೋತ್ಸವದ ಅಂಗವಾಗಿ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ವಿಶ್ವವಿದ್ಯಾಲಯದ ಸಂಯೋಜನೆಗೊಳಪಟ್ಟ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಿಗೆ 6 ದಿನಗಳವರೆಗೆ ಈ ಕಾರ್ಯಾಗಾರ ನಡೆಯಲಿದೆ. ರಾಜ್ಯ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ನಿಮ್ಹಾನ್ಸ್ ಸಹಯೋಗದಲ್ಲಿ ನಡೆಯುವ ಈ ಕಾರ್ಯಾಗಾರವನ್ನು ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಸಚ್ಚಿದಾನಂದ ಉದ್ಘಾಟಿಸಲಿದ್ದಾರೆ.

ನಿಮ್ಹಾನ್ಸ್ ನಿರ್ದೇಶಕ ಡಾ. ಗುರುರಾಜ್, ಕೇಂದ್ರ ಸರ್ಕಾರದ ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಖಾದ್ರಿ ನರಸಿಂಹಯ್ಯ, ರಾಜ್ಯ ಎನ್‌ಎಸ್‌ಎಸ್ ಯೋಜನಾಧಿಕಾರಿ ಪ್ರತಾಪ್ ಲಿಂಗಯ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.




## ಸಂಕ್ಷಿಪ್ತ ಸುದ್ದಿ


### ಶ್ರೀನಿವಾಸ ಕಪ್ಪಣ್ಣಗೆ ಪ್ರಶಸ್ತಿ



**ರಾಮನಗರ:** ಜಾನಪದ ಸಂಘಟಕ, ಬೆಂಗಳೂರಿನ ಜಿ. ಶ್ರೀನಿವಾಸ ಕಪ್ಪಣ್ಣ ಅವರು ಕರ್ನಾಟಕ ಜಾನಪದ ಪರಿಷತ್ತು ನೀಡುವ 2021ನೇ ಸಾಲಿನ ನಾಡೋಜ ಡಾ.ಜಿ. ನಾರಾಯಣ ಜಾನಪದ ಲೋಕಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 13ರಂದು ಸಂಜೆ 5.30ಕ್ಕೆ ರಾಮನಗರದ ಜಾನಪದ ಲೋಕದ ಆವರಣದಲ್ಲಿ ನಡೆಯಲಿದೆ.

### ಎ.ವಿ. ನಾವಡಗೆ ಕಸಾಪ ದತ್ತಿ ಪ್ರಶಸ್ತಿ



**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ವಿದ್ವತ್ ದತ್ತಿ ಪ್ರಶಸ್ತಿ’ಗೆ ಹಿರಿಯ ಸಂಶೋಧಕ ಡಾ.ಎ.ವಿ. ನಾವಡ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದ ಆಯ್ಕೆ ಸಮಿತಿಯು ಶುಕ್ರವಾರ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಕನ್ನಡ ಮತ್ತು ತುಳು ಭಾಷೆಯ ವಿದ್ವಾಂಸರಾಗಿರುವ ನಾವಡ ಅವರು, ಕಳೆದ ಐದು ದಶಕಗಳಿಂದ ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ವಿದ್ಯುತ್ ವ್ಯತ್ಯಯ 15ರಿಂದ

**ಬೆಂಗಳೂರು:** ಜೆ.ಪಿ. ನಗರ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಈ ಭಾಗದ ಸುತ್ತ–ಮುತ್ತಲಿನ ಪ್ರದೇಶದಲ್ಲಿ ಇದೇ 15ರಿಂದ 20ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಬಿಸಿಎಂಸಿ ಬಡಾವಣೆ, ತಿಪ್ಪಸಂದ್ರ, ಚೆನ್ನಮ್ಮ ಉದ್ಯಾನ, ಆರ್‌ಬಿಐ ಬಡಾವಣೆ, 14ನೇ ಮುಖ್ಯರಸ್ತೆ, ಜೆ.ಪಿ. ನಗರ 6ನೇ ಹಂತ, ಸಾರಕ್ಕಿ ತೋಟ, ರೋಸ್ ಗಾರ್ಡನ್, ಸಿದ್ದೇಶ್ವರ ಥಿಯೇಟರ್, ಸಿಂಧೂರ್ ಕಲ್ಯಾಣಮಂಟಪ, ಈಶ್ವರ ಬಡಾವಣೆ, ಶರತ್ ನಗರ, ಶಿವಶಕ್ತಿ ನಗರ, ಬೀರಪ್ಪ ಗಾರ್ಡನ್, ಚುಂಚಘಟ್ಟ ಮುಖ್ಯರಸ್ತೆ, ದೊಡ್ಡಮನೆ ಕೈಗಾರಿಕಾ ಪ್ರದೇಶ, ರಾಜೀವ್ ಗಾಂಧಿ ರಸ್ತೆ, ಚರ್ಚ್ ರಸ್ತೆ, ಶ್ರೀನಿವಾಸ ಕಲ್ಯಾಣಮಂಟಪ ರಸ್ತೆ, ಕನಕಪುರ ಮುಖ್ಯರಸ್ತೆ, ಸಾರಕ್ಕಿ ಕೆರೆ ಸುತ್ತ–ಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.











ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಕಾರ್ಯಕ್ರಮವನ್ನು ಉದ್ಘಾಟಿಸಿದರು.

## ‘ಸಂಶೋಧನೆಗೆ ಒತ್ತು ಅಗತ್ಯ’

ಯಲಹಂಕ: ಇಂದಿನ ಶಿಕ್ಷಣದ ಮೂಲಕ ಸಮಾಜಕ್ಕೆ ಅನುಕೂಲವಾಗುವಂತಹ ಉತ್ಪನ್ನಗಳನ್ನು ನೀಡುವ ಆವಿಷ್ಕಾರಗಳು ಹೊರಬರಬೇಕು ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್‌ನ ಮಾಜಿ ಅಧ್ಯಕ್ಷ ಡಾ.ಎಸ್.ಎಸ್.ಮಂಥ ಅಭಿಪ್ರಾಯಪಟ್ಟರು.

ರೇವಾ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಅಧ್ಯಯನಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಪುನಶ್ಚೇತನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳು ಪುಸ್ತಕದ ಜ್ಞಾನದ ಜೊತೆಗೆ ನವೀನ ಉತ್ಪನ್ನಗಳನ್ನು ನೀಡಲು ಪೂರಕವಾದ ಆವಿಷ್ಕಾರಗಳನ್ನು ಸ್ನಾತಕೋತ್ತರ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕು’ ಎಂದರು.

ವಿದ್ಯಾರ್ಥಿಗಳು ಪ್ರಶ್ನೆಮಾಡುವ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು. ಬಹು-ವಿಷಯಗಳ ಸಮ್ಮಿಲನದಿಂದ ಕೂಡಿದ ಶಿಕ್ಷಣ ಮತ್ತು ಸಂಶೋಧನೆಗೆ ಒತ್ತು ನೀಡಬೇಕಾದುದು ಇಂದಿನ ಅಗತ್ಯ.’ ಎಂದು ತಿಳಿಸಿದರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿ, ’ಸಮಾಜಕ್ಕೆ ಒಳಿತಾಗುವಂತಹ ಯೋಜನೆಗಳನ್ನು ಆವಿಷ್ಕರಿಸಿ, ಕಾರ್ಯರೂಪಕ್ಕೆ ತರುವುದು ನಮ್ಮ ಮುಖ್ಯ ಉದ್ದೇಶ. ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಆದ್ಯತೆ ನೀಡಲಾಗುತ್ತಿದೆ‘ ಎಂದರು.

ಸಹ ಕುಲಪತಿ ಡಾ.ಎಂ. ಧನಂಜಯ, ಕುಲಸಚಿವ ಡಾ.ಎನ್. ರಮೇಶ್, ಪರೀಕ್ಷಾ ನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಜಿ.ಬೀನಾ ಉಪಸ್ಥಿತರಿದ್ದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆ

# ತಮ್ಮದು ಯಾವುದೇ ಪಕ್ಷದ ವಿರುದ್ಧದ ರಾಜಕಾರಣವಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವುದು ಮಾತ್ರ ತಮ್ಮ ಉದ್ದೇಶ. ನಿರ್ದಿಷ್ಟವಾಗಿ ಯಾವುದೇ ಪಕ್ಷವನ್ನು ಗುರಿಯಾಗಿಟ್ಟುಕೊಂಡು ರಾಜಕೀಯ ಮಾಡುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಜೆಡಿಎಸ್‌ನ ಮಾಜಿ ಶಾಸಕ ಮಧು ಬಂಗಾರಪ್ಪ ಅವರ ಜತೆ ತಮ್ಮ ನಿವಾಸದಲ್ಲಿ ಶುಕ್ರವಾರ ಸಮಾಲೋಚನೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಜೆಡಿಎಸ್ ಸೇರಿದಂತೆ ಯಾವುದೇ ಪಕ್ಷವನ್ನು ಗುರಿಯಾಗಿಸಿಕೊಂಡು ನಾನು ಕೆಲಸ ಮಾಡುತ್ತಿಲ್ಲ. ಆ ಪಕ್ಷ ಕೂಡ ರಾಜಕೀಯದಲ್ಲಿ ಇರಬೇಕು’ ಎಂದರು.

ದೊಡ್ಡ ನಾಯಕರನ್ನಷ್ಟೇ ಕಾಂಗ್ರೆಸ್‌ಗೆ ಆಹ್ವಾನಿಸುತ್ತಿಲ್ಲ. ಗ್ರಾಮ ಪಂಚಾಯಿತಿಗಳ ಮಟ್ಟದ ಕಾರ್ಯಕರ್ತರಿಂದ ಯಾರು ಬೇಕಾದರೂ ಕಾಂಗ್ರೆಸ್ ಸೇರಲು ಅವಕಾಶವಿದೆ. ಕಾಂಗ್ರೆಸ್ ಸಾಗರ ಇದ್ದಂತೆ. ಈ ಪಕ್ಷದಲ್ಲಿದ್ದು, ತೊರೆದು ಹೋದವರು ಕೂಡ ಮರಳಿ ಸಾಗರವನ್ನು ಸೇರಲು ಬರುತ್ತಿದ್ದಾರೆ ಎಂದು ಹೇಳಿದರು.

‘ಎಸ್. ಬಂಗಾರಪ್ಪ ಅವರು ಆರಂಭದ ದಿನಗಳಲ್ಲೇ ನನ್ನನ್ನು ಗುರುತಿಸಿ ನಾಯಕತ್ವ ನೀಡಿ, ಬೆಳೆಸಿದವರು. ಅವರ ಗರಡಿಯಲ್ಲಿ ಬೆಳೆದು ಇಲ್ಲಿಯವರೆಗೂ ಬಂದಿದ್ದೇನೆ. ಬಂಗಾರಪ್ಪ ಅವರು ಕಾಂಗ್ರೆಸ್‌ಗೆ ದೊಡ್ಡ ಮಟ್ಟದಲ್ಲಿ ಶಕ್ತಿ ತುಂಬಿದ ನಾಯಕರಾಗಿದ್ದರು. ಅವರ ಮಗನಾದ ಮಧು ಬಂಗಾರಪ್ಪ ಅವರನ್ನು ಮತ್ತೆ ಪಕ್ಷಕ್ಕೆ ಕರೆತರಲು ಹಲವು ದಿನಗಳಿಂದ ಪ್ರಯತ್ನಿಸುತ್ತಲೇ ಇದ್ದೆ. ಪಕ್ಷದ ವರಿಷ್ಠರ ಜತೆ ಮಧು ಅವರು ಈಗಾಗಲೇ ಮಾತುಕತೆ ನಡೆಸಿದ್ದಾರೆ. ಮತ್ತೆ ಅವರು ಪಕ್ಷಕ್ಕೆ ಮರಳುತ್ತಿರುವುದರಿಂದ ಬಲ ಬರಲಿದೆ’ ಎಂದರು.

ಮಧು ಬಂಗಾರಪ್ಪ ಮಾತನಾಡಿ, ‘ ಕಾಂಗ್ರೆಸ್‌ಗೆ ಅಧಿಕೃತವಾಗಿ ಸೇರುವುದಷ್ಟೇ ಬಾಕಿ ಉಳಿದಿದೆ. ರಾಜ್ಯಕ್ಕೆ ಕಾಂಗ್ರೆಸ್‌ನ ಅವಶ್ಯಕತೆ ಇದೆ ಎಂಬುದು ಜನರ ಅನಿಸಿಕೆ. ಆ ಕಾರಣಕ್ಕಾಗಿ ಕಾಂಗ್ರೆಸ್ ಸೇರುತ್ತಿದ್ದೇನೆ’ ಎಂದರು.

ಬಂಗಾರಪ್ಪ ಅವರಿಗೆ ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಅವಕಾಶ ಕೊಟ್ಟ ಪಕ್ಷ ಕಾಂಗ್ರೆಸ್. ಅಧಿಕಾರವೇ ಸಿಗಬೇಕು ಎಂಬುದಲ್ಲ, ಕಾಂಗ್ರೆಸ್‌ನಲ್ಲಿ ನಾಯಕರಾಗಿ ಬೆಳೆಯಲು ಅವಕಾಶವಿದೆ ಎಂದು ಹೇಳಿದರು.



ಪಕ್ಷ ಸೇರ್ಪಡೆ ಕುರಿತು ಚರ್ಚಿಸಲು ಶುಕ್ರವಾರ ತಮ್ಮ ನಿವಾಸಕ್ಕೆ ಬಂದ ಮಾಜಿ ಶಾಸಕ ಮಧು ಬಂಗಾರಪ್ಪ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೂಗುಚ್ಛ ನೀಡಿ ಸ್ವಾಗತಿಸಿದರು– ಪ್ರಜಾವಾಣಿ ಚಿತ್ರ

### ಗೀತಾ ಶಿವರಾಜ್‌ಕುಮಾರ್ ಕೂಡ ಕಾಂಗ್ರೆಸ್‌ನತ್ತ

‘ಅಕ್ಕ ಗೀತಾ ಶಿವರಾಜ್‌ಕುಮಾರ್ ಕೂಡ ಕಾಂಗ್ರೆಸ್ ಸೇರಲಿದ್ದಾರೆ. ಅವರು ಈ ವಿಚಾರದಲ್ಲಿ ಈಗಾಗಲೇ ಸಮ್ಮತಿ ನೀಡಿದ್ದಾರೆ’ ಎಂದು ಮಧು ಬಂಗಾರಪ್ಪ ತಿಳಿಸಿದರು.

ತಕ್ಷಣ ಮಧ್ಯ ಪ್ರವೇಶಿಸಿದ ಡಿ.ಕೆ. ಶಿವಕುಮಾರ್, ‘ಗೀತಾ ಅವರು ಸಾಧಾರಣ ಮಹಿಳೆಯಲ್ಲ. ಅವರಿಗೆ ಸರಿಯಾದ ಗೌರವ ನೀಡಬೇಕಾಗುತ್ತದೆ. ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವಾಗ ದೆಹಲಿಯ ನಾಯಕರ ಜತೆ ಚರ್ಚಿಸಿ ಕೆಲವು ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ. ವರಿಷ್ಠರ ಜತೆ ಚರ್ಚಿಸಿ ಮುಂದಿನ ಪ್ರಕ್ರಿಯೆ ನಡೆಸುತ್ತೇವೆ’ ಎಂದರು.



## 24ರಿಂದ ಬೆಂಗಳೂರು ವಿ.ವಿ: ಪರೀಕ್ಷೆ

ಬೆಂಗಳೂರು: ಬೆಂಗಳೂರು ವಿ.ವಿಯ ದೂರ ಶಿಕ್ಷಣ ನಿರ್ದೇಶನಾಲಯವು 2019-20ನೇ ಸಾಲಿನ ಪದವಿ, ಸ್ನಾತಕೋತ್ತರ ಪದವಿ, ಕನ್ನಡ ಸರ್ಟಿಫಿಕೇಟ್ ಹಾಗೂ ಪಿ.ಜಿ.ಡಿಪ್ಲೋಮಾ (ಫ್ರೆಷರ್ಸ್, ರಿಪೀಟರ್ಸ್ ಹಾಗೂ ಒನ್ ಟೈಮ್ ಮೆಸರ್ ಅಡಿಯಲ್ಲಿ ಅವಕಾಶ ಪಡೆದವರು) ಪರೀಕ್ಷೆಗಳನ್ನು ಇದೇ 24ರಿಂದ ಏ. 15ರವರೆಗೆ ನಡೆಸಲು ನಿರ್ಧರಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಕಾಲೇಜುಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪೂರ್ಣ ವೇಳಾಪಟ್ಟಿ ಹಾಗೂ ಪರೀಕ್ಷಾ ಕೇಂದ್ರಗಳ ಮಾಹಿತಿಗಾಗಿ www.dccbub.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಇದೇ ವೆಬ್‌ಸೈಟ್‌ನಿಂದ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ದೂರ ಶಿಕ್ಷಣ ನಿರ್ದೇಶನಾಲಯದ ಕಚೇರಿ, ಜ್ಞಾನ ಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056 ಅಥವಾ ದೂರವಾಣಿ ಸಂಖ್ಯೆ (080-22961261)ಗೆ ಸಂಪರ್ಕಿಸಬಹುದು.



ಮೈಸೂರಿನ ಕಲಾಮಂದಿರದಲ್ಲಿ ಶುಕ್ರವಾರ ಪ್ರದರ್ಶನಗೊಂಡ ‘ಪರ್ವ’ ನಾಟಕದ ದೃಶ್ಯ

## ‘ಪರ್ವ’ ನಾಟಕ ಪ್ರದರ್ಶನ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ರಂಗಾಯಣದ ಬಹುನಿರೀಕ್ಷಿತ ‘ಪರ್ವ’ ನಾಟಕ ಪ್ರದರ್ಶನಕ್ಕೆ, ಸಾಹಿತಿ ಎಸ್.ಎಲ್.ಭೈರಪ್ಪ ಅವರು ಶುಕ್ರವಾರ ಕಲಾಮಂದಿರದಲ್ಲಿ ಚಾಲನೆ ನೀಡಿದರು.

ಮೊದಲ ದಿನ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದ್ದು, ರಂಗಾಯಣದ ನೂತನ ರಂಗಪ್ರಯೋಗವನ್ನು ಶ್ಲಾಘಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್.ಎಲ್.ಭೈರಪ್ಪ, ‘ಪರ್ವ ಕಾದಂಬರಿಯ ಮೂಲ ಆಶಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನಾಟಕವನ್ನು ರೂಪಿಸಲಾಗಿದೆ. ಎರಡು, ಮೂರು ದೃಶ್ಯಗಳನ್ನು ಒಟ್ಟಿಗೆ ತೋರಿಸುವಂತಹ ಜಾಣ್ಮೆ ಕುತೂಹಲ ಮೂಡಿಸುತ್ತದೆ. ನಾಟಕ ಉತ್ತಮವಾಗಿ ಮೂಡಿ ಬಂದಿದೆ. ಕಲಾವಿದರ ಅಭಿನಯ ಮನೋಜ್ಞವಾಗಿದೆ’ ಎಂದು ಹೇಳಿದರು.

ನಿರ್ದೇಶಕ ಪಿ.ಶೇಷಾದ್ರಿ ಪ್ರತಿಕ್ರಿಯಿಸಿ, ‘ಪರ್ವ ಕಾದಂಬರಿಯನ್ನು ರಂಗರೂಪಕ್ಕೆ ತರುವುದೇ ಒಂದು ವಿಶಿಷ್ಟ ಪ್ರಯತ್ನ. ಸಾಹಿತ್ಯದ ಕೃತಿಗಳು ಮತ್ತೊಂದು ಮಾಧ್ಯಮಕ್ಕೆ ಹೊರಳುವುದು ಒಳ್ಳೆಯ ಲಕ್ಷಣ. ಆ ಮೂಲಕ ಆ ಕೃತಿಯು, ಬೇರೆ ಬೇರೆ ಮಜಲುಗಳನ್ನು, ಅರ್ಥಗಳನ್ನು ತೋರ್ಪಡಿಸುತ್ತದೆ’ ಎಂದು ಹೇಳಿದರು.















**ಸಂಕ್ಷಿಪ್ತ ಸುದ್ದಿ**

### ಶಾಲಾ ನೋಂದಣಿ ನವೀಕರಣಕ್ಕೆ ವಿನಾಯಿತಿ

ಬೆಂಗಳೂರು: ಕೋವಿಡ್ ಬಿಕ್ಕಟ್ಟಿನ ಕಾರಣ ಈ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ಶಾಲಾ-ಕಾಲೇಜು ನೋಂದಣಿ ನವೀಕರಣಕ್ಕೆ ರಾಜ್ಯ ಸರ್ಕಾರ ವಿನಾಯಿತಿ ನೀಡಿದೆ.

‘ಅನುದಾನಿತ ಹಾಗೂ ಅನುದಾನ ರಹಿತ ಶಾಲೆ-ಪದವಿ ಪೂರ್ವ ಕಾಲೇಜುಗಳು ದಾಖಲೆಗಳನ್ನು ಸಲ್ಲಿಸಲು ಈ ವರ್ಷ ವಿನಾಯಿತಿ ನೀಡಲಾಗಿದೆ. ಕಳೆದ ಶೈಕ್ಷಣಿಕ ಸಾಲಿನ ದಾಖಲೆಗಳ ಆಧಾರದಲ್ಲಿ ನೋಂದಣಿ, ನವೀಕರಣ ನೀಡಲು ನಿರ್ಧರಿಸಲಾಗಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್ ಹೇಳಿದ್ದಾರೆ.

### ಖರ್ಗೆ, ಹರಿಪ್ರಸಾದ್ ತಾರಾ ಪ್ರಚಾರಕರು

ಬೆಂಗಳೂರು: ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ತಾರಾ ಪ್ರಚಾರಕರ ಪಟ್ಟಿಯಲ್ಲಿ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ಪಶ್ಚಿಮ ಬಂಗಾಳ ಚುನಾವಣೆಯ ಉಸ್ತುವಾರಿಗಳಲ್ಲಿ ಒಬ್ಬರಾದ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರಿಗೆ ಸ್ಥಾನ ನೀಡಲಾಗಿದೆ.

### ಸಾಲ ಮನ್ನಾಗೆ ₹295 ಕೋಟಿ

ಬೆಂಗಳೂರು: ಸಹಕಾರ ಸಂಘ ಮತ್ತು ಸಹಕಾರ ಬ್ಯಾಂಕುಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು 2018 ರ ಜುಲೈ 10 ಕ್ಕೆ ಹೊಂದಿರುವ ಬಾಕಿಯಲ್ಲಿ ಗರಿಷ್ಠ ₹1 ಲಕ್ಷದವರೆಗೆ ಸಾಲ ಮನ್ನಾ ಮಾಡಲು ಸಹಕಾರ ಇಲಾಖೆ ₹295.14 ಕೋಟಿ ಬಿಡುಗಡೆ ಮಾಡಿದೆ.

ಇದರಿಂದ ಒಟ್ಟು 57,229 ರೈತರಿಗೆ ಪ್ರಯೋಜನವಾಗಲಿದೆ. ರೈತರ ಖಾತೆಗಳಿಗೆ ನಿಫ್ಟ್ ಮೂಲಕ ಕೂಡಲೇ ಬಿಡುಗಡೆ ಮಾಡಲು ಸೂಚಿಸಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

# ಸೋಂಕಿತ ಗುಣಮುಖ: ಆತಂಕ ದೂರ

ಶಿವಮೊಗ್ಗ: ದಕ್ಷಿಣ ಆಫ್ರಿಕಾದ ರೂಪಾಂತರ ಕೊರೊನಾ ವೈರಸ್ ಇರುವುದು ದೃಢಪಟ್ಟಿದ್ದ ಶಿವಮೊಗ್ಗದ 55 ವರ್ಷದ ವ್ಯಾಪಾರಿ ಸಂಪೂರ್ಣ ಗುಣಮುಖರಾಗಿದ್ದು, ಅವರ ಗಂಟಲು ದ್ರವದ ಪರೀಕ್ಷೆಯ ವರದಿ ನೆಗೆಟಿವ್ ಬಂದಿದೆ.

ದುಬೈಯಿಂದ ಫೆ. 21ರಂದು ಭಾರತಕ್ಕೆ ಬಂದಿದ್ದ ಅವರು ಕೋವಿಡ್‌ನಿಂದ ಬಳಲುತ್ತಿದ್ದರು. ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಅವರು ಬಸ್‌ನಲ್ಲಿ ಪ್ರಯಾಣಿಸಿದ್ದರು. ಮೊದಲ ವರದಿ ಪಾಸಿಟಿವ್ ಬಂದ ನಂತರ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈಗ ಎರಡನೇ ವರದಿ ನೆಗೆಟಿವ್ ಬಂದಿದೆ. ಅವರ ಪ್ರಾಥಮಿಕ ಸಂಪರ್ಕ ಹಾಗೂ ಎರಡನೇ ಹಂತದ ಸಂಪರ್ಕ ಹೊಂದಿದ್ದ 39 ಮಂದಿಯನ್ನು ಪತ್ತೆಹಚ್ಚಿ, ಎಲ್ಲರ ಗಂಟಲು ದ್ರವ ಪರೀಕ್ಷೆಗೆ ಒಳಪಡಿಸಲಾಗಿತ್ತು. ಎಲ್ಲರ ವರದಿಗಳೂ ನೆಗೆಟಿವ್ ಬಂದಿವೆ.

## 24 ಗಂಟೆಗಳಲ್ಲೇ ಫಲಿತಾಂಶ ಪ್ರಕಟಿಸಿದ ಆರ್‌ಜಿಯುಎಚ್‌ಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು (ಆರ್‌ಜಿಯುಎಚ್‌ಎಸ್) ಪರೀಕ್ಷೆ ಮುಗಿದ 24 ತಾಸುಗಳಲ್ಲಿಯೇ ನರ್ಸಿಂಗ್ ಕೋರ್ಸ್‌ಗಳ ಫಲಿತಾಂಶ ಪ್ರಕಟಿಸುವ ಮೂಲಕ ವಿಶಿಷ್ಟ ದಾಖಲೆ ಮಾಡಿದೆ.



ಸಚ್ಚಿದಾನಂದ

ಬಿಎಸ್‌ಸಿ ನರ್ಸಿಂಗ್‌ನ ಮೊದಲ ಮತ್ತು 3ನೇ ವರ್ಷದ ಪರೀಕ್ಷೆಗಳ ಫಲಿತಾಂಶವನ್ನು ಪ್ರಾಯೋಗಿಕ ಮತ್ತು ಮೌಖಿಕ ಪರೀಕ್ಷೆ ಮುಗಿದ ಒಂದು ದಿನದೊಳಗೇ ಫಲಿತಾಂಶ ಪ್ರಕಟಿಸಲಾಗಿದೆ. ಫೆ.8ರಿಂದ 22ರವರೆಗೆ ಲಿಖಿತ ಪರೀಕ್ಷೆ, 26ರಿಂದ ಮಾ.9ರವರೆಗೆ ಪ್ರಾಯೋಗಿಕ ಮತ್ತು ಮೌಖಿಕ ಪರೀಕ್ಷೆ ನಡೆದಿದ್ದು, ಮಾ.10ಕ್ಕೆ ಫಲಿತಾಂಶ ಘೋಷಿಸಲಾಗಿದೆ.

'4,77,701 ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲಾಗಿದೆ. ಎಲ್ಲ ಪತ್ರಿಕೆಗಳನ್ನು ಅಚ್ಚುಕಟ್ಟಾಗಿ ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ಮೌಲ್ಯಮಾಪನ ಮಾಡಿದ್ದರಿಂದ 24 ತಾಸಿನೊಳಗೇ ಫಲಿತಾಂಶ ನೀಡಲು ಸಾಧ್ಯವಾಗಿದೆ' ಎಂದು ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ಹೇಳಿದರು.

'ಸಿಸಿಟಿವಿ ಕ್ಯಾಮೆರಾಗಳ ಕಣ್ಗಾವಲಿನಲ್ಲಿ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಲಾಗಿತ್ತು. ಸ್ಕ್ಯಾನ್ ಮಾಡಿದ್ದರಿಂದ ಮೌಲ್ಯಮಾಪಕರಿಗೂ ಡಿಜಿಟಲ್ ರೂಪದಲ್ಲಿ ಉತ್ತರ ಪತ್ರಿಕೆಗಳು ಸಿಕ್ಕಿದ್ದರಿಂದ ನೂತನ ತಂತ್ರಜ್ಞಾನವನ್ನು ಬಳಸಿಕೊಂಡು ಮೌಲ್ಯಮಾಪನ ಮಾಡಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ಸಚ್ಚಿದಾನಂದ ಹೇಳಿದರು.

## ದ್ವಿತೀಯ ಪಿಯುಸಿ ಪರೀಕ್ಷೆ: ಅಂತಿಮ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕ್ಷೇಪಣೆಗಳ ಪರಿಶೀಲನೆಯ ನಂತರ ಪದವಿ ಪೂರ್ವ ಶಿಕ್ಷಣ ಇಲಾಖೆಯು ದ್ವಿತೀಯ ಪಿಯುಸಿ ಪರೀಕ್ಷೆಯ ಅಂತಿಮ ಪರಿಷ್ಕೃತ ವೇಳಾಪಟ್ಟಿಯನ್ನು ಶುಕ್ರವಾರ ಪ್ರಕಟಿಸಿದೆ.

ಈ ಮೊದಲು ಪ್ರಕಟಿಸಿದಂತೆ ಮೇ 24ರಿಂದ ಜೂನ್ 16ರವರೆಗೆ ಪರೀಕ್ಷೆ ನಡೆಯಲಿದೆ. ಆದರೆ, ಕೆಲವು ವಿಷಯಗಳ ದಿನಾಂಕ ಮಾತ್ರ ಬದಲಾಗಿದೆ.

ಜೂನ್ 14ರಂದು ಇಂಟಿಗ್ರೇಟೆಡ್ ಪ್ರೋಗ್ರಾಂ ಇನ್ ಮ್ಯಾನೇಜ್‌ಮೆಂಟ್ ಆಪ್ಟಿಟ್ಯೂಡ್ ಟೆಸ್ಟ್ (ಐಪಿಎಂಎಟಿ) ಹಾಗೂ ನ್ಯಾಷನಲ್ ಎಂಟ್ರೆನ್ಸ್ ಸ್ಕ್ರೀನಿಂಗ್ ಟೆಸ್ಟ್ (ಎನ್‌ಇಎಸ್‌ಟಿ) ನಡೆಯುವ ಕಾರಣ ಪರೀಕ್ಷಾ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ ಎಂದು ಇಲಾಖೆ ಹೇಳಿದೆ.

**ಅಂತಿಮ ವೇಳಾಪಟ್ಟಿ**

| | |
|---|---|
| ಮೇ 24 | ಇತಿಹಾಸ |
| 25 | ಕರ್ನಾಟಕ ಸಂಗೀತ/ ಹಿಂದೂಸ್ತಾನಿ ಸಂಗೀತ |
| 26 | ಭೂಗೋಳ ಶಾಸ್ತ್ರ |
| 27 | ಮನಃಶಾಸ್ತ್ರ/ಮೂಲಗಣಿತ |
| 28 | ತರ್ಕಶಾಸ್ತ್ರ |
| 29 | ಕನ್ನಡ |
| 31 | ಲೆಕ್ಕಶಾಸ್ತ್ರ/ಗಣಿತ/ಶಿಕ್ಷಣ |
| ಜೂ.1 | ಮಾಹಿತಿ ತಂತ್ರಜ್ಞಾನ/ ಹೆಲ್ತ್‌ಕೇರ್/ ವೆಲ್‌ನೆಸ್‌ಬ್ಯೂಟಿ/ ಆಟೊಮೊಬೈಲ್ |
| 2 | ರಾಜ್ಯಶಾಸ್ತ್ರ/ಗಣಕ ವಿಜ್ಞಾನ |
| 3 | ಜೀವವಿಜ್ಞಾನ/ಎಲೆಕ್ಟ್ರಾನಿಕ್ಸ್ |
| 4 | ಅರ್ಥಶಾಸ್ತ್ರ |
| 5 | ಗೃಹ ವಿಜ್ಞಾನ |
| 7 | ವ್ಯವಹಾರ ಅಧ್ಯಯನ/ ಭೌತವಿಜ್ಞಾನ |
| 8 | ಭೂಗರ್ಭ ವಿಜ್ಞಾನ |
| 9 | ತಮಿಳು/ತೆಲುಗು/ ಮಲಯಾಳ/ಮರಾಠಿ/ ಅರೆಬಿಕ್/ಫ್ರೆಂಚ್ |
| 10 | ಸಮಾಜ ಶಾಸ್ತ್ರ/ ರಸಾಯನವಿಜ್ಞಾನ |
| 11 | ಉರ್ದು/ಸಂಸ್ಕೃತ |
| 12 | ಸಂಖ್ಯಾಶಾಸ್ತ್ರ |
| 14 | ಐಚ್ಛಿಕ ಕನ್ನಡ |
| 15 | ಹಿಂದಿ |
| 16 | ಇಂಗ್ಲಿಷ್ |

## ದಾಖಲೆ ನೀಡುವಂತೆ ಸ್ವಾಮೀಜಿಗಳಿಗೆ ಪತ್ರ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ 2ಎ ಸೇರ್ಪಡೆ ಮಾಡುವ ಕುರಿತು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮತ್ತು ವಚನಾನಂದ ಸ್ವಾಮೀಜಿಯವರಿಗೆ ದಾಖಲೆಗಳನ್ನು ನೀಡುವಂತೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಪತ್ರ ಬರೆದಿದೆ.

ಈ ಕ್ರಮವನ್ನು ಸಚಿವರಾದ ಮುರುಗೇಶ್ ನಿರಾಣಿ, ಸಿ.ಸಿ.ಪಾಟೀಲ ಅವರು ಸ್ವಾಗತಿಸಿದ್ದಾರೆ. 2ಎಗೆ ಸೇರಿಸುವ ಸಂಬಂಧ ಸಾಕ್ಷ್ಯಾಧಾರಗಳಿದ್ದರೆ ಖುದ್ದಾಗಿ ಅಥವಾ ಸಂಬಂಧಪಟ್ಟವರ ಮೂಲಕ ಮಾರ್ಚ್ 22 ರಂದು ಆಯೋಗಕ್ಕೆ ನೀಡುವಂತೆ ಸೂಚಿಸಿರುವುದು ಸಕಾರಾತ್ಮಕ ಬೆಳವಣಿಗೆ ಎಂದಿದ್ದಾರೆ.

ನಿರೀಕ್ಷೆ ಮಟ್ಟ ತಲುಪದ ನಳಿನ್ ಕುಮಾರ್ ಕಟೀಲ್ ತಂಡ ● ಸಂಘಟನೆಯಲ್ಲಿ ಬದಲಾವಣೆ ಚಿಂತನೆ

# ‘ಬಲಿಷ್ಠ’ ಅಧ್ಯಕ್ಷರ ಹುಡುಕಾಟಕ್ಕೆ ಮುಂದಾದ ಬಿಜೆಪಿ?

● ಎಸ್.ರವಿಪ್ರಕಾಶ್

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಸಂಘಟನಾ ಸಾಮರ್ಥ್ಯಕ್ಕೆ ತಕ್ಕಂತೆ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ತಮ್ಮ ಚಾತುರ್ಯ ಪ್ರದರ್ಶಿಸಿ, ಸಂಘಟನೆಗೆ ಬಲ ನೀಡದೇ ಇರುವುದು ಆ ಪಕ್ಷದ ವರಿಷ್ಠರ ಚಿಂತೆಗೆ ಕಾರಣವಾಗಿದೆ.

ಶಿವಕುಮಾರ್ ಸದ್ದಿಲ್ಲದೇ ಮುಂದಿನ ವಿಧಾನಸಭಾ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರೂ, ನಳಿನ್ ಮತ್ತು ಅವರ ಹೊಸ ತಂಡ ಇನ್ನೂ ಮೈಕೊಡವಿಕೊಂಡು ಎದ್ದು ನಿಂತಿಲ್ಲ. ಪಕ್ಷದಲ್ಲಿ ಹಿಡಿತ ಹೊಂದಿಲ್ಲ. ಸರ್ಕಾರದ ಜತೆ ಸಮನ್ವಯವೂ ಸಾಧಿಸದೇ ಇರುವುದನ್ನು ವರಿಷ್ಠರು ಗಮನಿಸಿದ್ದಾರೆ ಎಂದು ಬಿಜೆಪಿ ಮೂಲಗಳು ಹೇಳಿವೆ.

‘ಮುಂದಿನ ವಿಧಾನಸಭೆ ಚುನಾವಣೆ ವೇಳೆಗೆ ಯಡಿಯೂರಪ್ಪ ಅವರ ವಯಸ್ಸು 81 ದಾಟಿರುತ್ತದೆ. ಹಿಂದಿನ ಉತ್ಸಾಹದಲ್ಲಿ ಚುನಾವಣೆಯಲ್ಲಿ ಪಕ್ಷ ಮುನ್ನಡೆಸುವುದು ಕಷ್ಟ. ಪಕ್ಷದ ಉಳಿದ ನಾಯಕರ‍್ಯಾರೂ ಅವರ ಜಾಗವನ್ನು ತುಂಬುವ ಭರವಸೆ ಮೂಡಿಸಿಲ್ಲ. ಚುನಾವಣೆ ಹೊಸ್ತಿಲವರೆಗೆ ಇದೇ ಮಾದರಿಯ ನಾಯಕತ್ವವೇ ಮುಂದುವರಿದರೆ ಕಷ್ಟ ಎಂಬುದು ವರಿಷ್ಠರಿಗೆ ಮನವರಿಕೆ ಆಗಿದೆ. ಹೀಗಾಗಿ, ಸಂಘಟನೆಯ ‘ಸಾರಥಿ’ ನಳಿನ್ ಕಟೀಲ್ ಸೇರಿದಂತೆ ಹಲವರ ಬದಲಾವಣೆ ಬಗ್ಗೆ ಆಲೋಚನೆ ಆರಂಭಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ರಾಜ್ಯ ಬಿಜೆಪಿ ಉಸ್ತುವಾರಿಯಾಗಿ ಅರುಣ್‌ಸಿಂಗ್ ನೇಮಕ ಆದ ಬಳಿಕ ಪಕ್ಷದ ಎಲ್ಲ ವಿದ್ಯಮಾನಗಳ ಬಗ್ಗೆ ತಮ್ಮದೇ ಆದ ಮೂಲಗಳಿಂದ ಮಾಹಿತಿಗಳನ್ನು ಕಲೆ ಹಾಕುತ್ತಿದ್ದಾರೆ. ಇವರು ಮೋದಿ ಮತ್ತು ಅಮಿತ್ ಶಾ ಅವರಿಗೆ ಆಪ್ತರೂ ಆಗಿರುವುದರಿಂದ ಪಕ್ಷದಲ್ಲಿ ಭಾರಿ ಬದಲಾವಣೆಯ ಪ್ರಸ್ತಾವನೆಯನ್ನು ಅರುಣ್ ಸಿಂಗ್ ಮಂಡಿಸಿದರೆ, ಮೋದಿ– ಶಾ ಜೋಡಿ ನಿರಾಕರಿಸುವುದಿಲ್ಲ. ಮುಂದಿನ ಲೋಕಸಭೆಗೆ ಮುನ್ನ ಕರ್ನಾಟಕದಂತಹ ಪ್ರಬಲ ರಾಜ್ಯಗಳಲ್ಲಿ ಮತ್ತೆ ಅಧಿಪತ್ಯ ಸಾಧಿಸುವುದು ಬಿಜೆಪಿಗೆ ಅನಿವಾರ್ಯ. ಹೀಗಾಗಿ ದುರ್ಬಲ ತಂಡ ಕಟ್ಟಿಕೊಂಡು ಹೆಣಗಾಡುವುದು ಕಷ್ಟ ಎಂಬ ನಿಲುವಿಗೆ ವರಿಷ್ಠರು ಬಂದಿದ್ದಾರೆ’ ಎಂದು ಮೂಲಗಳು ವಿವರಿಸಿವೆ.

‘ಕಾಂಗ್ರೆಸ್‌ನಲ್ಲಿ ಘಟಾನುಘಟಿ ನಾಯಕರನ್ನು ಕಾರ್ಯಾಧ್ಯಕ್ಷರನ್ನಾಗಿ ಮಾಡಲಾಗಿದೆ. ಇವರನ್ನು ಎದುರಿಸುವುದು ಬಿಜೆಪಿಯ ಈಗಿನ ತಂಡಕ್ಕೆ ಕಷ್ಟ. ಸರ್ಕಾರದಲ್ಲಿ ಇರುವವರು ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ. ಸಂಘಟನೆಯಲ್ಲಿ ಇದ್ದವರಿಗೆ ಸಂಘಟನೆಯ ಕುರಿತು ಆಳವಾದ ಜ್ಞಾನವಿಲ್ಲ. ಕಾರ್ಯಕರ್ತರನ್ನು ಹುರಿದುಂಬಿಸಿ ಮುನ್ನಡೆಸುವ ಶಕ್ತಿಯನ್ನು ಪ್ರದರ್ಶಿಸಿಲ್ಲ. ಸರ್ಕಾರ ಮತ್ತು ಪಕ್ಷದ ಸಂಘಟನೆಯ ಮಧ್ಯೆ ತಾಳಮೇಳವೂ ಇಲ್ಲವಾಗಿದೆ’ ಎನ್ನುತ್ತವೆ ಮೂಲಗಳು.

ಅಧ್ಯಕ್ಷ ನಳಿನ್ ಮೂಲಕ ರಾಜ್ಯ ಬಿಜೆಪಿಯನ್ನು ಬಿ.ಎಲ್.ಸಂತೋಷ್ ಅವರೇ ನಿಯಂತ್ರಿಸುತ್ತಿದ್ದಾರೆ. ಒಂದು ವೇಳೆ ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಿ, ನಳಿನ್ ಅವರನ್ನು ಮುಂದಿಟ್ಟುಕೊಂಡು ಹೋದರೆ ಚುನಾವಣೆ ಎದುರಿಸುವುದು ಸುಲಭವಲ್ಲ’ ಎಂಬ ಮಾತು ಪಕ್ಷದ ವಲಯದಲ್ಲಿ ಹರಿದಾಡುತ್ತಿದೆ

ಪಕ್ಷದಲ್ಲಿ ಯಡಿಯೂರಪ್ಪ ಮತ್ತು ದಿವಂಗತ ಎಚ್.ಎನ್. ಅನಂತಕುಮಾರ್ ಅವರ ಬೆಂಬಲಿಗರೆಂದು ಗುರುತಿಸಿಕೊಂಡವರಲ್ಲಿ ಬಹುತೇಕ ಎಲ್ಲರನ್ನು ಪಕ್ಷದ ಕಚೇರಿಯಿಂದಲೇ ಹೊರ ಹಾಕಲಾಗಿದೆ. ಬಿ.ಎಲ್.ಸಂತೋಷ್ ಆಪ್ತರೆನಿಸಿಕೊಂಡವರು ಈಗ ಪಕ್ಷದ ರಾಜ್ಯ ಘಟಕದ (ಜಗನ್ನಾಥ ಭವನ) ಕಚೇರಿಯ ಹಿಡಿತ ಸಾಧಿಸಿದ್ದಾರೆ ಎನ್ನುತ್ತಾರೆ ಈ ಎರಡೂ ಬಣಗಳಲ್ಲಿ ಗುರುತಿಸಿಕೊಂಡಿದ್ದವರು.

ಅಲ್ಲದೆ, ಪಕ್ಷದ ಕಚೇರಿಯಲ್ಲಿ ಕಾರ್ಯನಿರ್ವಹಿಸುವವರು ಮತ್ತು ಕೆಲವು ಪದಾಧಿಕಾರಿಗಳು ವಿಧಾನಸೌಧಕ್ಕೆ ಹೋಗುವುದಕ್ಕೂ ನಿರ್ಬಂಧ ವಿಧಿಸಲಾಗಿದೆ. ಯಾರೆಲ್ಲ ಹೋಗುತ್ತಾರೆ ಎಂಬುದನ್ನು ಗಮನಿಸುವುದಕ್ಕೂ ‘ಮೂರನೇ ಕಣ್ಣು’ ಇಡಲಾಗಿದೆ. ಈ ಹೊಸ ಬೆಳವಣಿಗೆಯಿಂದ ಹಲವು ದಶಕಗಳಿಂದ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ.

## ಕೋವಿಡ್: ಜಾರಿಯಾಗದ ಕ್ರಮ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಕೇರಳದಿಂದ ಬರುವವರಿಗೆ ಕೋವಿಡ್–19 ನೆಗೆಟಿವ್ ಪ್ರಮಾಣ ಪತ್ರ ಕಡ್ಡಾಯಗೊಳಿಸಿದ್ದರೂ, ಅದನ್ನು ಕಾರ್ಯರೂಪಕ್ಕೆ ತರುವುದು ಜಿಲ್ಲಾಡಳಿತಕ್ಕೆ ಕಷ್ಟದ ಕೆಲಸವಾಗಿದೆ. ಒಂದೆಡೆ ಈ ಬಗ್ಗೆ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ಇನ್ನೊಂದೆಡೆ ಜನಪ್ರತಿನಿಧಿಗಳ ಹೇಳಿಕೆಗಳು ಗೊಂದಲ ಸೃಷ್ಟಿಸುತ್ತಿವೆ.

‘ರಾಜ್ಯ ಸರ್ಕಾರದ 2021 ಫೆಬ್ರುವರಿ 16ರ ಸುತ್ತೋಲೆ ಪ್ರಕಾರ ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿ ಕೇಳಬಹುದು. ವರದಿ ಇಲ್ಲದಿದ್ದರೂ ಪ್ರವೇಶಕ್ಕೆ ನಿರ್ಬಂಧ ಹೇರುವಂತಿಲ್ಲ. ಪ್ರವೇಶ ದ್ವಾರಗಳನ್ನು ಮುಚ್ಚಲು ಸುತ್ತೋಲೆಯಲ್ಲಿ ತಿಳಿಸಲಾಗಿಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಹೇಳಿದೆ. ಮಾರ್ಚ್ 18ಕ್ಕೆ ವಿಚಾರಣೆ ಮುಂದೂಡಿದೆ. ಹೀಗಾಗಿ ಸದ್ಯಕ್ಕೆ ಗಡಿ ಭಾಗದಲ್ಲಿ ಕಟ್ಟುನಿಟ್ಟಿನ ಕ್ರಮ ಆರಂಭವಾಗಿಲ್ಲ. ಆದರೆ, ನಿತ್ಯ ಓಡಾಡುವ ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ವರದಿಯನ್ನು ಪ್ರತಿ 15 ದಿನಕ್ಕೊಮ್ಮೆ ಸಲ್ಲಿಸುವಂತೆ ದಕ್ಷಿಣ ಕನ್ನಡ ಜಿಲ್ಲಾಡಳಿತ ಸೂಚನೆ ನೀಡಿದೆ.

**ಕಾರ್ಯಪಡೆ:** ಈಗಾಗಲೇ ತಲಪಾಡಿಯಲ್ಲಿ ಗಂಟಲು ದ್ರವ ಮಾದರಿ ತಪಾಸಣೆ ಕೇಂದ್ರ ತೆರೆಯಲಾಗಿದೆ. ಕೇರಳದಿಂದ ಬರುವವರ ಗಂಟಲು ದ್ರವ ಸಂಗ್ರಹಿಸಲಾಗುತ್ತಿದೆ. ಇದರ ಜೊತೆಗೆ ಕೇರಳದಿಂದ ಬರುವವರ ಮೇಲೆ ನಿಗಾ ಇಡಲು ಗ್ರಾಮಮಟ್ಟದಲ್ಲಿ ಕಾರ್ಯಪಡೆಯನ್ನು ರಚಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ತಿಳಿಸಿದ್ದಾರೆ.



## ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

**ಮಂಗಳೂರು:** ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು 2020ನೇ ಸಾಲಿನ ಗೌರವ ಪ್ರಶಸ್ತಿಯನ್ನು ಘೋಷಿಸಿದ್ದು, ಕುಮಟಾದ ಅರುಣ್ ಸುಬ್ರಾವ್ ಉಭಯಕರ (ಸಾಹಿತ್ಯ), ಪುತ್ತೂರಿನ ಪಾಂಡುರಂಗ ನಾಯಕ್ (ಕಲೆ), ಯಲ್ಲಾಪುರದ ಲಕ್ಷ್ಮಿ ಕೃಷ್ಣ ಸಿದ್ದಿ (ಜಾನಪದ) ಅವರು ಗೌರವಕ್ಕೆ ಪಾತ್ರರಾಗಿದ್ದಾರೆ. ಪ್ರಶಸ್ತಿಯು ₹ 50 ಸಾವಿರ ನಗದು, ಪ್ರಶಸ್ತಿ ಪತ್ರ, ಫಲಕ ಒಳಗೊಂಡಿದೆ.

ಮಂಗಳೂರಿನ ಪ್ರೇಮ್ ಮೊರಾಸ್ ಅವರ ‘ಏಕ್ ಮೂಟ್ ಪಾವ್ಲ್ಯೊ’ ಕವನ ಸಂಕಲನ, ಉಡುಪಿಯ ಮೋನಿಕಾ ಡೆಸಾ ಮಥಾಯಸ್ ಅವರ ‘ನವಿ ದಿಶಾ’ ಸಣ್ಣಕಥೆ ಮತ್ತು ಪೆರ್ಮುದೆಯ ಸ್ಟೀವನ್ ಕ್ವಾಡ್ರಸ್ ಅವರ ‘ಸುಗಂಧು ಸ್ವಾಸ್’ ಲೇಖನವು ಬಹುಮಾನಕ್ಕೆ ಆಯ್ಕೆಯಾಗಿವೆ. ಎಂದು ಅಕಾಡೆಮಿಯ ಅಧ್ಯಕ್ಷ ಡಾ.ಕೆ. ಜಗದೀಶ್ ಪೈ ತಿಳಿಸಿದರು.

### ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕ.ನೀ.ನಿ.ನಿ., ವಾರಾಹಿ ಯೋಜನಾ ವಿಭಾಗ ಸಿದ್ದಾಪುರ–576229 ಕುಂದಾಪುರ (ತಾ), ಉಡುಪಿ (ಜಿಲ್ಲೆ).

ಸಂ: ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/2020–21/12/1574 ದಿನಾಂಕ: 08.03.2021

**ಅಲ್ಪಾವಧಿ ಟೆಂಡರ್ ಪ್ರಕಟಣೆ**

**(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ) (Two tender document system)**

ವಾರಾಹಿ ನೀರಾವರಿ ಯೋಜನೆಯಡಿ ವಾರಾಹಿ ಯೋಜನಾ ವಿಭಾಗದ ವ್ಯಾಪ್ತಿಯಡಿ 4701 ಲೆಕ್ಕಶೀರ್ಷಿಕೆಯಡಿ ಬರುವ ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ವಿವರಗಳು ಕೆಳಕಂಡಂತಿರುತ್ತದೆ.

1) ಗುತ್ತಿಗೆದಾರರು www.eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. 2) ಟೆಂಡರಿಗಿಟ್ಟ ಮೊತ್ತ **ರೂ. 158.67** ಲಕ್ಷ 3) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿನಾಂಕ: **15/03/2021** 4) ಗುತ್ತಿಗೆದಾರರು ಟೆಂಡರ್ ಬಗ್ಗೆ ಸ್ಪಷ್ಟೀಕರಣ ಕೇಳಲು/ಪ್ರಿಬಿಡ್ ಸಭೆಯ ದಿನಾಂಕ: **17/03/2021** 5) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: **23/03/2021** 6) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **25/03/202** 7) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಮೌಲ್ಯಮಾಪನದ ನಂತರ ಯಶಸ್ವಿ ಬಿಡ್‌ದಾರರಿಗೆ ತಿಳಿಸಲಾಗುವುದು. 8) ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in, www.knnlindia.com ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು. 9.) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, www.eproc.karnataka.gov.in ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲಾಗುವುದು.

**ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ ಉಡುಪಿ ಜಿಲ್ಲೆ**

ವಾಸಾಇ/ಸನಿಉ/ಎಂಸಿಎ/814/20–21 ದಿ: 12.3.2021

### ಕರ್ನಾಟಕ ಸರ್ಕಾರ
### ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ನರಗುಂದ–582207

ದೂರವಾಣಿ : 08377–245181 Email : adanaragund@gmail.com

ಸಂ:ಸಕೃನಿ.ನ/ಸಿ–1/ಬಾ.ವಾ/ಟೆಂಡರ್/2020–21 ದಿನಾಂಕ : 09–03–2021.

**ಟೆಂಡರ್ ಪ್ರಕಟಣೆ**

**ವಿಷಯ :** 2021–22 ನೇ ಸಾಲಿನಲ್ಲಿ ಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನ ಪಡೆಯುವ ಬಗ್ಗೆ.

2021–22ನೇ ಸಾಲಿನಲ್ಲಿ ಈ ಕಚೇರಿಯ ಸರ್ಕಾರಿ ಕೆಲಸಕ್ಕಾಗಿ ಗುತ್ತಿಗೆ ಆಧಾರದಲ್ಲಿ ಮಾಸಿಕ ಬಾಡಿಗೆ ಆಧಾರ ಮೇಲೆ ವಾಹನ ಅವಶ್ಯಕತೆ ಇರುವುದರಿಂದ ಮಹಿಂದ್ರಾ ಬೊಲೋರೋ, ಮಾರುತಿ ಸ್ವಿಪ್ಟ ಡಿಜೈರ್, ಮಹಿಂದ್ರಾ ಲೋಗಾನ್, ಹುಂಡೈ ಐ–20, ಇಂಡಿಕಾ ವಿಸ್ಟಾ ವಾಹನಗಳಲ್ಲಿ ಯಾವುದಾದರು ಒಂದು ವಾಹನ ಒದಗಿಸಲು ಆಸಕ್ತಿ ಇರುವ ವ್ಯಕ್ತಿ/ ಸಂಸ್ಥೆಗಳಿಂದ ಷರತ್ತುಗಳನ್ವಯ ಸೀಲು ಮಾಡಿದ ದ್ವಿ ಲಕೋಟೆ (ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್) ಮಾದರಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಬಾಡಿಗೆ ವಾಹನವು ಖರೀದಿಸಿದ ದಿನದಿಂದ 5 ವರ್ಷದೊಳಗಿನ ವಾಹನವಾಗಿರಬೇಕು. ವಾಹನ ಟೆಂಡರ್ ಕಾಲಾವಧಿಯು ಒಂದು ವರ್ಷದಾಗಿರುತ್ತದೆ.

(1) ಟೆಂಡರ್ ಅರ್ಜಿ ಶುಲ್ಕ ರೂ. **300–00** ಗಳನ್ನು ಸಹಾಯಕ ಕೃಷಿ ನಿರ್ದೇಶಕರು, ನರಗುಂದ. ಇವರಲ್ಲಿ ಹಣ ಪಾವತಿಸಿ ದಿನಾಂಕ : **15–03–2021** ರಿಂದ ದಿನಾಂಕ : **20–03–2021** ರೊಳಗೆ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. (2) ಟೆಂಡರ್ ಇ.ಎಮ್.ಡಿ. ಮೊತ್ತ ರೂ. **6000–00** ಗಳನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಯನ್ನು ಸಹಾಯಕ ಕೃಷಿ ನಿರ್ದೇಶಕರು, ನರಗುಂದ ಇವರ ಹೆಸರಿನಲ್ಲಿ ಪಡೆಯಬೇಕು. (3) ವಾಹನಕ್ಕೆ ಸಂಬಂಧಿಸಿದ ಧೃಢೀಕೃತ ದಾಖಲಾತಿ ಹಾಗೂ ಇ.ಎಮ್.ಡಿ. ಡಿ.ಡಿ.ಯೊಂದಿಗೆ ಟೆಂಡರ್ ಅರ್ಜಿಯನ್ನು ಕೊನೆಯ ದಿನಾಂಕ : **25–03–2021**ರ ಮಧ್ಯಾಹ್ನ 12.00 ಘಂಟೆಯೊಳಗೆ ಈ ಕಚೇರಿಗೆ ಸಲ್ಲಿಸಬೇಕು. (4) ಮೊಹರು ಮಾಡಿದ ಟೆಂಡರ್ ಅರ್ಜಿಯನ್ನು ದ್ವಿ ಲಕೋಟೆಗಳಲ್ಲಿ ಅಂದರೆ ತಾಂತ್ರಿಕ ಹಾಗೂ ಹಣಕಾಸು ಎರಡು ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕು. (5) ಟೆಂಡರ್ ಅರ್ಜಿಗಳನ್ನು ಟೆಂಡರ್ ಅರ್ಜಿ ಸಲ್ಲಿಸಿದವರ (ಹಾಜರಿದ್ದವರ) ಸಮ್ಮುಖದಲ್ಲಿ ದಿನಾಂಕ : **25–03–2021** ರಂದು ಮಧ್ಯಾಹ್ನ 1–00 ಘಂಟೆಗೆ ತೆರೆಯಲಾಗುವುದು. (6) ಟೆಂಡರ್‌ಗಳನ್ನು ಪರಿಶೀಲಿಸಿದ ನಂತರ ಅಂಗೀಕರಿಸುವ/ ತೀರಸ್ಕರಿಸುವ ಅಧಿಕಾರ ಸಹಾಯಕ ಕೃಷಿ ನಿರ್ದೇಶಕರು ನರಗುಂದ ಇವರಿಗೆ ಇರುತ್ತದೆ.

ಹೆಚ್ಚಿನ ಮಾಹಿತಿಯನ್ನು ಸಹಾಯಕ ಕೃಷಿ ನಿರ್ದೇಶಕರು, ನರಗುಂದ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. **ಸಹಿ/– ಸಹಾಯಕ ಕೃಷಿ ನಿರ್ದೇಶಕರು, ನರಗುಂದ**

ವಾಸಾಸಂಇ/ಗದಗ/ಎಂ.ಸಿ.ಎ/562/2020–21

### ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ,
ಕಾರ್ಯನಿರ್ವಾಹಕ ಅಭಿಯಂತರರು, ಯೋಜನಾ ವಿಭಾಗ, ಬಳ್ಳಾರಿ.

ದೂರವಾಣಿ ಸಂಖ್ಯೆ : 08392– 297145, ಇ–ಮೇಲ್: kn-bll-1@pmgsy.nic.in

ಸಂ:ಕಾನಿಅ/ಯೋ.ವಿ/ಬ/ತಾಂತ್ರಿಕ/NGNRY-IV/Change of work/Call-2/2020-21/824 ದಿ:12.03.2021

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಯೋಜನಾ ವಿಭಾಗ, ಬಳ್ಳಾರಿ ಇವರು 2018–19 ನೇ ಸಾಲಿಗೆ ಮಂಜೂರಾದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಅನುದಾನ (NGNRY-IV) ಅಡಿಯಲ್ಲಿ ರಸ್ತೆಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿ ಪಡಿಸಲು Standard Bidding Document ಅನುಸಾರ ಈ ಕೆಳಕಂಡ ಕಾಮಗಾರಿ/ವರ್ಕ್ ಇಂಡೆಂಟ್‌ಗಳಿಗೆ ಪ್ರತ್ಯೇಕ ಐಟಂ ರೇಟ್ ದರದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ.

ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ:

| ಕ್ರ. ಸಂ. | ಕಾಮಗಾರಿಯ ಹೆಸರು / ವರ್ಕ್ ಇಂಡೆಂಟ್ ನಂ. | ಟೆಂಡರ್ ಕಾಲಾವಧಿ | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 01 | ವರ್ಕ್ ಇಂಡೆಂಟ್ ನಂ: 4396/Call-2 | 11 ತಿಂಗಳು (ಮಳೆಗಾಲ ಸೇರಿ) | 174.97 |

**ಟೆಂಡರ್ ಪ್ರಕ್ರಿಯೆಯ ವಿವರಗಳು ಕೆಳಗಿನಂತಿವೆ:**

**(1)** ಮುಂಗಡ ಠೇವಣಿ ಮೊತ್ತ ರೂ.ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ತಂತ್ರಾಂಶದಲ್ಲಿ ನಮೂದಿಸಿದಂತೆ. **(2)** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಬಿಡ್ ದಾಖಲೆಗಳನ್ನು ನೋಡಬಹುದಾದ ದಿನಾಂಕ : **13–03–2021**. **(3)** ಪ್ರಿ–ಬಿಡ್ (pre-bid) ಸಭೆಯನ್ನು ನಿಗದಿ ಪಡಿಸಿದ ದಿನಾಂಕ : **20–03–2021ರ ಬೆಳಿಗ್ಗೆ 11.00 ಗಂಟೆಗೆ. (4)** ಆನ್‌ಲೈನ್ ಮುಖಾಂತರ ಬಿಡ್ ಸಲ್ಲಿಸುವ ಕೊನೆಯ ದಿನಾಂಕ (ದ್ವಿ–ಲಕೋಟೆ) **30–03–2021ರ ಸಾಯಂಕಾಲ 4.30 ಗಂಟೆಯವರೆಗೆ. (5)** ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ : **31–03–2021ರ ಸಾಯಂಕಾಲ 5.00 ಗಂಟೆಗೆ. (6)** ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದಿಸಿದ ನಂತರ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಯೋಜನಾ ವಿಭಾಗ, ಬಳ್ಳಾರಿ ಇವರನ್ನು ಸಂಪರ್ಕಿಸಬಹುದು. ಮಾಹಿತಿಯನ್ನು https//www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಟಿಪ್ಪಣಿ: ಟೆಂಡರ್‌ನಲ್ಲಿ ತಿದ್ದುಪಡಿ ಅಥವಾ ಯಾವುದೇ ಬದಲಾವಣೆಗಳು ಇದ್ದರೆ e-Procurement ಮುಖಾಂತರ ಮಾತ್ರ ಪ್ರಕಟಿಸಲಾಗುವುದು

**ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಯೋಜನಾ ವಿಭಾಗ, ಬಳ್ಳಾರಿ.**

ವಾಸಾಸಂಇ/ಬಳ್ಳಾರಿ/ಶಿರಡಿ ಸಾಯಿ/454/2020–21

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

### ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಒರಾಯನ್ ಮಾಲ್ ಮುಂಭಾಗ, ಸಂಪರ್ಕ ಸೌಧ, ಸರ್ವೆ ನಂ.8 (ಬಿ.ಇ.ಪಿ ಆವರಣ), ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010

ದೂರವಾಣಿ ನಂ: 080–22024000 ಇ–ಮೇಲ್: cekrdcl@gmail.com, laqkrdcl@gmail.com

ಸಂಖ್ಯೆ : ಲೋಇ 77 ಇಎಪಿ 2019 ಬೆಂಗಳೂರು ದಿನಾಂಕ: 22–02–2021

## ಅಧಿಸೂಚನೆ – ಗ್ರಾಮಠಾಣ ಸ್ವತ್ತುಗಳು

**ಕರ್ನಾಟಕ ಹೆದ್ದಾರಿ ಕಾಯಿದೆ 1964 ರ ಕಲಂ 15 ರ ಅಡಿ ಅಧಿಸೂಚನೆ (ಭಾಗ – 01)**

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಬೆಂಗಳೂರು ಸುತ್ತಮುತ್ತಲಿನ 155 ಕಿ.ಮೀ. ಉದ್ದದ ರಸ್ತೆಗಳನ್ನು ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಲೋಇ 71 ಇಎಪಿ 2017, ಬೆಂಗಳೂರು ದಿ:18.09.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸರ್ಕಾರದ ಪ್ರಕಟಣೆ ಸಂಖ್ಯೆ: ಲೋಇ 05 ಇಎಪಿ 2019 ದಿ:14.01.2019 ರಲ್ಲಿ ಬೆಂಗಳೂರು ಸುತ್ತಮುತ್ತಲಿನ 4 ರಸ್ತೆಗಳನ್ನು 4 ಪಥಗಳ ರಸ್ತೆಗಳನ್ನಾಗಿ ಅಭಿವೃದ್ಧಿಗೊಳಿಸಲು ಉದ್ದೇಶಿಸಿರುವುದರಿಂದ ರಸ್ತೆ ಅಗಲೀಕರಣಗೊಳಿಸಲು ಹಾಗೂ ಸಿಗ್ನಲ್ ಮುಕ್ತ ಜಂಕ್ಷನ್‌ಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅಭಿವೃದ್ಧಿಗೊಳಿಸಲು ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸುವ ಬಗ್ಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಮುಖ್ಯ ಅಭಿಯಂತರರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರನ್ನು ಕರ್ನಾಟಕ ಹೆದ್ದಾರಿ ಕಾಯಿದೆ 1964ರ ಕಲಂ 4 ರ ಅಡಿ ತಾತ್ಕಾಲಿಕವಾಗಿ "ಹೆದ್ದಾರಿ ಪ್ರಾಧಿಕಾರಿ (ಹೈವೇ ಅಥಾರಿಟಿ)" ಯನ್ನಾಗಿ ನೇಮಿಸಲಾಗಿರುತ್ತದೆ.

ಪ್ರಸ್ತುತ ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ ಇವರ ವ್ಯಾಪ್ತಿಯಲ್ಲಿನ **ಬೆಂಗಳೂರು ಪೂರ್ವ, ಯಲಹಂಕ ಹಾಗೂ ದೇವನಹಳ್ಳಿ ತಾಲ್ಲೂಕುಗಳ ಮೂಲಕ ಹಾದು ಹೋಗುತ್ತಿರುವ ರಾಜ್ಯ ಹೆದ್ದಾರಿ 104 ಹಾಗೂ ಜಿಲ್ಲಾ ಮುಖ್ಯ ರಸ್ತೆ ಎಂಬ ವರ್ಗೀಕರಣದಲ್ಲಿರುವ ರಸ್ತೆಯನ್ನು ಸರಪಳಿ (ಚೈನೇಜ್) ಕಿ.ಮೀ. 0.00 ರಿಂದ ಕಿ.ಮೀ. 21.50 ವರೆಗಿನ ರಾಷ್ಟ್ರೀಯ ಹೆದ್ದಾರಿ 04 ರಿಂದ ಬೂದಿಗೆರೆ ಮಾರ್ಗವಾಗಿ ಮೈಲನಹಳ್ಳಿ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ರಸ್ತೆಯನ್ನು ಚತುಷ್ಪಥವನ್ನಾಗಿ ಅಗಲೀಕರಣ ಮಾಡಿ ಅಭಿವೃದ್ಧಿಗೊಳಿಸಲು** ಮತ್ತು ಕಾಮಗಾರಿ ಪೂರ್ಣಗೊಂಡ ನಂತರ ಲೋಕೋಪಯೋಗಿ ಇಲಾಖೆಗೆ ನಿರ್ವಹಣೆ ಮಾಡಲು ಹಸ್ತಾಂತರಿಸಲು ಉದ್ದೇಶಿಸಲಾಗಿರುವುದರಿಂದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರು ಕರ್ನಾಟಕ ಹೆದ್ದಾರಿ ಕಾಯ್ದೆ 1964 ರ ಕಲಂ 15 ರ ಮೇರೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ರಸ್ತೆಯ ಭಾಗದ ಅಭಿವೃದ್ಧಿಗೆ ಅವಶ್ಯಕವಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ಕಲಂ 14 & ಕಲಂ 16 ಅಡಿಯಲ್ಲಿ ಈ ಕೆಳಕಂಡ ಗ್ರಾಮಠಾಣಾ ಸ್ವತ್ತುಗಳ ಜಾಗದಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿ ಅಥವಾ ಮುಖ್ಯ ಅಭಿಯಂತರರ (ಹೆದ್ದಾರಿ ಪ್ರಾಧಿಕಾರ) ಪರವಾಗಿ ಪ್ರತಿನಿಧಿಸುವವರನ್ನು ತಡೆಯುವುದಾಗಲಿ ಅಥವಾ ಅಡ್ಡಿಪಡಿಸುವುದಾಗಲಿ ಮಾಡಕೂಡದೆಂದು ಈ ಜಮೀನುಗಳಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಈ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯಿದೆ 2013ರ ಕಲಂ 2(1)(b)(VI) ರ ಮೇರೆಗೆ "ಸಾರ್ವಜನಿಕ ಉದ್ದೇಶದ ಮೂಲಭೂತ ಸೌಕರ್ಯ ಕಲ್ಪಿಸುವಿಕೆ" ವ್ಯಾಪ್ತಿಯಲ್ಲಿ ಬರುವುದರಿಂದ ಈ ಅಧಿಸೂಚನೆ ಮೂಲಕ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯಿದೆ 2013ರ ಅಡಿಯಲ್ಲಿನ ನಿಬಂಧನೆಗಳಿಗೆ ಒಳಪಟ್ಟು ಪರಿಹಾರವನ್ನು ನಿಗದಿಪಡಿಸಿ, ಪಾವತಿಸಲಾಗುವುದು. ಅಲ್ಲದೇ, ಈ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯಿದೆ 2013ರ ಕಲಂ 4(1) ರ ಅಡಿ "ಸಾಮಾಜಿಕ ಪರಿಣಾಮ ನಿರ್ಧಾರಣೆ" (Social Impact Assessment-SIA) ಮತ್ತು ಕಲಂ 4(6) ರಲ್ಲಿ ನಿರ್ದೇಶಿಸಿರುವಂತೆ "ಸಾಮಾಜಿಕ ಪರಿಣಾಮ ನಿರ್ವಹಣಾ ಯೋಜನೆ" (Social Impact Management Plan-SIMP) ವರದಿಗಳನ್ನು ಘಟನೋತ್ತರವಾಗಿ (Post facto) ತಯಾರಿಸಿ, ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ.

ಈ ಅಧಿಸೂಚನೆ ಪ್ರಕಟಣೆಯಾದ ನಂತರ ಮುಖ್ಯ ಅಭಿಯಂತರು (ಹೆದ್ದಾರಿ ಪ್ರಾಧಿಕಾರ), ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರ ಅನುಮತಿಯಿಲ್ಲದೆ ಸದರಿ ಗ್ರಾಮಠಾಣಾ ಸ್ವತ್ತುಗಳನ್ನು ವಿಲೇ ಮಾಡುವ ಒಪ್ಪಂದದ ಕ್ರಯ, ಕರಾರು, ಭೋಗ್ಯ, ಲೀಜ್, ಅದಲು–ಬದಲು ವಗೈರೆ ಮಾಡುವಂತಿಲ್ಲ. ಸದರಿ ಗ್ರಾಮಠಾಣಾ ಸ್ವತ್ತುಗಳ ಜಾಗದಲ್ಲಿ ಈ ಅಧಿಸೂಚನೆ ಪ್ರಕಟಣೆಯ ನಂತರ ಕಟ್ಟಡಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಒಂದು ವೇಳೆ ಮಾಡದಿದ್ದರೂ ಪರಿಹಾರ ಹಣ ನಿಗದಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಸದರಿ ಗ್ರಾಮಠಾಣಾ ಸ್ವತ್ತುಗಳ ವಿವರಗಳನ್ನು ಪರಿಶೀಲನೆಗೆ ಮುಖ್ಯ ಅಭಿಯಂತರರು (ಹೆದ್ದಾರಿ ಪ್ರಾಧಿಕಾರ), ವಿಶೇಷ ಭೂಸ್ವಾಧಿನಾಧಿಕಾರಿಗಳು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಹಾಗೂ ಸಂಬಂಧಪಟ್ಟ ತಾಲ್ಲೂಕುಗಳ ತಹಶೀಲ್ದಾರ್‌ರವರ ಕಛೇರಿಗಳಲ್ಲಿ ಇಡಲಾಗಿದೆ.

### ಷೆಡ್ಯೂಲ್

| ಕ್ರಮ ಸಂಖ್ಯೆ | ಸ್ವತ್ತಿನ ಸಂಖ್ಯೆ | ಸ್ವತ್ತಿನ ವಿವರ | ಚೈನೇಜ್ | LHS/ RHS | ಖಾತೆದಾರನ / ಮಾಲೀಕನ ಹೆಸರು | ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ (ಚದರ ಮೀಟರ್‌ಗಳಲ್ಲಿ) |
|---|---|---|---|---|---|---|
| 1 | 2 | 3 | 4 | 5 | 6 | 7 |
| ಹೋಬಳಿ: ಬಿದರಹಳ್ಳಿ । ತಾಲ್ಲೂಕು : ಬೆಂಗಳೂರು ಪೂರ್ವ । ಜಿಲ್ಲೆ : ಬೆಂಗಳೂರು ನಗರ | | | | | | |
| ಗ್ರಾಮದ ಹೆಸರು : ಮಂಡೂರು | | | | | | |
| 1 | 113/2ಡಿ | ವಾಸದ ಮನೆ | 4+540 | RHS | ಎಂ ಎನ್ ಬಸವನಾಥಗೌಡ ಬಿನ್ ನಂಜಪ್ಪ | 1.78 |
| 2 | 113/2ಬಿ | ವಾಸದ ಮನೆ | 4+530 | RHS | ಎನ್ ಶ್ಯಾಮಣ್ಣ ಬಿನ್ ನಂಜುಂಡಪ್ಪ | 24 |
| 3 | 4/27 | ವಾಸದ ಮನೆ | 4+480 | RHS | ಎಂ ಎನ್ ಮಹದೇವಗೌಡ ಬಿನ್ ನಂಜಪ್ಪ | 17.91 |
| 4 | 6/2ಎ | ಮನೆ ಕಾಂಪೌಂಡ್ | 4+560 | RHS | ರಾಮಣ್ಣ ಬಿನ್ ದೊಡ್ಡನಾಗಪ್ಪ | 38.00 |
| 5 | 113/2ಎ | ವಾಸದ ಮನೆ | 4+470 | RHS | ಜನಾರ್ಧನಗೌಡ ಬಿನ್ ಕೃಷ್ಣಪ್ಪ ಗೌಡ | 27.09 |
| 6 | – | ವಾಸದ ಮನೆ | 4+580 | LHS | ಕೆ ಎಂ ಆಂಜನಪ್ಪ | 21.00 |
| 7 | – | ವಾಸದ ಮನೆ | 4+590 | RHS | ಎಂ ಎನ್ ಬಸಂತ್ ಗೌಡ | 13.92 |
| 8 | – | ವಾಸದ ಮನೆ | 4+600 | RHS | ಆಂಜಿನಮ್ಮ ಕೋಂ ರಾಮಣ್ಣ | 28.36 |
| 9 | – | ವಾಸದ ಮನೆ | 4+620 | RHS | ಜಯರಾಮ್ ಗೌಡ ಬಿನ್ ನಂಜಪ್ಪ | 72 |
| 10 | – | ವಾಸದ ಮನೆ | 4+630 | LHS | ಕೆಂಪಣ್ಣ ಮುನಿಸ್ವಾಮಪ್ಪ | 3.2 |
| 11 | – | ವಾಸದ ಮನೆ | 4+640 | LHS | ಮಂಜುನಾಥ್ ಭಾಗ್ಯಮ್ಮ | 1.1 |
| 12 | – | ವಾಸದ ಮನೆ | 4+650 | RHS | ಮುನಿಗೌಡ | 17.07 |
| | | | | | ಒಟ್ಟು | **265.43** |
| ಹೋಬಳಿ : ಚನ್ನರಾಯಪಟ್ಟಣ । ತಾಲ್ಲೂಕು : ದೇವನಹಳ್ಳಿ । ಜಿಲ್ಲೆ : ಬೆಂಗಳೂರು ಗ್ರಾಮಾಂತರ | | | | | | |
| ಗ್ರಾಮದ ಹೆಸರು : ಹಂದರಹಳ್ಳಿ | | | | | | |
| 1 | 112/1 | ವಾಸದ ಮನೆ | 9+175 | LHS | ಸುಮಿತ್ರ ಕೇಶವ್ ಗೌಡ | 7.01 |
| 2 | 112/1 | ವಾಸದ ಮನೆ | 9+180 | LHS | ಸುಮಿತ್ರ ಕೇಶವ್ ಗೌಡ | 9.46 |
| 3 | 112 | ಕಾಂಪೌಂಡ್ ಗೋಡೆ & ವಾಸದ ಮನೆ | 9+182 | LHS | ಜಯರಾಮ್ ಹನುಮಂತ ಗೌಡ | 5.50 |
| 4 | 112 | ಕಾಂಪೌಂಡ್ ಗೋಡೆ & ವಾಸದ ಮನೆ | 9+260 | LHS | ಜಯರಾಮ್ ಹನುಮಂತ ಗೌಡ | 72 |
| | | | | | ಒಟ್ಟು | **93.97** |
| 1 | 2 | 3 | 4 | 5 | 6 | 7 |
| ಗ್ರಾಮದ ಹೆಸರು : ಬೂದಿಗೆರೆ | | | | | | |
| 1 | 99 | ಕಾಂಪೌಂಡ್ ಮನೆ | 10+080 | Both side | ಕೃಷ್ಣಪ್ಪ ಬಿನ್ ಮುನಿಯಪ್ಪ | 72.59 |
| 2 | – | ಕಾಂಪೌಂಡ್ ಮನೆ | 10+150 | LHS | ರಾಜಮ್ಮ ಕೋಂ ಎಸ್ ಎಸ್ ನಾಯರ್ | 90.00 |
| 3 | 150300201300101000 | ವಾಸದ ಮನೆ | 10+830 | LHS | ರಾಜಮ್ಮ ಕೋಂ ಅಣ್ಣೆಪ್ಪ | 91.00 |
| 4 | – | ವಾಸದ ಮನೆ | 10+975 | LHS | ಚಿನ್ನಮ್ಮ ಕೋಂ ವೆಂಕಟೇಶಪ್ಪ | 96.00 |
| 5 | 150300201300101360 | ವಾಸದ ಮನೆ | 10+975 | LHS | ಎನ್ ಮಂಜುನಾಥ್ ಬಿನ್ ನಂಜುಂಡಪ್ಪ | 96.00 |
| 6 | 150300201300101361 | ವಾಸದ ಮನೆ | 10+975 | LHS | ಗೌರಮ್ಮ ಕೋಂ ಗುರಪ್ಪ | 19.00 |
| 7 | – | ವಾಸದ ಮನೆ | 10+975 | RHS | ನಂಜಮ್ಮ | 96.00 |
| 8 | 225 | ವಾಸದ ಮನೆ | 10+975 | RHS | ಅಂಜನಿಯಮ್ಮ | 19.00 |
| | | | | | ಒಟ್ಟು | **579.59** |
| ಹೋಬಳಿ : ಜಾಲ । ತಾಲ್ಲೂಕು : ಯಲಹಂಕ । ಜಿಲ್ಲೆ : ಬೆಂಗಳೂರು ನಗರ | | | | | | |
| ಗ್ರಾಮದ ಹೆಸರು : ಶಿಂಗಹಳ್ಳಿ | | | | | | |
| 1 | 112 | ವಾಸದ ಮನೆ | 14+600 | RHS | ದೊಡ್ಡವೀರಪ್ಪ ಬಿನ್ ಪಿಲ್ಲಪ್ಪ | 5.75 |
| 2 | – | ಕಾಂಪೌಂಡ್ | 14+390 | LHS | ಕೃಷ್ಣಪ್ಪ ಬಿನ್ ಮುನಿಯಪ್ಪ | 37.00 |
| 3 | 99 | ಪೌಲ್ಟ್ರಿ ಫಾರ್ಮ್ | 14+390 | RHS | ಗೋವಿಂದಪ್ಪ ಬಿನ್ ಕೃಷ್ಣಪ್ಪ | 8.75 |
| 4 | 98 | ಕಾಂಪೌಂಡ್ ಮನೆ | 14+410 | LHS | ಸಿ. ವೆಂಕಟೇಶಪ್ಪ ಬಿನ್ ಚಿಕ್ಕಪಯ್ಯ | 22.67 |
| 5 | – | ಕಾಂಪೌಂಡ್ ಮನೆ | 14+470 | LHS | ಚಿನ್ನಮ್ಮ ವೆಂಕಟೇಶ್ | 27.27 |
| 6 | – | ಸ್ಟೇರ್ ಕೇಸ್ ಮನೆ | 14+520 | LHS | ಗೋಪಾಲ್ ಲಕ್ಷ್ಮಣ್ ರಾಜು | 0.75 |
| 7 | 78/52/1 | ವಾಸದ ಮನೆ | 14+560 | LHS | ತಮ್ಮಣ್ಣ ಕೋಂ ಮುನಿದಾಮಪ್ಪ | 2.00 |
| 8 | – | ವಾಣಿಜ್ಯ ಮಳಿಗೆ | 14+620 | LHS | ದೊಡ್ಡವೀರಪ್ಪ ಬಿನ್ ಪಿಲ್ಲಪ್ಪ | 14.00 |
| 9 | – | ವಾಸದ ಮನೆ | 14+665 | LHS | ಅಕ್ಕಣ್ಣ ತಮ್ಮಣ್ಣ | 16.40 |
| 10 | 225/140 | ಕಾಂಪೌಂಡ್ | 14+680 | LHS | ಕೃಷ್ಣಪ್ಪ ಬಿನ್ ಬೈರಣ್ಣ | 9.00 |
| 11 | 261/144 | ವಾಸದ ಮನೆ | 14+690 | LHS | ಶಾಂತಮ್ಮ | 5.20 |
| 12 | – | ವಾಸದ ಮನೆ | 14+700 | LHS | ಮುನಿಯಪ್ಪ ಚಿನ್ನಪ್ಪ | 6.13 |
| | | | | | ಒಟ್ಟು | **154.92** |
| ಗ್ರಾಮದ ಹೆಸರು : ಉಣಚೂರು | | | | | | |
| 1 | 138/17/1 | ಕಾಂಪೌಂಡ್ ಮನೆ | 16+700 | LHS | ಮುನಿಯಪ್ಪ ಬಿನ್ ಮುನಿಶಾಮಪ್ಪ | 31.00 |
| 2 | 139/19/2 | ವಾಸದ ಮನೆ | 16+940 | LHS | ಹೆಚ್ ಆರ್ ರಘುನಾಥ್ ಬಿನ್ ರಾಮಕೃಷ್ಣಯ್ಯ | 3.95 |
| 3 | – | ವಾಣಿಜ್ಯ ಮಳಿಗೆ | 17+020 | LHS | ಸುಬ್ರಮಣ್ಯ | 10.24 |
| 4 | 51/48 | ವಾಸದ ಮನೆ | 17+030 | RHS | ಮನಿಯಪ್ಪ ಬಿನ್ ಮುನಿಶಾಮಪ್ಪ | 61.05 |
| 5 | 125/15 | ಮನೆ/ಅಂಗಡಿ | 17+040 | RHS | ಮುನಿನಾರಾಯಣಪ್ಪ ಬಿನ್ ಚಿನ್ನಪ್ಪ | 9.49 |
| 6 | 127/39 | ಮನೆ/ಅಂಗಡಿ | 17+040 | LHS | ಟಿ ಮಂಜುನಾಥ್ ಬಿನ್ ತಿಮ್ಮಪ್ಪ | 26.92 |
| 7 | – | ವಾಸದ ಮನೆ | 17+075 | LHS | ದೀಪಾ ಕೋಂ ಮುತ್ತುರಾಜು | 7.00 |
| 8 | – | ಕಾಂಪೌಂಡ್ ಗೋಡೆ | 16+980 | RHS | ಯಲ್ಲಮ್ಮ ಕೋಂ ವೆಂಕಟೇಶಪ್ಪ | 58.13 |
| | | | | | ಒಟ್ಟು | **207.78** |
| ಗ್ರಾಮದ ಹೆಸರು : ಕಾಡರಾಯಪ್ಪನಹಳ್ಳಿ | | | | | | |
| 1 | 157/54/4 | ವಾಸದ ಮನೆ | 18+875 | RHS | ಪ್ರಕಾಶ್ ಬಿನ್ ನರಸಿಂಹಯ್ಯ | 12.08 |
| 2 | 157/54/1 | ವಾಸದ ಮನೆ | 18+885 | RHS | ಕೃಷ್ಣಮೂರ್ತಿ ಬಿನ್ ನರಸಿಂಹಯ್ಯ | 11.59 |
| 3 | – | ವಾಣಿಜ್ಯ ಮಳಿಗೆ | 18+900 | RHS | ಕೆ ಎನ್ ಕೃಷ್ಣಮೂರ್ತಿ | 2.83 |
| 4 | – | ವಾಣಿಜ್ಯ ಮಳಿಗೆ | 18+910 | RHS | ವಿಶ್ವನಾಥ್ | 94.53 |
| 5 | 29/27/1 | ಅಂಗಡಿ | 19+100 | LHS | ಸುಬ್ರಮಣಿ ಬಿನ್ ಚಿಕ್ಕಬೈರಪ್ಪ | 10.022 |
| 6 | 51/48 | ವಾಸದ ಮನೆ | 19+050 | RHS | ವೆಂಕಟೇಶಪ್ಪ ಬಿನ್ ಮುನಿಶಾಮಪ್ಪ | 73.67 |
| 7 | – | ವಾಸದ ಮನೆ | 19+060 | RHS | ಚೌಡಪ್ಪ | 80.84 |
| 8 | 115/28/1 | ವಾಸದ ಮನೆ | 19+070 | RHS | ಪೋತಾಲಪ್ಪ | 302.72 |
| 9 | 116/24/2B | ವಾಸದ ಮನೆ | 19+090 | RHS | ರಾಜಪ್ಪ ಬಿನ್ ಚೌಡಪ್ಪ | 51.74 |
| 10 | – | ವಾಸದ ಮನೆ | 19+110 | RHS | ಮಂಜುನಾಥ್ | 4.81 |
| 11 | 40 | ವಾಸದ ಮನೆ | 19+130 | RHS | ಶ್ರೀನಿವಾಸ್ | 41.43 |
| 12 | – | ವಾಸದ ಮನೆ | 19+160 | RHS | ಮುನಿಯಪ್ಪ ಬಿನ್ ಕೆಂಪಣ್ಣ | 10.67 |
| 13 | 48 | ವಾಸದ ಮನೆ | 19+230 | LHS | ನಾರಾಯಣಸ್ವಾಮಿ ಬಿನ್ ಮುನಿವೆಂಕಟರಾಜು | 8.43 |
| 14 | – | ವಾಸದ ಮನೆ | 19+265 | RHS | ಪದ್ಮಮ್ಮ ಕೋಂ ರಮೇಶ್ | 0.88 |
| | | | | | ಒಟ್ಟು | **706.25** |
| ಗ್ರಾಮದ ಹೆಸರು : ಮೈಲನಹಳ್ಳಿ | | | | | | |
| 1 | – | ವಾಸದ ಮನೆ | 19+480 | RHS | ಶ್ರೀನಿವಾಸ್ ಬಿನ್ ಸುಬ್ಬಣ್ಣ | 6.04 |
| 2 | 48 | ವಾಸದ ಮನೆ | 19+510 | RHS | ರಾಮಣ್ಣ ಬಿನ್ ಸುಬ್ಬಣ್ಣ | 7.62 |
| 3 | – | ವಾಸದ ಮನೆ | 19+695 | RHS | ನರಸಿಂಹರಾಜು ಬಿನ್ ಮುನಿವೆಂಕಟರಾಜು | 2.49 |
| 4 | – | ವಾಸದ ಮನೆ | 19+805 | RHS | ಲಕ್ಷ್ಮೀಕಾಂತ್ | 2.24 |
| 5 | 106 | ವಾಸದ ಮನೆ | 19+830 | LHS | ಜೋಗಿ ಮುನಿಯಪ್ಪ ಬಿನ್ ಗುರಪ್ಪ | 3 |
| 6 | – | ವಾಸದ ಮನೆ | 19+835 | LHS | ಗೋಪಾಲರಾಜ್ ಬಿನ್ ಲಕ್ಷ್ಮಣ ರಾಜ್ | 38.86 |
| 7 | – | ವಾಸದ ಮನೆ | 19+845 | LHS | ರಮೇಶ್ ರಾಜು ರಂಗರಾಜು | 106.69 |
| 8 | – | ವಾಸದ ಮನೆ | 19+900 | LHS | ಅಶ್ವಥಯ್ಯ ಬಿನ್ ದೊಡ್ಡಮುನಿಯಪ್ಪ | 18.96 |
| 9 | – | ಶೌಚಾಲಯದ ಮನೆ | 19+900 | LHS | ಬೈಯಮ್ಮ ಕೋಂ ಮುನಿಯಪ್ಪ | 5.22 |
| 10 | – | ಅಂಗಡಿ | 19+990 | RHS | ನಾರಾಯಣಸ್ವಾಮಿ ಬಿನ್ ಮುನಿಕುಳ್ಳಪ್ಪ | 13.54 |
| 11 | 106 | ವಾಸದ ಮನೆ | 20+040 | RHS | ವಸಂತಮ್ಮ ಕೋಂ ಮುನಿಯಪ್ಪ | 15.635 |
| 12 | 106 | ವಾಸದ ಮನೆ | 20+110 | RHS | ಕೃಷ್ಣಪ್ಪ ಬಿನ್ ನಂಜುಂಡಪ್ಪ | 9.53 |
| | | | | | ಒಟ್ಟು | **229.83** |

ಸಹಿ/–
(ಡಾ॥ ಹೆಚ್.ಆರ್. ಶಿವಕುಮಾರ್)
ವಿಶೇಷ ಭೂಸ್ವಾಧೀನಾಧಿಕಾರಿ
ಕೆಆರ್‌ಡಿಸಿಎಲ್, ಬೆಂಗಳೂರು.

ಸಹಿ/–
(ಶಿವಕುಮಾರ್ ಬಿ.ಎಸ್)
ಮುಖ್ಯ ಇಂಜಿನಿಯರ್ ಹಾಗೂ ಹೆದ್ದಾರಿ ಪ್ರಾಧಿಕಾರ,
ಕೆಆರ್‌ಡಿಸಿಎಲ್, ಬೆಂಗಳೂರು.

ಸಹಿ/–
(ರಾಮಚಂದ್ರಪ್ಪ ಕೆ.ಎನ್)
ಸರ್ಕಾರದ ಅಧೀನ ಕಾರ್ಯದರ್ಶಿ
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

DIPR/DDU/YC/3097/2020-21

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





### ಸುಭಾಷಿತ

ನಿಮಗೆ ಯಶಸ್ಸು ಸಿಕ್ಕಿದೆಯೆಂದರೆ, ಎಲ್ಲೋ ಯಾವಾಗಲೋ ಯಾರೋ ನಿಮಗೆ ಕೊಟ್ಟ ಬದುಕು ಅಥವಾ ಐಡಿಯಾದಿಂದ ನೀವು ಸರಿದಾರಿಗೆ ಬಂದದ್ದು ಕಾರಣವಾಗಿರುತ್ತದೆ. ಅದೇ ರೀತಿಯ ನೆರವನ್ನು ನತದೃಷ್ಟರಿಗೆ ನೀಡಬೇಕಾದ ಋಣ ನಿಮ್ಮ ಮೇಲಿರುತ್ತದೆ. **–ಮೆಲಿಂಡಾ ಗೇಟ್ಸ್**

# ಕೋವಿಡ್ ಪ್ರಕರಣಗಳ ಏರಿಕೆ ಮೈಮರೆತರೆ ಕಾದಿದೆ ಅಪಾಯ

**ಕೋವಿಡ್** ಪಿಡುಗು ಎಷ್ಟೊಂದು ಅಪಾಯಕಾರಿಯಾಗಿ ಪರಿಣಮಿಸಬಹುದು ಎಂಬುದು ಕಳೆದೊಂದು ವರ್ಷದಲ್ಲಿ ಇಡೀ ಜಗತ್ತಿಗೆ ಅರಿವಾಗಿದೆ. ಆರ್ಥಿಕವಾಗಿ, ವೈಜ್ಞಾನಿಕವಾಗಿ, ವೈದ್ಯಕೀಯವಾಗಿ ಮುಂಚೂಣಿಯಲ್ಲಿರುವ ಅಮೆರಿಕ, ಬ್ರಿಟನ್‌ನಂತಹ ದೇಶಗಳೇ ಈ ಸಾಂಕ್ರಾಮಿಕದ ಹೊಡೆತಕ್ಕೆ ತತ್ತರಿಸಿವೆ. ಕೊರೊನಾ ವೈರಾಣುವಿನಿಂದಾಗಿ ಭಾರತ ಅನುಭವಿಸಿದ ಕಷ್ಟ ನಷ್ಟಗಳನ್ನು ಮರೆಯಲು ಸಾಧ್ಯವಿಲ್ಲ. ಅಮೆರಿಕವನ್ನು ಬಿಟ್ಟರೆ ಭಾರತದಲ್ಲಿಯೇ ಅತ್ಯಂತ ಹೆಚ್ಚು ಪ್ರಕರಣಗಳು ವರದಿಯಾಗಿವೆ. 2020ರ ನವೆಂಬರ್‌ನಿಂದ ಪ್ರಕರಣಗಳ ಸಂಖ್ಯೆ ಇಳಿಮುಖವಾಗಲು ಆರಂಭವಾಗಿದ್ದರಿಂದ ಸರ್ಕಾರ ಮತ್ತು ಜನರು ತುಸು ನಿರಾಳವಾಗಿದ್ದು ಹೌದು. ಆದರೆ, ಕೆಲವು ದಿನಗಳಿಂದ ಪ್ರಕರಣಗಳ ಸಂಖ್ಯೆ ಮತ್ತೆ ಏರುಗತಿಗೆ ಹೊರಳಿಕೊಂಡಿದೆ. ಶುಕ್ರವಾರ ಬೆಳಿಗ್ಗೆ 10 ಗಂಟೆವರೆಗಿನ 24 ತಾಸುಗಳಲ್ಲಿ 23,285 ಜನರಿಗೆ ಕೋವಿಡ್ ದೃಢಪಟ್ಟಿದೆ. ಅದಕ್ಕೂ ಹಿಂದಿನ 24 ತಾಸುಗಳಲ್ಲಿ ಕೂಡ 22,854 ಪ್ರಕರಣಗಳು ವರದಿಯಾಗಿವೆ. ಇದು ಬಹಳ ಕಳವಳಕಾರಿಯಾದ ಬೆಳವಣಿಗೆ. ಕಳೆದ 77 ದಿನಗಳಲ್ಲಿ ವರದಿಯಾದ ಅತ್ಯಂತ ಹೆಚ್ಚಿನ ಪ್ರಕರಣಗಳು ಇವು. ಮಹಾರಾಷ್ಟ್ರದಲ್ಲಿ ಆರಂಭದಿಂದಲೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಅದೇ ಪ್ರವೃತ್ತಿ ಈಗಲೂ ಮುಂದುವರಿದಿದೆ. ಆರಂಭದಲ್ಲಿ ಕೊರೊನಾವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ಜಾಗತಿಕ ಮೆಚ್ಚುಗೆಗೆ ಪಾತ್ರವಾಗಿದ್ದ ಕೇರಳದಲ್ಲಿ ಈಗ ಹೆಚ್ಚು ಮಂದಿ ಸೋಂಕಿಗೆ ಒಳಗಾಗುತ್ತಿದ್ದಾರೆ. ದೇಶದ ಒಟ್ಟು ಪ್ರಕರಣಗಳ ಪೈಕಿ ಶೇ 70ಕ್ಕೂ ಹೆಚ್ಚು ಈ ಎರಡು ರಾಜ್ಯಗಳಿಂದಲೇ ವರದಿಯಾಗುತ್ತಿವೆ. ಅತಿ ಹೆಚ್ಚು ಸಕ್ರಿಯ ಪ್ರಕರಣಗಳು ಇರುವ ಹತ್ತು ಜಿಲ್ಲೆಗಳ ಪೈಕಿ ಬೆಂಗಳೂರು ನಗರ ಜಿಲ್ಲೆಯೂ ಸೇರಿದೆ ಎಂಬುದನ್ನು ರಾಜ್ಯ ಸರ್ಕಾರವು ಹೆಚ್ಚು ಗಂಭೀರವಾಗಿ ಪರಿಗಣಿಸಬೇಕಿದೆ. ಒಂದೂಕಾಲು ಕೋಟಿಗೂ ಹೆಚ್ಚು ಜನರು ಇರುವ, ಹೆಚ್ಚು ಜನದಟ್ಟಣೆಯ ಪ್ರದೇಶ ಬೆಂಗಳೂರು ನಗರ ಜಿಲ್ಲೆ. ರಾಜ್ಯ ಮತ್ತು ದೇಶದ ವಿವಿಧ ಭಾಗಗಳಿಂದ ಸಾವಿರಾರು ಜನರು ದಿನವೂ ಬರುವ ನಗರದಲ್ಲಿ ಸೋಂಕನ್ನು ನಿಯಂತ್ರಿಸುವುದು ಜರೂರು ಕೆಲಸ.



**ದೇಶವನ್ನು ಕೋವಿಡ್ ಮುಕ್ತವಾಗಿಸುವುದು ಎಂದರೆ ದೇಶವನ್ನು ಆರೋಗ್ಯಯುತವಾಗಿ, ಸುರಕ್ಷಿತವಾಗಿ ಇರಿಸುವುದು ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು**

ಒಂದು ಮಟ್ಟಿಗೆ ನಿಯಂತ್ರಣಕ್ಕೆ ಬಂದಿದ್ದ ಸಾಂಕ್ರಾಮಿಕವು ಮತ್ತೆ ಅಪಾಯಕಾರಿಯಾಗಿ ಪರಿಣಮಿಸಿದ್ದು ಏಕೆ ಎಂಬುದನ್ನು ಸರ್ಕಾರ ಮತ್ತು ಸಾರ್ವಜನಿಕ ಆರೋಗ್ಯ ಪರಿಣತರು ತ್ವರಿತವಾಗಿ ಕಂಡುಕೊಳ್ಳಬೇಕಿದೆ. ಆರ್ಥಿಕವಾಗಿ ಮತ್ತು ಇತರ ರೀತಿಯಲ್ಲಿ ಅತಿ ದೊಡ್ಡ ನಷ್ಟಕ್ಕೆ ಕಾರಣವಾಗಿದ್ದ ಲಾಕ್‌ಡೌನ್, ಮಾಸ್ಕ್ ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ, ಜನರು ಹೆಚ್ಚು ಸಂಖ್ಯೆಯಲ್ಲಿ ಒಂದೆಡೆ ಸೇರದಿರುವುದು, ಶಿಕ್ಷಣ ಸಂಸ್ಥೆಗಳ ಸ್ಥಗಿತದಂತಹ ಅಸಾಧಾರಣ ಕ್ರಮಗಳು ಕೋವಿಡ್ ಅನ್ನು ಮೊದಲ ಹಂತದಲ್ಲಿ ನಿಯಂತ್ರಿಸಿದವು ಎಂಬುದನ್ನು ಜನರು ಮರೆಯಬಾರದು. ತ್ವರಿತವಾಗಿ ಹರಡುವ ಈ ಸಾಂಕ್ರಾಮಿಕವು ದೇಶವನ್ನು ಮತ್ತೆ ಗಂಡಾಂತರಕ್ಕೆ ತಳ್ಳಬಹುದು ಎಂಬ ಎಚ್ಚರ ಎಲ್ಲರಲ್ಲಿಯೂ ಇರಬೇಕು. ಕೋವಿಡ್ ಹರಡುವುದನ್ನು ತಡೆಯುವ ನಡವಳಿಕೆ ಮತ್ತು ಲಸಿಕೆ ಹಾಕಿಸಿಕೊಳ್ಳುವಿಕೆ ಮಾತ್ರ ಈ ರೋಗವನ್ನು ದೂರ ಇರಿಸಲು ಇರುವ ಮಾರ್ಗೋಪಾಯಗಳು. ಜನರಲ್ಲಿ ಜಾಗೃತಿ ಮೂಡಿಸಬೇಕಾದವರೇ ಕೋವಿಡ್ ತಡೆ ನಡವಳಿಕೆಯನ್ನು ಗಾಳಿಗೆ ತೂರಿದ್ದಾರೆ ಎಂಬುದು ವಿಷಾದನೀಯ. ರಾಜಕೀಯ ಪಕ್ಷಗಳ ಸಮಾವೇಶಗಳು, ನಾಯಕರ ಸಭೆಗಳು, ಪ್ರತಿಭಟನೆ, ಮೀಸಲಾತಿಗಾಗಿ ನಡೆದ ಪಾದಯಾತ್ರೆಗಳಲ್ಲಿ ಜನರು ಮಾಸ್ಕ್ ಧರಿಸಿರಲಿಲ್ಲ, ಅಂತರ ಕಾಯ್ದುಕೊಂಡಿರಲಿಲ್ಲ ಎಂಬುದು ಕಳವಳಕಾರಿಯಾದ ಸತ್ಯ. ಜನವರಿ 16ರಂದು ಆರಂಭವಾದ ಲಸಿಕೆ ಕಾರ್ಯಕ್ರಮವು ನಿರೀಕ್ಷಿತ ರೀತಿಯಲ್ಲಿ ಜಾರಿಯಾಗುತ್ತಿಲ್ಲ. ಸೋಂಕಿಗೆ ಒಳಗಾಗುವ ಅತಿ ಹೆಚ್ಚು ಅಪಾಯ ಹೊಂದಿರುವ 30 ಕೋಟಿ ಜನರಿಗೆ ಜುಲೈ ಹೊತ್ತಿಗೆ ಲಸಿಕೆ ನೀಡಬೇಕು ಎಂಬ ಗುರಿ ಇದೆ. ಆದರೆ, ಲಸಿಕೆ ಕಾರ್ಯಕ್ರಮವು ವೇಗ ಪಡೆದುಕೊಂಡಿಲ್ಲ. ಈವರೆಗೆ, 2.61 ಕೋಟಿ ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ. ಒಂದೆರಡು ದಿನ ಲಸಿಕೆ ನೀಡಿಕೆಯ ಸಂಖ್ಯೆಯು 20 ಲಕ್ಷವನ್ನು ದಾಟಿತ್ತು. ಆದರೆ, ಈ ಸಂಖ್ಯೆ ಶುಕ್ರವಾರ 4.8 ಲಕ್ಷಕ್ಕೆ ಇಳಿದಿದೆ. ಪ್ರಧಾನಿ, ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಮುಂತಾದ ಗಣ್ಯರೇ ಲಸಿಕೆ ಪಡೆದು ಧೈರ್ಯ ತುಂಬಿದ್ದರೂ ಜನರಲ್ಲಿ ಲಸಿಕೆಯ ಬಗ್ಗೆ ಹಿಂಜರಿಕೆ ಇದೆ. ಈ ಹಿಂಜರಿಕೆಯಿಂದ ಜನರು ಹೊರಬರಬೇಕು. ಜಾಗೃತಿ ಮೂಡಿಸುವ ಹೊಣೆಗಾರಿಕೆಯನ್ನು ಸರ್ಕಾರ ನಿರ್ವಹಿಸಬೇಕು. ದೇಶವನ್ನು ಕೋವಿಡ್ ಮುಕ್ತವಾಗಿಸುವುದು ಎಂದರೆ ದೇಶವನ್ನು ಆರೋಗ್ಯಯುತವಾಗಿ, ಸುರಕ್ಷಿತವಾಗಿ ಇರಿಸುವುದು ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು.

### ದಿನದ ಟ್ವೀಟ್

## ಆಸಕ್ತಿದಾಯಕ ನಡೆ



**ಕಮಲ್ ಹಾಸನ್ ಅವರು ಕೊಯಮತ್ತೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಡಿಎಂಕೆ ಮತ್ತು ಎಐಎಡಿಎಂಕೆ ಬದಲಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಜಿದ್ದಾಜಿದ್ದಿ ಇರುವ ಕ್ಷೇತ್ರವನ್ನು ಅವರು ಆಯ್ಕೆ ಮಾಡಿಕೊಂಡಿರುವುದು ಆಸಕ್ತಿಕರವಾಗಿದೆ.**
**#TamilNaduElections**

**ಶಿಲ್ಪಾ ನಾಯರ್**, ಪತ್ರಕರ್ತೆ

### 25 ವರ್ಷಗಳ ಹಿಂದೆ

ಬುಧವಾರ, 13-3-1996

● **ಬಳಸದ ಶಾಲಾ ಕಾಲೇಜು ಭೂಮಿ ಮರುಸ್ವಾಧೀನ- ಜಿಲ್ಲಾಧಿಕಾರಿಗಳಿಗೆ ಆದೇಶ**

**ಬೆಂಗಳೂರು, ಮಾರ್ಚ್ 12**– ಶಾಲೆ, ಕಾಲೇಜು ಮುಂತಾದ ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರಿ ಭೂಮಿಯನ್ನು ಹಲವಾರು ವರ್ಷಗಳ ಹಿಂದೆಯೇ ಮಂಜೂರು ಮಾಡಿಸಿಕೊಂಡೂ ಉದ್ದೇಶಿತ ಕಾರ್ಯಕ್ಕೆ ಬಳಕೆ ಮಾಡದೇ ಇರುವ ಪ್ರಕರಣಗಳನ್ನು ಪತ್ತೆ ಹಚ್ಚಿ ಅದನ್ನು ಮರುಸ್ವಾಧೀನ ಮಾಡಿಕೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ ಎಂದು ಕಂದಾಯ ಸಚಿವ ಆರ್.ಎಲ್.ಜಾಲಪ್ಪ ಇಂದು ಇಲ್ಲಿ ತಿಳಿಸಿದರು.

ಅಯಕಟ್ಟಿನ ಸ್ಥಳಗಳಲ್ಲಿ ಇರುವ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತನೆ ಮಾಡಿಟ್ಟುಕೊಂಡಿರುವ ಸಾವಿರಾರು ಪ್ರಕರಣಗಳು ರಾಜ್ಯದಾದ್ಯಂತ ಇದ್ದು ಅಂಥ ಅನುಮತಿಯನ್ನು ಹಿಂತೆಗೆದುಕೊಂಡು ಕೃಷಿಯೇತರ ಉದ್ದೇಶಕ್ಕಾಗಿ ಮಾಡಿದ ಪರಿವರ್ತನೆಯನ್ನು ರದ್ದುಪಡಿಸುವಂತೆಯೂ ಈ ಆದೇಶದಲ್ಲಿ ಸೂಚಿಸಲಾಗಿದೆ ಎಂದು ಅವರು ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ ವಿವರಿಸಿದರು.

● **‘ಬೇಡ್ತಿ, ಅಘನಾಶಿನಿ ಯೋಜನೆ ಜಾರಿ ಇಲ್ಲ’**

**ಕಲ್ಬುರ್ಗಿ, ಮಾರ್ಚ್ 12**– ಬೇಡ್ತಿ ಮತ್ತು ಅಘನಾಶಿನಿ ಜಲವಿದ್ಯುತ್ ಯೋಜನೆಗಳನ್ನು ಸ್ಥಳೀಯರ ವಿರೋಧದಿಂದಾಗಿ ಸರ್ಕಾರ ಸಂಪೂರ್ಣವಾಗಿ ಕೈಬಿಟ್ಟಿದೆ. ಈ ಯೋಜನೆಯನ್ನು ಜಾರಿಗೆ ತರುವುದಿಲ್ಲ ಎಂದು ಉಪಮುಖ್ಯಮಂತ್ರಿ ಜೆ.ಎಚ್.ಪಟೇಲ್ ಘೋಷಿಸಿದರು.

### 50 ವರ್ಷಗಳ ಹಿಂದೆ

ಶನಿವಾರ, 13-3-1971

● **ಎಲ್ಲ 27 ಸ್ಥಾನಗಳೂ ಆಡಳಿತ ಕಾಂಗ್ರೆಸ್ಸಿಗೆ; ರಾಜ್ಯದ ವಿಕ್ರಮ**

**ಬೆಂಗಳೂರು, ಮಾರ್ಚ್ 12**– ಎಲ್ಲ 27 ಲೋಕಸಭೆ ಕ್ಷೇತ್ರಗಳಲ್ಲೂ ಆಡಳಿತ ಕಾಂಗ್ರೆಸ್ಸಿನ ಜಯಭೇರಿ ಮೊಳಗಿಸಿ, ಭಾರತದ ಮಧ್ಯಂತರ ಚುನಾವಣೆಯಲ್ಲಿ ಮೈಸೂರು ರಾಜ್ಯ ಐತಿಹಾಸಿಕ ವಿಕ್ರಮವನ್ನು ನಿರ್ಮಿಸಿದೆ.

ಇರುವ ಎಲ್ಲ ಕ್ಷೇತ್ರಗಳಿಂದ ಒಂದೇ ಪಕ್ಷದ ಅಭ್ಯರ್ಥಿಗಳನ್ನು ಆರಿಸಿ ಕಳುಹಿಸಿರುವ ಏಕಮಾತ್ರ ರಾಜ್ಯ ಮೈಸೂರು. ವಿಶಾಲ ಮೈಸೂರಿನ ಚರಿತ್ರೆಯಲ್ಲೂ ಈ ಸಾಧನೆ ಇದೇ ಮೊದಲು.

● **ಹೊಸ ಲೋಕಸಭೆಯಲ್ಲಿ ವಿರೋಧ ಪಕ್ಷವೇ ಇಲ್ಲ**

**ನವದೆಹಲಿ, ಮಾರ್ಚ್ 12**– ಹೊಸ ಲೋಕಸಭೆಯಲ್ಲಿ ಮನ್ನಣೆ ಪಡೆದ ಯಾವುದೇ ವಿರೋಧ ಪಕ್ಷವೂ ಇರುವಂತೆ ಕಾಣಲಿಲ್ಲ.

ಏಕೆಂದರೆ ಇಡೀ ಸಭೆಯ ಹತ್ತನೇ ಒಂದು ಭಾಗ ಸದಸ್ಯರ ಸಂಖ್ಯೆ ಇರುವ ಪಕ್ಷಕ್ಕೆ ಮಾತ್ರವೇ ಅಧಿಕೃತ ಮನ್ನಣೆ ಲಭ್ಯ. ಈಗ 21 ಸ್ಥಾನಗಳನ್ನು ಪಡೆದಿರುವ ಜನಸಂಘಕ್ಕೆ ಇನ್ನಷ್ಟು ಬಹುಮತ ದುರ್ಲಭ.

ಕಳೆದ ನಾಲ್ಕು ಲೋಕಸಭೆ ಚುನಾವಣೆಗಳಲ್ಲಿ ಅಧಿಕೃತ ವಿರೋಧ ಪಕ್ಷದ ಸ್ಥಾನ ಗಳಿಸುವಷ್ಟು ಬಹುಮತ ಯಾವುದೇ ಪಕ್ಷಕ್ಕೂ ಸಿಗಲಿಲ್ಲ. ಆದರೆ, ಕಾಂಗ್ರೆಸ್ ಇಬ್ಭಾಗದ ನಂತರ 65 ಸದಸ್ಯ ಸಂಖ್ಯೆ ಪಡೆದಿದ್ದ ಸಂಸ್ಥಾ ಕಾಂಗ್ರೆಸ್, ಸಭೆಯಲ್ಲಿ ಅಧಿಕೃತ ಸ್ಥಾನಮಾನ ಗಳಿಸಿತ್ತು.

### ಹೊಸ ಮಾದರಿಯ ಆರ್ಥಿಕ ವಿನ್ಯಾಸಗಳು ಇಂದು ದೇಶಕ್ಕೆ ಅವಶ್ಯಕವಾಗಿವೆ

# ಇಂದಿನ ಭಾರತ ಮತ್ತು ಸಹಕಾರ ತತ್ವ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**ರಾಷ್ಟ್ರೀಕರಣದ** ದೋಷಗಳಿಂದ ಖಾಸಗೀಕರಣ, ಖಾಸಗೀಕರಣದ ದೋಷಗಳಿಂದ ರಾಷ್ಟ್ರೀಕರಣ ನಡೆಯುವುದು ಒಂದು ಪ್ರಕ್ರಿಯೆಯಾಗಿ ಸಾಗುತ್ತದೆ. 1991ರಲ್ಲಿ ಜಾಗತೀಕರಣಕ್ಕೆ ತೆರೆದುಕೊಂಡ ನಂತರ, ಅಭಿವೃದ್ಧಿಶೀಲ ರಾಷ್ಟ್ರ ಎಂಬ ನೆಲೆಯಲ್ಲಿ ದಕ್ಕಿದ ರಿಯಾಯಿತಿಗಳ ಅವಧಿ ಮುಗಿದ ಮೇಲೆ, ಜಾಗತೀಕರಣದ ನಿಜವಾದ ಪರಿಣಾಮವನ್ನು ಅನುಭವಿಸಲೇಬೇಕು.

ಜಾಗತೀಕರಣವು ಮೊದಲ ಹಂತದಲ್ಲಿ ಉದ್ಯೋಗದ ಹೆಚ್ಚಳ, ಹಣಕಾಸು ವ್ಯವಹಾರದ ಏರಿಕೆ ಮುಂತಾದ ಅನೇಕ ಸುಖಗಳನ್ನು ತಂದಿತ್ತು. 2013ರ ಸುಮಾರಿಗೆ ಸುಖದ ದಿನಗಳು ನಿಧಾನವಾಗಿ ಆರ್ಥಿಕ ಇಳಿಕೆಯ ಸ್ವರೂಪಕ್ಕೆ ತಿರುಗಿದ್ದವು. ಜಾಗತೀಕರಣದ ರಿಯಾಯಿತಿಯ ಅವಧಿ ಮುಗಿದ ನಂತರ ಜಾಗತೀಕರಣದ ಎಲ್ಲ ನಿಯಮಗಳ ಪಾಲನೆ ಒಂದು ಅನಿವಾರ್ಯವಾಗುತ್ತದೆ.

ವರ್ತಮಾನದ ಭಾರತದ ಆರ್ಥಿಕ ನೀತಿಯು ಕೇವಲ ಭಾರತದ್ದಾಗಿ ಉಳಿಯುವುದಿಲ್ಲ. ಶಾಸನಾತ್ಮಕವಾಗಿ ವಿಶ್ವ ವ್ಯಾಪಾರ ಸಂಘಟನೆಯ ನಿಯಮಗಳು ಪ್ರಭಾವಿಸಿದರೆ, ವ್ಯಾವಹಾರಿಕವಾಗಿ ಭಾರತದ ವ್ಯಾಪಾರದ ದಿಕ್ಕು ಯಾವ ದೇಶಗಳೊಂದಿಗಿದೆಯೋ ಆ ದೇಶಗಳ ವಿದ್ಯಮಾನಗಳೂ ಭಾರತದ ಆರ್ಥಿಕತೆಯನ್ನು ಪ್ರಭಾವಿಸುತ್ತವೆ. ಅಮೆರಿಕ, ಯುರೋಪ್, ಅರಬ್ ದೇಶಗಳು ಭಾರತದ ವ್ಯಾಪಾರದ ದಿಕ್ಕು ಪ್ರಧಾನವಾಗಿರುವ ರಾಷ್ಟ್ರಗಳಾಗಿವೆ. ಇವು ಖಾಸಗೀಕರಣವನ್ನು ಉತ್ತೇಜಿಸುವ ರಾಷ್ಟ್ರಗಳು. ಬಹುಶಃ ಮುಂದಿನ ಮೂರ್ನಾಲ್ಕು ದಶಕಗಳು ಖಾಸಗೀಕರಣದ ವಿಜೃಂಭಣೆಯ ದಿನಗಳಾಗಿರುತ್ತವೆ.

ಖಾಸಗೀಕರಣದ ಸ್ವರೂಪಗಳಲ್ಲಿ ಹಲವು ವಿಧಗಳಿವೆ. ಸ್ಥಳೀಯವಾಗಿ ಒಬ್ಬ ವ್ಯಕ್ತಿ ಒಂದು ಅಂಗಡಿಯನ್ನು ಹಾಕಿಕೊಂಡರೆ ಅದು ಕೂಡ ಖಾಸಗಿ ವ್ಯವಸ್ಥೆಯೇ ಆಗಿದೆ. ಇದು ಉತ್ತೇಜಿಸಬೇಕಾದ ಖಾಸಗೀಕರಣವಾಗಿದೆ. ದೇಶೀಯ ಬೃಹತ್ ಉದ್ಯಮಿಗಳು ನಡೆಸುವ ಉದ್ಯಮಗಳೂ ಖಾಸಗಿಯೇ. ಅಂತರರಾಷ್ಟ್ರೀಯ ಉದ್ಯಮಿಗಳ ಉದ್ಯಮಗಳೂ ಖಾಸಗಿಯೇ ಆಗಿರುತ್ತವೆ.

ಜಾಗತೀಕರಣದ ಫಲಾನುಭವಿಯಾದ ಭಾರತದ ಸಮಸ್ಯೆ ಜಾಗತೀಕರಣಕ್ಕೆ ಭಾರತವನ್ನು ಸಿದ್ಧಪಡಿಸದೇ ಇದ್ದುದರಲ್ಲಿದೆ. ಭಾರತಕ್ಕೆ ವಿದೇಶಿ ಕಂಪನಿಗಳು ಬಂದವು. ಆದರೆ ಭಾರತದಿಂದ ಎಷ್ಟು ಕಂಪನಿಗಳು ವಿದೇಶಕ್ಕೆ ಹೋದವು? ಒಂದು ಮಟ್ಟಿಗೆ ಸೇವೆಗಳ ರಫ್ತನ್ನು ಭಾರತ ಮಾಡಿದೆ. ಆದರೆ ಸೇವೆಗಳ ರಫ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ್ದಾಯಿತು. ಭಾರತದ ರೈತರು ವಿದೇಶದಲ್ಲಿ ಬೆಳೆ ಬೆಳೆಯಲು ಹೋಗಲಿಲ್ಲ. ಅಂದರೆ ಸೇವೆಯ ರಫ್ತು ಎಲ್ಲ ಕ್ಷೇತ್ರಗಳಿಂದಲೂ ನಡೆಯಲಿಲ್ಲ. ಆಗ ಸಂತುಲಿತ ಅಭಿವೃದ್ಧಿ ಆಗುವುದಿಲ್ಲ. ತಂತ್ರಜ್ಞರ ರಫ್ತು ನಡೆದದ್ದು ಕೂಡ ಭಾರತದ ತಂತ್ರಜ್ಞರು ಅಭಿವೃದ್ಧಿ ಹೊಂದಿದ ದೇಶಗಳಿಗೆ ಕಡಿಮೆ ವೇತನಕ್ಕೆ ದೊರೆಯುವುದರಿಂದಾಗಿದೆ.


ಇಂತಹ ಸನ್ನಿವೇಶದಲ್ಲಿ ಸಹಕಾರಿ ತತ್ವವನ್ನು ಬಲಪಡಿಸಬೇಕಾದ ಅಗತ್ಯವಿದೆ. ಒಬ್ಬ ಉದ್ಯಮಿ ಒಂದು ಕೋಟಿ ರೂಪಾಯಿಯ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾದರೆ, ನೂರು ಮಂದಿ ಭಾರತೀಯರು ಒಟ್ಟು ಸೇರಿದರೆ ಅದೇ ಯೋಜನೆಗೆ ಬೇಕಾದ ನೂರು ಕೋಟಿ ರೂಪಾಯಿಯನ್ನು ಹೊಂದಿಸಲು ಆಗುವುದಿಲ್ಲವೇ? ಆಗುತ್ತದೆ. ಸಹಕಾರಿ ಸಂಘಟನೆಗಳೂ ಖಾಸಗಿ ಸಂಘಟನೆಗಳೇ ಆಗಿವೆ. ಧನಶಕ್ತಿಯನ್ನು ಜನಶಕ್ತಿಯ ಮೂಲಕ ಎದುರಿಸಲು ಸಾಧ್ಯವಿದೆ. ಆದರೆ ಸಮಸ್ಯೆ ಇರುವುದು ಜನರ ಅರಿವು ಮತ್ತು ಸ್ವಭಾವಗಳಲ್ಲಿ.

ಭಾರತೀಯರು ಸಾಮಾನ್ಯ ಧ್ಯೇಯಕ್ಕಾಗಿ ಸಂಘಟಿತರಾಗುವುದು ತೀರಾ ವಿರಳವಾದದ್ದು. ಸ್ವ ಹಿತಾಸಕ್ತಿಯೇ ಪ್ರಬಲವಾಗಿರುತ್ತದೆ. ಸಾಂಘಿಕ ಹಿತಾಸಕ್ತಿಯ ಮೂಲಕ ಸ್ವ ಹಿತಾಸಕ್ತಿಯನ್ನು ಸಾಧಿಸುವ ಪ್ರವೃತ್ತಿ ಕಡಿಮೆ ಇದೆ. ಜನಜೀವನದಲ್ಲಿರುವ ಹಲವು ರೀತಿಯ ಭಿನ್ನತೆಗಳು ಮತ್ತು ವೈರುಧ್ಯಗಳು ಈ ರೀತಿಯ ಸ್ವಭಾವವನ್ನು ರೂಪಿಸಿವೆ. ಆದ್ದರಿಂದಲೇ ಸಹಕಾರಿ ಸಂಘಗಳು ಯಶಸ್ವಿಯಾಗುವುದು ಕೂಡ ಕಡಿಮೆಯೇ. ಈ ಸಮಸ್ಯೆಯನ್ನು ನೀಗಿಕೊಳ್ಳಬೇಕು.

ಎರಡನೆಯದಾಗಿ, ಬಹುರೂಪಿ ವಸ್ತುಗಳನ್ನು ಉತ್ಪಾದಿಸಬಲ್ಲ ಭಾರತದ ಜನರು ಬಹುಸಂಖ್ಯೆಯ ಸಂಘಟನೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಸಾಂಘಿಕ ಒಡೆತನವು ಯಶಸ್ವಿಯಾಗಬೇಕಾದರೆ ವಿವೇಕಪೂರ್ಣವಾದ ಸಮರ್ಥ ನಾಯಕತ್ವದ ಅಗತ್ಯವಿದೆ. ನಾಯಕತ್ವ ಭ್ರಷ್ಟಗೊಂಡರೆ ವೈಫಲ್ಯ ಶತಸ್ಸಿದ್ಧ. ಆದ್ದರಿಂದ ಸಮರ್ಥ ನಾಯಕತ್ವವನ್ನು ರೂಪಿಸಲು ತೊಡಗಬೇಕು.

ಮೂರನೆಯದಾಗಿ, ಸಹಕಾರಿ ಸಂಘಗಳಿಗೆ ಹಣಕಾಸಿನ ಅವಶ್ಯಕತೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಸಾಂಘಿಕ ಹೂಡಿಕೆಗೆ ಅನುಕೂಲವಾಗುವ ಹಾಗೆ ಬ್ಯಾಂಕುಗಳು ಸಾಲಗಳನ್ನು ನೀಡಬೇಕು. ಅದಕ್ಕೆ ತಕ್ಕ ಬೆಂಬಲ ಸರ್ಕಾರದಿಂದ ಸಿಗಬೇಕು. ಮುಕ್ತ ಆರ್ಥಿಕ ನೀತಿಯಲ್ಲಿ ಸರ್ಕಾರವೇ ಮಾರುಕಟ್ಟೆ ವ್ಯವಹಾರ, ಉದ್ಯಮ ಸಾಹಸದಲ್ಲಿ ತೊಡಗಿಕೊಳ್ಳುವುದು ತೀರಾ ಕಡಿಮೆ ಪ್ರಮಾಣದ್ದಾಗಿರುತ್ತದೆ ಹೊರತು ತನ್ನ ದೇಶದ ಜನರು ಮುಕ್ತ ಆರ್ಥಿಕ ನೀತಿಯಲ್ಲಿ ತೊಡಗಿಕೊಳ್ಳಲು ಬೆಂಬಲಿಸಬಾರದೆಂದು ಇಲ್ಲ. ಸಹಕಾರಿ ತತ್ವ ಯಶಸ್ವಿಯಾಗಲು ಸರ್ಕಾರದ ಪ್ರೋತ್ಸಾಹ ಬಲು ಅಗತ್ಯವಾಗಿರುತ್ತದೆ.

ಸಹಕಾರಿ ತತ್ವದ ಆಧಾರದಲ್ಲಿ ಆರ್ಥಿಕವಾಗಿ ತೊಡಗಿಕೊಳ್ಳುವ ಜನರಲ್ಲಿ ಒಳ್ಳೆಯ ಶಿಕ್ಷಣದ ಅಗತ್ಯವಿರುತ್ತದೆ. ಈ ರೀತಿಯ ಜ್ಞಾನವು ಎರಡು ರೀತಿಯಲ್ಲಿ ಬರುತ್ತದೆ. ಮೊದಲನೆಯದು, ಬಹಳಷ್ಟು ಕೆಟ್ಟ ಅನುಭವಗಳಾದ ಮೇಲೆ ಅನುಭವಜನ್ಯವಾಗಿ ಕಲಿಕೆ ಉಂಟಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಅಂದಿನ ರಾಜರುಗಳು ಅನುಮತಿ ನೀಡಿದ್ದು ವ್ಯಾಪಾರ ಚೆನ್ನಾಗಿ ನಡೆದು ಆದಾಯ ಬರಲೆಂಬ ಕಾರಣದಿಂದಲೇ. ಆದರೆ ಆಮೇಲೆ ಕಂಪನಿಯ ಆಡಳಿತಕ್ಕೊಳಗಾಗಿ ನಾನಾ ರೀತಿಯ ಹಿಂಸೆಯ ಅನುಭವವಾಗಿ ಉಂಟಾದ ಕಲಿಕೆಯು ಸ್ವಾತಂತ್ರ್ಯ ಹೋರಾಟಕ್ಕೆ ಜನರನ್ನು ಒಟ್ಟು ಸೇರಿಸಿತು. ಈ ರೀತಿ ಆಗುವ ಕಲಿಕೆ ಅಪೇಕ್ಷಣೀಯವಲ್ಲ. ಕೊಡುವ ಔಪಚಾರಿಕ ಶಿಕ್ಷಣದಲ್ಲೇ ಸಂಘಟಿತ ಉದ್ಯಮ ಸಾಹಸದ ಶಿಸ್ತುಬದ್ಧತೆಯ ಕಲಿಕೆ ಇರಬೇಕು. ಆಗ ನಕಾರಾತ್ಮಕ ಪರಿಣಾಮವನ್ನು ಅನುಭವಿಸದೆಯೇ ಸಮರ್ಥ ಆರ್ಥಿಕತೆಯನ್ನು ರೂಪಿಸಲು ಸಾಧ್ಯವಾಗುತ್ತದೆ.



ಐದನೆಯ ಬಹುಮುಖ್ಯವಾದ ಅಂಶವೆಂದರೆ, ದುರ್ಬಲ ವರ್ಗವನ್ನು ದಕ್ಷ ಮತ್ತು ಸಮರ್ಥಗೊಳಿಸುವುದು. ಭಾರತದ ವಿಚಾರವಂತ ವರ್ಗ ಈ ದಿಸೆಯಲ್ಲಿ ಪ್ರಯತ್ನ ಮಾಡುವ ಸ್ವಭಾವವನ್ನೇ ಹೊಂದಿಲ್ಲ. ದುರ್ಬಲ ವರ್ಗಕ್ಕೆ ಸಬಲರ ಮೇಲೆ ಸಿಡಿದು ಬೀಳುವುದನ್ನು ಕಲಿಸುತ್ತಾ ಬರಲಾಗಿದೆಯೇ ಹೊರತು ಸಬಲ ವರ್ಗಕ್ಕೆ ಸವಾಲಾಗುವ ರೀತಿಯಲ್ಲಿ ತನ್ನ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ ಎಂದು ಕಲಿಸಿರುವುದು ತೀರಾ ಕಡಿಮೆ. ಖಾಸಗೀಕರಣದಲ್ಲಿ ಹೋರಾಟಗಳಿಗೆ ಹೆಚ್ಚು ಮಹತ್ವ ಇರುವುದಿಲ್ಲ. ಆದರೆ ದಕ್ಷತೆಗೆ ಮಹತ್ವ ಇರುತ್ತದೆ. ಆದ್ದರಿಂದ ದುರ್ಬಲ ವರ್ಗದವರನ್ನು ದಕ್ಷರನ್ನಾಗಿಸಲು ಪ್ರಾಮುಖ್ಯವನ್ನು ನೀಡಬೇಕಾಗುತ್ತದೆ.

ಖಾಸಗೀಕರಣವು ಜಾಗತಿಕ ಲಕ್ಷಣವಾಗಿರುವಾಗ ದೇಶವನ್ನು ಅದಕ್ಕಾಗಿ ಸಿದ್ಧಪಡಿಸಲು ಇನ್ನಾದರೂ ಪ್ರಾಮುಖ್ಯವನ್ನು ನೀಡಬೇಕು. ಏಕೆಂದರೆ ಆರ್ಥಿಕ ಸ್ವಾತಂತ್ರ್ಯವು ಹೊರಟುಹೋದರೆ ಬೇರೆ ಯಾವ ಸ್ವಾತಂತ್ರ್ಯವೂ ಉಳಿಯುವುದಿಲ್ಲ. ಇದನ್ನು ಸಾಧಿಸಬೇಕಾದರೆ ಸಮಗ್ರತೆ ಇರುವ ಹೊಸ ಆರ್ಥಿಕ ಪರಿಕಲ್ಪನೆಗಳು ರೂಪುಗೊಳ್ಳಬೇಕಿದೆ. ಆದರೆ ಇದುವರೆಗಿನ ಸ್ವಾತಂತ್ರ್ಯೋತ್ತರ ಕಾಲಮಾನದ ಚಿಂತನೆಗಳು ಆಯಾ ಕಾಲಮಾನದ ಪ್ರಧಾನ ಆರ್ಥಿಕ ಚಿಂತನೆಗಳ ಚೌಕಟ್ಟಿನಲ್ಲಿ ಆರ್ಥಿಕತೆಯನ್ನು ಅರ್ಥೈಸುತ್ತಾ ಬಂದಿರುವುದನ್ನು ಕಾಣಬಹುದು.

ನೆಹರೂ ಅವರ ಆರ್ಥಿಕತೆಯ ಕಾಲಮಾನದ ಆರ್ಥಿಕ ಚಿಂತನೆಗಳು ಬಹುತೇಕ ಸಮಾಜವಾದದ ಒಳಗೆಯೇ ಆರ್ಥಿಕತೆಯನ್ನು ಅರ್ಥೈಸಿದ್ದವು. ಪಿ.ವಿ.ನರಸಿಂಹ ರಾವ್- ಮನಮೋಹನ್ ಸಿಂಗ್ ಆರ್ಥಿಕತೆ ಬಂದ ನಂತರ ಬಂಡವಾಳಶಾಹಿತ್ವದ ಒಳಗೆ ಆರ್ಥಿಕ ಚಿಂತನೆಗಳು ಹೆಚ್ಚಿದವು ಮತ್ತು ಸಮಾಜವಾದಿ ಆರ್ಥಿಕ ಚಿಂತನೆಗಳು ಬಂಡವಾಳಶಾಹಿ ವಿರುದ್ಧ ಸಂಘರ್ಷಕ್ಕೆ ತೊಡಗಿದವು. ಆದರೆ ಅದನ್ನು ಅರ್ಥಮಾಡಿಕೊಳ್ಳಲು ಹೋಗಲಿಲ್ಲ.

ಭಾರತದ ಆರ್ಥಿಕತೆಯ ತಳಮಟ್ಟಕ್ಕೆ ಗಾಂಧಿ ಆರ್ಥಿಕ ಚಿಂತನೆಗಳು ಈಗಲೂ ಸಹಾಯ ಮಾಡುತ್ತವೆ. ನಡುವಿನ ಸ್ತರದಲ್ಲಿ ನೆಹರೂ ಅವರ ಆರ್ಥಿಕ ಪರಿಕಲ್ಪನೆಗಳು ಉಪಯುಕ್ತವಾಗಿವೆ. ಮೇಲಿನ ಸ್ತರದಲ್ಲಿ ಮನಮೋಹನ್ ಸಿಂಗ್ ಆರ್ಥಿಕತೆಯ ಮಾದರಿಗಳು ಉಪಯುಕ್ತವಾಗುತ್ತವೆ. ಈ ಮೂರನ್ನೂ ಸಮಗ್ರ ಸ್ವರೂಪದಲ್ಲಿ ಆರ್ಥಿಕ ಪರಿಕಲ್ಪನೆಯಾಗಿ ರೂಪಿಸಿ ಅನುಷ್ಠಾನಗೊಳಿಸಬೇಕಿದೆ. ಭಾರತ ಸಂವಿಧಾನದ ಆಶಯಗಳು ಮತ್ತು ವಿಶ್ವ ವ್ಯಾಪಾರ ಒಡಂಬಡಿಕೆಯ ನಿಯಮಗಳು- ಇವೆರಡರ ವ್ಯಾಪ್ತಿಗೂ ಹೊಂದುವಂತಹ, ಆದರೆ ಅನುಷ್ಠಾನ ಸಾಧ್ಯವಾಗುವಂತಹ ಹೊಸ ಮಾದರಿಯ ಆರ್ಥಿಕ ವಿನ್ಯಾಸಗಳು ಇಂದು ದೇಶಕ್ಕೆ ಅವಶ್ಯಕವಾಗಿವೆ.

### ಚುರುಮುರಿ



## ಗ್ರಾಚಾರ ನೆಟ್ಟಗಿಲ್ಲ

● ಸುಧೀಂದ್ರ

**ಪಾಸ್‌ಪೋರ್ಟ್** ಆಫೀಸಿನಂತಿದ್ದ ಟೀವಿ ತ್ರಿಕಾಲ ಜ್ಞಾನಿಗಳ ಹೈಟೆಕ್ ಕಚೇರಿಗೆ ಬಂದೆ. ಎಂಟು ಬಗೆಯ ಫಾರ್ಮ್‌ಗಳನ್ನು ಭರ್ತಿ ಮಾಡಿ, ಕೇಳಿದೆಡೆ ಫೀಸುಗಳನ್ನು ಕಟ್ಟಿದೆ. ಗುರೂಜಿಯ ಭೇಟಿಗೆಂದು ಕಾದಿದ್ದ ನೂರಾರು ಜನರೊಂದಿಗೆ ನಾನೂ ಲೌಂಜಿನಲ್ಲಿ ಕುಳಿತೆ. ಅಲ್ಲೇ ಇದ್ದ ಟೀವಿಯಲ್ಲಿ ಸಿ.ಡಿ ಹಗರಣದಿಂದಾಗಿ ರಾಜೀನಾಮೆ ಕೊಟ್ಟವರ ಸ್ಥಾನಕ್ಕೆ ಯಾರು ಬರಬಹುದೆಂಬುದರ ಬಗ್ಗೆ ಚರ್ಚೆ ನಡೀತಿತ್ತು. ಭೇಟಿಗೆ ಕರೆ ಬಂದಾಗ ಎರಡು ಗಂಟೆ ಕಳೆದದ್ದೇ ಗೊತ್ತಾಗಲಿಲ್ಲ.

ತಂದಿದ್ದ ಜಾತಕವನ್ನು ಗುರುಗಳ ಮುಂದಿಟ್ಟು ಕೈಮುಗಿದೆ. ಮೇಲಿಂದ ಕೆಳಗೆ ನನ್ನ ನೋಡಿ– ‘ನಿಮ್ಮ ಸಾಹಿತ್ಯ ಪರಿಷತ್ ಎಲೆಕ್ಷನ್ನಿಗೆ ಇನ್ನೂ ಟೈಮಿದೆಯಲ್ವಾ?’ ಎಂದರು. ‘ಇದು ನನ್ನ ಜಾತಕವಲ್ಲ’ ಅನ್ನುವಷ್ಟರಲ್ಲಿ ತಮ್ಮ ಎಡಗೈ ಮೇಲೆತ್ತಿ ಸುಮ್ಮನಿರುವಂತೆ ಸೂಚಿಸಿದರು. ಮುಂದಿದ್ದ ಲ್ಯಾಪ್‌ಟಾಪಲ್ಲಿ ಮಂಡಲ ಬಿಡಿಸಿ, ನೆಲಕ್ಕೆ ಕವಡೆಗಳನ್ನೆಸೆದು, ಬೆರಳ ತುದಿಗಳಲ್ಲಿ ಎಣಿಕೆ ಮಾಡುತ್ತಾ ಕಣ್ಮುಚ್ಚಿಕೊಂಡರು. ನನ್ನ ಎದೆಬಡಿತ ನನ್ನ ಕಿವಿಗೇ ಅಪ್ಪಳಿಸುತ್ತಿತ್ತು.

‘ಗುರುಬಲ ಇಲ್ಲ’ ಎಂದು ಜಾತಕ ಮುಂದೆಸೆದರು. ಎರಡು ತಿಂಗಳ ಹಿಂದೆ ಟೀವಿ ಫೋನಲ್ಲಿ ಇದೇ ಗುರೂಜಿ, ನಮ್ಮ ಎಂಎಲ್ಲೆ ಸಾಹೇಬರ ಜಾತಕ ನೋಡಿ, ಅವರಿಗೆ ‘ರಾಜಯೋಗ’ ಕಾದಿದೆಯೆಂದಿದ್ದರು. ಅದನ್ನ ನಂಬ್ಕೊಂಡು, ರಾಜೀನಾಮೆಯಿಂದ ಖಾಲಿಯಾಗಿರೋ ಮಿನಿಸ್ಟ್ರ ಚೇರಿಗೆ ಅವರೇ ಬರ್ತಾರೆ ಅಂತ ಮೊನ್ನೆ ಬೆಟ್ಟಿಂಗ್ ಕಟ್ಟಿದ್ದೆ. ಈಗ ನೋಡಿದ್ರೆ ಅವರ ಜಾತಕಕ್ಕೆ ಗುರುಬಲ ಇಲ್ಲವಂತೆ.

ಸೋತ ಮುಖ ಹೊತ್ಕೊಂಡು ಮನೆ ಸೇರಿದವನನ್ನು ‘ಏನಾಯ್ತು?’ ಎಂದು ಮಡದಿ ವಿಚಾರಿಸಿದಳು. ‘ನಮ್ಮ ಎಂಎಲ್ಲೆ ಗ್ರಾಚಾರ ನೆಟ್ಟಗಿಲ್ವಂತೆ’ ಅಂದೆ. ‘ಷೇರು ಮಾರ್ಕೆಟ್ಟಲ್ಲಿ ಕಳ್ಕೊಂಡಿದ್ದು ಸಾಲ್ದೂಂತ ಕ್ರಿಕೆಟ್ ಮ್ಯಾಚ್ ಬೆಟ್ಟಿಂಗಲ್ಲಿ ದುಡ್ಡು ಹಾಕಿ ಸೋತ್ರಿ. ಈಗ ಯಾರು ಮಿನಿಸ್ಟ್ರಾಗ್ತಾರೆಂತ ಬೆಟ್ಟಿಂಗ್ ಕಟ್ಟಿದ್ದೀರಿ. ನಿಮ್ಮನ್ನು ಕಟ್ಕೊಂಡ ನನ್ನ ಗ್ರಾಚಾರ ಮೊದಲು ಸರಿ ಇಲ್ಲ’ ಎನ್ನುತ್ತಾ ಮೂತಿ ತಿವಿದಳು.

### ಸಂಗತ

# ಹೊಳೆ ನೀರಿಗೆ ಎಲ್ಲರೂ ಹೊಣೆನಾಯಕರೇ

**ಹೊಳೆಯತ್ತ ಬಂದು ಒಂದಷ್ಟು ತೇಲುವ ತ್ಯಾಜ್ಯ ತೆಗೆದರೂ ಅಂಚಿನಲ್ಲಿನ ಜೊಂಡು, ಕಳೆ ವಿಲೇವಾರಿ ಮಾಡಿದರೂ ಅದೇ ನಾವು ನದಿಗೆ ಅರ್ಪಿಸುವ ನಿಜ ಬಾಗಿನ**

● ಯೋಗಾನಂದ

**ಇಪ್ಪತ್ತನೇ** ಶತಮಾನದ ಪ್ರಸಿದ್ಧ ಕವಿ ಕ್ರಿಸ್ಟಲ್ ಮಿಡ್ಲ್‌ಮಸ್ ‘ಪ್ರೀತಿಯು ನದಿಯಂತೆ, ತನ್ನ ದಾರಿಯಲ್ಲಿ ತಡೆಯಾದರೆ ಹೊಸ ದಾರಿ ಹುಡುಕಿಕೊಳ್ಳುತ್ತದೆ’ ಎಂದಿದ್ದಾನೆ. ನದಿ ಮನುಷ್ಯನ ನಾಗರಿಕತೆಯ ಬೆನ್ನೆಲುಬು, ಪ್ರಾಕೃತಿಕ ಶಕ್ತಿಯ ರೂಪಕ. ಸುತ್ತಮುತ್ತಲಿನ ಮಣ್ಣನ್ನು ತೇವಗೊಳಿಸುವ ಕಾರಣ ನದಿ ಫಲವತ್ತತೆಯ ಪ್ರತೀಕ ಕೂಡ. ಅತ್ಯಂತ ದೊಡ್ಡ ಜಲಮೂಲಗಳಾದ ನದಿಗಳು ಭೂಗ್ರಹದ ನಾಡಿಗಳು, ಶರೀರಕ್ಕೆ ರಕ್ತನಾಳದ ಹಾಗೆ.


ಬದುಕು ನೀಡುವ ನದಿ ‘ಜಲಚಕ್ರ’ದ (ನೀರಿನ ಬಾಷ್ಪೀಕರಣ ಮತ್ತು ಸಾಂದ್ರೀಕರಣ) ಅತಿ ಮಹತ್ವದ ಹಂತ. ನಮ್ಮನ್ನು ಸಲಹುವ ನದಿಗಳಿಗೆ ಸ್ವಚ್ಛವಾಗಿ, ಸ್ವಚ್ಛಂದವಾಗಿ ಹರಿಯುವ ಹಕ್ಕನ್ನು ನಾವು ಕೊಡಬೇಕಿದೆ. 1998ರಿಂದ ಕ್ಯಾಲಿಫೋರ್ನಿಯಾದ ‘ಅಂತರರಾಷ್ಟ್ರೀಯ ನದಿಗಳು’ ಪರಿಸರ ಸಂಘ ಪ್ರತೀ ವರ್ಷ ಮಾರ್ಚ್ 14ರಂದು ‘ನದಿಗಳ ಕುರಿತು ಯೋಚಿಸಿ ಕಾರ್ಯಪ್ರವೃತ್ತರಾಗಬೇಕಾದ ದಿನ’ ಆಚರಿಸುತ್ತಾ ಬಂದಿದೆ. ‘ನದಿಗಳ ಹಕ್ಕುಗಳು’ ಈ ಬಾರಿಯ ಧ್ಯೇಯ ವಾಕ್ಯ.

ಎಪ್ಪತ್ತಕ್ಕೂ ಹೆಚ್ಚಿನ ದೇಶಗಳಲ್ಲಿ ನೆರವೇರುವ ನದಿ ಹಬ್ಬದಲ್ಲಿ ಕೋಟ್ಯಂತರ ಮಂದಿ ಸಡಗರಿಸುವರು. ಸಮೀಪದ ನದಿಯ ಹೂಳು ತೆಗೆಯುವುದು, ಶುಚಿಗೊಳಿಸುವುದು, ನದಿ ನೀರಿನ ಬಳಕೆ ಹಾಗೂ ನದಿಪಾತ್ರದ ನಿರ್ವಹಣೆ ಕುರಿತ ಸಂವಾದ, ಜನಜಾಗೃತಿಯು ಸಂಭ್ರಮವನ್ನು ಅರ್ಥಪೂರ್ಣಗೊಳಿಸುತ್ತವೆ. ಹೊಳೆಯತ್ತ ಬಂದು ಒಂದಷ್ಟು ತೇಲುವ ತ್ಯಾಜ್ಯ ತೆಗೆದರೂ ಅಂಚಿನಲ್ಲಿ ಬೆಳೆದಿರುವ ಜೊಂಡು, ಕಳೆ ವಿಲೇವಾರಿ ಮಾಡಿದರೂ ಅದೇ ನಾವು ನದಿಗೆ ಅರ್ಪಿಸುವ ನಿಜ ಬಾಗಿನ. ಕ್ಷಣ ಕ್ಷಣಕ್ಕೂ ಹೊಸ ನೀರಾದ್ದರಿಂದ ಕ್ಷಣ ಕ್ಷಣಕ್ಕೂ ಹೊಸ ನದಿ!

ನದಿ ತೀರಪ್ರದೇಶಗಳ ನೈರ್ಮಲ್ಯವೇ ಆಸುಪಾಸಿನ ನಿವಾಸಿಗಳ ಆರೋಗ್ಯದ ಮಾನದಂಡ. ಆದರೆ ಮನುಷ್ಯನು ನದಿಗಳ ಮೇಲೆ ಹೇರುವ ಒತ್ತಡ ಮಿತಿ ಮೀರಿದೆ. ಜಗತ್ತಿನಾದ್ಯಂತ ಹಲವು ನದಿಗಳು ಕಲುಷಿತಗೊಂಡಿವೆ. ಕೈಗಾರಿಕೋದ್ಯಮಗಳಿಂದ ರಾಸಾಯನಿಕಯುಕ್ತ ತ್ಯಾಜ್ಯ, ಕೃಷಿಭೂಮಿಯಿಂದ ಅಳಿದುಳಿದ ಗೊಬ್ಬರ, ಕ್ರಿಮಿನಾಶಕಗಳು, ಜನವಸತಿ ಪ್ರದೇಶಗಳಿಂದ ಹೊರಬೀಳುವ ಕಸ ಕಡ್ಡಿ, ಸಾಬೂನು- ಇವು ಹೊಳೆಗೆ ಜಮೆಯಾಗುತ್ತಿವೆ. ನೀರಿನ ಗುಣಮಟ್ಟದ ಜೊತೆಗೆ ಜಲಚರಗಳಿಗೂ ಸಂಚಕಾರ. ಮಹಾನದಿಗಳ ಪೈಕಿ ಮೂರನೆಯ ಎರಡು ಪಾಲಷ್ಟು ಸರಾಗವಾಗಿ ಹರಿಯಲಾಗುತ್ತಿಲ್ಲ. ಭೂಮಿಯ ಮೇಲ್ಮೈನ ಮುಕ್ಕಾಲು ಭಾಗ ನೀರೇ ಆದರೂ ಶೇಕಡ ಮೂರರಷ್ಟು ನೀರಷ್ಟೆ ಬಳಸಲು ಯೋಗ್ಯ.

ಮನುಷ್ಯ ವ್ಯಯಿಸುವ ನೀರಿನ ಪ್ರಮಾಣವನ್ನು ಗಮನಿಸಿದರೆ ಗಾಬರಿಯಾದೀತು. ಒಂದು ಪಿಜ್ಜಾ ತಯಾರಿಕೆಗೆ 330 ಗ್ಯಾಲನ್‌ಗಳು, ಒಂದು ಪ್ಯಾಂಟ್ ಒಗೆಯಲು 2,900 ಗ್ಯಾಲನ್‌ಗಳು! ನದಿಗಳು ನೀರನ್ನು ಮಾತ್ರವೇ ಸಾಗಿಸುವುದಿಲ್ಲ, ಅವು ಬೇಸಾಯಕ್ಕೆ ರಸವತ್ತಾದ ಧಾತುಗಳ ನೈಸರ್ಗಿಕ ವಾಹಕಗಳು. ಕೆಸರಿನಲ್ಲಿ ಅಮೂಲ್ಯವಾದ ಖನಿಜಾಂಶಗಳಿರುತ್ತವೆ. ಅದು ನದಿ ತಳದಲ್ಲಿದ್ದರೆ ಮಾರಕ, ಹೊರಗೆ ಹರಿಯುವಂತಾದರೆ ಉಪಯುಕ್ತ. ಹಾಗಾಗಿ ಚೀನಾದ ಪರಿಸರವಾಣಿ: ‘ಪರಿಶುದ್ಧ ನೀರು ಉಳಿಸಿ, ರಾಡಿ ಹೊರದೂಡಿ’.

ನದಿಗಳು ಸಮುದ್ರಕ್ಕೆ ತಲುಪುವ ಹಾದಿಯಾದ್ಯಂತ ಸಿಹಿಯನ್ನೇ ಹಂಚುತ್ತವೆ. ಆದರೆ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳೆಂಬ ಎಗ್ಗಿಲ್ಲದ ವಿಘ್ನಗಳು. ಭೂಮೇಲ್ಮೈನಲ್ಲಿ ಸುಸ್ಥಿರ ಶುದ್ಧ ನೀರಿನ ಲಭ್ಯತೆಗೆ, ಸಸ್ಯ ಮತ್ತು ಪ್ರಾಣಿವೈವಿಧ್ಯ ಜೀವಿಸಲು, ಆರೋಗ್ಯಕರ ಪರಿಸರಕ್ಕೆ ನದಿಗಳನ್ನು ಸಂರಕ್ಷಿಸಬೇಕಿದೆ. ನಿರ್ಲಕ್ಷಿಸಿದರೆ 2030ರ ವೇಳೆಗೆ ವಿಶ್ವದ ಅರ್ಧದಷ್ಟು ಜನಸಂಖ್ಯೆ ಜಲಕ್ಷಾಮಕ್ಕೆ ತುತ್ತಾಗಬೇಕಾಗುತ್ತದೆ. ನದಿ ಮಾಲಿನ್ಯ ಮನುಷ್ಯ ಎಸಗಬಹುದಾದ ಅತ್ಯಂತ ಘೋರ ಪ್ರಮಾದ.



ನಾಗರಿಕತೆಯ ವಿಪರೀತ ವ್ಯಾಮೋಹವೇ ನದಿಗಳು ಸೊರಗುವ ಮೂಲ. ಕಾರು, ಫ್ರಿಜ್, ಹವಾನಿಯಂತ್ರಕ, ಡಿಶ್ ವಾಷರ್, ವಾಷಿಂಗ್ ಮಶೀನ್ ಮಾತಿರಲಿ ತಲೆಗೂದಲು ಒಣಗಿಸಿಕೊಳ್ಳಲೂ ಯಂತ್ರಾವಲಂಬನೆ. ಪ್ರಾಕೃತಿಕ ಇಂಧನ ಸಂಪನ್ಮೂಲಗಳನ್ನು ತಾನು ಮಿತಿಮೀರಿ ಉರಿಸುತ್ತಿದ್ದೇನೆಂಬ ಅರಿವೇ ಮನುಷ್ಯನಿಗಿಲ್ಲ! ಜಾಗತಿಕ ವಾಯುಗುಣ ವ್ಯತ್ಯಯದಿಂದ ಸರಿಯಾಗಿ ಮಳೆಯಾಗದ ಕಾರಣ, ನದಿಯಿಂದ ನೀರು ಬಳಕೆಯಾಗಿದ್ದೇ ಬಂತು, ಮರುಭರ್ತಿಯಾಗುತ್ತಿಲ್ಲ. ಪರಿಣಾಮ, ನದಿ ಬಳಲುತ್ತದೆ.

ಅಭಿವೃದ್ಧಿ ವರ್ತಮಾನದ ಅನುಕೂಲಗಳು ಭಾವೀ ಪೀಳಿಗೆಗಳ ಅಗತ್ಯಗಳೊಡನೆ ರಾಜಿ ಆಗದಂತಿರುವುದು ಮಾದರಿ. ಕುಡಿಯುವ ನೀರು, ಆಹಾರ ಉತ್ಪಾದನೆಗಾಗಿ ಅಣೆಕಟ್ಟುಗಳ ನಿರ್ಮಾಣ ಅನಿವಾರ್ಯವೇ ಹೌದು. ಆದರೆ ಕಲ್ಲು, ಸಿಮೆಂಟ್, ಕಾಂಕ್ರೀಟು ಬಳಸಿ ನದಿಗೆ ಅಡ್ಡವಾಗಿ, ನೀರು ಹರಿಯುವ ದಿಕ್ಕಿನಲ್ಲಿ ಸಣ್ಣ ಸಣ್ಣ ಅಣೆಕಟ್ಟುಗಳ (ಚೆಕ್ ಡ್ಯಾಂ) ರಚನೆ ನದಿಯ ಸಂರಕ್ಷಣೆ ದೃಷ್ಟಿಯಿಂದ ಸೂಕ್ತ.

ನಿತ್ಯ ಜೀವನದಲ್ಲಿ ನಮ್ಮ ಸಣ್ಣಪುಟ್ಟ ಎಚ್ಚರಗಳು ಸಮರ್ಥವಾಗಿಯೇ ಜಲಮೂಲಗಳನ್ನು ರಕ್ಷಿಸಿರುತ್ತವೆ. ನೀರಿನ ಬಾಟಲಿಯ ಮರುಬಳಕೆ ವಿವೇಕಯುತ. ಏಕೆಂದರೆ ಒಂದು ಖಾಲಿ ಬಾಟಲಿನ ಉತ್ಪಾದನೆಗೆ 7 ಕಿ.ಗ್ರಾಂ ನೀರು ಅಗತ್ಯ. ಆಕಸ್ಮಿಕವಾಗಿ ಒಂದು ಕ್ಯೂಬ್ ಮಂಜುಗಡ್ಡೆ ಕೈಜಾರಿ ಕೆಳಗೆ ಬಿತ್ತನ್ನಿ. ಅದನ್ನು ಬಚ್ಚಲಿನಲ್ಲಿ ಒಗೆಯುವ ಬದಲು ಗಿಡದ ಬುಡಕ್ಕೆ ಹಾಕಿರಿ. ಆವಿಯಾಗುವ ಪ್ರಮಾಣ ಕಡಿಮೆಯಾದ ಕಾರಣ ಮನೆಯ ಕೈದೋಟಕ್ಕೆ ನಸುಕಿನಲ್ಲಿ ಅಥವಾ ಮುಸ್ಸಂಜೆಯಲ್ಲಿ ನೀರು ಹಾಕುವುದು ಪರಿಣಾಮಕಾರಿ. ಮನೆ ಮುಂದಿನ ಹುಲ್ಲುಹಾಸಿನ ಮೇಲೆಯೇ ವಾಹನಗಳನ್ನು ತೊಳೆಯುವುದರಿಂದ ನೀರಿನ ಪೋಲು ನಿವಾರಿಸಬಹುದು.

### ವಾಚಕರ ವಾಣಿ

## ಮಾರ್ಷಲ್‌ಗಳ ನಿಯೋಜನೆ ತರವೇ?

ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ದಿನಬೆಳಗಾದರೆ ಮಾಧ್ಯಮಗಳಲ್ಲಿ ಸುದ್ದಿಗಳು ಪ್ರಕಟವಾಗುತ್ತಿವೆ. ಹೀಗಿದ್ದರೂ ಶಿವರಾತ್ರಿ ಹಬ್ಬದಂದು ಎಲ್ಲಾ ದೇವಾಲಯಗಳಲ್ಲಿ, ತೀರ್ಥಕ್ಷೇತ್ರಗಳಲ್ಲಿ ಸಾವಿರಾರು ಜನರ ಗುಂಪು, ಮತ್ತೆಲ್ಲೋ ಸಿನಿಮಾ ಬಿಡುಗಡೆಗೆ ಅಭಿಮಾನಿಗಳ ಸಂಭ್ರಮಾಚರಣೆ ನೋಡಿ ಆಶ್ಚರ್ಯ, ಆತಂಕ ಆಯಿತು. ಜೊತೆಗೆ ವಿಚಿತ್ರವೆನಿಸಿತು. ಏಕೆಂದರೆ, ಹೀಗೆ ಸಾವಿರಾರು ಜನ ಪರಸ್ಪರ ಅಂತರ, ಮಾಸ್ಕ್ ಯಾವುದೂ ಇಲ್ಲದೆ ಒಂದೆಡೆ ಸೇರುವುದು ಅಪರಾಧವಲ್ಲ ಎಂದಾದರೆ, ಒಂದೇ ಕುಟುಂಬದ ಇಬ್ಬರು ಕಾರಿನೊಳಗೆ ಇದ್ದು, ಎಲ್ಲಾ ಕಿಟಕಿ ಗಾಜುಗಳನ್ನು ಮುಚ್ಚಿದ್ದರೂ ಮಾಸ್ಕ್ ಹಾಕದಿದ್ದರೆ ದಂಡ ಹಾಕುವುದರಲ್ಲಿ ಏನಾದರೂ ಅರ್ಥವಿದೆಯೇ? ಸಿಗ್ನಲ್‌ಗಳಲ್ಲಿ ದಂಡ ವಸೂಲಿಗಾಗಿಯೇ ಕಾಯುತ್ತಿರುವಂತೆ ತೋರುವ ಮಾರ್ಷಲ್‌ಗಳ ನಿಯೋಜನೆ ಎಷ್ಟು ಸಮಂಜಸ?

**ಅರ್ಚನಾ ಶಂಕರ್**, ಬೆಂಗಳೂರು

## ಕ್ಯಾನ್ಸರ್ ಚಿಕಿತ್ಸಾ ಕೇಂದ್ರ: ಸಮಂಜಸ ನಿರ್ಧಾರ

ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಶಿವಮೊಗ್ಗ ಮತ್ತು ಮೈಸೂರನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಏನು ಮಾನದಂಡ ಎಂದು ಮೋನಿಕ ಆರ್. ಪ್ರಶ್ನೆ ಮಾಡಿದ್ದಾರೆ (ವಾ.ವಾ., ಮಾರ್ಚ್ 12). ಉತ್ತರ ಕರ್ನಾಟಕದ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಈಗಾಗಲೇ ಕ್ಯಾನ್ಸರ್ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಹಿಂದಿನ ಆಯವ್ಯಯಗಳಲ್ಲಿ ಕಲಬುರ್ಗಿ ಮತ್ತು ಕಾರವಾರಕ್ಕೆ ಕ್ಯಾನ್ಸರ್ ಕೇಂದ್ರಗಳು ಮಂಜೂರಾಗಿವೆ. ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗಿದೆ.

ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಗಣನೀಯವಾಗಿ ಏರಿದ್ದು, ಸರ್ಕಾರಿ ಸ್ವಾಮ್ಯದ ಕ್ಯಾನ್ಸರ್ ಕೇಂದ್ರ ತೆರೆಯಬೇಕೆಂಬ ಬೇಡಿಕೆ ಏಳೆಂಟು ವರ್ಷಗಳಿಂದ ಚಾಲ್ತಿಯಲ್ಲಿದೆ. ಆದ್ದರಿಂದ ಈ ನಗರಗಳಲ್ಲಿ ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ತೆರೆಯುವ ಸರ್ಕಾರದ ನಿರ್ಧಾರ ಸಮಂಜಸವಾಗಿದೆ.

**ಡಾ. ಕೆ.ಎಸ್.ಗಂಗಾಧರ**, ಶಿವಮೊಗ್ಗ

## ಇದು ಸರ್ವಾಧಿಕಾರಿ ನೀತಿಯಲ್ಲವೇ?

‘ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಉಳಿದಿಲ್ಲ’ ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಹೇಳಿಕೆ ಓದಿ (ಪ್ರ.ವಾ., ಮಾರ್ಚ್ 12) ನಗಬೇಕೋ ಅಳಬೇಕೋ ತಿಳಿಯದಾಯಿತು. ಭಾರತದಲ್ಲಿ ಸರ್ವಾಧಿಕಾರವಿದೆ ಎನ್ನುವ ರಾಹುಲ್ ತಮ್ಮ ಪಕ್ಷದಲ್ಲಿ ಪ್ರಜಾಪ್ರಭುತ್ವಕ್ಕೆ ಮನ್ನಣೆ ಕೊಟ್ಟಿದ್ದಾರೆಯೇ? ಐದು ವರ್ಷಗಳಲ್ಲಿ ಕಾಂಗ್ರೆಸ್ಸನ್ನು 170 ಶಾಸಕರು ತೊರೆದು ಹಲವರು ಬಿಜೆಪಿ ಸೇರಿರುವುದಾಗಿ ಪತ್ರಿಕಾ ವರದಿಗಳು ತಿಳಿಸಿವೆ. ಇದು ಏನನ್ನು ಸೂಚಿಸುತ್ತದೆ? ದೂಳೀಪಟವಾಗುತ್ತಿರುವ ಕಾಂಗ್ರೆಸ್ಸನ್ನು ಪುನರುಜ್ಜೀವನಗೊಳಿಸುವುದಕ್ಕಾಗಿ ಪಕ್ಷದ ಸಭೆಯಲ್ಲಿ ಚರ್ಚೆಯಾಗಲಿ ಎಂದು ಕಾಂಗ್ರೆಸ್ಸಿನ ಹಿರಿಯ ನಾಯಕರು ಬೇಡಿಕೆ ಇಟ್ಟರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ, ಅವರನ್ನು ಈಗ ನಡೆಯಲಿರುವ ವಿವಿಧ ರಾಜ್ಯಗಳ ಚುನಾವಣಾ ಕೆಲಸಕ್ಕೆ ಕಡೆಗಣಿಸಿರುವುದು ಪ್ರಜಾಸತ್ತಾತ್ಮಕ ನಡೆಯೇ?

ರಾಹುಲ್ ನೇತೃತ್ವದಲ್ಲಿ ಪಕ್ಷ ಮಕಾಡೆ ಮಲಗಿರುವುದು ಸಾಬೀತಾದರೂ ಇದಕ್ಕಾಗಿ ರಾಹುಲ್ ಜವಾಬ್ದಾರಿ ಹೊತ್ತು ರಾಜೀನಾಮೆ ಕೊಟ್ಟರೂ ದೇಶದಲ್ಲಿ ಪಕ್ಷವನ್ನು ಬಲಿಷ್ಠಗೊಳಿಸಬೇಕಾದರೆ ವರ್ಚಸ್ವೀ ನಾಯಕರ ಸೇವೆಯನ್ನು ಬಳಸಿಕೊಳ್ಳಬೇಕೆಂಬುದು ತಿಳಿದಿದ್ದರೂ ಅವರನ್ನು ನೇಪಥ್ಯದಲ್ಲಿಟ್ಟು ರಾಹುಲ್ ಅವರನ್ನು ಮುಂದುವರಿಸುವುದು ಸರ್ವಾಧಿಕಾರಿ ಮನೋಭಾವವಲ್ಲವೇ? ಪಕ್ಷದ ಹಿತಕ್ಕಿಂತ ವ್ಯಕ್ತಿಯ ಹಿತ ಮುಖ್ಯವೇ? ಈ ಹಿನ್ನೆಲೆಯಲ್ಲಿ ಬಿಜೆಪಿಯನ್ನು ಟೀಕಿಸುವ ನೈತಿಕತೆ ಇವರಿಗೆ ಇದೆಯೇ?

**ಪಿ.ಸಿ.ಕೇಶವ**, ಬೆಂಗಳೂರು

## ಅತಿರೇಕದ ಅಭಿಮಾನ ತರವಲ್ಲ

ದರ್ಶನ್ ಅಭಿನಯದ ‘ರಾಬರ್ಟ್’ ಚಲನಚಿತ್ರ ಪ್ರದರ್ಶಿತವಾಗುತ್ತಿದ್ದ ತಿಪಟೂರಿನ ಚಿತ್ರಮಂದಿರದಲ್ಲಿನ ದರ್ಶನ್ ಕಟೌಟ್‌ಗೆ ಅಭಿಮಾನಿಗಳು ಮದ್ಯ ಸುರಿದು ಸಂಭ್ರಮಿಸಿರುವುದು ವರದಿಯಾಗಿದೆ (ಪ್ರ.ವಾ., ಮಾರ್ಚ್ 12). ಅಭಿಮಾನಿಗಳು ನಾಯಕನಟರ ಕಟೌಟ್‌ಗಳ ಮೇಲೆ ಹಾಲು, ಎಳನೀರು ಮುಂತಾದ ದ್ರವಗಳನ್ನು ಸುರಿದು ಮತ್ತು ಹಣ್ಣಿನ ಹಾರಗಳನ್ನು ಹಾಕಿ ಸಂಭ್ರಮಿಸುವುದು ಹೊಸತೇನಲ್ಲ. ಆದರೆ, ಮದ್ಯ ಸುರಿದು ಅಭಿಷೇಕ ಮಾಡಿದ್ದು ಹೊಸತು. ಈ ರೀತಿ ಹಣ್ಣು- ಹಾಲಿನಂತಹ ಆಹಾರ ಪದಾರ್ಥಗಳನ್ನು ಹೀಗೆ ಉಪಯೋಗಕ್ಕೆ ಬರದಂತೆ ವ್ಯರ್ಥ ಮಾಡುವ ಬದಲು, ಬಡಮಕ್ಕಳಿಗೆ ಹಂಚಿದಲ್ಲಿ ದೇವರು ಮೆಚ್ಚುವುದರ ಜೊತೆಗೆ ಸದರಿ ನಾಯಕ ನಟರೂ ಬೆನ್ನುತಟ್ಟಿ ಪ್ರೋತ್ಸಾಹಿಸಬಹುದು.

**ಪತ್ತಂಗಿ ಎಸ್. ಮುರಳಿ**, ಬೆಂಗಳೂರು

## ನಿಜಜೀವನದ ನಾಯಕರಾಗಲಿ

ಸಿನಿಮಾದ ನಾಯಕನಟರನ್ನು ದೇವರಂತೆ ಆರಾಧಿಸುವ ಅಭಿಮಾನಿಗಳು ನಮ್ಮಲ್ಲಿ ಹೇರಳವಾಗಿದ್ದಾರೆ. ತೆರೆಯ ಮೇಲಿನ ಜನಪ್ರಿಯ ನಟನೊಬ್ಬನ ವೇಷಭೂಷಣ, ಹಾವಭಾವಗಳನ್ನು ಯಥಾವತ್ತಾಗಿ ನಿಜಜೀವನದಲ್ಲಿ ನಕಲು ಮಾಡುವವರ ದಂಡೇ ನಮ್ಮಲ್ಲಿದೆ. ಅಭಿಮಾನಿಗಳ ಈ ಅಂಧಾನುಕರಣೆಯ ಬಗ್ಗೆ ಕಲಾವಿದರು, ಅದರಲ್ಲೂ ವಿಶೇಷವಾಗಿ ನಾಯಕನಟರು ಜಾಗೃತರಾಗಿರಬೇಕು. ಈ ಮುಂಗಾಣುವಿಕೆ ಡಾ. ರಾಜ್‌ಕುಮಾರ್ ಅವರಿಗೆ ಇತ್ತು. ಆದಕಾರಣ ಅವರು ತಮ್ಮ ಸಿನಿಪಯಣದುದ್ದಕ್ಕೂ ಮದ್ಯಹೀರುವ, ಧೂಮಪಾನ ಮಾಡುವ ಅಥವಾ ಇನ್ನಾವುದೇ ಅನುಕರಣೀಯವಲ್ಲದ ದೃಶ್ಯಗಳಲ್ಲಿ ಪಾಲ್ಗೊಳ್ಳಲಿಲ್ಲ. ತಾವು ನಿರ್ವಹಿಸುತ್ತಿರುವ ಪಾತ್ರ ಅಂತಹದ್ದನ್ನು ಬಯಸುತ್ತದೆ ಎಂದೆನಿಸಿದರೆ ಅದನ್ನು ಜಾಣತನದಿಂದ ನಿಭಾಯಿಸುವ ಜವಾಬ್ದಾರಿ ಅವರಿಗಿತ್ತು. ಆದರೆ ಇಂದು ಬಹುತೇಕ ನಾಯಕರ ಚಿತ್ರಗಳು ಮದ್ಯದ ಹೊಳೆ, ಧೂಮದ ಮೋಡ, ಅಸಭ್ಯ ನಡವಳಿಕೆಗಳಿಂದ ತುಂಬಿಹೋಗಿರುತ್ತವೆ. ಅವರು ಅಭಿನಯಿಸುವ ಜಾಹೀರಾತುಗಳೂ ಇದಕ್ಕೆ ಹೊರತಾಗಿರುವುದಿಲ್ಲ.

ಇದನ್ನೆಲ್ಲ ನೋಡುವವರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ. ಹಳ್ಳಿ ಹಳ್ಳಿಗಳಿಗೂ ಈ ವ್ಯಸನದ ಬಿಸಿ ಮುಟ್ಟಿದೆ. ಒಂದು ಸುಸಮಾಜದ ಕಟ್ಟುವಿಕೆಗೆ ಸಿನಿಮಾ ಕಾರಣೀಕರ್ತವಾಗುವುದರಲ್ಲಿ ಅನುಮಾನವಿಲ್ಲ. ಆದ್ದರಿಂದ ನಾಯಕನಟರು ಈ ಬಗ್ಗೆ ಯೋಚಿಸಿ ತಮ್ಮ ಅಭಿಮಾನಿಗಳು ಮತ್ತು ಅವರ ಕುಟುಂಬ ವರ್ಗಗಳ ಆರೋಗ್ಯ, ಆಯಸ್ಸನ್ನು ಕಾಪಾಡಿ ನಿಜಜೀವನದ ನಾಯಕರುಗಳಾಗಲಿ.

**ಮಹೇಶ್ವರ ಹುರುಕಡ್ಲಿ**, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

## ನದಿಯ ನೀರೂ ಆಯುಧ

ತನ್ನ ನೆಲದಲ್ಲಿ ಹುಟ್ಟಿ, ಬೇರೆ ದೇಶಗಳಿಗೆ ಹರಿಯುವ ನದಿಗಳ ನೀರನ್ನು ಕೂಡ ಆಯುಧವನ್ನಾಗಿ ಚೀನಾ ಬಳಸಿಕೊಂಡ ಉದಾಹರಣೆ ಇದೆ. ಚೀನಾದ ಈ ಜಲ ರಾಜಕಾರಣಕ್ಕೆ ಈವರೆಗೆ ಮ್ಯಾನ್ಮಾರ್ ಮಾತ್ರ ಸಂತ್ರಸ್ತ ದೇಶವಾಗಿತ್ತು. ಆದರೆ ಈಗ ಬ್ರಹ್ಮಪುತ್ರ ನದಿಗೆ ಮೆಡೋಗ್‌ನಲ್ಲಿ ನಿರ್ಮಿಸಲು ಹೊರಟಿರುವ ಅಣೆಕಟ್ಟೆಯಿಂದಾಗಿ ಭಾರತ ಮತ್ತು ಬಾಂಗ್ಲಾದೇಶವೂ ಸಂತ್ರಸ್ತವಾಗುವ ಅಪಾಯವಿದೆ.

ತನ್ನ ನೆಲದಲ್ಲಿ ಹುಟ್ಟಿ ಮ್ಯಾನ್ಮಾರ್‌ನತ್ತ ಹರಿಯುವ ಮೆಕೋಂಗ್ ನದಿಗೆ ಚೀನಾವು ಈಗಾಗಲೇ ಅಣೆಕಟ್ಟೆ ನಿರ್ಮಿಸಿದೆ. ಈ ನದಿಯು ಮ್ಯಾನ್ಮಾರ್, ಲಾವೋಸ್, ಕಾಂಬೋಡಿಯಾ, ಥಾಯ್ಲೆಂಡ್ ಮತ್ತು ವಿಯೆಟ್ನಾಂಗಳಿಗೆ ಹರಿಯುತ್ತದೆ. ಈ ನದಿಗೆ ಈಗ ಕಟ್ಟಿರುವ ಅಣೆಕಟ್ಟೆಯು, ಮ್ಯಾನ್ಮಾರ್ ಗಡಿಯಿಂದ ಕೆಲವೇ ನೂರು ಕಿ.ಮೀ. ದೂರದಲ್ಲಿದೆ. ಈ ಅಣೆಕಟ್ಟೆಯ ನಿರ್ಮಾಣದ ನಂತರ ಮ್ಯಾನ್ಮಾರ್‌ಗೆ ಮೆಕೋಂಗ್ ನದಿಯ ಹರಿವು ಕಡಿಮೆಯಾಗಿದೆ. ಈ ಕಾರಣದಿಂದ ಈ ಎಲ್ಲಾ ದೇಶಗಳಿಗೂ ನದಿ ನೀರಿನ ಹರಿವು ಕಡಿಮೆಯಾಗಿದೆ. ಕುಡಿಯುವ ನೀರಿನ ಯೋಜನೆಗಳಿಗೆ ನೀರಿನ ಕೊರತೆ ಉಂಟಾಗಿದೆ. 2020ರಲ್ಲಿ ಮೆಕೋಂಗ್ ಅಣೆಕಟ್ಟೆಯಿಂದ ಸೂಚನೆ ನೀಡದೆಯೇ ನೀರು ಹೊರಬಿಟ್ಟಿದ್ದ ಕಾರಣ, ಮ್ಯಾನ್ಮಾರ್‌ನಲ್ಲಿ ಪ್ರವಾಹ ಉಂಟಾಗಿತ್ತು. ಈಗ ಈ ನದಿಗೆ ಇನ್ನೂ ಮೂರು ಅಣೆಕಟ್ಟೆಗಳನ್ನು ನಿರ್ಮಿಸಲು ಚೀನಾ ಸಿದ್ಧತೆ ನಡೆಸಿದೆ. ಈ ನದಿಯ ಅಚ್ಚುಕಟ್ಟು ರಾಷ್ಟ್ರಗಳು, ನದಿ ನೀರಿನ ಹರಿವು ಅಪಾಯಕಾರಿಮಟ್ಟದಲ್ಲಿ ಕಡಿಮೆಯಾಗುವ ಆತಂಕ ಎದುರಿಸುತ್ತಿವೆ. ದಕ್ಷಿಣ ಚೀನಾ ಸಮುದ್ರದ ಸಂಘರ್ಷದಲ್ಲಿ ವಿಯೆಟ್ನಾಂ ಜತೆಗೆ ಚೌಕಾಶಿ ನಡೆಸಲು ಚೀನಾ ಈ ಅಣೆಕಟ್ಟೆಯನ್ನು ಬಳಸಿಕೊಳ್ಳುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

ಚೀನಾದ ವಶದಲ್ಲಿರುವ ಭಾರತದ ಅಕ್ಸಾಯಿಚಿನ್ ಪ್ರದೇಶದಲ್ಲಿ ಗಾಲ್ವಾನ್ ಮತ್ತು ಶೋಕ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಈ ಅಣೆಕಟ್ಟೆಯಲ್ಲಿ ಇರುವ ನೀರಿನ ಸಂಗ್ರಹದ ವಿವರವನ್ನು ಭಾರತದೊಂದಿಗೆ ಚೀನಾ ಹಂಚಿಕೊಳ್ಳುತ್ತಿಲ್ಲ. 2020ರ ಆಗಸ್ಟ್‌ನಲ್ಲಿ ಗಾಲ್ವನ್‌ನಲ್ಲಿ ಭಾರತ-ಚೀನಾ ಸಂಘರ್ಷದ ವೇಳೆ ನದಿಯಲ್ಲಿ ದಿಢೀರ್ ಪ್ರವಾಹ ಸೃಷ್ಟಿಸಲು ಈ ನೀರನ್ನು ಚೀನಾ ಬಳಸಿಕೊಂಡಿತ್ತು ಎಂಬ ಆರೋಪವೂ ಇದೆ.

ಮೆಡೋಗ್‌ನಲ್ಲಿ ಬ್ರಹ್ಮಪುತ್ರ ನದಿಗೆ ಅಣೆಕಟ್ಟೆ ನಿರ್ಮಿಸಿದರೆ, ಭಾರತಕ್ಕೆ ಮತ್ತು ಆ ಮೂಲಕ ಬಾಂಗ್ಲಾದೇಶಕ್ಕೆ ನದಿ ನೀರಿನ ಹರಿವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಬ್ರಹ್ಮಪುತ್ರ ನದಿಯ ಪಾತ್ರದಲ್ಲಿ ಬಾಂಗ್ಲಾದೇಶವು ಜಲಮಾರ್ಗವನ್ನು ಅಭಿವೃದ್ಧಿಪಡಿಸಿದೆ. ನೀರಿನ ಹರಿವು ಕಡಿಮೆಯಾದರೆ ಜಲಮಾರ್ಗವು ಸ್ಥಗಿತಗೊಳ್ಳುತ್ತದೆ. ಜತೆಗೆ ಕುಡಿಯುವ ನೀರಿನ ಯೋಜನೆಗಳಿಗೆ ನೀರಿನ ಕೊರತೆಯಾಗುವ ಅಪಾಯವಿದೆ.

ಬ್ರಹ್ಮಪುತ್ರ ನದಿಗೆ ಭಾರತದ ಗಡಿಯ ಹತ್ತಿರದಲ್ಲಿಯೇ ಅಣೆಕಟ್ಟೆ ನಿರ್ಮಿಸುವ ಚೀನಾದ ನಿರ್ಧಾರವು ಎರಡೂ ದೇಶಗಳ ನಡುವೆ ಇನ್ನೊಂದು ಬಿಕ್ಕಟ್ಟಿಗೆ ಕಾರಣ ಆಗುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು

### ಭಾರತದ ಹೊಸ್ತಿಲಲ್ಲೇ ಅಣೆಕಟ್ಟೆ




# ಚೀನಾದಿಂದ ಮತ್ತೆ ಉಪಟಳ ಗಡಿ ಸನಿಹ ಅಣೆಕಟ್ಟೆ

**ಯರ್ಲುಂಗ್ ಜಂಗ್ಬೊ** ಎಂಬ ಹೆಸರಿನಿಂದ ಕರೆಸಿಕೊಳ್ಳುವ ನಮ್ಮ ಬ್ರಹ್ಮಪುತ್ರ ನದಿಗೆ ಭಾರತದ ಗಡಿ ಸಮೀಪದಲ್ಲಿ ಬೃಹತ್ ಅಣೆಕಟ್ಟೆ ನಿರ್ಮಿಸಲು ಮತ್ತು ಜಲವಿದ್ಯುತ್ ಯೋಜನೆ ರೂಪಿಸಲು ಚೀನಾ ಮುಂದಾಗಿದೆ. ಚೀನಾ ಸಂಸತ್ತು- ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್ 14ನೇ ಪಂಚವಾರ್ಷಿಕ ಯೋಜನೆಗೆ ಒಪ್ಪಿಗೆ ನೀಡಿದೆ. ಈ ಯೋಜನೆಯಲ್ಲಿ ಬ್ರಹ್ಮಪುತ್ರ ನದಿಗೆ ಅರುಣಾಚಲ ಪ್ರದೇಶದ ಸಮೀಪ ಅಣೆಕಟ್ಟು ಕಟ್ಟುವ ಪ್ರಸ್ತಾವ ಇದೆ. ಹಾಗಾಗಿ, ಭಾರತಕ್ಕೆ ಇದು ಕಳವಳಕಾರಿಯಾದ ವಿಚಾರ.

ನದಿ ನೀರು ಹಂಚಿಕೆಯು ಒಂದು ದೇಶದ ವಿವಿಧ ರಾಜ್ಯಗಳ ನಡುವೆಯೇ ಸಂಘರ್ಷ ಸೃಷ್ಟಿಸುವಷ್ಟು ಸ್ಫೋಟಕವಾದ ವಿಚಾರ. ಎರಡು ದೇಶಗಳ ನಡುವೆ ನೀರು ಹಂಚಿಕೆಯು ಬಿಕ್ಕಟ್ಟಾಗಿ ಪರಿಣಮಿಸಬಹುದು. ಚೀನಾದಂತಹ ದೇಶದ ಜತೆಗೆ ಇಂತಹ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವುದು ದೊಡ್ಡ ಕಷ್ಟ.

ಬ್ರಹ್ಮಪುತ್ರ ನದಿಗೆ ಒಟ್ಟು ಐದು ಅಣೆಕಟ್ಟೆಗಳನ್ನು ನಿರ್ಮಿಸುವ ಯೋಜನೆಯನ್ನು ಚೀನಾ ತಯಾರಿಸಿದೆ; ಅದರಲ್ಲಿ ಕೆಲವು ಅಣೆಕಟ್ಟೆಗಳು ಈಗಾಗಲೇ ನಿರ್ಮಾಣ ಆಗಿವೆ. ಭಾರತದ ಗಡಿಗೆ ಸಮೀಪ ನಿರ್ಮಿಸಲು ಉದ್ದೇಶಿಸಿರುವ ಅಣೆಕಟ್ಟು ಜಗತ್ತಿನ ಅತ್ಯಂತ ದೊಡ್ಡ ಅಣೆಕಟ್ಟೆಗಳಲ್ಲಿ ಒಂದಾಗಬಹುದು ಎಂಬ ಅಂದಾಜು ಇದೆ. ಈ ಅಣೆಕಟ್ಟೆಯಲ್ಲಿ ನೀರು ಸಂಗ್ರಹಿಸುವ ಉದ್ದೇಶ ಇಲ್ಲ, ವಿದ್ಯುತ್ ಉತ್ಪಾದನೆಗೆ ಬಳಸಿಕೊಂಡ ಬಳಿಕ ನೀರನ್ನು ನದಿಗೆ ಹರಿಸಲಾಗುವುದು. ಹಾಗಾಗಿ, ಈ ಯೋಜನೆಯಿಂದ ಬೇರೆ ದೇಶಗಳಿಗೆ ತೊಂದರೆ ಆಗದು ಎಂದು ಚೀನಾ ಹೇಳುತ್ತಿದೆ.

ಆದರೆ, ವಾಸ್ತವ ಹಾಗೆ ಇಲ್ಲ. ಅಣೆಕಟ್ಟೆ ನಿರ್ಮಾಣದ ವಿಚಾರದಲ್ಲಿ ಚೀನಾ ಪಾರದರ್ಶಕವಾಗಿ ವರ್ತಿಸುತ್ತಿಲ್ಲ ಎಂಬ ಅನುಮಾನ ಭಾರತಕ್ಕೆ ಸದಾ ಇದೆ. ಬ್ರಹ್ಮಪುತ್ರ ನದಿಗೆ ಭಾರತ-ಭೂತಾನ್ ಗಡಿಯಿಂದ ಕೆಲವೇ ಕಿ.ಮೀ. ದೂರದ ಝಂಗ್ಮು ಎಂಬಲ್ಲಿ ಚೀನಾ ಅಣೆಕಟ್ಟೆ ನಿರ್ಮಿಸಿದೆ. ಆದರೆ, ಈ ಅಣೆಕಟ್ಟೆ ನಿರ್ಮಾಣದ ವಿಚಾರವನ್ನು ಚೀನಾ ನಿರಾಕರಿಸುತ್ತಲೇ ಬಂದಿತ್ತು. ಅಣೆಕಟ್ಟೆ ನಿರ್ಮಾಣ ಬಹುತೇಕ ಪೂರ್ಣಗೊಂಡ ಬಳಿಕ 2010ರಲ್ಲಿ ಒಪ್ಪಿಕೊಂಡಿತ್ತು. ಹಾಗಾಗಿಯೇ, ಬ್ರಹ್ಮಪುತ್ರ ನದಿಗೆ ಚೀನಾ ಕಟ್ಟುತ್ತಿರುವ ಅಣೆಕಟ್ಟೆಗಳ ನಿಜವಾದ ಉದ್ದೇಶ ವಿದ್ಯುತ್ ಉತ್ಪಾದನೆ ಮಾತ್ರವೇ ಎಂಬುದನ್ನು ಕಂಡುಕೊಳ್ಳುವಂತೆ ಯುಪಿಎ ಸರ್ಕಾರವು ಜಲ ಸಂಪನ್ಮೂಲ ಸಚಿವಾಲಯಕ್ಕೆ 2014ರಲ್ಲಿ ಸೂಚಿಸಿತ್ತು. ಯಾವುದೇ ಸಂದರ್ಭದಲ್ಲಿ ಬೇಕಿದ್ದರೂ ಜಲಾಶಯಗಳಾಗಿ ಪರಿವರ್ತಿಸುವ ರೀತಿಯಲ್ಲಿಯೇ ಈ ಬೃಹತ್ ಅಣೆಕಟ್ಟೆಗಳನ್ನು ಕಟ್ಟಲಾಗಿದೆ ಎಂದು ಜಲಸಂಪನ್ಮೂಲ ಸಚಿವಾಲಯದ ವರದಿಯು ಹೇಳಿತ್ತು.

ಭಾರತ-ಚೀನಾ ನಡುವೆ ನೀರಿನ ವಿಚಾರದಲ್ಲಿ ಸಹಕಾರ ಅಥವಾ ಹಂಚಿಕೆಯ ಒಪ್ಪಂದ ಇಲ್ಲ. ಆದರೆ, ನೀರು ಹರಿಸುವಿಕೆಯ ಮಾಹಿತಿ ಹಂಚಿಕೆ ಒಪ್ಪಂದ ಇದೆ. ಅಂದರೆ, ಎಷ್ಟು ನೀರು, ಯಾವಾಗ ಹರಿಸಲಾಗುತ್ತಿದೆ ಎಂಬುದನ್ನು ಚೀನಾವು ಭಾರತಕ್ಕೆ ತಿಳಿಸಬೇಕು. ಆದರೆ, 2017 ದೋಕಲಾ ಮುಖಾಮುಖಿಯ ಸಂದರ್ಭದಲ್ಲಿ ಈ ಮಾಹಿತಿ ನೀಡಲು ಚೀನಾ ನಿರಾಕರಿಸಿತ್ತು. ಚೀನಾದ ಇಂತಹ ವರ್ತನೆಯಿಂದಾಗಿಯೇ ಗಡಿಯಲ್ಲಿ ಆ ದೇಶವು ಕೈಗೆತ್ತಿಕೊಳ್ಳುವ ಯಾವುದೇ ಯೋಜನೆ ಅಪಾಯಕಾರಿ ಯಾಗಿಯೇ ಕಾಣಿಸುತ್ತದೆ.

### ಅರುಣಾಚಲದಲ್ಲಿ ಅಣೆಕಟ್ಟೆಗೆ ಭಾರತ ಸಿದ್ಧತೆ

**ಚೀನಾ** ನಿರ್ಮಿಸುತ್ತಿರುವ ಅಣೆಕಟ್ಟೆಯು ದೊಡ್ಡ ಪ್ರಮಾಣದಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳಬಲ್ಲ ಸಾಮರ್ಥ್ಯ ಹೊಂದಿದೆ ಎಂದು ವರದಿಯೊಂದು ಹೇಳಿದೆ. ಆದ್ದರಿಂದ ಭಾರತಕ್ಕೆ ನೀರು ಬೇಕಾದ ಸಂದರ್ಭದಲ್ಲಿ ನೀರನ್ನು ಕೊಡದೆ, ಬೇಡವಾದ ಸಂದರ್ಭದಲ್ಲಿ ಅತಿಯಾದ ನೀರನ್ನು ಬಿಟ್ಟು ಪ್ರವಾಹ ಸೃಷ್ಟಿಸುವ ಅಪಾಯವಿದೆ. ಇದು ಭಾರತದ ಚಿಂತೆಗೆ ಕಾರಣವಾಗಿದೆ.

ಚೀನಾದ ಈ ತಂತ್ರಕ್ಕೆ ಪ್ರತಿಯಾಗಿ ಭಾರತವೂ ಅರುಣಾಚಲಪ್ರದೇಶದಲ್ಲಿ 10,000 ಮೆಗಾವಾಟ್ ಜಲವಿದ್ಯುತ್ ಉತ್ಪಾದಿಸುವ ಯೋಜನೆಯೊಂದರ ರೂಪುರೇಷೆ ಸಿದ್ಧಪಡಿಸಿದೆ. 'ಚೀನಾದ ಯೋಜನೆಯಿಂದ ಆಗಬಹುದಾದ ಹಾನಿಯನ್ನು ಸರಿಪಡಿಸುವಲ್ಲಿ ಈ ಯೋಜನೆ ಸಹಾಯಕವಾಗಬಹುದು' ಎಂದು ಜಲಶಕ್ತಿ ಸಚಿವಾಲಯದ ಆಯುಕ್ತ ಟಿ.ಎಸ್. ಮೆಹರಾ ಹೇಳಿದ್ದಾರೆ. ಬ್ರಹ್ಮಪುತ್ರಾ ನದಿಯಲ್ಲಿ ಬರುವ ಹೆಚ್ಚುವರಿ ನೀರನ್ನು ಸಂಗ್ರಹಿಸಿಡಲು ಹಾಗೂ ನೀರಿನ ಕೊರತೆ ಆದಾಗ ಅಗತ್ಯವಿರುವಷ್ಟು ನೀರನ್ನು ಬಿಡಲು ಈ ಯೋಜನೆ ಸಹಾಯಕವಾಗಲಿದೆ ಎಂದು ಅವರು ಹೇಳಿದ್ದಾರೆ.

'ನಿಮ್ಮ ಯೋಜನೆಗಳು ಭಾರತಕ್ಕೆ ಹಾನಿ ಉಂಟುಮಾಡುವ ರೀತಿಯಲ್ಲಿ ಇರಬಾರದು ಎಂದು ನಾವು ಚೀನಾಗೆ ಅಧಿಕೃತವಾಗಿ ತಿಳಿಸಿದ್ದೇವೆ. 'ಆ ಬಗ್ಗೆ ಎಚ್ಚರವಹಿಸುತ್ತೇವೆ' ಎಂಬ ಭರವಸೆಯನ್ನೂ ಅವರು ನೀಡಿದ್ದಾರೆ. ಆದರೆ, ಕೊಟ್ಟ ಮಾತನ್ನು ಅವರು ಎಷ್ಟು ದಿನಗಳವರೆಗೆ ಉಳಿಸಿಕೊಳ್ಳುತ್ತಾರೆ ಎಂಬುದನ್ನು ಹೇಳಲಾಗದು' ಎಂದು ಮೆಹರಾ ಹೇಳುತ್ತಾರೆ.

ಆದರೆ, ಭಾರತ- ಚೀನಾ ನಡುವಿನ ಈ ಸ್ಪರ್ಧೆಯು ಈ ಭಾಗದ ಪರಿಸರಕ್ಕೆ ಬಹುದೊಡ್ಡ ಅಪಾಯವನ್ನು ತಂದೊಡ್ಡುತ್ತಿದೆ ಎಂದು ಪರಿಸರ ವಿಜ್ಞಾನಿಗಳು ವಾದಿಸುತ್ತಾರೆ.



## ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

### ಶಿವ: ಸಚ್ಚಿದಾನಂದ ರೂಪ

ಹಿಂದೂ ಶಾಸ್ತ್ರಗ್ರಂಥಗಳಿಗೆಲ್ಲಾ ವೇದವೇ ಮೂಲಾಧಾರ. ವೇದದಲ್ಲಿ ಹೇಳಿದೆ ಎಂದರೆ ಅದು ಸತ್ಯಸ್ಯಸತ್ಯ. ಅದನ್ನು ಮರುಪರಿಶೀಲಿಸಿ ನೋಡುವ ಪ್ರಮೇಯವೇ ಇಲ್ಲ. ಏಕೆಂದರೆ, ಚತುರ್ವೇದಗಳು ಚತುರ್ಮುಖಬ್ರಹ್ಮನಿಂದ ಬಂದ ಭಗವತ್‌ವಾಣಿ. ಯಜುರ್ವೇದದ ರುದ್ರಾಧ್ಯಯನದಲ್ಲಿ ಉತ್ತಮ ಕರ್ಮ ಮಾಡಿ, ಅದರ ಫಲಗಳನ್ನು ಈಶ್ವರನಿಗೆ ಅರ್ಪಿಸಿದರೆ ಸಾಲೋಕ್ಯ (ಶಿವಲೋಕವಾಸ) ಸೇರಬಹುದೆಂದಿದ್ದರೆ, ವೇದವ್ಯಾಸರು ಬರೆದಿರುವ ವೇದಸಾರಯುಕ್ತವಾದ 'ಶಿವಮಹಾಪುರಾಣ'ದಲ್ಲೂ ಈಶ್ವರನ ಸ್ಮರಣೆ-ಜಾಗರಣೆಯಿಂದ ಕೈಲಾಸ ಸೇರಬಹುದೆಂದು ಹೇಳಲಾಗಿದೆ.

ಶಿವಮಹಾಪುರಾಣದ 'ವಿದ್ಯೇಶ್ವರ'ಸಂಹಿತೆಯ ಎರಡನೇ ಅಧ್ಯಾಯದಲ್ಲಿ ಜನರ ದುರ್ನಡತೆ ಬಗ್ಗೆ ವಿವರವಿದ್ದರೆ, ಆರನೇ ಅಧ್ಯಾಯದಲ್ಲಿ ಶಿವನನ್ನು ಲಿಂಗರೂಪದಲ್ಲಿ ಏಕೆ ಪೂಜಿಸಬೇಕೆಂದಿದೆ. ಎಂಟನೇ ಅಧ್ಯಾಯದಲ್ಲಿ 'ಮಹಾಶಿವರಾತ್ರಿ' ಆಚರಣೆಗೆ ಕಾರಣವಾದ ಅಂಶಗಳಿವೆ. ಇಲ್ಲಿರುವ ವಿಶ್ವಸೃಷ್ಟಿ ಬಗೆಗಿನ ವಿವರ ವೈಜ್ಞಾನಿಕವಾಗಿ ನೋಡಬಹುದಾದರೆ, ಇದರಲ್ಲಿರುವ ದುರ್ಜನರ ನಡವಳಿಕೆ ತಿದ್ದುವ ವಿವರವನ್ನ ಸಾಮಾಜಿಕವಾಗಿ ಒರೆಗಚ್ಚಿ ನೋಡಬಹುದು. ಜ್ಞಾನಮಾರ್ಗದಿಂದ ಸೃಷ್ಟಿಯ ರಹಸ್ಯ ಭೇದಿಸುತ್ತಾ, ಧ್ಯಾನಮಾರ್ಗದಲ್ಲಿ ಭಗವಂತನ ಸಾನ್ನಿಧ್ಯ ಸೇರಬಹುದೆಂಬ 'ಜಗತ್‌ಸತ್ಯ'ವನ್ನ ವೇದ-ಪುರಾಣಗಳು ಬಹಳ ಸರಳವಾಗಿ ಹೇಳಿವೆ.

ಜನರ ನಡವಳಿಕೆಯಲ್ಲಿ ಆಗಿನ ಕಾಲಕ್ಕೂ ಈಗಿನ ಕಾಲಕ್ಕೂ ಯಾವ ವ್ಯತ್ಯಾಸವೂ ಇಲ್ಲ ಅನ್ನುವುದು ವೇದವ್ಯಾಸರ ಶಿವಮಹಾಪುರಾಣ ಸಾಕ್ಷೀಕರಿಸುತ್ತದೆ. ಏಕೆಂದರೆ ಭಗವಂತನ ಸೃಷ್ಟಿಯ ಸೂತ್ರವೇ ಹಾಗಿದೆ. ಗುಣಗಳಿಂದಲೇ ಜೀವಿಗಳ ರೂಪ ಪಡೆಯವಂತೆ ಮಾಡಲಾಗಿದೆ. ಇದು ಡಾರ್ವಿನ್ ಸಿದ್ಧಾಂತಕ್ಕೆ ಪೂರಕವಾಗಿದೆ. ಸತ್ವ-ರಜಸ್ಸು-ತಮಸ್ಸುಗಳಿಂದ ಕೂಡಿರುವ ಜೀವದೊಳಗೆ ತಮಸ್ಸು (ಕೆಟ್ಟ) ಬಹಳ ಸುಲಭವಾಗಿ ಹುಟ್ಟುತ್ತೆ. ಆದರೆ ರಜೋ(ಒಳ್ಳೆ)ಗುಣಗಳು ಅಷ್ಟು ಸುಲಭವಾಗಿ ಉತ್ಪತ್ತಿ ಆಗುವುದಿಲ್ಲ. ಇದಕ್ಕೆ ಜ್ಞಾನ(ವಿದ್ಯೆ)ಮಾರ್ಗ ಮತ್ತು ಧ್ಯಾನ(ಬುದ್ಧಿ)ಮಾರ್ಗ ಅನುಸರಿಸಬೇಕು. ವಿದ್ಯೆಯಿಂದ ಜ್ಞಾನಶಕ್ತಿ ಹೆಚ್ಚಾದರೆ, ಧ್ಯಾನದಿಂದ ಬುದ್ಧಿಶಕ್ತಿ ಹೆಚ್ಚಾಗುತ್ತದೆ. ಮಾನವನ ಸುಲಭ ಆಕರ್ಷಣೆಯಾದ ಕೆಟ್ಟತನಗಳಿಗೆ ಬಲಿಬೀಳದಂತೆ ಎಚ್ಚರಿಸಲು ಜ್ಞಾನ ಬೇಕು. ಇಂಥ ಜ್ಞಾನ ಬೆಳೆಸಲು ವಿದ್ಯೆ ಬೇಕು. ಇಂಥ ಜ್ಞಾನ ಕಾಪಿಟ್ಟುಕೊಂಡು ಹೋಗಲು ಬುದ್ಧಿಶಕ್ತಿ ಬೇಕು. ಬುದ್ಧಿಶಕ್ತಿಯನ್ನು ಬೆಳೆಸಲು ನಮ್ಮೊಳಗೆ ಸುಪ್ತವಾಗಿರುವ ರಜೋಗುಣಗಳನ್ನು ಉದ್ದೀಪಿಸಲು ಭಗವಂತನ ಧ್ಯಾನ ಬೇಕು. ಇಂಥ ಸತ್ಪುರುಷರಿಗೆ ಚತುರ್ವಿಧ ಪುರುಷಾರ್ಥಗಳು ಸಿಗುವುವು.

ಶಿವ ಬ್ರಹ್ಮಸ್ವರೂಪ. ಆಕಾಶದಂತೆ ಎಲ್ಲೆಲ್ಲಿಯೂ ಇರುವಂಥವನು. ಆಕಾಶದಂತೆ ಅವಯವಗಳಿಲ್ಲದ ನಿರಾಕಾರ ಶಿವನನ್ನು ಲಿಂಗರೂಪದಲ್ಲಿ ಪೂಜಿಸಬೇಕು. ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳು ಜೀವರೂಪವುಳ್ಳವರಾದ್ದರಿಂದ ಮೂರ್ತಿರೂಪದಲ್ಲಿ ಪೂಜಿಸಬೇಕು. ಮಹಾಶಿವರಾತ್ರಿ ಆರಂಭವಾದುದಕ್ಕೊಂದು ಹಿನ್ನೆಲೆಯಿದೆ. ಮಹಾಕಾಲೇಶ್ವರನು ಲೋಕದಲ್ಲಿ ಆವಿರ್ಭವಿಸಿದ ಕಾಲದಲ್ಲಿ ಬ್ರಹ್ಮ ಮತ್ತು ವಿಷ್ಣು ಪರಸ್ಪರ 'ನಾನು ಮೇಲು ತಾನು ಮೇಲು' ಎಂದು ಹೊಡೆದಾಡುತ್ತಿದ್ದರು. ಇವರ ಗರ್ವವನ್ನು ಮುರಿಯಲು ಪರಮೇಶ್ವರನು ಅವರ ಮಧ್ಯದಲ್ಲಿ ನಿರಾಕಾರವಾದ ದೊಡ್ಡ ಕಂಬದ ರೂಪದಲ್ಲಿ ನಿಂತ. ಇದೇ ಮಹಾಲಿಂಗ.

ಜಾಣನಾದ ವಿಷ್ಣು ಶಿವನಿಗೆ ಬಹಳಬೇಗ ಶರಣಾದರೂ, ಮಂದಮತಿಯಾದ ಬ್ರಹ್ಮ ಸುಳ್ಳು ಪ್ರದರ್ಶಿಸಿ ತನ್ನ ಐದನೇ ತಲೆಯನ್ನು ಭೈರವನಿಂದ ಕಡಿಸಿಕೊಂಡ. ನಾನು ಎಂಬ ಅಹಂ, ನನ್ನದು ಎಂಬ ಸ್ವಾರ್ಥ, ಕೊಡೆನು ಎಂಬ ಲೋಭವನ್ನು ಅಳಿಸಿ, ಜಗದ್ರಕ್ಷಕನಾದ ಶಿವನೇ ಸರ್ವಶ್ರೇಷ್ಠ ಅಂತ ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳು ಮಹಾಲಿಂಗವನ್ನು ಪೂಜಿಸಿದ ದಿನವೇ ಮಹಾಶಿವರಾತ್ರಿ.


ದೇವಾನುದೇವತೆಗಳೇ ತಮೋಗುಣದ ಆಕರ್ಷಣೆಗೆ ಒಳಗಾಗುತ್ತಾರೆಂದಮೇಲೆ ಹುಲುಮಾನವರಾದ ನಾವು ಯಾವ ಪರಿ ಹಾದಿ ತಪ್ಪಬಹುದೆಂಬುದನ್ನು ಅರ್ಥಮಾಡಿಕೊಳ್ಳಬಹುದು. ನಮ್ಮೊಳಗಿನ ಕೆಟ್ಟತನವನ್ನು ನಿಗ್ರಹಿಸಿ, ಒಳ್ಳೆತನವನ್ನು ಪೋಷಿಸಲು ಪ್ರತಿ ತಿಂಗಳ ಬಹುಳಚತುರ್ದಶಿಯಂದು ಮಾಸಶಿವರಾತ್ರಿಯಾಗಿ, ವರ್ಷಕ್ಕೊಮ್ಮೆ ಮಹಾಶಿವರಾತ್ರಿಯಾಗಿ ಆಚರಿಸಬೇಕು. ಆಗ ನಿರಾಕಾರಿ ಶಿವನ 'ಸಚ್ಚಿದಾನಂದ'ರೂಪದ ದರ್ಶನವಾಗುತ್ತದೆ.

## ಕೋವಿಡ್: ಲಸಿಕೆ ಪಡೆದ ಬಿಎಸ್‌ವೈ

**ಬೆಂಗಳೂರು:** ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಕೋವಿಡ್ ಲಸಿಕೆಯ ಮೊದಲ ಡೋಸ್ ಅನ್ನು ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆಯಲ್ಲಿ ಶುಕ್ರವಾರ ಪಡೆದುಕೊಂಡರು.

'ಕೋವ್ಯಾಕ್ಸಿನ್' ಲಸಿಕೆ ನೀಡುವ ಮೊದಲು ವೈದ್ಯಕೀಯ ಸಿಬ್ಬಂದಿ, ಪ್ರಕ್ರಿಯೆ ವಿವರಿಸಿದರು. ಲಸಿಕೆ ಪಡೆದ ಬಳಿಕ 30 ನಿಮಿಷಗಳು ನಿಗಾ ಇರಿಸಿ, ಆರೋಗ್ಯ ವಿಚಾರಿಸಲಾಯಿತು. ಯಾವುದೇ ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳದ ಕಾರಣ ತೆರಳಲು ವೈದ್ಯರು ಅವಕಾಶ ನೀಡಿದರು.

'ರಾಜ್ಯದ ಎಲ್ಲ ಫಲಾನುಭವಿಗಳು ಹೆಸರನ್ನು ನೋಂದಾಯಿಸಿ ಲಸಿಕೆ ಪಡೆದುಕೊಳ್ಳಬೇಕು. ಇದನ್ನು ತೆಗೆದುಕೊಳ್ಳುವುದರಿಂದ ಆರೋಗ್ಯ ಸುಧಾರಣೆ ಆಗುತ್ತದೆ. ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಲಸಿಕೆಯನ್ನು ಪಡೆದುಕೊಂಡಿದ್ದಾರೆ' ಎಂದು ಬಿ.ಎಸ್. ಯಡಿಯೂರಪ್ಪ ತಿಳಿಸಿದರು.



ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 'ಕೋವ್ಯಾಕ್ಸಿನ್' ಲಸಿಕೆ ಪಡೆದುಕೊಂಡರು. ಡಾ.ಕೆ. ಸುಧಾಕರ್ ಇದ್ದರು. ಪ್ರಜಾವಾಣಿ ಚಿತ್ರ

ಮುಂಚೂಣಿ ಕಾರ್ಯಕರ್ತರ ಕೋಟಾದಲ್ಲಿ ಲಸಿಕೆ ಪಡೆದ ಸುಧಾಕರ್, 'ಹಿರಿಯ ನಾಗರಿಕರು ಮತ್ತು ಅರ್ಹ ವ್ಯಕ್ತಿಗಳು ಆದಷ್ಟು ಬೇಗ ಲಸಿಕೆ ಪಡೆದುಕೊಳ್ಳಬೇಕು. ದೇಶವು ಕೋವಿಡ್ ಮುಕ್ತವಾಗಲು ಕೈಜೋಡಿಸಬೇಕು' ಎಂದು ಹೇಳಿದರು.

## 'ಭಾರತದ ಸಾಧನೆ ಜಗತ್ತಿಗೇ ಬೆಳಕು ನೀಡುವಂತಹದು'

**ಅಹಮದಾಬಾದ್ (ಪಿಟಿಐ):** 'ದೇಶದ ಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವದ ಸಂಪ್ರದಾಯಗಳ ಕುರಿತು ನಮಗೆ ಹೆಮ್ಮೆ ಇದೆ. ಭಾರತವು ಪ್ರಜಾಪ್ರಭುತ್ವದ ತಾಯಿ, ಅದನ್ನು ಇನ್ನಷ್ಟು ಬಲಪಡಿಸುವತ್ತ ನಾವು ಹೆಜ್ಜೆ ಇಡುತ್ತಿದ್ದೇವೆ. ಭಾರತ ಸಾಧನೆ ಕೇವಲ ನಮ್ಮದಷ್ಟೇ ಅಲ್ಲ. ಇದು, ಅದು ಜಗತ್ತಿಗೇ ಬೆಳಕು ನೀಡುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಸ್ವಾತಂತ್ರ್ಯೋತ್ಸವದ 75ನೇ ವರ್ಷಾಚರಣೆಯ 'ಆಜಾದಿ ಕಾ ಅಮೃತ್ ಮಹೋತ್ಸವ್' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಈ ಕಾರ್ಯಕ್ರಮಗಳು ಆಗಸ್ಟ್ 15, 2023ರವರೆಗೂ ನಡೆಯಲಿವೆ ಎಂದೂ ತಿಳಿಸಿದರು. ದಂಡಿಯಾತ್ರೆ ನೆನಪಿಗಾಗಿ ಸಾಬರಮತಿ ಆಶ್ರಮದಿಂದ ದಂಡಿವರೆಗೆ ಆಯೋಜಿಸಿರುವ ಪಾದಯಾತ್ರೆಗೂ ಪ್ರಧಾನಿ ಚಾಲನೆ ನೀಡಿದರು.



### ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

| | ವಿಶ್ವ | ಭಾರತ | ರಾಜ್ಯ |
|---|---|---|---|
| ಒಟ್ಟು ಪ್ರಕರಣ / ಒಟ್ಟು ಸೋಂಕಿತರು | 11.92 ಕೋಟಿ ▲ | 1.133 ಕೋಟಿ ▲ | 9,58,417 ▲ |
| ಸಕ್ರಿಯ ಪ್ರಕರಣ | 2.178 ಕೋಟಿ ▲ | 1.98 ಲಕ್ಷ ▲ | 8,114 ▲ |
| ಗುಣಮುಖ | 9.482 ಕೋಟಿ ▲ | 1.097 ಕೋಟಿ ▲ | 9,37,898 ▲ |
| ಸಾವು | 26.44 ಲಕ್ಷ ▲ | 1.584 ಲಕ್ಷ ▲ | 12,386 ▲ |
| ದಿನದ ವರದಿ: ಹೊಸ ಪ್ರಕರಣ | 4.82 ಲಕ್ಷ ▲ | 23,848 ▲ | 833 ▲ |
| ದಿನದ ವರದಿ: ಗುಣಮುಖ | 3.91 ಲಕ್ಷ ▼ | 19,166 ▲ | 545 ▲ |
| ದಿನದ ವರದಿ: ಸಾವು | 9,704 ▲ | 126 ▲ | 05 ▲ |

125 ಐಸಿಯುನಲ್ಲಿ ಇರುವವರು ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 78,297 ಬ್ರೆಜಿಲ್ ▼; 62,773 ಅಮೆರಿಕ ▲; 27,166 ಫ್ರಾನ್ಸ್ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 85.91 ಅಮೆರಿಕ ▼; 36.30 ಫ್ರಾನ್ಸ್ ▲; 10.52 ಬ್ರೆಜಿಲ್ ▲

ಎಲ್ಲಿ ಹೆಚ್ಚು ಸಾವು: ▲52,723 ಮಹಾರಾಷ್ಟ್ರ; ▲12,539 ತಮಿಳುನಾಡು; ▲10,936 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ▲22.82 ಮಹಾರಾಷ್ಟ್ರ; 10.87 ಕೇರಳ ▲; ▲8.913 ಆಂಧ್ರಪ್ರದೇಶ




ಪ್ರಜಾವಾಣಿ ಗ್ರಾಫಿಕ್ಸ್

## ಕೇರಳ ಗಡಿಗಳಲ್ಲಿ ಮುನ್ನೆಚ್ಚರಿಕೆ

**ಮೈಸೂರು:** ಕೇರಳ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಮೈಸೂರು ಜಿಲ್ಲೆಯ ಬಾವಲಿ ಸಮೀಪ ಹಾಗೂ ಕೊಡಗಿನ ಕುಟ್ಟ ಹಾಗೂ ಮಾಕುಟ್ಟ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ಕೋವಿಡ್ ತಪಾಸಣೆ ನಡೆಸಲಾಗುತ್ತಿದೆ. ಆರ್‌ಟಿಪಿಸಿಆರ್ ಪರೀಕ್ಷೆ ಇಲ್ಲದೇ ಬರುವ ಪ್ರವಾಸಿಗರನ್ನು ವಾಪಸ್ ಕಳುಹಿಸಲಾಗುತ್ತಿದೆ. ಆದರೆ, ಚಾಮರಾಜನಗರದ ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಥರ್ಮಲ್ ಸ್ಕ್ರೀನಿಂಗ್ ಮಾತ್ರ ಮಾಡಲಾಗುತ್ತಿದೆ.

ಕೊಡಗಿನ ಕುಟ್ಟ ಹಾಗೂ ಮಾಕುಟ್ಟ, ಮೈಸೂರಿನ ಬಾವಲಿ ಚೆಕ್‌ಪೋಸ್ಟ್‌ಗಳಲ್ಲಿ ಬರುವವರಿಗೆ 72 ಗಂಟೆಗಳ ಮೊದಲು ಪಡೆದ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಅಮರನಾಥ್, 'ಈಗ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿದೆ. ಶೇ 90ರಷ್ಟು ಮಂದಿ ಆರ್‌ಟಿಪಿಸಿಆರ್ ವರದಿಯೊಂದಿಗೆ ಬರುತ್ತಿದ್ದಾರೆ ಎಂದು ತಿಳಿಸಿದರು

### ಗುಂಡಣ್ಣ




### ದಿನ ಭವಿಷ್ಯ

ಶನಿವಾರ 13 ಮಾರ್ಚ್ 2021

**ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ಅಮಾವಾಸೆ ಗಂ. 20-43 (ಹ. 2-53) ಶನಿವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 42-27 (ರಾ. 11-35) ಸಾಧ್ಯ ನಾಮ ಯೋಗ ಗಂ. 2-3 ನಾಗ ಕರಣ ಗಂ. 20-43 ವಿಶ ಶೇಷ ಗಂ. 0-18 ಅಮೃತ ಗಂ. 21-54 :** ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-33 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 2 7

**ಮೇಷ:** ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ. ಜಂಟಿ ವ್ಯವಹಾರಗಳಿಗೆ ಕೈ ಹಾಕದಿರುವುದು ಉತ್ತಮ. ಬಂಧು ಮಿತ್ರರೊಂದಿಗೆ ಶುಭ ಸಮಾರಂಭದಲ್ಲಿ ಭಾಗಿ. ದೈನಂದಿನ ವ್ಯವಹಾಗಳಲ್ಲಿ ಸಂತಸವನ್ನು ಕಾಣಲಿದ್ದೀರಿ.

**ವೃಷಭ:** ವಿವಾಹಾಕಾಂಕ್ಷಿಗಳಿಗೆ ಸಂಬಂಧಗಳು ಕೂಡಿಬರುವ ಸಾಧ್ಯತೆ. ಹಲವಾರು ವೈಯಕ್ತಿಕ ಸಮಸೆಗಳನ್ನು ಪರಿಹರಿಸಿಕೊಳ್ಳುವಿರಿ. ನೂತನ ವಾಹನ ಖರೀದಿ ಮಾಡಲಿದ್ದೀರಿ.

**ಮಿಥುನ:** ಉದ್ಯೋಗದಲ್ಲಿರುವವರಿಗೆ ಮೇಲಾಧಿಕಾರಿಗಳಿಂದ ಪ್ರಶಂಸೆಗಳು ಹರಿದುಬರಲಿವೆ. ಮಹಿಳೆಯರ ಇಷ್ಟಾರ್ಥಗಳು ಈಡೇರಿ ಸಂತಸ ಮೂಡಲಿದೆ. ಆರ್ಥಿಕ ಅಭಿವೃದ್ಧಿಯಾಗಿ ಹೊಸ ಬದುಕಿಗೆ ನಾಂದಿಯಾಗಲಿದೆ.

**ಕರ್ಕಾಟಕ:** ದೂರಾಲೋಚನೆಯಿಂದ ಮಾಡಿದ ಕಾರ್ಯಗಳಲ್ಲಿ ಯಶಸ್ಸನ್ನು ಕಾಣಲಿದ್ದೀರಿ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ಹರಿಸಬೇಕಾದುದು ಅನಿವಾರ್ಯ. ದೂರಪ್ರಯಾಣ ಮಾಡದಿರುವುದು ಒಳಿತು.

**ಸಿಂಹ:** ಮಕ್ಕಳೊಂದಿಗೆ ವಾದ ವಿವಾದ ಮಾಡದಿರುವುದು ಉತ್ತಮ. ಮಿತ್ರರಿಂದ ಸಹಕಾರ ಸಲಹೆಗಳು ಲಭ್ಯ. ವಾಹನ ಚಾಲನೆ, ಸ್ತ್ರೀಯರೊಂದಿಗೆ ವ್ಯವಹರಿಸುವಾಗ ಎಚ್ಚರಿಕೆ ಅಗತ್ಯ. ಬಂಧುಗಳೊಂದಿಗಿನ ಭಿನ್ನಾಭಿಪ್ರಾಯ ದೂರ.

**ಕನ್ಯಾ:** ಆರ್ಥಿಕ ಅನುಕೂಲತೆಗಳು ಕೂಡಿಬರಲಿವೆ. ವಿದೇಶಪ್ರಯಾಣ ಯೋಗವೂ ಕಂಡುಬರುತ್ತಿದೆ. ದಿನನಿತ್ಯದ ಕೆಲಸಗಳಲ್ಲಿ ಉತ್ಸಾಹ ಮೂಡಿಬರಲಿದೆ.

**ತುಲಾ:** ದೈನಂದಿನ ಕಾರ್ಯಗಳಲ್ಲಿ ಆಸಕ್ತಿ ವಹಿಸಲಿದ್ದೀರಿ. ಆಸ್ತಿ ವಿಷಯದಲ್ಲಿ ಕಲಹ ಎದುರಾಗುವ ಸಾಧ್ಯತೆ. ನೌಕರಿಯಲ್ಲಿರುವವರಿಗೆ ವರ್ಗಾವಣೆ. ಅಮೂಲ್ಯ ವಸ್ತುಗಳ ಸಂಗ್ರಹಣೆ ಮಾಡಲಿದ್ದೀರಿ.

**ವೃಶ್ಚಿಕ:** ತಾಳ್ಮೆಯಿಂದ ಕಾರ್ಯಸಿದ್ಧಿ. ಕೃಷಿ ಕ್ಷೇತ್ರದಲ್ಲಿ ಕೆಲಸಮಾಡುವಾಗ ಎಚ್ಚರಿಕೆ ವಹಿಸುವುದು ಉತ್ತಮ. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ವ್ಯವಹಾರದಲ್ಲಿ ಹೆಚ್ಚಿನ ಶ್ರಮ ವಹಿಸಬೇಕಾದೀತು.

**ಧನು:** ಸಂತೃಪ್ತ ಸಾಂಸಾರಿಕ ಜೀವನ. ಮಹಿಳೆಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಕುಟುಂಬದ ಸದಸ್ಯರೊಂದಿಗೆ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ. ಅತಿಯಾದ ಕೋಪ ತೊಂದರೆಗೆ ಆಹ್ವಾನವಾದೀತು.

**ಮಕರ:** ಬಹುಕಾಲದ ಬಯಕೆಗಳು ಈಡೇರಲಿವೆ. ಋಣಪರಿಹಾರದಿಂದಾಗಿ ಸಂತೃಪ್ತಿ. ವೈಯುಕ್ತಿಕ ವಿಚಾರಗಳನ್ನು ಬಹಿರಂಗ ಪಡಿಸದೇ ಇರುವುದು ಕ್ಷೇಮ. ವಸ್ತ್ರ, ಹತ್ತಿ, ನಾರಿನ ಪದಾರ್ಥಗಳ ವ್ಯಾಪಾರದಲ್ಲಿ ಹೆಚ್ಚಿನ ಆದಾಯ.

**ಕುಂಭ:** ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಗೃಹ ನಿರ್ಮಾಣ ಅಥವಾ ಖರೀದಿ ಸಾಧ್ಯತೆ. ಮಹಿಳೆಯರಿಗೆ ಸಾಮಾಜಿಕ ಗೌರವಾದರಗಳು ದೊರಕಲಿವೆ. ರಾಜಕೀಯದಲ್ಲಿ ಯಶಸ್ಸಿನ ಹೆಜ್ಜೆ ತುಳಿಯಲಿದ್ದೀರಿ.

**ಮೀನ:** ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತುರುಸಿನಿಂದ ತೊಡಗಿಕೊಳ್ಳುವಿರಿ. ಹಣಕಾಸಿನ ವಿಚಾರದಲ್ಲಿ ಅತ್ಯಂತ ಜಾಗರೂಕತೆ ಅವಶ್ಯ. ಮಕ್ಕಳ ಆರೋಗ್ಯದ ಕಡೆ ತುಸು ಗಮನ ವಹಿಸುವುದು ಉತ್ತಮ.

**ನಿಮ್ಮ ಜನ್ಮದಿನ 13-ಮಾರ್ಚ್** ಈ ದಿನವು ಅತ್ಯಂತ ಶುಭಕರವಾಗಿದ್ದು, ಮಿತ್ರರಿಂದ ಉತ್ತಮ ಸಹಕಾರ ದೊರೆಯಲಿದ್ದು ಆಸ್ತಿ ಅಭಿವೃದ್ಧಿಯಾಗುವ ಸಾಧ್ಯತೆ. ಜಂಟಿ ವ್ಯವಹಾರದಲ್ಲಿ ತೊಡಗಿಕೊಳ್ಳುವುದು ಶ್ರೇಯಸ್ಸನ್ನು ತರದು. ರಾಜಕೀಯದಲ್ಲಿ ಇರುವವರಿಗೆ ಉತ್ತಮ ಯಶಸ್ಸು.

### ಪದಬಂಧ 4535


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ನಡುವೆ ರಾಜಿ ಮಾಡಿಕೊಂಡರೂ ಈತ ಸೋತವನು! (4)
3.ವಿದ್ಯೆಯನ್ನು ಕಲಿಸುವ ಶಾಲೆ (4)
5.ಕಬ್ಬಿಗ ಇಲ್ಲಿ ಕಾಣುತ್ತಿದ್ದಾನೆ (2)
7.ಧಾನ್ಯಗಳನ್ನು ಕೇರುವ ಸಾಧನ (3)
8.ದಮಯಂತಿಯ ಪತಿ (2)
10.ಜನರಲ್ಲಿ ಜಾಗೃತಿ ಮೂಡಿಸಿದ ಪರಿಶೆ (2)
11.ಸಡಗರ ಹೀಗೆ ಬಂದಿದೆ (3)
13.ಕಠೋರವಾದ ಕೈ! (2)
15.ಮೋಕ್ಷಕ್ಕೆ ಸಾಧಕವಾದ ಪರಮಾತ್ಮನ ಅರಿವು (4)
16.ಮುಚ್ಚಳವಿರುವ ಡಬ್ಬಿ (4)

**ಮೇಲಿಂದ ಕೆಳಕ್ಕೆ**

1.ಪದ ಹೇಳಿ ಗಳಿಸಿರುವ ಬಿಲ್ಲೆ (3)
2.ಬಿದಿರಿನ ತಟ್ಟಿಯನ್ನು ಹೀಗೂ ಹೇಳುವರು (3)
3.ಕ್ರೀಡಾಶೀಲ ವ್ಯಕ್ತಿಯಿವನು (3)
4.ಯಮನ ಬಳಿ ಬಂದಿರುವ ಜೋಡಿ (3)
6.ಗೆಲವನ್ನು ಗಳಿಸುವುದಕ್ಕಾಗಿ ಕೈಗೊಳ್ಳುವ ಪ್ರಯಾಣ (5)
8.ಒಳ್ಳೆತನದ ಸೋಗಿನಲ್ಲಿ ಮೋಸಮಾಡುವವನು (5)
10.ಈತ ಎಚ್ಚರಗೊಂಡವನು (3)
11.ರಾಜಿಗೊಂದು ಪರ್ಯಾಯ ಪದ (3)
12.ಕರುವಿಗೆ ತೋರಿರುವ ದಯೆ (3)
14.ಈತ ವಿಲಾಸಪ್ರಿಯ (3)



### 4534ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಅಸಂಸ್ಕೃತ 3.ಸಂಚಿ 4.ನವದಂಪತಿ 6.ತತಿ 8.ತಾಕತ್ತು 10.ಕರು 12.ವ್ಯವಕಲನ 14.ದಾನಿ 15.ನಡುಪ್ರಾಯ

**ಮೇಲಿಂದ ಕೆಳಕ್ಕೆ:** 1.ಅಭಿಜಾತ 2.ತಲ್ಲೀನ 3.ಸಂಪ್ರತಿ 5.ದಂಡೆತ್ತು 7.ತಿದಿ 8.ತಾರಕ 9.ಪಂಕ 11.ರುಗ್ಣಾಲಯ 12.ವ್ಯಸನಿ 13.ನವೀನ

### ಸುಡೊಕು 4921

| | | | | | | | | |
|---|---|---|---|---|---|---|---|---|
| | | | 4 | | 2 | | 7 | |
| 3 | | 6 | | | | 2 | | 5 |
| | 2 | | | 5 | | | 8 | |
| 8 | | 5 | | | | | | 1 |
| | | | 5 | 9 | 3 | | 2 | |
| 7 | | 2 | | 6 | | 5 | | 4 |
| | | | | 2 | | 8 | | 7 |
| 2 | | 7 | | | | | 6 | |
| 6 | | | 7 | | 9 | 4 | | |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4920 ಸುಡೊಕು

| | | | | | | | | |
|---|---|---|---|---|---|---|---|---|
| 5 | 3 | 4 | 9 | 8 | 2 | 1 | 7 | 6 |
| 1 | 7 | 6 | 3 | 4 | 5 | 9 | 8 | 2 |
| 9 | 8 | 2 | 1 | 6 | 7 | 3 | 4 | 5 |
| 7 | 2 | 3 | 5 | 9 | 8 | 6 | 1 | 4 |
| 6 | 5 | 9 | 7 | 1 | 4 | 2 | 3 | 8 |
| 4 | 1 | 8 | 2 | 3 | 6 | 5 | 9 | 7 |
| 2 | 9 | 5 | 8 | 7 | 1 | 4 | 6 | 3 |
| 3 | 6 | 7 | 4 | 2 | 9 | 8 | 5 | 1 |
| 8 | 4 | 1 | 6 | 5 | 3 | 7 | 2 | 9 |

## ಕೋವಿಡ್: 85,765 ಮಂದಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 2,979 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 85,765 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಒಂದು ದಿನದ ಅವಧಿಯಲ್ಲಿ ಈವರೆಗೆ ನೀಡಿದ ಗರಿಷ್ಠ ಸಂಖ್ಯೆ ಇವಾಗಿವೆ.

ಇವರಲ್ಲಿ 57,885 ಮಂದಿ ಹಿರಿಯ ನಾಗರಿಕರು ಸೇರಿದ್ದಾರೆ. ಈವರೆಗೆ 12.70 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 4.78 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 2.80 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 2.75 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45 ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 50,343 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಲಸಿಕೆ ಪಡೆದ ಚಲನಚಿತ್ರ ನಟ ರಾಘವೇಂದ್ರ ರಾಜ್‌ಕುಮಾರ್, 'ಹಿರಿಯ ನಾಗರಿಗರು ಸೇರಿದಂತೆ ಅರ್ಹ ಫಲಾನುಭವಿಗಳು ಇದರ ಲಾಭ ಪಡೆದುಕೊಳ್ಳಬೇಕು' ಎಂದು ಹೇಳಿದರು.



### ಐಎಂಎ ವಂಚನೆ ಪ್ರಕರಣ: ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ₹ 5ಕೋಟಿ ಲಂಚ

# ಬಿಡಿಎ ಕುಮಾರ್ ವಿರುದ್ಧ ಆರೋಪಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐ ಮಾನಿಟರಿ ಅಡ್ವೈಸರಿ (ಐಎಂಎ) ಕಂಪನಿಯ ವಂಚನೆ ಪ್ರಕರಣವನ್ನು ಮುಚ್ಚಿಹಾಕಲು ಕಂದಾಯ ಇಲಾಖೆ ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ₹ 5 ಕೋಟಿ ಲಂಚ ಪಡೆದ ಆರೋಪದ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಹಿಂದಿನ ಕಾರ್ಯನಿರ್ವಾಹಕ ಎಂಜಿನಿಯರ್ ಪಿ.ಡಿ. ಕುಮಾರ್ ಅಲಿಯಾಸ್ ಬಿಡಿಎ ಕುಮಾರ್ ಸೇರಿ ಆರು ಜನರ ವಿರುದ್ಧ ಸಿಬಿಐ ಆರೋಪಪಟ್ಟಿ ಸಲ್ಲಿಸಿದೆ.

ಐಎಂಎ ಮುಖ್ಯ ಕಾನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಮೊಹಮ್ಮದ್ ಮನ್ಸೂರ್ ಖಾನ್, ನಿರ್ದೇಶಕರಾದ ನಿಜಾಮುದ್ದೀನ್ ಅಹಮ್ಮದ್, ವಸೀಂ, ನವೀದ್ ಅಹ್ಮದ್ ಮತ್ತು ನಝೀರ್ ಹುಸೈನ್ ಇತರ ಆರೋಪಿಗಳು. ಈ ಎಲ್ಲರ ವಿರುದ್ಧ ನಗರದ ಸಿಬಿಐ ಪ್ರಕರಣಗಳ ಪ್ರಧಾನ ಸೆಷನ್ಸ್ ನ್ಯಾಯಾಧೀಶರ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಸಿಬಿಐ ತಿಳಿಸಿದೆ.



ಪಿ.ಡಿ. ಕುಮಾರ್

'ಐಎಂಎ ತನ್ನ ಹೂಡಿಕೆದಾರರಿಗೆ ವಂಚಿಸಿರುವ ಆರೋಪಕ್ಕೆ ಸಂಬಂಧಿಸಿ ಕರ್ನಾಟಕ ಠೇವಣಿದಾರರ ಹಿತ ರಕ್ಷಣಾ (ಕೆಪಿಐಡಿ) ಕಾಯ್ದೆಯಡಿ ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ಮೂಲಕ ವಿಚಾರಣೆ ನಡೆಸಲಾಗಿತ್ತು. ಉಪ ವಿಭಾಗಾಧಿಕಾರಿ ಐಎಂಎ ಕಂಪನಿಯ ಪರವಾಗಿ ನೀಡಿದ್ದ ವರದಿಯನ್ನು ಒಪ್ಪಿಕೊಳ್ಳುವಂತೆ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ಕುಮಾರ್ ಅವರಿಗೆ 2019ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮನ್ಸೂರ್ ಅಹಮ್ಮದ್ ಖಾನ್ ನಿರ್ದೇಶನದಂತೆ ಕಂಪನಿಯಿಂದ ₹ 5 ಕೋಟಿ ನೀಡಲಾಗಿತ್ತು' ಎಂದು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

2019ರ ಏಪ್ರಿಲ್ ತಿಂಗಳಿನಲ್ಲಿ ಉಪ ವಿಭಾಗಾಧಿಕಾರಿ ವಿಚಾರಣಾ ವರದಿ ಸಲ್ಲಿಸಿದ್ದರು. ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳ ಜತೆಗಿನ ನಂಟನ್ನು ಬಳಸಿಕೊಂಡು ವರದಿಯನ್ನು ಅಂಗೀಕರಿಸುವಂತೆ ಪ್ರಭಾವ ಬೀರುವುದಾಗಿ ಹೇಳಿದ್ದ ಕುಮಾರ್, ನಾಲ್ಕು ಕಂತುಗಳಲ್ಲಿ ₹ 5 ಕೋಟಿ ಪಡೆದಿದ್ದರು. ಆದರೆ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಈ ವರದಿಯನ್ನು ಒಪ್ಪಿಕೊಂಡಿರಲಿಲ್ಲ. ಅವರು ಅದನ್ನು ಅಭಿಪ್ರಾಯ ಕೋರಿ ಕಾನೂನು ಇಲಾಖೆಗೆ ವರದಿಯನ್ನು ರವಾನಿಸಿದ್ದರು. ಬಳಿಕ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಕಳುಹಿಸಲಾಗಿತ್ತು ಎಂದು ಸಿಬಿಐ ಹೇಳಿದೆ.

'ಕೆಲಸ ಆಗದ ಕಾರಣದಿಂದ ಕಂಪನಿಯ ನಿರ್ದೇಶಕರು ಹಣ ವಾಪಸ್ ನೀಡುವಂತೆ ಒತ್ತಡ ಹೇರಿದ್ದರು. ₹ 30 ಲಕ್ಷವನ್ನು ಮರುಪಾವತಿ ಮಾಡಿದ್ದ ಕುಮಾರ್, ₹ 2 ಕೋಟಿ ಹಾಗೂ ₹ 2.5 ಕೋಟಿ ಮೌಲ್ಯದ ಎರಡು ಚೆಕ್‌ಗಳನ್ನು ಐಎಂಎ ನಿರ್ದೇಶಕರಿಗೆ ನೀಡಿದ್ದರು. ಈ ಎಲ್ಲ ದಾಖಲೆಗಳೂ ತನಿಖೆ ವೇಳೆ ಪತ್ತೆಯಾಗಿವೆ. ಕಂಪನಿಯ ನಿರ್ದೇಶಕರು ಮತ್ತು ಕುಮಾರ್ ನಡುವೆ ನಡೆದಿರುವ ವಾಟ್ಸ್ ಆ್ಯಪ್ ಚಾಟಿಂಗ್‌ನಲ್ಲೂ ಪ್ರಕರಣದ ಕಡತ ಕುರಿತು ಚರ್ಚಿಸಿರುವುದಕ್ಕೆ ಸಾಕ್ಷ್ಯಗಳು ಲಭಿಸಿವೆ' ಎಂದು ಅಧಿಕಾರಿಗಳು ನ್ಯಾಯಾಲಯಕ್ಕೆ ನೀಡಿರುವ ವರದಿಯಲ್ಲಿ ತಿಳಿಸಿದ್ದಾರೆ.

## ಶಿವಸೇನಾ–ಕರವೇ ಮುಖಂಡರ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ರಾಮಲಿಂಗಖಿಂಡ್ ಗಲ್ಲಿಯಲ್ಲಿ ಶಿವಸೇನಾ ಜಿಲ್ಲಾ ಘಟಕದ ಅಧ್ಯಕ್ಷ ಪ್ರಕಾಶ ಶಿರೋಳಕರ ಅವರ ಕಾರಿನ ಮುಂಭಾಗದಲ್ಲಿ ಅಳವಡಿಸಿದ್ದ ಮರಾಠಿ ಬೋರ್ಡ್ (ಶಿವಸೇನಾ ಜಿಲ್ಲಾ ಪ್ರಮುಖ ಎಂದು ಬರೆದಿದ್ದುದು) ಮತ್ತು ಜೊತೆಗಿದ್ದ ಕೇಸರಿ ಧ್ವಜವನ್ನು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಕಾರ್ಯಕರ್ತರು ಶುಕ್ರವಾರ ಕಿತ್ತು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಶಿವಸೇನಾ ಮತ್ತು ಕರವೇ ಮುಖಂಡರ ನಡುವೆ ವಾಗ್ವಾದ ನಡೆಯಿತು. ಮಧ್ಯಪ್ರವೇಶಿಸಿದ ಪೊಲೀಸರು, ಘರ್ಷಣೆ ಆಗುವುದನ್ನು ತಪ್ಪಿಸಿದರು.

ಕರವೇ ರಾಜ್ಯ ಸಂಚಾಲಕ ಮಹಾದೇವ ತಳವಾರ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ದೀಪಕ ಗುಡಗನಟ್ಟಿ ನೇತೃತ್ವದಲ್ಲಿ ಕಾರ್ಯಕರ್ತರು, ಎಂಇಎಸ್ ಹಾಗೂ ಶಿವಸೇನಾ ಕಚೇರಿಗಳಿಗೆ ಮುತ್ತಿಗೆ ಹಾಕಲು ಹೋಗುತ್ತಿದ್ದರು. ಆಗ, ಎದುರಿಗೆ ಬಂದ ಶಿರೋಡಕರ ಕಾರನ್ನು ತಡೆದರು. ಕಾರಿನ ಮುಂಭಾಗ ಮರಾಠಿ ಬೋರ್ಡ್ ಹಾಕಿಕೊಂಡಿದ್ದಕ್ಕೆ ತರಾಟೆಗೆ ತೆಗೆದುಕೊಂಡರು. ಕಾರಿನ ಮುಂದೆ ಕುಳಿತು ಪ್ರತಿಭಟಿಸಿದರು. ಮಾತಿನ ಚಕಮಕಿಯಲ್ಲಿ ತೊಡಗಿದ್ದ ಎರಡೂ ಸಂಘಟನೆಗಳ ಮುಖಂಡರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು. 'ಕೊಲ್ಹಾಪುರದಲ್ಲಿ ಕನ್ನಡ ಫಲಕಗಳಿಗೆ ಮಸಿ ಬಳಿದು ಶಿವಸೇನಾ ಕಾರ್ಯಕರ್ತರು ಪುಂಡಾಟ ಮಾಡಿದ್ದಾರೆ. ಹೀಗಿರುವಾಗ, ನಮ್ಮಲ್ಲೇ ಇದ್ದುಕೊಂಡು ಕಾರಿನಲ್ಲಿ ಮರಾಠಿ ಬೋರ್ಡ್ ಹಾಕಿಕೊಳ್ಳುವುದನ್ನು ಸಹಿಸಬೇಕೇ?' ಎಂದು ಕರವೇ ಮುಖಂಡರು ಪ್ರಶ್ನಿಸಿದರು.

ಘಟನೆ ಖಂಡಿಸಿ ಎಂಇಎಸ್ ಹಾಗೂ ಶಿವಸೇನಾ ಕಾರ್ಯಕರ್ತರು ಜಮಾಯಿಸಿದರು. ಇದರಿಂದ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಕನ್ನಡ ಹೋರಾಟಗಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

## ಸಿರಿಧಾನ್ಯಕ್ಕೆ ಜಾಗತಿಕ ಮನ್ನಣೆ!

ಒಂದನೇ ಪುಟದಿಂದ

ಇಲ್ಲಿನ ಸಿರಿಧಾನ್ಯಗಳನ್ನು ಪರಿಚಯಿಸಲು ವಿಶ್ವದ ಹಲವು ದೇಶಗಳ ವಿಜ್ಞಾನಿಗಳನ್ನು, ವಿದೇಶಿ ಕಂಪನಿಗಳ ಪ್ರತಿನಿಧಿಗಳನ್ನೂ ಆಹ್ವಾನಿಸಲಾಗಿತ್ತು. ಅಲ್ಲದೆ, ಸಿರಿಧಾನ್ಯಗಳನ್ನು ಪರಿಚಯಿಸುವ ಉದ್ದೇಶದಿಂದ ಮುಂಬೈ, ದೆಹಲಿ, ಕೋಲ್ಕತ್ತ, ಚೆನ್ನೈ, ಹೈದರಾಬಾದ್ ನಗರಗಳಲ್ಲಿಯೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಆಂದೋಲನದ ಸ್ವರೂಪ ನೀಡಲಾಗಿತ್ತು.

**ಸೀಮೋಲ್ಲಂಘನ:** ಅಮೆರಿಕ, ಜರ್ಮನಿ, ಇಟಲಿ ಮತ್ತು ಕೊಲ್ಲಿ ರಾಷ್ಟ್ರಗಳ ಜನರಿಗೆ ಈ ಸಿರಿಧಾನ್ಯಗಳಿಂದ ತಯಾರಿಸಬಹುದಾದ ಖಾದ್ಯಗಳು ಹಾಗೂ ಅದರಲ್ಲಿರುವ ಪೌಷ್ಟಿಕತೆಯನ್ನು ಪರಿಚಯಿಸಲಾಯಿತು. ಆ ರಾಷ್ಟ್ರಗಳಲ್ಲಿ ಜನರ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಪರ್ಯಾಯ ಪೌಷ್ಟಿಕ ಆಹಾರ ಧಾನ್ಯಗಳತ್ತ ಗಮನ ಹರಿಸುತ್ತಿದ್ದಾರೆ. ಅದರ ಲಾಭ ಪಡೆಯುವ ಮೂಲಕ ರಾಜ್ಯದ ಸಿರಿಧಾನ್ಯಗಳಿಗೆ ಮಾರುಕಟ್ಟೆ ಒದಗಿಸುವುದು ಪ್ರಮುಖ ಉದ್ದೇಶವಾಗಿತ್ತು.

'ಕರ್ನಾಟಕದ ಶ್ರಮಕ್ಕೆ ಪ್ರತಿಫಲ ಸಿಕ್ಕಿದೆ. ರಾಜ್ಯದ ಸಿರಿಧಾನ್ಯಗಳಿಗೆ ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ಕಂಡುಕೊಳ್ಳಲು 2023 ರೊಳಗೆ ಒಂದು ರೂಪುರೇಷೆ ತಯಾರಿಸುವಲ್ಲಿ ನಾವೇ ಮುಂಚೂಣಿಯಲ್ಲಿ ನಿಲ್ಲಬೇಕು. ಕೈಚೆಲ್ಲಿದರೆ ಮತ್ತೆ ಅವಕಾಶ ಸಿಗದು. 'ಯೋಗ'ವನ್ನು ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸಿದ ಮಾದರಿಯಲ್ಲೇ ಸಿರಿಧಾನ್ಯವನ್ನೂ ಜನಪ್ರಿಯಗೊಳಿಸಬೇಕು' ಎನ್ನುತ್ತಾರೆ ತಜ್ಞರು.

### ಕರ್ನಾಟಕಕ್ಕೆ ಹೆಚ್ಚು ಲಾಭ

ಸಿರಿಧಾನ್ಯ ಬೆಳೆಯುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷಾಚರಣೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಭಾರತ ಸರ್ಕಾರ ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಕೇಂದ್ರಕ್ಕೆ ಸಲಹೆಗಳನ್ನು ನೀಡಬೇಕು. ಇದು ಕರ್ನಾಟಕದ ಸಿರಿಧಾನ್ಯ ಆಂದೋಲನಕ್ಕೆ ಸಂದ ಗೌರವ. ಮುಖ್ಯವಾಗಿ, ಸಿರಿಧಾನ್ಯವನ್ನು ವಿದೇಶಿ ಮಾರುಕಟ್ಟೆಯಲ್ಲಿ ಉತ್ತೇಜಿಸುವ ಕಾರ್ಯಕ್ಕೆ ಚಾಲನೆ ನೀಡಿದರೆ, ಇಲ್ಲಿನ ಸಿರಿಧಾನ್ಯಗಳಿಗೆ ವಿದೇಶಗಳಲ್ಲಿ ಬೇಡಿಕೆ ಸೃಷ್ಟಿಯಾಗುತ್ತದೆ ಎನ್ನುತ್ತಾರೆ ಶಾಸಕ ಕೃಷ್ಣ ಬೈರೇಗೌಡ.

190 ರಾಷ್ಟ್ರಗಳ ಪೈಕಿ ಪ್ರಮುಖ 30 ರಿಂದ 40 ರಾಷ್ಟ್ರಗಳಲ್ಲಿ ಸಿರಿಧಾನ್ಯಗಳ ಮೌಲ್ಯದ ಬಗ್ಗೆ ಅರಿವು ಮೂಡಿಸಲು ವಿಚಾರ ಸಂಕಿರಣಗಳು, ಆಹಾರ ಮೇಳಗಳು, ಪೌಷ್ಟಿಕತೆಯ ಕಾರ್ಯಾಗಾರಗಳನ್ನು ವಿಶ್ವಸಂಸ್ಥೆ ನಡೆಸಬೇಕು. ಇದಕ್ಕಾಗಿ ಕೇಂದ್ರ ಸರ್ಕಾರ ವಿಶ್ವ ಸಂಸ್ಥೆಯ ಮೇಲೆ ಒತ್ತಡ ಹೇರಬೇಕು. ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಕಾರ್ಯಪ್ರವೃತ್ತವಾಗಲು ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪ ಒತ್ತಡ ಹಾಕಬೇಕು ಎಂದು ಹೇಳಿದರು.

**ಸಿರಿಧಾನ್ಯ ಯಾವವು:** ನವಣೆ, ಸಾಮೆ, ಅರ್ಕ, ಬರಗು, ಊದಲು, ಕೊರ್ಲು



### ಸಿ.ಡಿ. ಪ್ರಕರಣ; ಎಸ್‌ಐಟಿ ತಂಡ ರಚನೆ

## ವರದಿಗಾರರು, ಶಿಕ್ಷಕಿ ಸೇರಿ ಐವರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದ ವಿಚಾರಣೆಗಾಗಿ ಬೆಂಗಳೂರು ಹೆಚ್ಚುವರಿ ಪೊಲೀಸ್ ಕಮಿಷನರ್ ಸೌಮೆಂದು ಮುಖರ್ಜಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆಯಾಗಿದ್ದು, ಶುಕ್ರವಾರದಿಂದಲೇ ವಿಚಾರಣೆ ಆರಂಭವಾಗಿದೆ.

ಮೊದಲ ದಿನವೇ ಸುದ್ದಿವಾಹಿನಿಗಳ ನಾಲ್ವರು ವರದಿಗಾರರು ಹಾಗೂ ರಾಮನಗರದ ಶಿಕ್ಷಕಿಯೊಬ್ಬರನ್ನು ವಿಚಾರಣೆಗೆ ಒಳಪಡಿಸಿದ ಎಸ್‌ಐಟಿ ತಂಡ, ಅವರಿಂದ ಮಾಹಿತಿ ಸಂಗ್ರಹಿಸಿತು. ಇನ್ನು ಮೂವರು ವರದಿಗಾರರು ನಾಪತ್ತೆಯಾಗಿದ್ದು, ಅವರಿಗಾಗಿ ಹುಡುಕಾಟವೂ ನಡೆಯುತ್ತಿದೆ.

ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ದೂರು ನೀಡುವುದಕ್ಕೂ ಮುನ್ನವೇ, ರಾಜ್ಯ ಮಟ್ಟದ ಮೂರು ಸುದ್ದಿ ವಾಹಿನಿಗಳ ನಾಲ್ವರು ವರದಿಗಾರರ ಬಳಿ ಸಿ.ಡಿ ಇತ್ತು ಎಂಬ ಮಾಹಿತಿ ಎಸ್‌ಐಟಿಗೆ ಸಿಕ್ಕಿದೆ.

ರಾಜ್ಯದಲ್ಲಿ ಸಿ.ಡಿ. ಪ್ರಕರಣ ಸದ್ದು ಮಾಡುತ್ತಿದ್ದಂತೆ ಇಬ್ಬರು ವರದಿಗಾರರು, ಬೆಂಗಳೂರು ತೊರೆದು ಸ್ವಂತ ಊರಿಗೆ ಹೋಗಿದ್ದರು. ಮನೆಗೆ ಹೋಗಿದ್ದ ಎಸ್‌ಐಟಿ ಅಧಿಕಾರಿಗಳು, ವರದಿಗಾರರನ್ನು ಬೆಂಗಳೂರು ಕರೆತಂದು ಮಾಹಿತಿ ಕಲೆಹಾಕುತ್ತಿದ್ದಾರೆ. ವರದಿಗಾರರೊಬ್ಬರ ಸ್ನೇಹಿತೆ ಎನ್ನಲಾದ ರಾಮನಗರದ ಶಿಕ್ಷಕಿಯೊಬ್ಬರನ್ನೂ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ.

'ಪ್ರಾಥಮಿಕ ಮಾಹಿತಿ ಆಧರಿಸಿ ತನಿಖೆ ಆರಂಭಿಸಲಾಗಿದೆ. ದಿನೇಶ್ ಕಲ್ಲಹಳ್ಳಿಗೆ ಸಿ.ಡಿ ಕೊಟ್ಟಿದ್ದು ವರದಿಗಾರರೆಂಬ ಮಾಹಿತಿ ಇದೆ. ಹೀಗಾಗಿ, ಅನುಮಾನ ಬಂದವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಅವರ ಹೇಳಿಕೆ ಪಡೆದು ತನಿಖೆ ಮುಂದುವರಿಸಲಾಗುವುದು. ಪ್ರಕರಣದ ಬಗ್ಗೆ ಎಫ್‌ಐಆರ್ ದಾಖಲಾಗಿಲ್ಲ. ಹೀಗಾಗಿ, ವಶಕ್ಕೆ ಪಡೆಯುವ ಹಾಗೂ ಬಂಧಿಸುವ ಅಧಿಕಾರವಿಲ್ಲ. ವಿಚಾರಣೆಯನ್ನಷ್ಟೇ ನಡೆಸಲಾಗುತ್ತಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

**ಎಸ್‌ಐಟಿ ತಂಡದಲ್ಲಿರುವ ಅಧಿಕಾರಿಗಳು:** ಸಿಸಿಬಿಯ ಜಂಟಿ ಕಮಿಷನರ್ ಸಂದೀಪ್ ಪಾಟೀಲ, ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್, ಸಿಸಿಬಿಯ ಡಿಸಿಪಿ ಕೆ.ಪಿ. ರವಿಕುಮಾರ್, ಸಿಸಿಬಿಯ ಎಸಿಪಿ ಎಚ್.ಎನ್. ಧರ್ಮೇಂದ್ರ, ಇನ್‌ಸ್ಪೆಕ್ಟರ್‌ಗಳಾದ ಡಿ.ಎಂ. ಪ್ರಶಾಂತ್ ಬಾಬು ಹಾಗೂ ಬಿ. ಮಾರುತಿ.

### 'ವಿಚಾರಣೆ ನಡೆಸಿ, ವರದಿ ಸಲ್ಲಿಕೆ'

'ರಾಜ್ಯ ಸರ್ಕಾರದ ಆದೇಶದಂತೆ ಎಸ್‌ಐಟಿ ರಚಿಸಲಾಗಿದೆ. ವಿಚಾರಣೆಯನ್ನು ಬೇಗ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಎಸ್‌ಐಟಿ ಅಧಿಕಾರಿಗಳು, ಪ್ರಾಥಮಿಕ ಮಾಹಿತಿ ಕಲೆ ಹಾಕುತ್ತಿದ್ದಾರೆ. ಯಾರನ್ನಾದರೂ ವಿಚಾರಣೆ ನಡೆಸಬೇಕಾದ ಅಗತ್ಯವಿದ್ದರೆ, ಎಸ್‌ಐಟಿ ತಂಡದವರೇ ನೋಟಿಸ್ ನೀಡಲಿದ್ದಾರೆ' ಎಂದೂ ತಿಳಿಸಿದರು.

### ಆಲ್ದೂರಿನ ವ್ಯಕ್ತಿ ಕರೆದೊಯ್ದ ಎಸ್‌ಐಟಿ ತಂಡ

ಚಿಕ್ಕಮಗಳೂರು: ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದ ಬಗ್ಗೆ ಮಾಹಿತಿ ಕಲೆ ಹಾಕುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ತಾಲ್ಲೂಕಿನ ಆಲ್ದೂರಿನ 36 ವರ್ಷದ ವ್ಯಕ್ತಿಯೊಬ್ಬರನ್ನು ವಿಚಾರಣೆಗೆ ಕರೆದೊಯ್ದಿದೆ.

ಶುಕ್ರವಾರ ಬೆಳಿಗ್ಗೆ ಆಲ್ದೂರಿಗೆ ಬಂದಿದ್ದ ತಂಡದವರು ವ್ಯಕ್ತಿಯನ್ನು ಬೆಂಗಳೂರಿಗೆ ಕರೆದೊಯ್ದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ವ್ಯಕ್ತಿ ವಿವಿಧ ಖಾಸಗಿ ವಾಹಿನಿಗಳಲ್ಲಿ ಕಾರ್ಯನಿರ್ವಹಿಸಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

## ಮೊಯಿಲಿ, ಬ್ಯಾಕೋಡ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ಮುಖ್ಯಮಂತ್ರಿ, ಸಾಹಿತಿ ಎಂ.ವೀರಪ್ಪ ಮೊಯಿಲಿ ಅವರ 'ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ' ಮಹಾಕಾವ್ಯವು ಕೇಂದ್ರ ಸಾಹಿತ್ಯ ಅಕಾಡೆಮಿಯ 2020ನೇ ಸಾಲಿನ ಕನ್ನಡ ವಿಭಾಗದ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದೆ.

ಅಕಾಡೆಮಿಯ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಒಟ್ಟು 20 ವಿಭಾಗಗಳ ಕೃತಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬಾಲ ಸಾಹಿತ್ಯ ಪುರಸ್ಕಾರಕ್ಕೆ ಎಚ್.ಎಸ್. ಬ್ಯಾಕೋಡ ಅವರ 'ನಾನೂ ಅಂಬೇಡ್ಕರ್' ಕಾದಂಬರಿ ಆಯ್ಕೆಯಾಗಿದ್ದು, ಕೆ.ಎಸ್. ಮಹದೇವಸ್ವಾಮಿ ಅವರ 'ಧೂಪದ ಮಕ್ಕಳು' ಸಣ್ಣಕಥೆಗಳ ಸಂಕಲನವು ಯುವ ಪುರಸ್ಕಾರಕ್ಕೆ ಪಾತ್ರವಾಗಿದೆ.

ವಾರ್ಷಿಕ ಪ್ರಶಸ್ತಿಯು ₹ 1 ಲಕ್ಷ ನಗದು ಮತ್ತು ಸ್ಮರಣಿಕೆ ಒಳಗೊಂಡಿದ್ದು, ಬಾಲ ಸಾಹಿತ್ಯ ಮತ್ತು ಯುವ ಪುರಸ್ಕಾರಗಳು ತಲಾ ₹ 50,000 ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ.


ನವದೆಹಲಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ಅಕಾಡೆಮಿ ಕಾರ್ಯದರ್ಶಿ ಕೆ.ಶ್ರೀನಿವಾಸರಾವ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಡಾ.ಎಸ್.ಜಿ. ಸಿದ್ದರಾಮಯ್ಯ, ಡಾ.ಪದ್ಮಾ ಪ್ರಸಾದ್ ಹಾಗೂ ಅರವಿಂದ ಮಾಲಗತ್ತಿ; ಬೇಲೂರು ರಘುನಂದನ್, ಸಿದ್ಧಲಿಂಗ ಪಟ್ಟಣಶೆಟ್ಟಿ ಹಾಗೂ ಟಿ.ಪಿ. ಅಶೋಕ್ ಮತ್ತು ಎಚ್.ಎಲ್. ಪುಷ್ಪಾ, ಕುಂ.ವೀರಭದ್ರಪ್ಪ ಹಾಗೂ ಎಚ್.ಎಸ್. ವೆಂಕಟೇಶಮೂರ್ತಿ ಅವರಿದ್ದ ಆಯ್ಕೆ ಸಮಿತಿಗಳು ಕನ್ನಡ ವಿಭಾಗದ ಕೃತಿಗಳನ್ನು ಪ್ರಶಸ್ತಿಗಾಗಿ ಶಿಫಾರಸು ಮಾಡಿದ್ದವು.

ಕೊಂಕಣಿ ವಿಭಾಗದಲ್ಲಿ ಆರ್.ಎಸ್. ಭಾಸ್ಕರ್ (ಯುಗ ಪರಿವರ್ತನಾಂಚೋ ಯಾತ್ರಿ- ಕಾವ್ಯ), ವಿ.ಕೃಷ್ಣ ವಡ್ಯಾರ್ (ಬಾಲು- ಕಾದಂಬರಿ), ಸಂಪದ ಶೆಣ್ವಿ ಕುಂಕೋಳಿಕರ್ (ಚಾರ್ ಪನ್ವಾಲ ಆಶಿಯಂತ್- ಪ್ರವಾಸ ಕಥನ) ಅವರ ಕೃತಿಗಳು ಪ್ರಶಸ್ತಿಗೆ ಆಯ್ಕೆಯಾಗಿವೆ.

ಅಂಕಿತ್ ನರವಾಲ್ ಅವರ 'ಯು.ಆರ್. ಅನಂತಮೂರ್ತಿ ಪ್ರತಿರೋಧಕಾ ವಿಕಲ್ಪ' ವಿಮರ್ಶಾ ಕೃತಿಗೆ ಹಿಂದಿ ವಿಭಾಗದ ಯುವ ಪುರಸ್ಕಾರ ದೊರೆತಿದೆ.

### 'ಆತ್ಮ ಸಂತೃಪ್ತಿಗೆ ಬರವಣಿಗೆ'



ಕೇಂದ್ರ ಸಾಹಿತ್ಯ ಅಕಾಡೆಮಿಯು ನಾನು ರಚಿಸಿದ 'ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯ' ಮಹಾಕಾವ್ಯ ಗುರುತಿಸಿರುವುದು ಸಂತೋಷವನ್ನುಂಟು ಮಾಡಿದೆ. ಇನ್ನಷ್ಟು ಬರೆಯಲು ಪ್ರೋತ್ಸಾಹ ಸಿಕ್ಕಂತಾಗಿದೆ. ಆದರೆ, ಯಾವುದೇ ಪ್ರಶಸ್ತಿ–ಪುರಸ್ಕಾರಕ್ಕಾಗಿ ನಾನು ಬರೆಯುವುದಿಲ್ಲ. ಸಾಹಿತ್ಯ ಸೃಷ್ಟಿ ನನಗೆ ಆತ್ಮ ಸಂತೃಪ್ತಿ ನೀಡುತ್ತದೆ ಎಂದು ಸಾಹಿತಿ ಎಂ. ವೀರಪ್ಪ ಮೊಯಿಲಿ ಪ್ರತಿಕ್ರಿಯಿಸಿದರು.

ಶಿವಮೊಗ್ಗ ಮೂಲದ ಹಫೀಜ್ ಕರ್ನಾಟಕಿ ಅವರು ರಚಿಸಿರುವ 'ಫಕ್ರ್-ಎ-ವತನ್' ಕೃತಿಗೂ ಉರ್ದು ವಿಭಾಗದ ಬಾಲ ಸಾಹಿತ್ಯ ಪುರಸ್ಕಾರ ದೊರೆತಿದೆ.

### ಕೊಡಗು: ದಾಳಿ ನಡೆಸಿದ್ದು ಗಂಡು ಹುಲಿ

ಮಡಿಕೇರಿ: ಕೊಡಗು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಜನರ ಮೇಲೆ ದಾಳಿ ನಡೆಸಿ, ಅಪಾಯಕಾರಿ ಎನಿಸಿರುವುದು ಅಂದಾಜು 10 ವರ್ಷದ ಗಂಡು ಹುಲಿ ಎಂಬುದು ಖಚಿತವಾಗಿದೆ.

ಈ ಹುಲಿಯ ದಾಳಿಯಿಂದ ಇಬ್ಬರು ಬಾಲಕರು, ವೃದ್ಧೆಯೊಬ್ಬರು ಮೃತಪಟ್ಟಿದ್ದಾರೆ. ಇವರ ಮೇಲೆ ಬಿದ್ದಿದ್ದ ರಕ್ತದ ಮಾದರಿ, ಹುಲಿಯ ಕೂದಲನ್ನು ಹೈದರಾಬಾದ್‌ನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿತ್ತು. ಪರೀಕ್ಷಾ ವರದಿಯಿಂದ, ಅದು ಗಂಡು ಹುಲಿ ಎಂಬುದು ಗೊತ್ತಾಗಿದೆ. 'ದಾಳಿ ನಡೆಸಿದ್ದ ಸ್ಥಳದ ಸುತ್ತಮುತ್ತ ಕ್ಯಾಮೆರಾ ಹಾಗೂ ಬೋನು ಅಳವಡಿಸಲಾಗಿದೆ. ಗಂಡು ಹುಲಿ ಸಂಚರಿಸುತ್ತಿರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಫೆ.21 ರಂದು ಶ್ರೀಮಂಗಲ ಸಮೀಪದ ಮಂಚಳ್ಳಿಯಲ್ಲಿ ಸೆರೆ ಸಿಕ್ಕಿದ್ದು ಮಾತ್ರ ಹೆಣ್ಣು ಹುಲಿ' ಎಂದು ಡಿಸಿಎಫ್ ಪ್ರಭಾಕರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಶ್ರೀಮಂಗಲ, ಮಂಚಳ್ಳಿ, ತೆರಾಲು, ಪೊನ್ನಂಪೇಟೆ ಆಸುಪಾಸಿನಲ್ಲಿ ಸೆರೆ ಹಿಡಿಯುವ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ. ಗದ್ದೆಗಳಲ್ಲಿ ಹೆಜ್ಜೆ ಗುರುತು ಪತ್ತೆಯಾಗಿದೆ. ಶಾರ್ಪ್ ಶೂಟರ್ ಸನತ್ ಹಾಗೂ ವೈದ್ಯ ಮುಜೀಬ್ ಸಹ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.





### ಉಪಗ್ರಹ ನಿರ್ಮಾಣ, ಕಾರ್ಯಾಚರಣೆ, ನಿರ್ವಹಣಾ ಚಟುವಟಿಕೆಗಳಿಗಾಗಿ ಬಳಕೆ

# ಸ್ಪೇಸ್ ಇಂಡಿಯಾ ₹10 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ



ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಿ. ರಾಧಾಕೃಷ್ಣ ಹಾಗೂ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜಿ. ನಾರಾಯಣ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು

**ಬೆಂಗಳೂರು:** ಇಸ್ರೊದ ವಾಣಿಜ್ಯ ಅಂಗ ಸಂಸ್ಥೆಯಾದ 'ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್' (ಎನ್‌ಎಸ್‌ಐಎಲ್) ದೇಶೀಯ ಮತ್ತು ಜಾಗತಿಕ ಮಟ್ಟದಲ್ಲಿ ಬಾಹ್ಯಾಕಾಶ ಸಂಬಂಧಿತ ಉಡಾವಣೆ, ಕಾರ್ಯಾಚರಣೆ, ನಿರ್ವಹಣೆ ಮತ್ತು ಸೇವಾ ಚಟುವಟಿಕೆಗಳಿಗಾಗಿ ಮುಂದಿನ ಐದು ವರ್ಷಗಳಲ್ಲಿ ₹10,000 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ.

ಮುಂದಿನ ವರ್ಷದಿಂದ ಐದು ವರ್ಷಗಳವರೆಗೆ ತಲಾ ₹2,000 ಕೋಟಿ ಹೂಡಿಕೆ ಮಾಡಲಾಗುವುದು. ಇದಕ್ಕಾಗಿ ಷೇರು ಮಾರುಕಟ್ಟೆಯ ಮೂಲಕ ಹಣ ಸಂಗ್ರಹಿಸುವ ಉದ್ದೇಶವಿದೆ ಎಂದು ಎನ್‌ಎಸ್‌ಐಎಲ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜಿ.ನಾರಾಯಣನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಅಂತರ ರಾಷ್ಟ್ರೀಯ ಉಪಗ್ರಹಗಳ ಉಡಾವಣೆಗೆ ಬೇಡಿಕೆ ಹೆಚ್ಚುತ್ತಿದ್ದು, ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ತೂಕದ(1000 ಕೆ.ಜಿ ಒಳಗಿನದು) ಉಪಗ್ರಹಗಳ ಉಡಾವಣೆಗೆ ಭಾರತವೇ ನೆಚ್ಚಿನ ತಾಣವಾಗಿದೆ. ಇತರ ದೇಶಗಳ ಬಾಹ್ಯಾಕಾಶ ಸಂಸ್ಥೆಗಳಿಗೆ ಹೋಲಿಸಿದರೆ ವೆಚ್ಚ ಅತಿ ಕಡಿಮೆ ಗುಣಮಟ್ಟ ಅತ್ಯುತ್ತಮವಾದುದು' ಎಂದು ಹೇಳಿದರು.

**2 ವರ್ಷಗಳಲ್ಲಿ 4 ಅಂತರ ರಾಷ್ಟ್ರೀಯ ಉಡಾವಣೆ:** ಮುಂಬರುವ ಎರಡು ವರ್ಷಗಳಲ್ಲಿ ಎನ್‌ಎಸ್‌ಐಎಲ್ ನಾಲ್ಕು ಮಹತ್ವದ ಪಿಎಸ್‌ಎಲ್‌ವಿ ಉಡಾವಣಾ ಸೇವೆಯ ಜವಾಬ್ದಾರಿ ಹೊತ್ತಿದೆ. 2022ರಲ್ಲಿ ಎರಡು ನಿರ್ದಿಷ್ಟ ಉದ್ದೇಶದ ಉಪಗ್ರಹಗಳ ಉಡಾವಣೆ ನಡೆಯಲಿದ್ದು, ಅವು ಯಾವ ದೇಶದ ಉಪಗ್ರಹಗಳು ಎಂಬುದನ್ನು ಬಹಿರಂಗಗೊಳಿಸಲು ನಾರಾಯಣನ್ ಒಪ್ಪಲಿಲ್ಲ.

ಹೊಸ ಬಾಹ್ಯಾಕಾಶ ನೀತಿಯು ದೇಶದ ಬಾಹ್ಯಾಕಾಶ ವಿಜ್ಞಾನವನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಲಿದೆ. ಈ ಕ್ಷೇತ್ರದಲ್ಲಿ ಸ್ವಾವಲಂಬಿಗಳಾಗುವುದರ ಜತೆಗೆ ವಿಶ್ವದಲ್ಲಿ ಬಾಹ್ಯಾಕಾಶ ಸೇವೆಯ ಪ್ರಮುಖ ದೇಶವಾಗಿ ಹೊರ ಹೊಮ್ಮಲಿದೆ. ಮುಖ್ಯವಾಗಿ, ಉಡಾವಣೆಯ ಸೇವೆಯ ಜತೆಗೆ ಬೇಡಿಕೆ ಆಧರಿಸಿ ಬಾಹ್ಯಾಕಾಶ ಸೇವೆಗಳನ್ನು ಒದಗಿಸಲಿದ್ದೇವೆ. ಸದ್ಯಕ್ಕೆ ಪೂರೈಕೆ ಆಧಾರಿತ ಸೇವೆ ನೀಡಲಾಗುತ್ತಿದೆ. ಹೊಸ ನೀತಿಗೆ ಅನುಗುಣವಾಗಿ ಪರಿವರ್ತನೆ ತರಲು ಹಲವು ಬಳಕೆದಾರರ ಜತೆ ಸಮಾಲೋಚನೆ ನಡೆಸುತ್ತಿದ್ದೇವೆ. ಮುಂಬರುವ ದಿನಗಳಲ್ಲಿ ಎನ್‌ಎಸ್‌ಐಎಲ್ ಮೂಲಕವೇ ಉಪಗ್ರಹಗಳ ನಿರ್ಮಾಣ ಮತ್ತು ಉಡಾವಣೆಗೆ ಸಂಬಂಧಿಸಿದಂತೆ ಬಳಕೆದಾರರ ಜತೆ ಒಪ್ಪಂದವನ್ನೂ ಮಾಡಿಕೊಳ್ಳಲಾಗುವುದು. ಆರಂಭದಲ್ಲಿ ದೂರಸಂಪರ್ಕ ವಲಯದ ಗ್ರಾಹಕರಿಗೆ ಸೇವೆ ಒದಗಿಸಲಾಗುವುದು ಎಂದು ವಿವರಿಸಿದರು.

ಹೊಸ ಬಾಹ್ಯಾಕಾಶ ಸುಧಾರಣಾ ನೀತಿಯ ಭಾಗವಾಗಿ ಇತರ ದೇಶಗಳು ಉಪಗ್ರಹ ನಿರ್ಮಾಣದ ಬೇಡಿಕೆಯನ್ನು ಮುಂದಿಟ್ಟರೆ, ಉಪಗ್ರಹಗಳನ್ನೂ ನಿರ್ಮಿಸಿಕೊಡಲಿದ್ದೇವೆ. ಹೆಚ್ಚಿನ ದೇಶಗಳಿಂದ ಉಪಗ್ರಹ ನಿರ್ಮಾಣಕ್ಕಾಗಿ ಹೆಚ್ಚಿನ ಬೇಡಿಕೆ ಸಿಗಲಿದೆ ಎಂಬ ವಿಶ್ವಾಸವಿದೆ. ಆದರೆ, ಅದಕ್ಕೂ ಮೊದಲು ದೇಶೀ ಮಾರುಕಟ್ಟೆಯಲ್ಲಿ ಪೂರೈಕೆ ಆಧಾರಿತ ಸೇವೆಯನ್ನು ಕೈಬಿಟ್ಟು ಬೇಡಿಕೆ ಆಧಾರಿತ ಸೇವೆಗೆ ಹೊರಳಲು ಎನ್‌ಎಸ್‌ಐಎಲ್ ತನ್ನ ಗಮನ ಕೇಂದ್ರೀಕರಿಸಲಿದೆ ಎಂದು ನಾರಾಯಣನ್ ತಿಳಿಸಿದರು.

## ಶೇ 30 ರಷ್ಟು ಬೆಳವಣಿಗೆ

'ಎನ್‌ಎಸ್‌ಐಎಲ್ ಮೊದಲ ವರ್ಷ ₹300 ಕೋಟಿ ಆದಾಯ ಗಳಿಸಿತ್ತು. 2020–21 ನೇ ಸಾಲಿನಲ್ಲಿ ₹400 ಕೋಟಿ ಆದಾಯ ಗಳಿಸಿದೆ. ಶೇ 30 ರಷ್ಟು ಬೆಳವಣಿಗೆ ಇದೆ. ಮುಂದಿನ ದಿನಗಳಲ್ಲಿ ಇಸ್ರೊ ಉಪಗ್ರಹಗಳ ಸೇವೆಯನ್ನು ನಾವೇ ನಿರ್ವಹಿಸುವುದಕ್ಕೆ ಅಗತ್ಯ ತಯಾರಿ ನಡೆಸಿದ್ದೇವೆ. ಈ ಸಂಬಂಧ ಇಸ್ರೊ ಜತೆ ಮಾತುಕತೆಗಳು ನಡೆದಿವೆ' ಎಂದು ನಾರಾಯಣನ್ ತಿಳಿಸಿದರು.

ಇಲ್ಲಿಯವರೆಗೆ 342 ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡಿದ್ದು, ಇದರಲ್ಲಿ ಶೇ 75 ರಿಂದ ಶೇ 80 ರಷ್ಟು ಉಪಗ್ರಹಗಳು ಅಮೆರಿಕದ್ದು ಎಂದು ಹೇಳಿದರು.

## ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿ ನೇಮಕ

**ನವದೆಹಲಿ(ಪಿಟಿಐ):** ಕರ್ನಾಟಕ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಮೊಹಮ್ಮದ್ ಗೌಸ್ ಶುಕೂರೆ ಕಮಾಲ್ ಅವರನ್ನು ಶುಕ್ರವಾರ ನೇಮಕ ಮಾಡಲಾಗಿದೆ ಎಂದು ಕಾನೂನು ಸಚಿವಾಲಯ ತಿಳಿಸಿದೆ. ಇವರು ಕಳೆದ 23 ವರ್ಷಗಳಿಂದ ಕರ್ನಾಟಕ ಹೈಕೋರ್ಟ್ ಮತ್ತು ಅಧೀನ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

### ಸಂಕ್ಷಿಪ್ತ ಸುದ್ದಿ

## ಆಗಸ್ಟ್ 1ಕ್ಕೆ ನೀಟ್ ಪರೀಕ್ಷೆ

**ನವದೆಹಲಿ (ಪಿಟಿಐ):** ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯು (ನೀಟ್) ಆಗಸ್ಟ್ 1ರಂದು ನಡೆಯಲಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಶುಕ್ರವಾರ ಘೋಷಿಸಿದೆ.


ಎಂಬಿಬಿಎಸ್, ಬಿಡಿಎಸ್, ಬಿಎಎಂಎಸ್, ಬಿಎಸ್‌ಎಂಎಸ್, ಬಿಯುಎಂಎಸ್ ಮತ್ತು ಬಿಎಚ್‌ಎಂಎಸ್ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಯಲಿರುವ ನೀಟ್ (ಯುಜಿ) 2021 ಪರೀಕ್ಷೆಯನ್ನು ಮಾರ್ಗಸೂಚಿಗಳು ಮತ್ತು ನಿಬಂಧನೆಗಳ ಪ್ರಕಾರ ನಡೆಸಲಾಗುತ್ತದೆ ಎಂದು ಎನ್‌ಟಿಎ ಹೇಳಿದೆ.

ಈ ಪರೀಕ್ಷೆಯು ಹಿಂದಿ, ಇಂಗ್ಲಿಷ್ ಸೇರಿದಂತೆ 11 ಭಾಷೆಗಳಲ್ಲಿ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೀಟ್ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾದಾಗ ಪರೀಕ್ಷೆ, ಸಿಲೆಬಸ್, ವಯಸ್ಸಿನ ಅರ್ಹತೆ, ಮೀಸಲಾತಿ, ಲಭ್ಯವಿರುವ ಸೀಟುಗಳ ವಿಭಾಗ, ಶುಲ್ಕ, ಪರೀಕ್ಷೆ ನಡೆಯುವ ನಗರಗಳು ಸೇರಿದಂತೆ ಎಲ್ಲಾ ವಿವರವಾದ ಮಾಹಿತಿಯನ್ನು ಪ್ರಕಟಿಸಲಾಗುವುದು ಎಂದು ಹೇಳಿದ್ದಾರೆ.

## 'ಎಂಜಿನಿಯರಿಂಗ್: ಭೌತ, ರಸಾಯನ ವಿಜ್ಞಾನ, ಗಣಿತ ಪ್ರಮುಖ ವಿಷಯ'

**ನವದೆಹಲಿ (ಪಿಟಿಐ):** 'ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಗಣಿತ ಪ್ರಮುಖ ವಿಷಯಗಳಾಗಿ ಮುಂದುವರಿಯುತ್ತವೆ' ಎಂದು ಎಐಸಿಟಿಇ ತಿಳಿಸಿದೆ.


ಅನಿಲ್ ಸಹಸ್ರಬುದ್ಧೆ

ಆದರೆ, 12ನೇ ತರಗತಿಯಲ್ಲಿ ಈ ವಿಷಯಗಳನ್ನು ಅಧ್ಯಯನ ಮಾಡದ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಕೋರ್ಸ್‌ನಲ್ಲಿ ಈ ವಿಷಯಗಳನ್ನು ತೆಗೆದುಕೊಳ್ಳುವುದು ಕಡ್ಡಾಯವೇನಲ್ಲ ಎಂದು ಎಐಸಿಟಿಇ ಶುಕ್ರವಾರ ಹೇಳಿದೆ.

ದ್ವಿತೀಯ ಪಿಯುಸಿಯಲ್ಲಿ ಭೌತವಿಜ್ಞಾನ, ರಸಾಯನ ವಿಜ್ಞಾನ ಹಾಗೂ ಗಣಿತ ವಿಷಯ ಓದದ ವಿದ್ಯಾರ್ಥಿಗಳು ಎಂಜಿನಿಯರಿಂಗ್‌ನಲ್ಲಿ ಜೈವಿಕ ವಿಜ್ಞಾನ, ಜವಳಿ ಮತ್ತು ಕೃಷಿ ಎಂಜಿನಿಯರಿಂಗ್ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಎಐಸಿಟಿಇ ಮುಖ್ಯಸ್ಥ ಅನಿಲ್ ಸಹಸ್ರಬುದ್ಧೆ ಹೇಳಿದರು.

### ಅಪರಾಧ ಸುದ್ದಿ

## ಗುಂಡು ಹಾರಿಸಿಕೊಂಡು ಗನ್‌ಮ್ಯಾನ್ ಆತ್ಮಹತ್ಯೆ

**ಬೆಂಗಳೂರು:** ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಕಮಲಾಕರ್ ಮಡಿವಾಳ (29) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವೇಶ್ವರನಗರ 4ನೇ ಹಂತದ ನಿವಾಸಿ ಕಮಲಾಕರ್, ಪತ್ನಿ ಹಾಗೂ ಮೂರು ವರ್ಷದ ಮಗು ಜೊತೆ ವಾಸವಿದ್ದರು.

'ಪರವಾನಗಿ ಪಿಸ್ತೂಲ್ ಪಡೆದಿದ್ದ ಕಮಲಾಕರ್, ಖಾಸಗಿ ಗನ್‌ಮ್ಯಾನ್ ಆಗಿದ್ದರು. ಗಣ್ಯರು, ಉದ್ಯಮಿಗಳು ಹಾಗೂ ಇತರರ ಬಳಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ಮಧ್ಯಾಹ್ನ ತಮ್ಮ ಮನೆಯಲ್ಲೇ ತಲೆಗೆ ಗುಂಡು ಹಾರಿಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ. ಪತ್ನಿ ಹಾಗೂ ಸಂಬಂಧಿಕರಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ತಿಳಿಸಿದರು.

## ಸ್ಟೂಲ್‌ನಿಂದ ಬಿದ್ದು ಕಾರ್ಮಿಕ ಸಾವು

**ಬೆಂಗಳೂರು:** ರಾಜಾಜಿನಗರ ಕೈಗಾರಿಕಾ ಪ್ರದೇಶದ ಕಟ್ಟಡವೊಂದರಲ್ಲಿ 10 ಅಡಿ ಎತ್ತರದ ಸ್ಟೂಲ್‌ನಿಂದ ಬಿದ್ದು ಕಾರ್ಮಿಕ ಬಿಟ್ಟು ಕಾರ್ವ್ (19) ಎಂಬುವರು ಮೃತಪಟ್ಟಿದ್ದಾರೆ.

'ಉತ್ತರ ಪ್ರದೇಶದ ಅವರು ಕೆಲ ದಿನಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಗುತ್ತಿಗೆದಾರರಾದ ನಾಗರಾಜ್ ಹಾಗೂ ಅಂಗಾತ್ ಚೌಹಾಣ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಸ್‌ಎಸ್‌ಎಂಇ ಕಚೇರಿಯ ಒಳ ವಿನ್ಯಾಸದ ಕೆಲಸವನ್ನು ನಾಗರಾಜ್ ಗುತ್ತಿಗೆ ಪಡೆದಿದ್ದರು. ಉಪ ಗುತ್ತಿಗೆ ಪಡೆದಿದ್ದ ಅಂಗಾತ್ ಚೌಹಾಣ್, ಉತ್ತರ ಪ್ರದೇಶದ ಏಳು ಯುವಕರನ್ನು ನಗರಕ್ಕೆ ಕರೆತಂದು ಕೆಲಸ ಮಾಡಿಸುತ್ತಿದ್ದರು.'

'ಗುರುವಾರ ರಾತ್ರಿ ಕಾರ್ಮಿಕ ಬಿಟ್ಟು, 10 ಅಡಿ ಎತ್ತರದ ಸ್ಟೂಲ್ ಮೇಲೆ ಕುಳಿತು ಕೆಲಸ ಮಾಡುತ್ತಿದ್ದಾಗ ಆಯತಪ್ಪಿ ಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟಾಗಿತ್ತು. ಸ್ಥಳದಲ್ಲಿದ್ದ ಕಾರ್ಮಿಕರು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

## ನವವಿವಾಹಿತೆ ಆತ್ಮಹತ್ಯೆ; ಪತಿ ವಿರುದ್ಧ ಎಫ್‌ಐಆರ್

**ಬೆಂಗಳೂರು:** ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ವನಜಾಕ್ಷಿ (25) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಕಿರುಕುಳ ನೀಡಿದ ಆರೋಪದಡಿ ಪತಿ ನಾಗರಾಜ್ ವಿರುದ್ಧ ಪ್ರಕರಣ ದಾಖಲಾಗಿದೆ.

'ಬೇಕರಿ ವ್ಯಾಪಾರಿ ನಾಗರಾಜ್ ಹಾಗೂ ವನಜಾಕ್ಷಿ ಎಂಟು ತಿಂಗಳ ಹಿಂದಷ್ಟೇ ಮದುವೆಯಾಗಿದ್ದರು. ಗುರುವಾರ ಮಧ್ಯಾಹ್ನ ಮನೆಯ ಕಿಟಕಿಗೆ ನೇಣು ಹಾಕಿಕೊಂಡು ವನಜಾಕ್ಷಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪೋಷಕರು ನೀಡಿರುವ ದೂರು ಆಧರಿಸಿ ನಾಗರಾಜ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ವಿದ್ಯಾರಣ್ಯಪುರ ಪೊಲೀಸರು ಹೇಳಿದರು.

'ಲಾಕ್‌ಡೌನ್‌ನಿಂದಾಗಿ ಬೇಕರಿಯಲ್ಲಿ ನಷ್ಟವಾಗಿತ್ತು. ತವರು ಮನೆಯಿಂದ ಹಣ ತರುವಂತೆ ನಾಗರಾಜ್ ಪತ್ನಿಗೆ ಕಿರುಕುಳ ನೀಡುತ್ತಿದ್ದ. ಮನೆಯಲ್ಲಿ ನಿತ್ಯವೂ ಜಗಳ ನಡೆಯುತ್ತಿತ್ತು. ಈ ಸಂಗತಿ ದೂರಿನಲ್ಲಿದೆ. ಪತಿ ತಲೆಮರೆಸಿಕೊಂಡಿದ್ದಾನೆ' ಎಂದರು.

### ವಿದುರಾಶ್ವತ್ಥದಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ

# ಸ್ವಾತಂತ್ರ್ಯ ಹೋರಾಟದ ಚಾರಿತ್ರಿಕ ನೆನಪು

ಪ್ರಜಾವಾಣಿ ವಾರ್ತೆ


ವಿದುರಾಶ್ವತ್ಥದ ವೀರಸೌಧದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಚಿತ್ರಗಳನ್ನು ರಾಜ್ಯಪಾಲ ವಜೂಭಾಯಿ ವಾಲಾ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವೀಕ್ಷಿಸಿದರು

**ಚಿಕ್ಕಬಳ್ಳಾಪುರ:** ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಹೆಸರಾಗಿರುವ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ಶುಕ್ರವಾರ ನಡೆದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವು ಸ್ವಾತಂತ್ರ್ಯ ಚಳವಳಿಯ ಕ್ಷಣಗಳನ್ನು ಮತ್ತೊಮ್ಮೆ ಸ್ಮರಿಸಲು ವೇದಿಕೆಯಾಯಿತು.

ದೇಶದ 75ನೇ ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ರಾಜ್ಯಪಾಲ ವಜುಭಾಯಿ ವಾಲಾ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿದುರಾಶ್ವತ್ಥದಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಛಾಯಾಚಿತ್ರ ಪ್ರದರ್ಶನ ವೀಕ್ಷಿಸಿದರು. ವೀರಸೌಧದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಪ್ರಧಾನಿ ನರೇಂದ್ರ ಮೋದಿ ಗುಜರಾತ್‌ನ ಸಬರಮತಿ ಆಶ್ರಮದಿಂದ ದೇಶದ ಆಯ್ದ 75 ಕಡೆಗಳಲ್ಲಿ ನಡೆದ ಅಮೃತ ಮಹೋತ್ಸವಕ್ಕೆ ಚಾಲನೆ ನೀಡಿದರು. 20 ನಿಮಿಷಗಳ ಕಾಲ ಪ್ರಧಾನಿ ಅವರ ವರ್ಚುವಲ್ ಭಾಷಣವನ್ನು ಮುಖ್ಯಮಂತ್ರಿ ಮತ್ತು ರಾಜ್ಯಪಾಲರು ವೀಕ್ಷಿಸಿದರು. ಸ್ವಾತಂತ್ರ್ಯ ಹೋರಾಟಗಾರರಾದ ಎಂ.ಜೆ. ಬ್ರಹ್ಮಯ್ಯ ಹಾಗೂ ಎಂ. ನಂಜಪ್ಪ ಅವರನ್ನು ಸನ್ಮಾನಿಸಲಾಯಿತು.

ಪರಿಣತರಿಂದ ಹೋರಾಟಗಳ ಮನವರಿಕೆ: ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಯಡಿಯೂರಪ್ಪ, 'ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸ್ವಾತಂತ್ರ್ಯ ಚಳವಳಿಯನ್ನು ಮಕ್ಕಳಿಗೆ ಮತ್ತಷ್ಟು ಪರಿಚಯ ಮಾಡಿಕೊಡಬೇಕಾಗಿದೆ. ಶಾಲಾ, ಕಾಲೇಜಿಗಳಿಗೆ ಪರಿಣತರನ್ನು ಕಳುಹಿಸಿ ಐತಿಹಾಸಿಕ ಹೋರಾಟಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿವಳಿಕೆ ಮೂಡಿಸಲಾಗುವುದು' ಎಂದು ಹೇಳಿದರು.

ವಿದುರಾಶ್ವತ್ಥ ಅಭಿವೃದ್ಧಿಗೆ ₹ 16 ಕೋಟಿ ವೆಚ್ಚದ ವಿಸ್ತೃತ ಯೋಜನಾ ವರದಿ ರೂಪಿಸಿದ್ದು, ಇದನ್ನು ಅನುಮೋದಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್ ಮತ್ತು ಶಾಸಕ ಎನ್.ಎಚ್. ಶಿವಶಂಕರರೆಡ್ಡಿ ಮಾಡಿದ ಮನವಿಗೆ ತಮ್ಮ ಭಾಷಣದಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ವಿದುರಾಶ್ವತ್ಥದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುವೆ. ಹಂತ ಹಂತವಾಗಿ ಕೆಲಸ ಮಾಡಲಾಗುವುದು' ಎಂದರು.

# ಕುಸಿದು ಬಿದ್ದ ಹಂಪಿ ಕೋಟೆ ಗೋಡೆ

ಪ್ರಜಾವಾಣಿ ವಾರ್ತೆ


ಶುಕ್ರವಾರ ಕುಸಿದು ಬಿದ್ದ ಹಂಪಿ ಕೋಟೆ ಗೋಡೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಂಪಿ ವೃತ್ತದ ಡೆಪ್ಯುಟಿ ಸೂಪರಿಟೆಂಡೆಂಟ್ ಪಿ. ಕಾಳಿಮುತ್ತು ಪರಿಶೀಲಿಸಿದರು

**ವಿಜಯನಗರ (ಹೊಸಪೇಟೆ):** ತಾಲ್ಲೂಕಿನ ಹಂಪಿ ಕಮಲ ಮಹಲ್ ಸ್ಮಾರಕ ಸುತ್ತಲಿನ ಕೋಟೆ ಗೋಡೆಯ ಒಂದು ಭಾಗ ಶುಕ್ರವಾರ ಬೆಳಿಗ್ಗೆ ಕುಸಿದು ಬಿದ್ದಿದೆ.

ವಿಜಯನಗರ ಅರಸರ ಕಾಲದಲ್ಲಿ ಕಲ್ಲುಗಳಿಂದ ನಿರ್ಮಿಸಿದ್ದ ಗೋಡೆಯ ಒಂದು ಭಾಗ ಸಂಪೂರ್ಣ ಕುಸಿದಿದೆ. ಕೋಟೆ ಗೋಡೆಯಿಂದ ಸ್ಮಾರಕಗಳು ದೂರದಲ್ಲಿರುವುದರಿಂದ ಸ್ಮಾರಕಕ್ಕೆ ಹಾನಿಯಾಗಿಲ್ಲ. ಘಟನೆ ನಡೆದಾಗ ಸ್ಥಳದಲ್ಲಿ ಯಾರೂ ಇರಲಿಲ್ಲ. ಬೆಳಿಗ್ಗೆ ಭದ್ರತಾ ಸಿಬ್ಬಂದಿ ಗಮನಿಸಿ, ಮೇಲಧಿಕಾರಿಗಳ ಗಮನಕ್ಕೆ ತಂದಿದ್ದಾರೆ.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಂಪಿ ವೃತ್ತದ ಡೆಪ್ಯುಟಿ ಸೂಪರಿಟೆಂಡೆಂಟ್ ಪಿ. ಕಾಳಿಮುತ್ತು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. 'ಶತಮಾನಗಳಷ್ಟು ಹಳೆಯದಾದ ಕೋಟೆ ಗೋಡೆ ಅದಾಗಿಯೇ ಕುಸಿದು ಬಿದ್ದಿದೆ. ಈ ಕುರಿತು ಕೇಂದ್ರ ಕಚೇರಿಗೆ ಮಾಹಿತಿ ನೀಡಲಾಗಿದೆ. ಗೋಡೆ ಮರು ನಿರ್ಮಾಣ ಮಾಡಲಾಗುವುದು' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಗೋಡೆ ಬಿದ್ದ ಸ್ಥಳದ ಸಮೀಪ ಶೌಚಾಲಯ ನಿರ್ಮಿಸಲಾಗುತ್ತಿದೆ. ಇತ್ತೀಚೆಗೆ ಇದೇ ಸ್ಥಳದಿಂದ ಸ್ವಲ್ಪವೇ ದೂರದಲ್ಲಿ ಕೊಳವೆಬಾವಿ ಕೊರೆಸಲಾಗಿತ್ತು. 'ಬೇಕಾಬಿಟ್ಟಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದರ ಪರಿಣಾಮ ಇದು' ಎಂದು ವಿಜಯನಗರ ಸ್ಮಾರಕ ಸಂಸ್ಕೃತಿ ಸಂರಕ್ಷಣ ಸೇನೆ ಅಧ್ಯಕ್ಷ ವಿಶ್ವನಾಥ ಮಾಳಗಿ ಆರೋಪಿಸಿದ್ದಾರೆ.

## 'ಸಿ.ಡಿ ಹಿಂದೆ ಚನ್ನಪಟ್ಟಣ ನಾಯಕರ ಪಾತ್ರ'

**ರಾಮನಗರ:** 'ಮಾಜಿ ಸಚಿವರ ಸಿ.ಡಿ ಪ್ರಕರಣದಲ್ಲಿ ಚನ್ನಪಟ್ಟಣ ನಾಯಕರ ಪಾತ್ರವೂ ಇದೆ' ಎಂದು ಸಂಸದ ಡಿ.ಕೆ. ಸುರೇಶ್ ಪರೋಕ್ಷವಾಗಿ ಸಚಿವ ಸಿ.ಪಿ. ಯೋಗೇಶ್ವರ್‌ಗೆ ಟಾಂಗ್ ನೀಡಿದರು.

ಪ್ರಕರಣದಲ್ಲಿ ಕನಕಪುರ, ಬೆಳಗಾವಿಯವರ ಪಾತ್ರವಿದೆ ಎಂಬ ಯೋಗೇಶ್ವರ್ ಹೇಳಿಕೆಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದ ಅವರು 'ಕನಕಪುರದವರಿಗೆ ಆಸೆಯಿದ್ದ ಮೇಲೆ ಚನ್ನಪಟ್ಟಣದವರಿಗೆ ಆಸೆ ಇರುವುದಿಲ್ಲವೆ? ಸಿ.ಡಿ ಪ್ರಕರಣದಲ್ಲಿ ಚನ್ನಪಟ್ಟಣದವರದ್ದು ಪಾತ್ರ ಇದೆ. ಜೊತೆಯಲ್ಲಿದ್ದವರೇ ಪ್ಯಾಂಟ್ ಬಿಚ್ಚುವುದು, ಶರ್ಟ್ ಬಿಚ್ಚುವುದನ್ನು ನೋಡಿರುತ್ತಾರೆ. ರಮೇಶ್ ಜಾರಕಿಹೊಳಿ ಜೊತೆಯಲ್ಲಿ ನಾವುಗಳಂತು ಇರಲಿಲ್ಲ. ಅವರ ಜೊತೆಯಲ್ಲಿದ್ದವರು ಚನ್ನಪಟ್ಟಣದವರು. ಅವರನ್ನೇ ಕೇಳಿಕೊಳ್ಳಿ' ಎಂದರು. 'ಪ್ರಕರಣದ ಕುರಿತು ಎಫ್‌ಐಆರ್ ದಾಖಲಿಸುವುದಿಲ್ಲ. ಎಸ್‌ಐಟಿ ತನಿಖೆ ಮಾತ್ರ ನಡೆಯಲಿದೆ ಎಂಬ ಗೃಹ ಸಚಿವರ ಹೇಳಿಕೆ ನೀಡಿದ್ದನ್ನು ಗಮನಿಸಿದ್ದೇನೆ. ಕ್ಲೀನ್‌ಚಿಟ್ ಕೊಡಲು ತನಿಖೆ ಮಾಡುತ್ತಾರೆ ಅಷ್ಟೇ. ಪ್ರಕರಣವನ್ನು ಮುಚ್ಚಿ ಹಾಕಲು ರಾಜ್ಯ ಸರ್ಕಾರವೇ ಒಂದು ಸಮಿತಿ ನೇಮಕ ಮಾಡಿದಂತೆ ಕಾಣುತ್ತಿದೆ' ಎಂದು ಹೇಳಿದರು. 'ಸಚಿವರು ಸೇರಿ ಬಿಜೆಪಿಯವರ 24 ರಿಂದ 29 ಸಿ.ಡಿಗಳಿವೆ ಎಂದು ಅನೇಕರು ಹೇಳುತ್ತಿದ್ದಾರೆ. ಕೆಲವರು 4 ರಿಂದ 9 ಸಿ.ಡಿ.ಗಳಿವೆ ಎನ್ನುತ್ತಿದ್ದಾರೆ. ರಾಜ್ಯದ ಜನರಂತೆ ನಾನು ಕೂಡ ಇದರ ಬಗ್ಗೆ ಕಾತುರನಾಗಿದ್ದೇನೆ' ಎಂದರು.

# ಡ್ರಗ್ಸ್ ಪಾರ್ಟಿಯಲ್ಲಿ ತೆಲುಗು ನಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡ್ರಗ್ಸ್ ಪಾರ್ಟಿಯಲ್ಲಿ ಪಾಲ್ಗೊಳ್ಳುತ್ತಿದ್ದ ಆರೋಪದಡಿ ತೆಲುಗು ನಟ ತನೀಶ್ ಸೇರಿದಂತೆ ಐವರಿಗೆ ನಗರದ ಗೋವಿಂದಪುರ ಪೊಲೀಸರು ನೋಟಿಸ್ ನೀಡಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಸಿನಿಮಾ ನಿರ್ಮಾಪಕ ಶಂಕರಗೌಡ ಕಚೇರಿ ಮೇಲೆ ಪೊಲೀಸರು ಇತ್ತೀಚೆಗಷ್ಟೇ ದಾಳಿ ಮಾಡಿದ್ದರು. ಶಂಕರಗೌಡ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಅವರ ಹೇಳಿಕೆ ಆಧರಿಸಿ ಇದೀಗ ಐವರಿಗೆ ನೋಟಿಸ್ ನೀಡಲಾಗಿದೆ. ಮಾರ್ಚ್ 13 ಅಥವಾ ಮಾ. 15ರಂದು ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ.

'₹ 4 ಕೋಟಿ ಮೌಲ್ಯದ ಡ್ರಗ್ಸ್ ಸಮೇತ ನೈಜೀರಿಯಾ ಪ್ರಜೆಗಳು ಸೇರಿ ಹಲವರನ್ನು ಇತ್ತೀಚೆಗಷ್ಟೇ ಬಂಧಿಸಲಾಗಿತ್ತು. ಬಂಧಿತರಿಂದ ಡ್ರಗ್ಸ್ ಖರೀದಿ ಮಾಡುತ್ತಿದ್ದ ಆರೋಪದಡಿ ಬಿಗ್‌ಬಾಸ್ ರಿಯಾಲಿಟಿ ಶೋ ಸ್ಪರ್ಧಿ ಮಸ್ತಾನ್ ಚಂದ್ರ ಮನೆ ಹಾಗೂ ಶಂಕರಗೌಡ ಕಚೇರಿ ಮೇಲೆ ದಾಳಿ ಮಾಡಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶಂಕರಗೌಡ ಕಚೇರಿಯಲ್ಲಿ ಪಾರ್ಟಿಗಳು ನಡೆಯುತ್ತಿದ್ದವು. ಅಲ್ಲಿಯೇ ಹಲವರು ಡ್ರಗ್ಸ್ ತೆಗೆದುಕೊಳ್ಳುತ್ತಿದ್ದರು ಎಂಬುದು ಗೊತ್ತಾಗಿದೆ. ಡ್ರಗ್ಸ್ ಪೆಡ್ಲರ್ ಜೊತೆ ಒಡನಾಟ ಹೊಂದಿದ್ದ ಶಂಕರಗೌಡ, ಅವರಿಂದಲೇ ಡ್ರಗ್ಸ್ ತರಿಸಿ ಪಾರ್ಟಿಯಲ್ಲಿ ಹಲವರಿಗೆ ಕೊಡಿಸುತ್ತಿದ್ದ' ಎಂದೂ ಮೂಲಗಳು ಹೇಳಿವೆ.

ಪಾರ್ಟಿ ಆಯೋಜಿಸುತ್ತಿದ್ದ ವಿಕ್ಕಿ; 'ಪಂಜಾಬ್‌ನ ವಿಕ್ಕಿ ಮಲ್ಹೋತ್ರ ಎಂಬಾತ ಪಾರ್ಟಿ ಆಯೋಜನೆ ಮಾಡುತ್ತಿದ್ದ. ಆತನನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

### ಪಾಲಿಗ್ರಾಫ್ ಪರೀಕ್ಷೆಗೆ ಅವಕಾಶ ನಿರಾಕರಣೆ

**ಬೆಂಗಳೂರು:** ಡ್ರಗ್ಸ್ ಜಾಲ ಪ್ರಕರಣ ಆರೋಪಿ ವಿರೇನ್ ಖನ್ನಾ ಅವರನ್ನು ಪಾಲಿಗ್ರಾಫ್ ಪರೀಕ್ಷೆಗೆ ಒಳಪಡಿಸಲು ಸಿಸಿಬಿ ಪೊಲೀಸರಿಗೆ ಅವಕಾಶ ನೀಡಿದ್ದ ಅಧೀನ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿತು.

'ಯಾವುದೇ ವ್ಯಕ್ತಿಯ ಒಪ್ಪಿಗೆ ಪಡೆಯದೆ ಪಾಲಿಗ್ರಾಫ್ ಪರೀಕ್ಷೆ ನಿರ್ವಹಿಸಲು ಆಗುವುದಿಲ್ಲ' ಎಂದು ತಿಳಿಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠ, ಮೊಬೈಲ್ ಫೋನ್ ಮತ್ತು ಇ–ಮೇಲ್ ಪಾಸ್‌ವರ್ಡ್ ತಿಳಿಸಿ ತನಿಖೆಗೆ ಸಹಕಾರ ನೀಡುವಂತೆ ವಿರೇನ್ ಖನ್ನಾಗೆ ತಿಳಿಸಿತು.

ಸ್ಮಾರ್ಟ್‌ಫೋನ್ ಮತ್ತು ಇ–ಮೇಲ್ ಖಾತೆಗಳನ್ನು ಶೋಧಿಸುವ ಮುನ್ನ ಪ್ರಾಸಿಕ್ಯೂಷನ್ ಅವರು ವಾರಂಟ್ ಕೋರಿ ನ್ಯಾಯಾಲಯವನ್ನು ಸಂಪರ್ಕಿಸಬೇಕಾಗುತ್ತದೆ. ಒಮ್ಮೆ ವಾರಂಟ್ ಹೊಡಿಸಿದ ಬಳಿಕ ಪಾಸ್‌ವರ್ಡ್ ಒದಗಿಸುವುದು ಆರೋಪಿಗಳಿಗೆ ಬಿಟ್ಟದ್ದು. ಅವರು ಪಾಸ್‌ವರ್ಡ್ ನೀಡದಿದ್ದರೆ ಅದನ್ನು ಅನ್‌ಲಾಕ್ ಮಾಡಲು ನ್ಯಾಯಾಲಯ ಸಂಬಂಧಿಸಿದ ಕಂಪನಿಗೆ ನಿರ್ದೇಶನ ನೀಡಬಹುದು ಅಥವಾ ಹ್ಯಾಕ್ ಮಾಡಲು ತನಿಖಾಧಿಕಾರಿಗೆ ಅನುಮತಿ ನೀಡಬಹುದು. ಈ ಪ್ರಕ್ರಿಯೆ ಹೇಗಿರಬೇಕು ಎಂಬುದರ ಕುರಿತು ಪೊಲೀಸ್ ಇಲಾಖೆ ವಿವರವಾದ ಮಾರ್ಗಸೂಚಿ ಸಿದ್ಧಪಡಿಸಬೇಕು ಎಂದು ಪೀಠ ಹೇಳಿತು.

## ಚಿನ್ನದ ಬೆಲೆ ಇಳಿಕೆ

**ನವದೆಹಲಿ (ಪಿಟಿಐ):** ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಧಾರಣೆಯು ಶುಕ್ರವಾರ 10 ಗ್ರಾಂಗೆ ₹ 291ರಷ್ಟು ತಗ್ಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಕಡಿಮೆ ಆಗಿದ್ದು ಈ ಇಳಿತಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.


ಶುಕ್ರವಾರ 10 ಗ್ರಾಂ ಚಿನ್ನವು ₹ 44,059ಕ್ಕೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿ.ಗೆ ₹ 1,096ರಷ್ಟು ಕಡಿಮೆ ಆಗಿ, ₹ 65,958ಕ್ಕೆ ಮಾರಾಟ ಆಗಿದೆ.

### ನಗರದಲ್ಲಿ ಇಂದು

**ರಾಮ್‌ರಾಜ್ ನೂತನ ಮಳಿಗೆ ಉದ್ಘಾಟನೆ:** ಎಂ. ಕೃಷ್ಣಪ್ಪ, ಮುಖ್ಯ ಅತಿಥಿಗಳು: ಎಂ. ಜಯರಾಮ್, ಎಸ್. ಗೋಪಿನಾಥ್ ರಾಜು, ಎ. ಸದಾಶಿವ, ಕಾವ್ಯಾ ಶಾ, ಸ್ಥಳ: ನಂ.5, ಆರ್‌ಬಿಐ ಗೌತಮ್ ಬಡಾವಣೆ, 7ನೇ ಹಂತ, ಜೆ.ಪಿ. ನಗರ, ಬೆಳಿಗ್ಗೆ 10.30

**ಸಮನ್ವಯ ಕಲಾ ಉತ್ಸವ:** ಭರತನಾಟ್ಯ: ರೇಖಾ ಜಗದೀಶ್ ಅವರ ಶಿಷ್ಯರಿಂದ, ಕೂಚಿಪುಡಿ: ಅವಿಜಿತ್ ದಾಸ್, ಭರತನಾಟ್ಯ: ಮಾಲಿನಿ ಅಗ್ರಹಾರ, ಕಥಕ್: ಪ್ರಥಮ್ ಪ್ರಸಾದ್ ರಾವ್, ಒಡಿಸ್ಸಿ: ವಂದನಾ ಸುಪ್ರಿಯಾ ಕಾಸರವಳ್ಳಿ, ಮೋಹಿನಿಯಾಟ್ಟಂ: ಗೋಪಿಕಾ ವರ್ಮಾ ಅವರ ಶಿಷ್ಯರಿಂದ, ಭರತನಾಟ್ಯ: ರಮ್ಯಾ ಭಟ್, ಕಥಕ್: ಶ್ವೇತಾ ವೆಂಕಟೇಶ್, ಭರತನಾಟ್ಯ: ಮಿಥುನ್ ಶ್ಯಾಮ್, ಒಡಿಸ್ಸಿ: ಮಧುಲಿತಾ ಮೊಹಾಪಾತ್ರ ಮತ್ತು ಅಂಜಲಿ ರಾಜ್ ಅರಸ್, ಆಯೋಜನೆ: ರಾಜರಾಜೇಶ್ವರಿ ಕಲಾನಿಕೇತನ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಬೆಳಿಗ್ಗೆ 10.30

**ಪುಸ್ತಕ ಬಿಡುಗಡೆ:** 'ಕವಿರಾಜಮಾರ್ಗ', 'ವಡ್ಡಾರಾಧನೆ', ಸಂಪಾದಕರು: ಸಾಹಿತಿ ಹಂ.ಪ. ನಾಗರಾಜಯ್ಯ,


ಹಂ.ಪ. ನಾಗರಾಜಯ್ಯ

ಪುಸ್ತಕ ಬಿಡುಗಡೆ: ವಿದ್ವಾಂಸ ಪ್ರೊ. ಪಿ.ವಿ. ನಾರಾಯಣ, ಪ್ರೊ.ಬಿ.ವಿ. ವಸಂತ ಕುಮಾರ್, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಮುಖ್ಯ ಅತಿಥಿ: ಎಸ್. ರಂಗಪ್ಪ, ಉಪಸ್ಥಿತಿ: ಕಮಲಾ ಹಂಪನಾ, ನಿತಿನ್ ಷಾ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ, ಬೆಳಿಗ್ಗೆ 11

**ಸಂಚಾರ ಸಂಪರ್ಕ ದಿನ:** ಸಂಚಾರ ಸಮಸ್ಯೆಗಳ ನಿಮ್ಮ ಅಹವಾಲು ಮತ್ತು ಪರಿಹಾರ ಕುರಿತು ಚರ್ಚೆ, ಮುಖ್ಯ ಅತಿಥಿ: ಪೊಲೀಸ್ ಕಮಿಷನರ್ ಕಮಲ್ ಪಂತ್, ಆಯೋಜನೆ: ಬೆಂಗಳೂರು ನಗರ ಸಂಚಾರ ಪೊಲೀಸ್, ಸ್ಥಳ: ವಾದ್ಯರಂಗದ ಹತ್ತಿರ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

**ಕಲಾ ಪ್ರದರ್ಶನ:** ಕಲಾವಿದ ಕೆ. ಹಿರೇಮಠ ಅವರಿಂದ ಲೈವ್ ಆರ್ಟ್ ಹಾಗೂ ಕಲಾಕೃತಿಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಗ್ರ್ಯಾಂಡ್ ಮರ್‌ಕ್ಯುರೆ ಬೆಂಗಳೂರು, ಗೋಪಾಲನ್ ಸಿಗ್ನೆಚರ್ ಮಾಲ್, ಸ್ವಾಮಿ ವಿವೇಕಾನಂದ ರಸ್ತೆ (ಹಳೆ ಮದ್ರಾಸ್ ರಸ್ತೆ), ಸಂಜೆ 4

**ಶ್ರೀಮತಿ ರಂಗನಾಯಕಮ್ಮ-ಶ್ರೀ ಜಿ. ಸುಬ್ಬರಾವ್ ದತ್ತಿ ಕಾರ್ಯಕ್ರಮ:** ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯಕರು: ಜೆ.ಕೆ. ಯೋಗಕಿರ್ತನ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 4.30

**ಪುಸ್ತಕ ಬಿಡುಗಡೆ:** ಭಾರತದ ಜನ ಇತಿಹಾಸ ಮಾಲೆಯ ಸಂಪುಟ 6,7 ಮತ್ತು 25, ಉಪನ್ಯಾಸ: ಪ್ರೊ. ಇರ್ಫಾನ್ ಹಬೀಬ್, ಪುಸ್ತಕ ಕುರಿತು ಮಾತು: ಡಾ.ಎಸ್. ಚಂದ್ರಶೇಖರ್, ಡಾ. ಶಿವಶರಣ ಕೆ. ಆರುಣಿ, ಡಾ.ಎಸ್.ಪಿ. ವಾಗೀಶ್ವರಿ, ಅನುವಾದಕರು: ಡಾ.ಕೆ. ಎಂ. ಲೋಕೇಶ್, ಎಸ್.ಎನ್. ಸ್ವಾಮಿ, ಟಿ. ವೆಂಕಟೇಶ ಮೂರ್ತಿ, ಆಯೋಜನೆ: ಚಿಂತನ ಪುಸ್ತಕ, (ಆನ್‌ಲೈನ್ ಕಾರ್ಯಕ್ರಮ), ಸಂಜೆ 5

**ವಿಶ್ವ ಗ್ಲಾಕೋಮಾ ಸಪ್ತಾಹ:** ಜಾಗೃತಿ ಜಾಥಾ, ನೇತೃತ್ವ: ಡಾ.ಕೆ. ಭುಜಂಗ ಶೆಟ್ಟಿ, ಆಯೋಜನೆ: ನಾರಾಯಣ ನೇತ್ರಾಲಯ: ಸ್ಥಳ: ನಾರಾಯಣ ನೇತ್ರಾಲಯದಿಂದ ಒರಾಯನ್ ಮಾಲ್, ಸಂಜೆ 5.45

ಹಲವು ಪಕ್ಷಗಳು ಒಟ್ಟಾಗಲು, 2 ಹೊಸ ಪಕ್ಷ ಹುಟ್ಟಲು ಕಾರಣವಾದ ಪೌರತ್ವ ತಿದ್ದುಪಡಿ ಕಾಯ್ದೆ

# ಅಸ್ಸಾಂ: ಸಿಎಎ ಚರ್ಚೆ ಮುನ್ನೆಲೆಗೆ

• ಸುಮಿರ್ ಕರ್ಮಾಕರ್

**ಗುವಾಹಟಿ:** ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಬೇಕೇ ಅಥವಾ ಬೇಡವೇ? ಇದು ಅಸ್ಸಾಂ ವಿಧಾನಸಭೆ ಚುನಾವಣಾ ಪ್ರಚಾರದಲ್ಲಿ ಮುನ್ನೆಲೆಗೆ ಬಂದಿರುವ ವಿಚಾರ. ವಿವಾದಾತ್ಮಕವಾದ ಈ ಕಾಯ್ದೆಯ ದುಷ್ಪರಿಣಾಮಗಳು ಮತ್ತು ‘2016ರಲ್ಲಿ ಬಿಜೆಪಿ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ’ ಎಂಬುದನ್ನು ಜನರಿಗೆ ಮನದಟ್ಟು ಮಾಡಲು ಬಿಜೆಪಿಯೇತರ ಪಕ್ಷಗಳು ಯತ್ನಿಸುತ್ತಿವೆ.

ಅಸ್ಸಾಂನಲ್ಲಿ ಸಿಎಎ ವಿರುದ್ಧ 2019ರ ಡಿಸೆಂಬರ್‌ನಲ್ಲಿ ನಡೆದ ಪ್ರತಿಭಟನೆ ಹಿಂಸೆಗೆ ತಿರುಗಿತ್ತು. ಸಿಎಎ ವಿರುದ್ಧದ ಪ್ರತಿಭಟನೆಯೇ ಕಾಂಗ್ರೆಸ್ ಮತ್ತು ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್ ಹತ್ತಿರವಾಗಲು ಕಾರಣ. 2005ರಿಂದಲೂ ಈ ಎರಡು ಪಕ್ಷಗಳು ಪ್ರತಿಸ್ಪರ್ಧಿಯಾಗಿದ್ದವು. ಈಗ, ಕಾಂಗ್ರೆಸ್ ನೇತೃತ್ವದ ಏಳು ಪಕ್ಷಗಳ ಮೈತ್ರಿಕೂಟದಲ್ಲಿ ಎಐಯುಡಿಎಫ್ ಕೂಡ ಇದೆ.

ಸಿಎಎ ವಿರುದ್ಧದ ಪ್ರತಿಭಟನೆಯಿಂದಾಗಿ ಎರಡು ಹೊಸ ಪಕ್ಷಗಳು ಹುಟ್ಟಿಕೊಂಡಿವೆ. ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘಟನೆಯ ಮಾಜಿ ಪ್ರಧಾನ ಕಾರ್ಯದರ್ಶಿ ಲುರಿನ್‌ಜ್ಯೋತಿ ಗೊಗೊಯಿ ಅವರ ನೇತೃತ್ವದ ಅಸ್ಸಾಂ ಜಾತೀಯ ಪರಿಷತ್ (ಎಜೆಪಿ) ಮತ್ತು ಸಿಎಎ ವಿರೋಧಿ ಹೋರಾಟಗಾರ ಅಖಿಲ್ ಗೊಗೊಯಿ ನೇತೃತ್ವದ ರಾಯ್‌ಜೊರ್ ದಳ ಸ್ಥಾಪನೆಯಾಗಿವೆ. ಅಖಿಲ್ ಅವರನ್ನು ಪ್ರತಿಭಟನೆ ಸಂದರ್ಭದಲ್ಲಿ ಬಂಧಿಸಲಾಗಿದೆ. ಅವರು ಈಗಲೂ ನ್ಯಾಯಾಂಗ ಬಂಧನದಲ್ಲಿಯೇ ಇದ್ದಾರೆ. ಸಿಎಎ ವಿರೋಧಿ ನಿಲುವೇ ಈ ಎರಡು ಪಕ್ಷಗಳ ಮೈತ್ರಿಗೆ ಕಾರಣವಾಗಿದೆ.

ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟಕ್ಕೆ ಸೇರಲು ಈ ಪಕ್ಷಗಳು ನಿರಾಕರಿಸಿವೆ. ಆದರೆ, ಬಿಜೆಪಿ ವಿರುದ್ಧ ಸಿಎಎ ಅನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಳ್ಳುತ್ತಿವೆ. ಅಸ್ಸಾಮಿ ಅಸ್ಮಿತೆಯ ಬಗೆಗಿನ ಹೆಮ್ಮೆ ಬಲವಾಗಿರುವ ಪೂರ್ವ ಮತ್ತು ಉತ್ತರ ಅಸ್ಸಾಂನ 88 ಕ್ಷೇತ್ರಗಳಲ್ಲಿ ಈ ಪಕ್ಷಗಳು ಸ್ಪರ್ಧಿಸುತ್ತಿವೆ. ಅಸ್ಸಾಂನಲ್ಲಿ ಒಟ್ಟು 126 ಕ್ಷೇತ್ರಗಳಿವೆ. ಮಾರ್ಚ್ 27, ಏಪ್ರಿಲ್ 1 ಮತ್ತು ಏಪ್ರಿಲ್ 6ರಂದು ಮೂರು ಹಂತದ ಮತದಾನ ನಡೆಯಲಿದೆ.

ಸಿಎಎ ಜಾರಿಯಿಂದಾಗಿ ಸ್ಥಳೀಯರು ಅಲ್ಪಸಂಖ್ಯಾತರಾಗುವ ಸಾಧ್ಯತೆ ಇದೆ ಎಂಬುದು ಸಿಎಎ ವಿರೋಧಿಗಳ ವಾದ. ನೆರೆಯ ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಿಂದ 2014ರವರೆಗೆ ವಲಸೆ ಬಂದ ಮುಸ್ಲಿಮೇತರರಿಗೆ ಪೌರತ್ವ ನೀಡುವ ಅವಕಾಶ ಸಿಎಎಯಲ್ಲಿ ಇದೆ. ಹೀಗೆ ಬಂದ ಭಾರಿ ಸಂಖ್ಯೆಯ ಜನರು ಅಸ್ಸಾಂನಲ್ಲಿ ಇದ್ದಾರೆ.

‘ಏನೇ ಆಗಲಿ, ನಾವು ಅಧಿಕಾರಕ್ಕೆ ಬಂದರೆ ಸಿಎಎ ಜಾರಿಗೆ ಅವಕಾಶವನ್ನೇ ಕೊಡುವುದಿಲ್ಲ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅಸ್ಸಾಂನಲ್ಲಿ ಹಲವು ಬಾರಿ ಹೇಳಿದ್ದಾರೆ.



ಅಸ್ಸಾಂ ಜಾತೀಯ ಪರಿಷತ್ ಬೆಂಬಲಿಗರು ಗುವಾಹಟಿಯಲ್ಲಿ ಬೈಕ್ ರ‍್ಯಾಲಿಯ ಮೂಲಕ ಶುಕ್ರವಾರ ಚುನಾವಣಾ ಪ್ರಚಾರ ನಡೆಸಿದರು ಪಿಟಿಐ ಚಿತ್ರ

## ಬಿಜೆಪಿಯ ಅಭಿವೃದ್ಧಿ ಮಂತ್ರ

ಸಿಎಎಯಿಂದಾದ ಹಾನಿ ಸರಿಪಡಿಸಿಕೊಳ್ಳುವ ಯತ್ನದಲ್ಲಿ ಬಿಜೆಪಿ ಇದೆ. ಸಿಎಎ ಚುನಾವಣಾ ವಿಷಯವೇ ಅಲ್ಲ ಎಂಬುದು ಆ ಪಕ್ಷದ ಪ್ರತಿಪಾದನೆ. 2016ರಿಂದ ಬಿಜೆಪಿ ಸರ್ಕಾರ ಜಾರಿ ಮಾಡಿದ ಅಭಿವೃದ್ಧಿ ಕೆಲಸಗಳಿಂದಾಗಿ ಜನರು ಮತ ಹಾಕುತ್ತಾರೆ ಎಂಬುದು ಆ ಪಕ್ಷದ ವಿಶ್ವಾಸ.

3.65 ಲಕ್ಷ ಸ್ಥಳೀಯರಿಗೆ ಪಟ್ಟಾ ನೀಡಲಾಗಿದೆ, ಕಾಜಿರಂಗ ರಾಷ್ಟ್ರೀಯ ಉದ್ಯಾನದ ಒತ್ತುವರಿ ತೆರವು ಮಾಡಲಾಗಿದೆ ಎಂದು ಸ್ಥಳೀಯ ಜನರಿಗಾಗಿ ಮಾಡಿದ ಕೆಲಸವನ್ನು ಮುಖ್ಯಮಂತ್ರಿ ಸರ್ವಾನಂದ ಸೋನೊವಾಲ್ ಮುಂದಿಡುತ್ತಿದ್ದಾರೆ. ‘ಅಸ್ಸಾಂನ ಜನರ ಅನನ್ಯತೆ, ಸಂಸ್ಕೃತಿ ಮತ್ತು ಭಾಷೆಯನ್ನು ರಕ್ಷಿಸಲು ನಾವು ಬದ್ಧ’ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ಕೊಟ್ಟಿದ್ದಾರೆ.

ಬಂಗಾಳಿ ಭಾಷೆಯ ಪ್ರಾಬಲ್ಯ ಇರುವ ಬರಕ್ ಕಣಿವೆ ಮತ್ತು ಬೋಡೊಲ್ಯಾಂಡ್ ಪ್ರದೇಶವನ್ನು ಹೊರತುಪಡಿಸಿ ಇಡೀ ರಾಜ್ಯದಲ್ಲಿ ಹತ್ತನೇ ತರಗತಿವರೆಗೆ ವಿದ್ಯಾರ್ಥಿಗಳಿಗೆ ಅಸ್ಸಾಮಿ ಭಾಷೆ ಕಲಿಯುವುದನ್ನು ಸರ್ಕಾರವು ಕಡ್ಡಾಯ ಮಾಡಿದೆ. ಮೂರು ಸ್ವಾಯತ್ತ ಸಮಿತಿಗಳ ಪ್ರದೇಶವನ್ನು ಸಿಎಎಯಿಂದ ಹೊರಗೆ ಇರಿಸಲಾಗಿದೆ. ಚಹಾ ತೋಟದ ಕಾರ್ಮಿಕರು ಸೇರಿ 22 ಲಕ್ಷ ಬಡ ಜನರಿಗೆ ನೇರ ನಗದು ವರ್ಗಾವಣೆಯ ಮೂಲಕ ಹಣ ನೀಡಲಾಗಿದೆ. ಇವೆಲ್ಲವೂ ಚುನಾವಣೆಯಲ್ಲಿ ನೆರವಾಗಬಹುದು ಎಂಬ ಲೆಕ್ಕಾಚಾರದಲ್ಲಿ ಬಿಜೆಪಿ ಇದೆ.

## ಕೊಯಮತ್ತೂರಿನಿಂದ ಕಮಲ್ ಸ್ಪರ್ಧೆ

ನಟ ಮತ್ತು ರಾಜಕಾರಣಿ ಕಮಲಹಾಸನ್ ಅವರು ಕೊಯಮತ್ತೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ತಮಿಳುನಾಡಿನಲ್ಲಿ ಪ್ರಾಬಲ್ಯ ಹೊಂದಿರುವ ದ್ರಾವಿಡ ಪಕ್ಷಗಳಿಗೆ ತಮ್ಮ ನೇತೃತ್ವದ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷವು ಪರ್ಯಾಯ ಎಂದು ಅವರು ಬಿಂಬಿಸಿಕೊಳ್ಳುತ್ತಿದ್ದಾರೆ. ಆದರೆ, ಕಮಲ್ ವಿರುದ್ಧ ಈ ಎರಡೂ ಪಕ್ಷಗಳ ಅಭ್ಯರ್ಥಿಗಳು ಇಲ್ಲ. ಮೈತ್ರಿಕೂಟ ರಾಜಕಾರಣದ ಫಲವಾಗಿ ಈ ಕ್ಷೇತ್ರವು ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಸಿಕ್ಕಿದೆ. ಈ ಪಕ್ಷಗಳ ಅಭ್ಯರ್ಥಿಗಳನ್ನು ಕಮಲ್ ಎದುರಿಸಬೇಕಾಗಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಕೊಯಮತ್ತೂರು ಕ್ಷೇತ್ರದ ಎಂಎನ್‌ಎಂ ಅಭ್ಯರ್ಥಿಯಾಗಿದ್ದ ಆರ್. ಮಹೇಂದ್ರನ್ ಅವರಿಗೆ 1.40 ಲಕ್ಷ ಮತಗಳು ಸಿಕ್ಕಿದ್ದವು. ಕೊಮಯತ್ತೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಚಲಾವಣೆಯಾದ ಮತಗಳಲ್ಲಿ ಶೇ 16ರಷ್ಟನ್ನು ಅವರು ಪಡೆದುಕೊಂಡಿದ್ದರು. ಕಮಲ್ ಅವರು ಈ ಕ್ಷೇತ್ರ ಆಯ್ದುಕೊಳ್ಳಲು ಇದುವೇ ಕಾರಣ ಎನ್ನಲಾಗಿದೆ.



ಕಮಲಹಾಸನ್

## ಅಜ್ಜನ ಕ್ಷೇತ್ರದಿಂದ ಉದಯನಿಧಿ ಕಣಕ್ಕೆ

ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರು 2011ರಿಂದಲೂ ತಾವು ಪ್ರತಿನಿಧಿಸುತ್ತಿರುವ ಕೊಳತ್ತೂರು ಕ್ಷೇತ್ರದಿಂದ ಮರು ಆಯ್ಕೆ ಬಯಸಿದ್ದಾರೆ. ಅವರ ಮಗ ಉದಯನಿಧಿ ಚುನಾವಣಾ ರಾಜಕಾರಣಕ್ಕೆ ಪದಾರ್ಪಣೆ ಮಾಡಲಿದ್ದಾರೆ. ಪಕ್ಷದ ಭದ್ರಕೋಟೆ ಚಿಪಾಕ್–ತಿರುವಲ್ಲಿಕೆಣಿ ಕ್ಷೇತ್ರದಿಂದ ಅವರಿಗೆ ಟಿಕೆಟ್ ನೀಡಲಾಗಿದೆ.

ಉದಯನಿಧಿಯ ಅಜ್ಜ ಎಂ. ಕರುಣಾನಿಧಿ ಅವರು ಚಿಪಾಕ್ ಕ್ಷೇತ್ರವನ್ನು ಹಿಂದೆ ಪ್ರತಿನಿಧಿಸಿದ್ದರು. 2011ರ ಕ್ಷೇತ್ರ ಪುನರ್‌ವಿಂಗಡಣೆ ಬಳಿಕ ಈ ಕ್ಷೇತ್ರದ ಹೆಸರನ್ನು ಚಿಪಾಕ್–ತಿರುವಲ್ಲಿಕೆಣಿ ಎಂದು ಬದಲಾಯಿಸಲಾಗಿದೆ. ತಮ್ಮ ತವರು ಕ್ಷೇತ್ರ ತಿರುವರೂರ್‌ಗೆ ಸ್ಥಳಾಂತರಗೊಳ್ಳುವವರೆಗೆ 1996–2011ರ ಅವಧಿಯಲ್ಲಿ ಮೂರು ಅವಧಿಗೆ ಈ ಕ್ಷೇತ್ರವನ್ನು ಅವರು ಪ್ರತಿನಿಧಿಸಿದ್ದರು.

173 ಅಭ್ಯರ್ಥಿಗಳ ಪಟ್ಟಿಯನ್ನು ಡಿಎಂಕೆ ಬಿಡುಗಡೆ ಮಾಡಿದೆ. 12 ಮಹಿಳೆಯರು, 9 ವೈದ್ಯರು, 13 ಎಂಜಿನಿಯರ್‌ಗಳು, 31 ವಕೀಲರು ಪಟ್ಟಿಯಲ್ಲಿದ್ದಾರೆ.



ಉದಯನಿಧಿ

# ಹಲ್ಲೆಗಳಿಂದಲೇ ನಾಯಕಿಯಾಗಿ ಬೆಳೆದ ದೀದಿ

**ಕೋಲ್ಕತ್ತ (ಪಿಟಿಐ):** ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ (ದೀದಿ) ಅವರು, ‘ಧೈರ್ಯಶಾಲಿ ಮಹಿಳೆ’ ಎಂದೇ ಗುರುತಿಸಿಕೊಂಡಿದ್ದಾರೆ. ರಾಜಕೀಯದಲ್ಲಿ ಈ ಮಟ್ಟಕ್ಕೆ ಬೆಳೆದು ಬರಬೇಕಾದರೆ ಅವರು ಹಲವು ಬಾರಿ ದೈಹಿಕ ಹಲ್ಲೆಗಳನ್ನು ಸಹ ಅನುಭವಿಸಿದ್ದಾರೆ.

ಸಿಪಿಎಂ ಯುವ ಘಟಕದ ಮುಖಂಡನೊಬ್ಬ 1990ರಲ್ಲಿ ಮಮತಾ ಅವರ ತಲೆಗೆ ಹೊಡೆದಿದ್ದ. ಗಂಭೀರವಾಗಿ ಗಾಯಗೊಂಡಿದ್ದ ಅವರು, ಆಸ್ಪತ್ರೆಗೆ ದಾಖಲಾಗಿ ಒಂದು ತಿಂಗಳು ಚಿಕಿತ್ಸೆ ಪಡೆದಿದ್ದರು. ಈ ಘಟನೆಯ ಬಳಿಕ ‘ನಿರ್ಭೀತ ಹೋರಾಟಗಾರ್ತಿ’ ಎಂಬ ಹೆಸರು ಅವರಿಗೆ ಅಂಟಿಕೊಂಡಿತು.

1993ರಲ್ಲಿ ಅವರು ಯುವ ಕಾಂಗ್ರೆಸ್‌ನ ಕಾರ್ಯಕರ್ತೆಯಾಗಿದ್ದಾಗ, ಭಾವಚಿತ್ರಸಹಿತ ಮತದಾರರ ಗುರುತಿನ ಚೀಟಿಗಳನ್ನು ನೀಡಬೇಕು ಎಂದು ಒತ್ತಾಯಿಸಿ ನಡೆಸಿದ ರ‍್ಯಾಲಿಯ ಸಂದರ್ಭದಲ್ಲಿ ಪೊಲೀಸರು ಅವರನ್ನು ಥಳಿಸಿದ್ದರು. ಆಗಲೂ ಕೆಲವು ವಾರಗಳ ಕಾಲ ಆಸ್ಪತ್ರೆಗೆ ದಾಖಲಾಗಬೇಕಾಗಿ ಬಂದಿತ್ತು.

ಈ ಬಾರಿ ಮಮತಾ ಅವರು ತಮ್ಮ ರಾಜಕೀಯ ಜೀವನದ ಅತ್ಯಂತ ಕಠಿಣ ಎನ್ನಬಹುದಾದ ಚುನಾವಣೆಯನ್ನು ಎದುರಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಕಾಲಿಗೆ ಗಾಯವಾಗಿ ಪುನಃ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ.

‘ಚುನಾವಣಾ ಪ್ರಚಾರದಿಂದ ನನ್ನನ್ನು ದೂರವಿರಿಸಲು ಬಿಜೆಪಿ ನನ್ನ ಮೇಲೆ ಹಲ್ಲೆ ನಡೆಸಿದೆ’ ಎಂದು ಮಮತಾ ಆರೋಪಿಸಿದ್ದಾರೆ. ಇದನ್ನು ನಿರಾಕರಿಸಿರುವ ಬಿಜೆಪಿ, ‘ಅನುಕಂಪ ಸೃಷ್ಟಿಸಲು ಮಮತಾ ಈ ನಾಟಕವಾಡಿದ್ದಾರೆ. ಬಂಗಾಳದ ಜನರು ಈ ಹಿಂದೆಯೂ ಇಂಥ ನಾಟಕವನ್ನು ನೋಡಿದ್ದಾರೆ’ ಎಂದಿದೆ. ಹಿಂದೆ ಸಿಪಿಎಂ ಸಹ ಮಮತಾ ವಿರುದ್ಧ ಇಂಥ ಆರೋಪ ಮಾಡಿತ್ತು.

‘ನಂದಿಗ್ರಾಮದಲ್ಲಿ ಚುನಾವಣೆಯ ಬಿಸಿ ಮಮತಾ ಅವರಿಗೆ ಜೋರಾಗಿ ತಟ್ಟಿದೆ. ಅದಕ್ಕಾಗಿ ಜನರ ಅನುಕಂಪ ಪಡೆಯಲು ನಾಟಕ ಮಾಡುತ್ತಿದ್ದಾರೆ’ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧಿರ್‌ರಂಜನ್ ಚೌಧರಿ ಅವರೂ ಆರೋಪಿಸಿದ್ದಾರೆ.



ಆಸ್ಪತ್ರೆಯಿಂದ ಹೊರಬಂದ ಮಮತಾ ಅವರು ಪಕ್ಷದ ಕಾರ್ಯಕರ್ತರಿಗೆ ಕೈಮುಗಿದರು– ಪಿಟಿಐ ಚಿತ್ರ

### ಹಲ್ಲೆಯ ಘಟನೆಗಳು...

- 1990ರ ಆಗಸ್ಟ್ 16ರಂದು ಡಿವೈಎಫ್‌ಐ ಮುಖಂಡ ಲಾಲು ಆಲಂ ಎಂಬಾತ, ಮಮತಾ ಅವರ ತಲೆಗೆ ಲಾಠಿಯಿಂದ ಬಲವಾಗಿ ಹೊಡೆದು ಅವರ ತಲೆಬುರುಡೆಗೆ ಗಾಯ ಮಾಡಿದ್ದ. ಈ ಘಟನೆಯ ನಂತರ ಮಮತಾ ಅವರು ಪಶ್ಚಿಮ ಬಂಗಾಳದಲ್ಲಿ ಮನೆಮಾತಾದರು.
- 1993ರ ಜನವರಿ ತಿಂಗಳಲ್ಲಿ ಅಂದಿನ ಮುಖ್ಯಮಂತ್ರಿ ಜ್ಯೋತಿ ಬಸು ಅವರ ಮನೆಯ ಮುಂದೆ ಮಮತಾ ಧರಣಿ ನಡೆಸಿದ್ದರು. ವಾಕ್ ಮತ್ತು ಶ್ರವಣ ದೋಷವುಳ್ಳ, ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ ಸಿಪಿಎಂ ಕಾರ್ಯಕರ್ತನನ್ನು ಬಂಧಿಸಬೇಕು ಎಂದು ಆಗ್ರಹಿಸಿ ಹೋರಾಟ ಆಯೋಜಿಸಿದ್ದರು. ಸಂತ್ರಸ್ತೆಯ ಜತೆಗೆ ಬಂದಿದ್ದ ಮಮತಾ, ಮುಖ್ಯಮಂತ್ರಿ ಕಚೇರಿಯ ಮುಂದೆ ನೆಲದಲ್ಲಿ ಕುಳಿತು ಧರಣಿ ನಡೆಸಿದರು. ಅವರ ಮನವೊಲಿಕೆಯ ಪ್ರಯತ್ನಗಳು ಫಲನೀಡದಿದ್ದಾಗ, ಪೊಲೀಸರು ಅವರ ಕೂದಲು ಹಿಡಿದೆಳೆದು ವಾಹನದಲ್ಲಿ ಕೂರಿಸಿ ಠಾಣೆಗೆ ಕರೆದೊಯ್ದಿದ್ದರು.
- ಕಾಂಗ್ರೆಸ್ ತ್ಯಜಿಸಿದ ಬಳಿಕ, 2000–01ರಲ್ಲಿ ಟಿಎಂಸಿ ಹಾಗೂ ಸಿಪಿಎಂ ಕಾರ್ಯಕರ್ತರ ಮಧ್ಯೆ ಹಲವು ಘರ್ಷಣೆಗಳು ನಡೆದಿದ್ದವು. ಉತ್ತರ ಮೇದಿನಿಪುರ ಜಿಲ್ಲೆಯಲ್ಲಿ ಅನೇಕ ಬಾರಿ ಮಮತಾ ಅವರ ವಾಹನದ ಮೇಲೆ ದಾಳಿ ನಡೆದಿತ್ತು. 2001ರಲ್ಲಿ ಅವರ ಮೇಲೆ ಕಚ್ಚಾ ಬಾಂಬ್ ಎಸೆಯಲಾಗಿತ್ತು.
- 2006–07ರಲ್ಲೂ ಅವರ ಮೇಲೆ ಹಲವು ಬಾರಿ ದಾಳಿಗಳಾಗಿದ್ದವು. ಅವರು ನಂದಿಗ್ರಾಮವನ್ನು ಪ್ರವೇಶಿಸುವುದನ್ನು ತಡೆಯಲು ಅವರ ಮೇಲೆ ಕಚ್ಚಾ ಬಾಂಬ್ ಎಸೆಯಲಾಗಿತ್ತು, ಅವರ ಕಾರಿಗೆ ಬೆಂಕಿ ಹಚ್ಚಿದ ಘಟನೆಯೂ ನಡೆದಿತ್ತು.
- 2006ರಲ್ಲಿ ಸಿಂಗೂರ್‌ನಲ್ಲಿ ವಲಯ ಅಭಿವೃದ್ಧಿ ಅಧಿಕಾರಿಯ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ಅವರನ್ನು ಪ್ರತಿಭಟನಾ ಸ್ಥಳದಿಂದ ಎಳೆದೊಯ್ದಿದ್ದರು.
- 2010ರಲ್ಲಿ ಕೇಂದ್ರದ ರೈಲ್ವೆ ಸಚಿವೆಯಾಗಿದ್ದ ಸಂದರ್ಭದಲ್ಲಿ, ಆ ಕಾಲದಲ್ಲಿ ಮಾವೊವಾದಿಗಳ ಹಿಡಿತದಲ್ಲಿದ್ದ ಪ್ರದೇಶ ಎಂದು ಗುರುತಿಸಲಾಗಿದ್ದ ಲಾಲ್‌ಘರ್‌ನಲ್ಲಿ ರ‍್ಯಾಲಿಯೊಂದರಲ್ಲಿ ಪಾಲ್ಗೊಂಡು ಮರಳುತ್ತಿದ್ದಾಗ ಅವರ ಬೆಂಗಾವಲು ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿತ್ತು. ಅದು ಮಮತಾ ಅವರ ಹತ್ಯೆಗೆ ನಡೆದ ಪ್ರಯತ್ನ ಎಂದು ಆರೋಪಿಸಲಾಗಿತ್ತು.

## ಶುಕ್ರವಾರದ ಬೆಳವಣಿಗೆ

- ಪಶ್ಚಿಮ ಬಂಗಾಳದಲ್ಲಿ ಕಿಸಾನ್ ಸಂಯುಕ್ತ ಮೋರ್ಚಾದ ನಾಯಕರು ಮತ್ತು ಸದಸ್ಯರು ಕೇಂದ್ರ ಸರ್ಕಾರದ ವಿರುದ್ಧ ಪ್ರಚಾರ ನಡೆಸಿದರು. ಬಿಜೆಪಿಗೆ ಮತ ನೀಡದಂತೆ ಜನರಲ್ಲಿ ಮನವಿ ಮಾಡಿಕೊಂಡರು
- ಕಲ್ಲಿದ್ದಲು ಕಳ್ಳತನ ಮತ್ತು ಕಳ್ಳಸಾಗಣೆ ಪ್ರಕರಣದಲ್ಲಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರ ಸಂಬಂಧಿಗೆ ಸಿಬಿಐ ಶುಕ್ರವಾರ ಸಮನ್ಸ್ ಜಾರಿ ಮಾಡಿದೆ. ಅಭಿಷೇಕ್ ಅವರ ಬಾವಮೈದುನ ಅನೂಪ್ ಮಾಂಝಿಗೆ ಸಿಬಿಐ ಅಧಿಕಾರಿಗಳು ಸಮನ್ಸ್ ಜಾರಿ ಮಾಡಿದ್ದಾರೆ
- ಕೇರಳದಲ್ಲಿ 25 ವರ್ಷಗಳ ಬಳಿಕ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಮಹಿಳೆಯೊಬ್ಬರಿಗೆ ಟಿಕೆಟ್ ನೀಡಿದೆ. ನೂರ್‌ಬೀನ್ ರಷೀದಾ ಅವರು ಕೋಯಿಕ್ಕೋಡ್ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ
- ‘ಕೇರಳದಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿಯ ನಿಶ್ಚಿತ ಠೇವಣಿಯಂತಾಗಿದೆ’ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ್ದಾರೆ. ‘40 ಸ್ಥಾನಗಳನ್ನು ಗೆದ್ದರೆ ಬಿಜೆಪಿ ಕೇರಳದಲ್ಲಿ ಸರ್ಕಾರ ರಚಿಸಲಿದೆ’ ಎಂಬ ಬಿಜೆಪಿ ಮುಖಂಡ ಕೆ. ಸುರೇಂದ್ರನ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ ಅವರು, ‘ಚುನಾವಣೆಯ ನಂತರ ಕಾಂಗ್ರೆಸ್‌ನ ಹಲವು ಶಾಸಕರು ಬಿಜೆಪಿ ಸೇರಲಿದ್ದಾರೆ’ ಎಂದಿದ್ದಾರೆ
- ಪಶ್ಚಿಮ ಬಂಗಾಳದಲ್ಲಿ ಮಾ.27ರಂದು ಮೊದಲ ಹಂತದ ಚುನಾವಣೆ ಎದುರಿಸಲಿರುವ ಕ್ಷೇತ್ರಗಳಲ್ಲಿ ನಾಲ್ಕು ಕಡೆ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಸಂಯುಕ್ತ ಜನತಾ ದಳಕ್ಕೆ, ಮತದಾನಕ್ಕೂ ಮುನ್ನವೇ ಹಿನ್ನಡೆಯಾಗಿದೆ. ನಾಲ್ಕರಲ್ಲಿ ಮೂವರು ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತಗೊಂಡಿವೆ
- ಕಾಂಗ್ರೆಸ್ ಪಕ್ಷವು ಪಶ್ಚಿಮ ಬಂಗಾಳಕ್ಕೆ ತನ್ನ ತಾರಾ ಪ್ರಚಾರಕರ ಪಟ್ಟಿಯನ್ನು ಪ್ರಕಟಿಸಿದೆ. ನಾಯಕತ್ವ ಬದಲಾಗಬೇಕು ಎಂದು ಕೋರಿದ್ದ ಗುಂಪಿನಲ್ಲಿ ಗುರುತಿಸಿಕೊಂಡಿದ್ದ ಕಪಿಲ್ ಸಿಬಲ್, ಗುಲಾಂ ನಬಿ ಆಜಾದ್, ಆನಂದ್ ಶರ್ಮಾ ಮುಂತಾದವರನ್ನು ಕೈಬಿಡಲಾಗಿದೆ. ಮನಮೋಹನ ಸಿಂಗ್, ನವಜೋತ್‌ಸಿಂಗ್ ಸಿಧು, ಸಚಿನ್ ಪೈಲಟ್ ಮುಂತಾದವರ ಹೆಸರು ಪಟ್ಟಿಯಲ್ಲಿದೆ



ನಂದಿಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಚುನಾವಣಾ ಆಯೋಗಕ್ಕೆ ನೀಡಿದ ದೂರಿನಲ್ಲಿ ಟಿಎಂಸಿ ನಿಯೋಗ ಆರೋಪ

# ‘ಮಮತಾರ ಸ್ಕೂಟಿ ಬಿದ್ದರೆ, ಎಂದಿದ್ದರು ಮೋದಿ’

**ನವದೆಹಲಿ (ಪಿಟಿಐ):** ‘ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 7ರಂದು ಕೋಲ್ಕತ್ತದಲ್ಲಿ ಭಾಷಣ ಮಾಡಿದ್ದರು. ಆಗ, ‘ಮಮತಾ ಅವರು ಕೂತಿರುವ ಸ್ಕೂಟಿಯು ನಂದಿಗ್ರಾಮದಲ್ಲಿ ಉರುಳಿಬಿದ್ದರೆ, ನಾವೇನು ಮಾಡಲು ಸಾಧ್ಯ ಎಂದು ಹೇಳಿದ್ದರು. ಮಮತಾ ಅವರ ಮೇಲೆ ನಡೆದ ದಾಳಿಗೂ, ಬಿಜೆಪಿ ನಾಯಕರ ಹೇಳಿಕೆಗಳಿಗೂ ಸಂಬಂಧವಿದೆ’ ಎಂದು ಟಿಎಂಸಿ ಪ್ರತಿಪಾದಿಸಿದೆ.

ಟಿಎಂಸಿ ನಾಯಕರ ನಿಯೋಗವು ಶುಕ್ರವಾರ ದೆಹಲಿಯಲ್ಲಿ ಚುನಾವಣಾ ಆಯೋಗವನ್ನು ಭೇಟಿ ಮಾಡಿದೆ. ನಂದಿಗ್ರಾಮದಲ್ಲಿ ಮಮತಾ ಬ್ಯಾನರ್ಜಿ ಅವರ ಮೇಲೆ ನಡೆದ ದಾಳಿಯನ್ನು ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು ಎಂದು ನಿಯೋಗವು, ಆಯೋಗವನ್ನು ಒತ್ತಾಯಿಸಿದೆ.

‘ಬಿಜೆಪಿಯ ರಾಜ್ಯಘಟಕದ ಅಧ್ಯಕ್ಷ ದಿಲೀಪ್ ಘೋಷ್ ಅವರು ಫೇಸ್‌ಬುಕ್‌ನಲ್ಲಿ ಈಚೆಗೆ ಚಿತ್ರವೊಂದನ್ನು ಪೋಸ್ಟ್ ಮಾಡಿದ್ದರು. ನಂದಿಗ್ರಾಮದಲ್ಲಿ ಮಮತಾ ಅವರಿಗೆ ಹಾನಿಯಾಗಲಿದೆ ಎಂಬಂತಹ ಚಿತ್ರಣ ಅದರಲ್ಲಿತ್ತು. ಇದರ ಬೆನ್ನಲ್ಲೇ ರಾಜ್ಯ ಪೊಲೀಸ್ ಮುಖ್ಯಸ್ಥರನ್ನು ವಜಾ ಮಾಡುವಂತೆ ಚುನಾವಣಾ ಆಯುಕ್ತರಿಗೆ ಬಿಜೆಪಿ ಕಾರ್ಯಕರ್ತರು ಸಾವಿರಾರು ದೂರುಗಳನ್ನು ಸಲ್ಲಿಸಿದ್ದರು. ಇವೆಲ್ಲವುಗಳ ನಂತರವೇ ಮಮತಾ ಅವರ ಮೇಲೆ ದಾಳಿ ನಡೆದಿದೆ. ಈ ಎಲ್ಲಾ ಬೆಳವಣಿಗೆಗಳ ಹಿಂದೆ ಬಿಜೆಪಿ ಇದೆ ಎಂಬುದು ಸ್ಪಷ್ಟವಾಗಿದೆ’ ಎಂದು ಮನವಿ ಪತ್ರದಲ್ಲಿ ಆರೋಪಿಸಲಾಗಿದೆ.

‘ಮಮತಾ ಬ್ಯಾನರ್ಜಿ ಅವರಿಗೆ ಆಗಿರುವ ಗಾಯಗಳು ಯಾವುದೋ ಆಕಸ್ಮಿಕ ಘಟನೆಗಳ ಫಲವಲ್ಲ. ಅವರ ಜೀವಕ್ಕೆ ಎರವಾಗಲಿದ್ದ ಈ ಘಟನೆಗಳು, ದೊಡ್ಡ ಸಂಚೊಂದರ ಪ್ರತಿಫಲ. ಇದನ್ನು ಮುಚ್ಚಿಹಾಕಲು ಪ್ರತ್ಯಕ್ಷದರ್ಶಿಗಳನ್ನು ಸೃಷ್ಟಿಸಲಾಗಿದೆ. ಮಮತಾ ಅವರ ಕಾರು ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆಯಿತು ಎಂದು ಹೇಳಿರುವ ಚಿತ್ತರಂಜನ್ ದಾಸ್ ಮತ್ತು ದೇವವ್ರತ ದಾಸ್ ಅವರು ಸುವೇಂದು ಅಧಿಕಾರಿ ಅವರ ಬೆಂಬಲಿಗರು. ಮಮತಾ ಅವರ ಕಾರಿನ ಡೋರ್‌ಗಳ ಮೇಲೆ ಡಿಕ್ಕಿಯ ಯಾವುದೇ ಕುರುಹುಗಳು ಇಲ್ಲ. ಚಿತ್ತರಂಜನ್ ದಾಸ್ ಮತ್ತು ದೇವವ್ರತ ದಾಸ್ ಅವರ ಸಾಕ್ಷ್ಯಗಳನ್ನು ಸೃಷ್ಟಿಸಲಾಗಿದೆ ಎಂಬುದನ್ನು, ಇದು ಸಾಬೀತು ಮಾಡುತ್ತದೆ’ ಎಂದು ಟಿಎಂಸಿ ತನ್ನ ಮನವಿ ಪತ್ರದಲ್ಲಿ ವಿವರಿಸಿದೆ.

**‘ಚುನಾವಣಾ ಆಯೋಗವೇ ಹೊಣೆ’:** ‘ನಂದಿಗ್ರಾಮದಲ್ಲಿ ಪ್ರಚಾರದ ವೇಳೆ ಮಮತಾ ಬ್ಯಾನರ್ಜಿ ಅವರ ಮೇಲೆ ನಡೆದ ದಾಳಿಗೆ ಚುನಾವಣಾ ಆಯೋಗವೇ ಹೊಣೆ’ ಎಂದು ಟಿಎಂಸಿ ಆರೋಪಿಸಿದೆ.

‘ನಾವು ಚುನಾವಣಾ ಆಯೋಗದ ಹೊಣೆಗಾರಿಕೆಯನ್ನು ಪ್ರಶ್ನಿಸಿದ್ದೇವೆ. ರಾಜ್ಯ ಪೊಲೀಸ್‌ನ ಡಿಜಿಪಿ ಮತ್ತು ಎಡಿಜಿ ಅವರನ್ನು ಚುನಾವಣಾ ಆಯೋಗ ಪ್ರಶ್ನಿಸಿತ್ತು. ಅದನ್ನು ಮಾಡಲಿ. ಆದರೆ, ಮಮತಾ ಬ್ಯಾನರ್ಜಿ ಅವರ ಮೇಲೆ ನಡೆದ ದಾಳಿಯಲ್ಲಿ ಆಗಿರುವ ಭದ್ರತಾಲೋಪಗಳನ್ನು ಪತ್ತೆಮಾಡುವ ಮತ್ತು ತಪ್ಪಿತಸ್ಥರನ್ನು ಪತ್ತೆಮಾಡುವ ಹೊಣೆಗಾರಿಕೆ ಚುನಾವಣಾ ಆಯೋಗದ್ದು’ ಎಂದು ಟಿಎಂಸಿ ಪ್ರಧಾನ ಕಾರ್ಯದರ್ಶಿ ಪಾರ್ಥ ಚಟರ್ಜಿ ಆಗ್ರಹಿಸಿದ್ದಾರೆ.

**‘ಪೊಲೀಸರಿಂದ ಕರ್ತವ್ಯಲೋಪ’:** ಮಮತಾ ಅವರ ಭದ್ರತೆಗೆ ನಿಯೋಜನೆಯಾಗಿದ್ದ ಪೊಲೀಸರ ವಿರುದ್ಧ ಚುನಾವಣಾ ಆಯೋಗವು ಶಿಸ್ತುಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

‘ಮುಖ್ಯಮಂತ್ರಿಯ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸ್ ಅಧಿಕಾರಿಯಿಂದ ಕರ್ತವ್ಯಲೋಪವಾಗಿದೆ. ಮುಖ್ಯಮಂತ್ರಿಯ ಸುತ್ತಲಿನ ಭದ್ರತಾಜಾಲವನ್ನು ಯಾರೂ ಭೇದಿಸುವ ಹಾಗಿಲ್ಲ. ಈ ಸಂಬಂಧ ರಾಜ್ಯ ಸರ್ಕಾರ ಮತ್ತು ಚುನಾವಣಾ ವೀಕ್ಷಕರಿಂದ ಬರಲಿರುವ ವರದಿಗಾಗಿ ಕಾಯುತ್ತಿದ್ದೇವೆ. ಆನಂತರ ಅಧಿಕಾರಿಯ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

### ‘ಆಕಸ್ಮಿಕ ಎಂದು ವರದಿ ನೀಡಿಲ್ಲ’

‘ನಂದಿಗ್ರಾಮದಲ್ಲಿ ಮಮತಾ ಬ್ಯಾನರ್ಜಿ ಅವರು ಗಾಯಗೊಂಡ ಘಟನೆಯು ಆಕಸ್ಮಿಕ ಮತ್ತು ಅಪಘಾತ ಎಂದು ಪೂರ್ವ ಮೇದಿನಿಪುರ ಜಿಲ್ಲಾಡಳಿತವು ಯಾವುದೇ ವರದಿ ನೀಡಿಲ್ಲ’ ಎಂದು ಪಶ್ಚಿಮ ಬಂಗಾಳ ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಮಮತಾ ಬ್ಯಾನರ್ಜಿ ಅವರು ಗಾಯಗೊಂಡ ಘಟನೆಯು ಆಕಸ್ಮಿಕ ಮತ್ತು ಅಪಘಾತವಾಗಿತ್ತು ಎಂದು ಪೂರ್ವ ಮೇದಿನಿಪುರ ಜಿಲ್ಲಾ ಪೊಲೀಸರು ಸರ್ಕಾರಕ್ಕೆ ಮತ್ತು ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಿದ್ದಾರೆ ಎಂಬ ಸುದ್ದಿಯನ್ನು ಹಲವು ಮಾಧ್ಯಮಗಳು ಗುರುವಾರ ಪ್ರಕಟಿಸಿದ್ದವು. ಇದರ ಬೆನ್ನಲ್ಲೇ ಸರ್ಕಾರದ ಅಧಿಕಾರಿ ಈ ಸ್ಪಷ್ಟನೆ ನೀಡಿದ್ದಾರೆ.

ಈ ಬಗ್ಗೆ ಚುನಾವಣಾ ಆಯೋಗವೂ ಯಾವುದೇ ಮಾಹಿತಿ ನೀಡಿಲ್ಲ.

ಕಲಬುರ್ಗಿ: ಬೀದರ್‌ನಲ್ಲಿ ಮುಂದುವರಿದ ಬಸ್ ಸಂಚಾರ; ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ

# ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

**ಕಲಬುರ್ಗಿ:** ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಕಲಬುರ್ಗಿಯಿಂದ ಸಾರಿಗೆ ಸೇವೆಯನ್ನು ಅನಿರ್ದಿಷ್ಟ ಅವಧಿಯವರೆಗೆ ಶುಕ್ರವಾರದಿಂದ ಸ್ಥಗಿತಗೊಳಿಸಿದೆ. ಮಹಾರಾಷ್ಟ್ರದಿಂದಲೂ ಬಸ್‌ಗಳು ಬರುತ್ತಿಲ್ಲ.

‘ಕಲಬುರ್ಗಿಯಿಂದ ನಿತ್ಯ 60 ಬಸ್‌ಗಳು ಮಹಾರಾಷ್ಟ್ರದ ವಿವಿಧ ನಗರಗಳಿಗೆ ಸಂಚರಿಸುತ್ತಿದ್ದವು. ಅಲ್ಲಿಂದ 12 ಬಸ್‌ಗಳು ಬರುತ್ತಿದ್ದವು. ಕೋವಿಡ್ ಪ್ರಕರಣಗಳು ಹೆಚ್ಚಿರುವ ಕಾರಣ ಬಸ್ ಸಂಚಾರ ಸ್ಥಗಿತಗೊಳಿಸಿದ್ದೇವೆ’ ಎಂದು ಮುಖ್ಯ ಸಂಚಾರ ವ್ಯವಸ್ಥಾಪಕ ಡಿ. ಕೊಟ್ರಪ್ಪ ತಿಳಿಸಿದರು.

ಆದರೆ, ಬೀದರ್ ಜಿಲ್ಲೆಗೆ ಮಹಾರಾಷ್ಟ್ರದಿಂದ ಬರುವವರ ಸಂಖ್ಯೆ ಹೆಚ್ಚಿದೆ. ಬೀದರ್ ಮತ್ತು ಮಹಾರಾಷ್ಟ್ರದ ನಡುವೆ ಬಸ್‌ಗಳ ಸಂಚಾರ ಮುಂದುವರೆದಿದೆ.

ಮಹಾರಾಷ್ಟ್ರದಿಂದ ಬೀದರ್ ಜಿಲ್ಲೆಗೆ ಬರಲು ಆರು ಮಾರ್ಗಗಳಿವೆ. ಬೀದರ್ ಜಿಲ್ಲಾಡಳಿತವು ಮೂರು ಸ್ಥಳಗಳಲ್ಲಿ ಮಾತ್ರ ಚೆಕ್‌ಪೋಸ್ಟ್ ತೆರೆದಿದೆ. ಇಲ್ಲಿ ತಪಾಸಣೆ ಬಿಗಿಗೊಳಿಸಿರುವ ಕಾರಣ ಮಹಾರಾಷ್ಟ್ರದಿಂದ ಬರುತ್ತಿರುವ ಜನ ಬೇರೆ ಮಾರ್ಗಗಳ ಮೂಲಕ ಜಿಲ್ಲೆ ಪ್ರವೇಶಿಸುತ್ತಿದ್ದಾರೆ.

‘ಪ್ರಸ್ತುತ 100 ಜನರನ್ನು ಪರೀಕ್ಷಿಸಿದರೆ ಇಬ್ಬರಲ್ಲಿ ಕೋವಿಡ್ ಕಂಡು ಬರುತ್ತಿದೆ. ಬೀದರ್ ಕೆಂಪು ವಲಯದಲ್ಲಿ ಗುರುತಿಸಿಕೊಂಡಿದೆ. ಗಡಿ ಪ್ರದೇಶದಲ್ಲಿ ಕೋವಿಡ್ ಪರೀಕ್ಷಾ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಜಿಲ್ಲಾಧಿಕಾರಿ ರಾಮಚಂದ್ರನ್ ತಿಳಿಸಿದ್ದಾರೆ.

**ಕೇರಳ ಗಡಿಗಳಲ್ಲಿ ಮುನ್ನಚ್ಚರಿಕೆ (ಮೈಸೂರು):** ಕೇರಳ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಮೈಸೂರು ಜಿಲ್ಲೆಯ ಬಾವಲಿ ಸಮೀಪ ಹಾಗೂ ಕೊಡಗಿನ ಕುಟ್ಟ ಹಾಗೂ ಮಾಕುಟ್ಟ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ಕೋವಿಡ್ ತಪಾಸಣೆ ನಡೆಸಲಾಗುತ್ತಿದೆ. ಆರ್‌ಟಿಪಿಸಿಆರ್ ಪರೀಕ್ಷೆ ಇಲ್ಲದೇ ಬರುವ ಪ್ರವಾಸಿಗರನ್ನು ವಾಪಸ್ ಕಳುಹಿಸಲಾಗುತ್ತಿದೆ. ಆದರೆ, ಚಾಮರಾಜನಗರದ ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಥರ್ಮಲ್ ಸ್ಕ್ರೀನಿಂಗ್ ಮಾತ್ರ ಮಾಡಲಾಗುತ್ತಿದೆ.

ಕೊಡಗಿನ ಕುಟ್ಟ ಹಾಗೂ ಮಾಕುಟ್ಟ, ಮೈಸೂರಿನ ಬಾವಲಿ ಚೆಕ್‌ಪೋಸ್ಟ್‌ಗಳಲ್ಲಿ ಬರುವವರಿಗೆ 72 ಗಂಟೆಗಳ ಮೊದಲು ಪಡೆದ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಅಮರನಾಥ್, ‘ಈಗ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿದೆ. ಶೇ 90ರಷ್ಟು ಮಂದಿ ಆರ್‌ಟಿಪಿಸಿಆರ್ ವರದಿಯೊಂದಿಗೆ ಬರುತ್ತಿದ್ದಾರೆ. ಸರಕುಸಾಗಣೆ ವಾಹನಗಳ ಚಾಲಕರಿಗೆ 15 ದಿನಗಳಿಗೆ ಒಮ್ಮೆ ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ’ ಎಂದರು.

‘ಥರ್ಮಲ್ ಸ್ಕ್ರೀನಿಂಗ್ ಮಾಡಿದಾಗ ಕೋವಿಡ್ ಲಕ್ಷಣಗಳು ಕಂಡುಬಂದಲ್ಲಿ, ವಾಪಸ್ ಕಳುಹಿಸುತ್ತಿದ್ದೇವೆ. ಲಕ್ಷಣಗಳೂ ಇಲ್ಲ; ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಇಲ್ಲ ಎಂದಾದರೆ, ಪರೀಕ್ಷೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಲಾಗುತ್ತಿದೆ’ ಎಂದು ಚಾಮರಾಜನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಂ.ಸಿ.ರವಿ ಹೇಳಿದರು.





ಬೀದರ್‌ನ ಕಮಲನಗರ ಚೆಕಪೋಸ್ಟ್‌ನಲ್ಲಿ ಮಹಾರಾಷ್ಟ್ರದಿಂದ ಬಂದ ಕಾರು ಚಾಲಕನ ಥರ್ಮಲ್‌ಸ್ಕ್ರೀನಿಂಗ್ ಮಾಡಿದ ವೈದ್ಯಕೀಯ ಸಿಬ್ಬಂದಿ

## ಬೆಳಗಾವಿ ಗಡಿಯಲ್ಲಿ ತಪಾಸಣೆ ಕಾಟಾಚಾರ

**ಕಾರವಾರ/ ಬೆಳಗಾವಿ/ ವಿಜಯಪುರ:** ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದರೂ ಅಂತರರಾಜ್ಯ ಬಸ್‌ಗಳ ಕಾರ್ಯಾಚರಣೆ ಮುಂದುವರಿದಿದೆ. ಪ್ರಯಾಣಿಕರು 72 ತಾಸಿನೊಳಗೆ ಪಡೆದಿರುವ ಕೋವಿಡ್ ನೆಗೆಟಿವ್ ವರದಿ ಹೊಂದಿರುವುದನ್ನು ಕಡ್ಡಾಯ ಮಾಡಲಾಗಿದೆ.

ಬೆಳಗಾವಿ ಗಡಿಯಲ್ಲಿ ತಪಾಸಣೆಯು ಕಾಟಾಚಾರಕ್ಕೆ ಎನ್ನುವಂತೆ ನಡೆಯುತ್ತಿರುವುದು ಕಂಡುಬಂದಿದೆ. ರಾಜ್ಯದ ಗಡಿಯಲ್ಲಿ ಆ ರಾಜ್ಯದಿಂದ ಕಾರುಗಳಲ್ಲಿ ಬರುವವರಿಂದ ಮಾತ್ರವೇ ಕೋವಿಡ್–19 ನೆಗೆಟಿವ್ ವರದಿ ಕೇಳಲಾಗುತ್ತಿದೆ. ಉಳಿದ ವಾಹನಗಳಲ್ಲಿ ಬರುವವರನ್ನು ತಪಾಸಣೆ ಮಾಡುತ್ತಿಲ್ಲ.

ಮಹಾರಾಷ್ಟ್ರದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಒಂದು ವಾರದಿಂದ ಪ್ರಯಾಣಿಕರ ಸಂಖ್ಯೆ ಶೇಕಡ 30ರಿಂದ 40ರಷ್ಟು ಕಡಿಮೆಯಾಗಿದೆ ಎಂದು ಬೆಳಗಾವಿಯ ಸಾರಿಗೆ ಅಧಿಕಾರಿಗಳು ತಿಳಿಸಿದರು.

ವಿಜಯಪುರದಿಂದ ಮಹಾರಾಷ್ಟ್ರದ ವಿವಿಧ ನಗರಗಳಿಗೆ ಬಸ್ ಸಂಚಾರ ಮುಂದುವರಿದಿದೆ. ರಾಜ್ಯದಿಂದ ಮಹಾರಾಷ್ಟ್ರಕ್ಕೆ ಹೋಗುವವರಿಗೆ ಕೋವಿಡ್ ಪರೀಕ್ಷೆ ಮಾಡಿಸಿರಬೇಕು ಎಂಬ ನಿಯಮ ಕಡ್ಡಾಯವಿಲ್ಲ.

‘ವಿಜಯಪುರ ಜಿಲ್ಲೆಯಿಂದ ಮಹಾರಾಷ್ಟ್ರದ ವಿವಿಧ ನಗರಗಳಿಗೆ ನವೆಂಬರ್, ಡಿಸೆಂಬರ್, ಜನವರಿ ತಿಂಗಳಲ್ಲಿ ಸಂಚರಿಸುತ್ತಿದ್ದ ಪ್ರಯಾಣಿಕರಿಗೆ ಹೋಲಿಸಿದರೆ ಫೆಬ್ರುವರಿ, ಮಾರ್ಚ್‌ನಲ್ಲಿ ಗಣನೀಯವಾಗಿ ಕಡಿಮೆಯಾಗಿದೆ’ ಎಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವಿಜಯಪುರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ ಪ್ರತಿಕ್ರಿಯಿಸಿದರು.

ಕಾರವಾರದಿಂದ ಮಹಾರಾಷ್ಟ್ರಕ್ಕೆ ಬಸ್‌ಗೆ ನೇರ ಸಂಪರ್ಕವಿಲ್ಲ. ಆದರೆ, ಖಾಸಗಿ ವಾಹನಗಳ ಸಂಚಾರ ಸಾಕಷ್ಟಿದೆ. ಸಮೀಪದ ಮಾಜಾಳಿಯ ಗೋವಾ ಗಡಿಯಲ್ಲಿ ಯಾವುದೇ ಪರಿಶೀಲನೆ ನಡೆಯುತ್ತಿಲ್ಲ. ಮಹಾರಾಷ್ಟ್ರದಿಂದ ಬಂದವರನ್ನು ಗೋವಾದವರೆಂದು ಪರಿಗಣಿಸಿ ಕೋವಿಡ್ ವರದಿ ಇಲ್ಲದೇ ಕಳುಹಿಸಲಾಗುತ್ತಿದೆ. ಗೋವಾ ಕೂಡ ಮಹಾರಾಷ್ಟ್ರದಿಂದ ಬರುವವರಿಗೆ ಮುಕ್ತ ಸಂಚಾರಕ್ಕೆ ಅವಕಾಶ ನೀಡಿದೆ. ಹಾಗಾಗಿ ಮಹಾರಾಷ್ಟ್ರದಿಂದ ಬಂದವರನ್ನು ತಕ್ಷಣವೇ ಪತ್ತೆ ಹಚ್ಚುವುದು ಸವಾಲಾಗಿದೆ.

# ಕೋವಿಡ್ 2ನೇ ಅಲೆ ಭೀತಿ

ಒಂದನೇ ಪುಟದಿಂದ

ಬೆಂಗಳೂರು ನಗರ ಜಿಲ್ಲೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಿನವೊಂದಕ್ಕೆ ಕನಿಷ್ಠ 40,000 ಮಾದರಿಗಳ ಪರೀಕ್ಷೆ ನಡೆಸಬೇಕು. ಎಲ್ಲ ಜಿಲ್ಲೆಗಳಲ್ಲೂ ದೈನಂದಿನ ಕೋವಿಡ್ ಪರೀಕ್ಷಾ ಗುರಿಯನ್ನು ಪೂರ್ಣ ಪ್ರಮಾಣದಲ್ಲಿ ತಲುಪಬೇಕು ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸುತ್ತೋಲೆಯಲ್ಲಿ ನಿರ್ದೇಶನ ನೀಡಿದ್ದಾರೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಕಲಬುರ್ಗಿ ಮತ್ತು ಉಡುಪಿ ಜಿಲ್ಲೆಗಳಲ್ಲಿ 1:20ರ ಅನುಪಾತದಲ್ಲಿ ಸೋಂಕಿತರನ್ನು ಪತ್ತೆಹಚ್ಚಬೇಕು ಎಂದು ಸೂಚಿಸಲಾಗಿದೆ.

**ಮಿತಿ ಪಾಲನೆಗೆ ತಾಕೀತು:** ಮದುವೆ, ನಾಮಕರಣ ಸೇರಿದಂತೆ ಇತರ ಸಮಾರಂಭಗಳು, ಮೃತರ ಅಂತಿಮ ದರ್ಶನ, ಅಂತ್ಯಕ್ರಿಯೆ, ಧಾರ್ಮಿಕ ಆಚರಣೆಗಳು, ರಾಜಕೀಯ ಸಮಾರಂಭಗಳಿಗೆ ವಿಧಿಸಿದ್ದ ನಿರ್ಬಂಧಗಳನ್ನು ಕೆಲವು ದಿನಗಳಿಂದ ಸಡಿಲಿಸಲಾಗಿತ್ತು. ಜನಸಂಖ್ಯೆಯ ಮಿತಿ ವಿಧಿಸಿದ್ದರೂ, ಕಟ್ಟುನಿಟ್ಟಾಗಿ ಪಾಲಿಸುವುದನ್ನು ಕಡ್ಡಾಯಗೊಳಿಸಿರಲಿಲ್ಲ. ಆದರೆ, ಎರಡನೇ ಅಲೆಯ ಭೀತಿಯಿಂದ ಸಭೆ, ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಜನರ ಮಿತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಹೊಸ ಮಾರ್ಗಸೂಚಿಯಲ್ಲಿ ತಾಕೀತು ಮಾಡಲಾಗಿದೆ.

‘ಹೆಚ್ಚಿನ ಸಂಖ್ಯೆಯ ಜನರು ಸೇರುವುದರಿಂದ ಸೋಂಕು ಹರಡುವ ಅಪಾಯವಿದೆ. ಅದನ್ನು ನಿಯಂತ್ರಿಸಲು ನಿಗದಿಪಡಿಸಿರುವ ಜನಸಂಖ್ಯೆಯ ಮಿತಿಗೆ ಅನುಗುಣವಾಗಿಯೇ ಸಭೆ, ಸಮಾರಂಭಗಳಿಗೆ ಅನುಮತಿ ನೀಡಬೇಕು. ರಾಜ್ಯದಾದ್ಯಂತ ಕೋವಿಡ್ ಲಸಿಕೆ ವಿತರಣೆಗೆ ವೇಗ ನೀಡಬೇಕು. ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವವರಿಗೆ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ಕಡ್ಡಾಯಗೊಳಿಸಿರುವುದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು’ ಎಂದು ಸೂಚನೆ ನೀಡಲಾಗಿದೆ.

## ‘ಮಾಸ್ಕ್ ಧರಿಸದಿದ್ದರೆ ಕ್ರಿಮಿನಲ್ ಮೊಕದ್ದಮೆ’

ಒಂದನೇ ಪುಟದಿಂದ

‘ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಅವರಿಗೆ ಫೆ.24ರಂದು ನೋಟಿಸ್ ನೀಡಲಾಗಿತ್ತು. ಸಂಘಟಕರಿಗೆ ಮಾ.8ರಂದು ₹10 ಸಾವಿರ ದಂಡ ವಿಧಿಸಲಾಗಿದೆ’ ಎಂದು ಸರ್ಕಾರ ವಿವರಿಸಿತು.

‘ಸಾಂಕ್ರಾಮಿಕ ರೋಗಗಳ ಸೆಕ್ಷನ್ 5(1) ಉಲ್ಲಂಘನೆಯಾಗಿದ್ದರೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾಗುತ್ತದೆ’ ಎಂದು ಪೀಠ ತಿಳಿಸಿತು.

ಮತ್ತೊಂದು ಪ್ರಕರಣದಲ್ಲಿ ಮಾಸ್ಕ್ ಧರಿಸುವ ಮತ್ತು ಅಂತರ ಕಾಪಾಡುವ ಸಂಬಂಧ ಕಾರ್ಯಕರ್ತರಿಗೆ ನಿರ್ದೇಶನ ನೀಡಿರುವ ಬಗ್ಗೆ ವಿವರ ಸಲ್ಲಿಸಲು ಬಿಜೆಪಿಗೆ ಹೈಕೋರ್ಟ್ ಪೀಠ ಒಂದು ವಾರ ಸಮಯಾವಕಾಶ ನೀಡಿತು.

# ಇಬ್ಬರಲ್ಲಿ ದಕ್ಷಿಣ ಆಫ್ರಿಕಾ ವೈರಸ್ ಪತ್ತೆ


ಪ್ರಜಾವಾಣಿ ವಾರ್ತೆ

**ಬಳ್ಳಾರಿ:** ದುಬೈನಿಂದ ಬಳ್ಳಾರಿ ನಗರಕ್ಕೆ ಬಂದಿರುವ ಇಬ್ಬರಲ್ಲಿ ರೂಪಾಂತರ ಕೊರೊನಾ ದಕ್ಷಿಣ ಆಫ್ರಿಕಾ ವೈರಸ್ ಇರುವುದು ಪತ್ತೆಯಾಗಿದೆ.

ಈ ಕುರಿತು ಮಾಹಿತಿ ನೀಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಚ್. ಎಲ್. ಜನಾರ್ದನ, ‘ಫೆ.18 ರಂದು ಬೆಂಗಳೂರಿನಿಂದ ಬಳ್ಳಾರಿ ನಗರಕ್ಕೆ ಅಣ್ಣ ಮತ್ತು ತಂಗಿ ಇಬ್ಬರು ಬಂದಿದ್ದರು. ಫೆ.20 ರಂದು ಇವರಲ್ಲಿ ಒಬ್ಬರಿಗೆ ಜ್ವರ ಕಾಣಿಸಿಕೊಂಡಿದೆ. ಇಬ್ಬರನ್ನೂ ಪರೀಕ್ಷೆಗೆ ಒಳಪಡಿಸಿದಾಗ ಒಬ್ಬರಿಗೆ ಕೋವಿಡ್ ದೃಢಪಟ್ಟಿದೆ. ನಂತರ ಇವರಿಬ್ಬರೊಂದಿಗೆ ಪ್ರಥಮ ಸಂಪರ್ಕದಲ್ಲಿದ್ದವರನ್ನು ಗುರುತಿಸಿ ಅವರನ್ನು ಪರೀಕ್ಷೆಗೆ ಒಳಪಡಿಸಿದಾಗ ಮತ್ತೊಬ್ಬರಿಗೆ ಸೋಂಕು ದೃಢಪಟ್ಟಿದೆ’ ಎಂದರು.

ಸೋಂಕಿತರಿಗೆ ಬಳ್ಳಾರಿಯ ಟ್ರಾಮಾಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ ನೀಡಿದ ಬಳಿಕ ಹೋಂ ಕ್ವಾರಂಟೈನ್ ಮಾಡಲಾಗಿದೆ ಎಂದರು.

## ಷೇರುಪೇಟೆ ವಹಿವಾಟು




## ಎನ್ಎಸ್ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 15,174 |
| ಇಂದಿನ ಅಂತ್ಯ | 15,030 |
| ▼ | 143 |
| ದಿನದ ಗರಿಷ್ಠ | 15,336 |

## ವಿನಿಮಯ ದರ

| | |
|---|---|
| $ ಡಾಲರ್ | 72.79 |
| £ ಪೌಂಡ್ | 101.27 |
| € ಯುರೊ | 86.75 |
| ¥ ಯೆನ್ (100ಕ್ಕೆ) | 66.67 |

## ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹400 |
| 12 ಮೊಟ್ಟೆಗೆ | ₹54 |
| ಮೈಸೂರು | |
| 100 ಮೊಟ್ಟೆಗೆ | ₹403 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1535 (1530) |
| ಸೋಯಾ (ರಿಫೈನ್ಡ್) | ₹1280(1255) |
| ಸೂರ್ಯಕಾಂತಿ (ರಿಫೈನ್ಡ್) | ₹1810 (1800) |
| ಪಾಮೋಲಿನ್ | ₹1235 (1220) |

## ಕೊಬ್ಬರಿ ಧಾರಣೆ

| | |
|---|---|
| ಬೆಂಗಳೂರು | --- |
| ಅರಸೀಕೆರೆ | ₹15400-15705 |
| ತುರುವೇಕೆರೆ | ₹15500-15500 |

## ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

| | |
|---|---|
| ದೊಡ್ಡ | ₹1000-1400 |
| ಮಧ್ಯಮ | ₹800-1000 |
| ಸಣ್ಣ | ₹400-800 |

## 'ಸೂರ್ಯೋದಯ' ಐಪಿಒ ಮಾ.17ರಿಂದ

ನವದೆಹಲಿ (ಪಿಟಿಐ): ಸೂರ್ಯೋದಯ ಕಿರು ಹಣಕಾಸು ಬ್ಯಾಂಕ್‌ನ ಷೇರುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಸುವ (ಐಪಿಒ) ಪ್ರಕ್ರಿಯೆ ಮಾರ್ಚ್ 17ರಿಂದ ಶುರುವಾಗಲಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 900 - 9050 |
| ನಡುಗೋಲು | 1000-1050 |
| ರಾಶಿ | 1200-1300 |
| ರಾಶಿ ಉತ್ತಮ | 1,300-1,400 |
| ಜರಡಿ | 1,500-1,550 |
| ಹೆರಕಿದ್ದು | 1,900-2,000 |
| ಹಸಿರು ಸಾಧಾರಣ | 1,300-1,400 |
| ಹಸಿರು ಉತ್ತಮ | 1,700-1,750 |
| ಹಸಿರು ಅತಿ ಉತ್ತಮ | 1,900-2,000 |
| ಕಾಳು ಮೆಣಸು | 340 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-40500 |
| ಹಳತು | 42500-50500 |
| **ಕಾರ್ಕಳ** | |
| ಹೊಸತು | 33000-39000 |
| ಹಳತು | 37000-45000 |
| **ಬೆಳ್ತಂಗಡಿ** | |
| ಹೊಸತು | 21000-39000 |
| ಹಳತು | 39400-49500 |
| ಇತರ | 24700-33500 |
| **ಸಿದ್ದಾಪುರ** | |
| ಬಿಳಿಗೋಟು | 23109-29869 |
| ಕೋಕ | 20399-30099 |
| ಚಾಲಿ | 34319-36899 |
| ಕೆಂಪುಗೋಟು | 22869-29789 |
| ರಾಶಿ | 39569-41499 |
| ತಟ್ಟಿಬೆಟ್ಟೆ | 29099-41319 |
| **ಹೊಸನಗರ** | |
| ಚಾಲಿ | 31909-32799 |
| ಬಿಳಿಗೋಟು | 20099-21399 |
| ಕೆಂಪುಗೋಟು | 28100-33299 |
| ರಾಶಿ | 39019-42899 |
| ಸರಕ | 14299-15269 |
| **ಚಿತ್ರದುರ್ಗ** | |
| ಅಪಿ | 41419-41889 |
| ಬೆಟ್ಟೆ | 33339-33779 |
| ಕೆಂಪುಗೋಟು | 29600-30000 |
| ರಾಶಿ | 40929-41369 |
| **ಕುಮಟಾ** | |
| ಚಿಪ್ಪು | 25069-28601 |
| ಕೋಕ | 17099-27589 |
| ಫ್ಯಾಕ್ಟರಿ | 14169-17731 |
| ಹಳೆಚಾಲಿ | 38569-40799 |
| ಹೊಸ ಚಾಲಿ | 33199-36211 |
| **ಪುತ್ತೂರು** | |
| ಕೋಕ | 9500-24000 |
| ಹೊಸತು | 28500-40500 |
| **ಯಲ್ಲಾಪುರ** | |
| ಅಪಿ | 49179-49179 |
| ಬಿಳಿಗೋಟು | 22899-32611 |
| ಕೋಕ | 19899-29299 |
| ಚಾಲಿ | 31000-38711 |
| ಕೆಂಪುಗೋಟು | 26899-32611 |
| ರಾಶಿ | 39829-45369 |
| ತಟ್ಟಿಬೆಟ್ಟೆ | 31009-39417 |
| **ಶಿವಮೊಗ್ಗ ಎಪಿಎಂಸಿ** | |
| ಬೆಟ್ಟೆ | 42019-43809 |
| ಗೊರಬಲು | 17500-31350 |
| ರಾಶಿ | 37699-42500 |
| ಸರಕು | 48299-74510 |
| **ಶಿವಮೊಗ್ಗ (ಮ್ಯಾಮ್ಕೋಸ್)** | |
| ಹಸ | 50000-74140 |
| ಬೆಟ್ಟೆ | 43809-43809 |
| ಗೊರಬಲು | 21500-31350 |
| ರಾಶಿ ಇಡಿ | 21500-31350 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ (ಸಿ.ಬಿ) | 241-378 |
| ದ್ವಿತಳಿ (ಬಿ.ವಿ) | 259-471 |

## ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 10000 | 10950 | 9970 | 132.35 ಸೆಂಟ್ಸ್ |
| ಎಸಿ | 39750 | 3900 | 3950 | ಲಂಡನ್ |
| ಆರ್‌ಪಿ | 5250 | 5200 | 5250 | |
| ಆರ್‌ಸಿ | 3000 | 2900 | 2965 | 1419 ಡಾಲರ್ಸ್ |

## ಮುಂಬೈ ಧಾರಣೆ

**ಶೇಂಗಾ**

12-3-2021

| | |
|---|---|
| ಜಾವಾ 70/80(ಹೊಸ) | 10550-10600 |
| ಜಾವಾ 80/90(ಹೊಸ) | 10250-10300 |
| ದಪ್ಪ ಮಧ್ಯಪ್ರದೇಶ(ಹೊಸ) | 9800-9900 |
| ದಪ್ಪ ಗುಜರಾತ್(ಹೊಸ) | 8800-8900 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1545(1540) |
| ಒಂದು ವಾರದ ಡೆಲಿವರಿ | 1540 (1535) |
| ಸೋಯಾ ಕಚ್ಚಾ | 1260 (1237) |
| ಪಾಮ್ ವಾರದ ಡೆಲಿವರಿ | 1233 (1218) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1770 (1760) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
44,300 (44,700)
ಬೆಳ್ಳಿ ಕೆ.ಜಿ
65,900 (67,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಸೆನ್ಸೆಕ್ಸ್ ಕುಸಿತ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 487 ಅಂಶ ಇಳಿಕೆ ದಾಖಲಿಸಿದೆ.

ಹೂಡಿಕೆದಾರರು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಬ್ಯಾಂಕ್‌ಗಳು ಹಾಗೂ ಆಟೊಮೊಬೈಲ್ ವಲಯದ ಷೇರುಗಳ ಮಾರಾಟಕ್ಕೆ ಮುಂದಾಗಿದ್ದೇ ಈ ಕುಸಿತಕ್ಕೆ ಕಾರಣ ಎಂದು ವರ್ತಕರು ಹೇಳಿದ್ದಾರೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಒಟ್ಟು 143 ಅಂಶ ಇಳಿಕೆ ಕಂಡಿತು. ಪವರ್ ಗ್ರಿಡ್, ಟೈಟಾನ್, ಒಎನ್‌ಜಿಸಿ ಮತ್ತು ಇನ್ಫೊಸಿಸ್ ಷೇರುಗಳು ಮಾತ್ರ ಸೆನ್ಸೆಕ್ಸ್‌ನಲ್ಲಿ ಏರಿಕೆ ಕಂಡವು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 12 ಪೈಸೆಯಷ್ಟು ಏರಿಕೆ ಕಂಡಿದೆ.

### ಮಹಾರಾಷ್ಟ್ರ, ಆಂಧ್ರದಿಂದ ಹೆಚ್ಚು ಆವಕದ ಕಾರಣ ದರ ಇಳಿಕೆ

# ಈರುಳ್ಳಿ ಬೆಲೆ ದಿಢೀರ್ ಕುಸಿತ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳಿಂದ ಅಪಾರ ಪ್ರಮಾಣದಲ್ಲಿ ಈರುಳ್ಳಿ ಬರುತ್ತಿರುವ ಕಾರಣ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಈರುಳ್ಳಿ ದರ ಭಾರಿ ಕುಸಿತ ಕಂಡಿದೆ.

ಮಾರ್ಚ್ ಆರಂಭದಲ್ಲಿ ಈರುಳ್ಳಿ ಪ್ರತಿ ಕ್ವಿಂಟಲ್ ದರ ₹3 ಸಾವಿರ ಇತ್ತು. ಒಂದೇ ವಾರದಲ್ಲಿ ಅರ್ಧದಷ್ಟು ದರ ಕುಸಿದಿದೆ. ಈರುಳ್ಳಿ ಆವಕ ಎಂದಿನಂತೆಯೇ ಇದೆ.

ಬೀದರ್‌ನಲ್ಲಿ ಸಗಟು ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಪ್ರತಿ ಕ್ವಿಂಟಲ್‌ಗೆ ₹ 1,500 ರಿಂದ ₹1,600 ಇದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಈರುಳ್ಳಿ ಪ್ರತಿ ಕೆ.ಜಿಗೆ ₹20 ದರದಲ್ಲಿ ಮಾರಾಟವಾಗುತ್ತಿದೆ. ಎರಡು ವಾರದ ಹಿಂದೆ ಕೆ.ಜಿಗೆ ₹50 ಇದ್ದ ಬೆಲೆ ಶುಕ್ರವಾರ ₹ 20ಕ್ಕೆ ಕುಸಿದಿದೆ.

ಯಾದಗಿರಿ ಜಿಲ್ಲೆಯಲ್ಲಿ ಈರುಳ್ಳಿ ಬೆಲೆಯು ಅರ್ಧಕ್ಕೆ ಕುಸಿದಿದೆ. ಫೆಬ್ರುವರಿ ಅಂತ್ಯಕ್ಕೆ ಈರುಳ್ಳಿ ದರ ಕ್ವಿಂಟಲ್‌ಗೆ ₹ 5 ಸಾವಿರ ಇತ್ತು. ಶುಕ್ರವಾರ ₹1,600ಕ್ಕೆ ಕುಸಿದಿದೆ.

'ಮಹಾರಾಷ್ಟ್ರದ ನಾಸಿಕ್ ಹಾಗೂ ಜಾಲನಾ ಜಿಲ್ಲೆಗಳಿಂದ ಈರುಳ್ಳಿ ಬೀದರ್ ಜಿಲ್ಲೆಗೆ ಆವಕವಾಗುತ್ತದೆ. ಈ ಬಾರಿ ಸ್ಥಳೀಯವಾಗಿಯೂ ಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ಬೆಳೆಯಲಾಗಿದೆ. ಉತ್ಪಾದನೆ ಹೆಚ್ಚಾಗಿರುವ ಕಾರಣ ಬೆಲೆ ಕುಸಿದಿದೆ' ಎಂದು ಈರುಳ್ಳಿ ವ್ಯಾಪಾರಿ ಮಕ್ಬೂಲ್ ತಿಳಿಸಿದ್ದಾರೆ.

'ನಾಸಿಕ್, ಪುಣೆಯ ಈರುಳ್ಳಿ ಹೆಚ್ಚು ಬಾಳಿಕೆ ಬರುತ್ತದೆ. ಆಂಧ್ರಪ್ರದೇಶ ಈರುಳ್ಳಿ ಒಂದು ತಿಂಗಳಾದರೂ ಕೆಡುವುದಿಲ್ಲ. ಪ್ರತಿ ಕ್ವಿಂಟಲ್‌ಗೆ ದರ ₹2,500 ಇದೆ. ಕಡಿಮೆ ದರದಲ್ಲಿ ಒಳ್ಳೆಯ ಈರುಳ್ಳಿ ಸಿಗುವುದರಿಂದ ಸ್ಥಳೀಯ ಈರುಳ್ಳಿ ಯಾರೂ ಕೇಳುವುದಿಲ್ಲ' ಎಂದು ಎಪಿಎಂಸಿ ಕಮಿಷನ್ ಏಜೆಂಟ್ ಶ್ರೀನಿವಾಸ್ ತಿಳಿಸಿದರು.


ಬೀದರ್‌ನ ಜನವಾಡ ರಸ್ತೆ ಬದಿಯ ತರಕಾರಿ ಅಂಗಡಿಯಲ್ಲಿ ಮಾರಾಟಕ್ಕೆ ಇಡಲಾದ ಈರುಳ್ಳಿ

### ಬೆಳೆಗಾರರಲ್ಲಿ ಆತಂಕ: ಕಟಾವಿಗೆ ಹಿಂದೇಟು

ಚಿತ್ರದುರ್ಗ: ಈರುಳ್ಳಿ ದರ ಏಕಾಏಕಿ ಕುಸಿದಿರುವುದು ಬೆಳೆಗಾರರಲ್ಲಿ ಆತಂಕ ಮೂಡಿಸಿದೆ. ಇದರಿಂದ ಈರುಳ್ಳಿ ಕಟಾವು ಮಾಡಲು ರೈತರು ಹಿಂದೇಟು ಹಾಕುತ್ತಿದ್ದಾರೆ.

ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ್ದ ಈರುಳ್ಳಿಯ ಕಟಾವು ನಡೆಯುತ್ತಿದೆ. ಅರ್ಧದಷ್ಟು ಈರುಳ್ಳಿ ಈಗಾಗಲೇ ಮಾರುಕಟ್ಟೆ ತಲುಪಿದೆ.

ಅತಿವೃಷ್ಟಿ ಕಾಣಿಸಿಕೊಂಡಿದ್ದರಿಂದ ಮುಂಗಾರು ಹಂಗಾಮಿನ ಈರುಳ್ಳಿ ರೈತರ ಕೈಸೇರಲಿಲ್ಲ. ಬೆಲೆ ಗಗನಕ್ಕೆ ಏರಿದ್ದನ್ನು ಕಂಡ ರೈತರು ಹಿಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಹೆಚ್ಚು ಈರುಳ್ಳಿ ಬಿತ್ತನೆ ಮಾಡಿದ್ದರು. ಜಿಲ್ಲೆಯ 15,223 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲಾಗಿದೆ. ಕಟಾವು ಮಾಡದ ರೈತರು ನಷ್ಟ ಅನುಭವಿಸುವ ಸಾಧ್ಯತೆ ಇದೆ.

'ಈರುಳ್ಳಿ ಬೀಜ, ಗೊಬ್ಬರದ ಬೆಲೆ ಏರಿಕೆಯಾಗಿದೆ. ಇಂಧನ ದರದಲ್ಲಿ ಆಗಿರುವ ಬದಲಾವಣೆ ಸಾಗಣೆ ವೆಚ್ಚವನ್ನು ಹೆಚ್ಚಿಸಿದೆ. ಈರುಳ್ಳಿಗೆ ಕನಿಷ್ಠ ಸಾವಿರ ದರ ಸಿಕ್ಕರೆ ಮಾತ್ರ ರೈತರಿಗೆ ಅನುಕೂಲ' ಎನ್ನುತ್ತಾರೆ ಚಿತ್ರದುರ್ಗ ತಾಲ್ಲೂಕಿನ ದೊಡ್ಡಸಿದ್ದವ್ವನಹಳ್ಳಿಯ ಬೆಳೆಗಾರ ಮಲ್ಲಿಕಾರ್ಜುನ್.

ಡಿಸೆಂಬರ್, ಜನವರಿ ಹಾಗೂ ಫೆಬ್ರುವರಿ ತಿಂಗಳಲ್ಲಿ ಅಕಾಲಿಕ ಮಳೆ ಸುರಿದಿದೆ. ಇದು ಈರುಳ್ಳಿ ಬೆಳೆಯ ಇಳುವರಿ ಮೇಲೆ ನೇರ ಪರಿಣಾಮ ಬೀರಿದೆ. ರೋಗಬಾಧೆ ಕಾಣಿಸಿಕೊಂಡು ಸರಾಸರಿಗಿಂತ ಕಡಿಮೆ ಇಳುವರಿ ಬಂದಿದೆ. ಇದರೊಂದಿಗೆ ದರವೂ ಕುಸಿದಿದ್ದರಿಂದ ಬೆಳೆಗಾರರು ತಲೆ ಮೇಲೆ ಕೈಹೊತ್ತು ಕುಳಿತಿದ್ದಾರೆ.

60 ಕೆ.ಜಿ. ಪ್ಯಾಕೆಟ್‌ಗೆ ₹ 1,500ದಿಂದ ₹ 2,200 ದರ ಹೊಂದಿದ್ದ ಈರುಳ್ಳಿ, ಎರಡು ವಾರದಿಂದ ಇಳಿಕೆ ಆಗಿದೆ. ಪ್ಯಾಕೆಟ್ ಬೆಲೆ ₹ 600ರಂತೆ ಮಾರಾಟವಾಗುತ್ತಿದೆ. ಮಾರುಕಟ್ಟೆಯಲ್ಲಿ 1 ಕೆ.ಜಿ. ಈರುಳ್ಳಿ ಬೆಲೆ ₹ 13ರಿಂದ ₹ 15ಕ್ಕೆ ನಿಗದಿಯಾಗಿದೆ.

# ಟೆಸ್ಲಾ, ಟಾಟಾ ಪವರ್ ನಡುವೆ ಮಾತುಕತೆ?

ಬೆಂಗಳೂರು (ರಾಯಿಟರ್ಸ್): ವಿದ್ಯುತ್ ಚಾಲಿತ ವಾಹನಗಳಿಗೆ ಅಗತ್ಯವಿರುವ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಟಾಟಾ ಪವರ್ ಕಂಪನಿಯ ಜೊತೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಟೆಸ್ಲಾ ಕಂಪನಿ ಪರಿಶೀಲನೆ ನಡೆಸಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಸಿಎನ್‌ಬಿಸಿ-ಟಿವಿ18 ವರದಿ ಮಾಡಿದೆ.

ಈ ವರದಿ ಪ್ರಕಟವಾದ ಬೆನ್ನಲ್ಲೇ ಟಾಟಾ ಪವರ್ ಷೇರುಗಳ ಮೌಲ್ಯದಲ್ಲಿ ಶೇ 5.5ರಷ್ಟು ಹೆಚ್ಚಳ ಆಗಿದೆ. ಟೆಸ್ಲಾ ಕಾರುಗಳು ಈ ವರ್ಷದಲ್ಲಿ ಭಾರತದ ಮಾರುಕಟ್ಟೆ ಪ್ರವೇಶಿಸುವ ನಿರೀಕ್ಷೆ ಇದೆ.

ಟೆಸ್ಲಾ ಕಂಪನಿಯು ವಿದ್ಯುತ್ ಚಾಲಿತ ಕಾರು ತಯಾರಿಕಾ ಘಟಕವನ್ನು ಕರ್ನಾಟಕದಲ್ಲಿ ಆರಂಭಿಸಲಿದೆ. ಟಾಟಾ ಪವರ್ ಮತ್ತು ಟೆಸ್ಲಾ ನಡುವಣ ಮಾತುಕತೆಗಳು ಆರಂಭಿಕ ಹಂತದಲ್ಲಿ ಇವೆ, ಅಂತಿಮ ತೀರ್ಮಾನ ಆಗಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. ಈ ಬಗ್ಗೆ ಟಾಟಾ ಪವರ್ ಹಾಗೂ ಟೆಸ್ಲಾ ಕಂಪನಿಗಳು ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.



ಟೆಸ್ಲಾ ಕಾರು (ಸಾಂದರ್ಭಿಕ ಚಿತ್ರ)



# ತೈಲ ಬೇಡಿಕೆ ಇಳಿಕೆ



ನವದೆಹಲಿ (ಪಿಟಿಐ): ದೇಶದಲ್ಲಿ ಇಂಧನಗಳ ಬಳಕೆಯಲ್ಲಿ ಫೆಬ್ರುವರಿ ತಿಂಗಳಿನಲ್ಲಿ ಇಳಿಕೆ ಕಂಡುಬಂದಿದೆ. ಪೆಟ್ರೋಲ್, ಡೀಸೆಲ್ ದರ ಗರಿಷ್ಠ ಮಟ್ಟದಲ್ಲಿ ಇರುವುದು ಈ ಇಳಿಕೆಗೆ ಕಾರಣ ಎನ್ನಲಾಗಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಧೀನದ 'ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಘಟಕ' (ಪಿಪಿಎಸಿ) ನೀಡಿರುವ ಅಂಕಿ-ಅಂಶಗಳ ಪ್ರಕಾರ ಫೆಬ್ರುವರಿಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬಳಕೆಯಲ್ಲಿ ಶೇಕಡ 4.9ರಷ್ಟು ಇಳಿಕೆ ಕಂಡುಬಂದಿದೆ.

ಹಿಂದಿನ ತಿಂಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ದೇಶದಲ್ಲಿ ದಾಖಲೆಯ ಮಟ್ಟಕ್ಕೆ ಏರಿಕೆ ಕಂಡವು. ನಂತರದಲ್ಲಿ ತೈಲೋತ್ಪನ್ನ ಮಾರಾಟ ಕಂಪನಿಗಳು ಬೆಲೆ ಹೆಚ್ಚಳಕ್ಕೆ ವಿರಾಮ ನೀಡಿವೆ. ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಆಡಳಿತ ಪಕ್ಷಕ್ಕೆ ತೊಂದರೆ ಆಗದಿರಲಿ ಎಂಬ ಕಾರಣ ಬೆಲೆ ಹೆಚ್ಚಳಕ್ಕೆ ವಿರಾಮ ನೀಡಲಾಗಿದೆ ಎನ್ನಲಾಗಿದೆ.

ದೇಶದಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವ ಇಂಧನವಾದ ಡೀಸೆಲ್ ಬೇಡಿಕೆಯು ಶೇ 8.5ರಷ್ಟು, ಪೆಟ್ರೋಲ್ ಬೇಡಿಕೆಯು ಶೇ 6.5ರಷ್ಟು ಇಳಿಕೆ ಆಗಿದೆ. ಆದರೆ, ಎಲ್‌ಪಿಜಿ ಸಿಲಿಂಡರ್ ಬೇಡಿಕೆಯಲ್ಲಿ ಶೇ 7.3ರಷ್ಟು ಏರಿಕೆ ಕಂಡುಬಂದಿದೆ.

# ಕೋವಿಡ್-19: ಲಸಿಕೆಯ ವೆಚ್ಚ ಭರಿಸಲು ಮುಂದಾದ ಕಂಪನಿಗಳು

● ಮಹೇಶ್ ಕುಲಕರ್ಣಿ

ಬೆಂಗಳೂರು: ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಕೋವಿಡ್-19 ಲಸಿಕೆಯ ವೆಚ್ಚವನ್ನು ಭರಿಸಲು ಹಲವು ಕಂಪನಿಗಳು ಮುಂದಾಗಿವೆ.

45 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ, ಆರೋಗ್ಯಕ್ಕೆ ಸಂಬಂಧಿಸಿದಂತೆ ಬೇರೆ ಸಮಸ್ಯೆಗಳನ್ನೂ ಎದುರಿಸುತ್ತಿರುವ ತಮ್ಮ ಸಿಬ್ಬಂದಿಯ ಹಾಗೂ ಅವರ ಕುಟುಂಬದ ಸದಸ್ಯರ ಲಸಿಕೆಯ ವೆಚ್ಚವನ್ನು ತಾವೇ ಭರಿಸುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್, ಟಿವಿಎಸ್ ಸಮೂಹ, ಆ್ಯಕ್ಸೆಂಚರ್, ಕಾಗ್ನಿಸೆಂಟ್, ಇನ್ಫೊಸಿಸ್, ಮಿಂತ್ರಾ ಮತ್ತು ಫ್ಲಿಪ್‌ಕಾರ್ಟ್, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್‌ನಂತಹ ಕಂಪನಿಗಳು ಘೋಷಿಸಿವೆ.




'ಭಾರತದಲ್ಲಿ ಆರು ಲಕ್ಷಕ್ಕೂ ಹೆಚ್ಚಿನ ಜನರ ಲಸಿಕೆ ವೆಚ್ಚವನ್ನು ನಾವೇ ಭರಿಸಲು ತೀರ್ಮಾನಿಸಿದ್ದೇವೆ. ಈ ಆರು ಲಕ್ಷ ಜನರಲ್ಲಿ ನಮ್ಮ 2 ಲಕ್ಷ ಜನ ಪೂರ್ಣಾವಧಿ ಸಿಬ್ಬಂದಿ ಮತ್ತು ಅವರ ಅವಲಂಬಿತರು ಕೂಡ ಸೇರಿದ್ದಾರೆ. ಹಾಗೆಯೇ, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಮತ್ತು ಅವರ ಕುಟುಂಬದ ಸದಸ್ಯರ ಲಸಿಕೆಯ ವೆಚ್ಚವನ್ನೂ ಭರಿಸಲಾಗುವುದು' ಎಂದು ಕಾಗ್ನಿಸೆಂಟ್ ಇಂಡಿಯಾ ಕಂಪನಿಯ ಅಧ್ಯಕ್ಷ ರಾಜೇಶ್ ನಂಬಿಯಾರ್ ಹೇಳಿದ್ದಾರೆ.

ತನ್ನ ಸಿಬ್ಬಂದಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ಲಸಿಕೆಯನ್ನು ನಿಯಮಗಳಿಗೆ ಅನುಸಾರವಾಗಿ ಒದಗಿಸಲು ಆರೋಗ್ಯ ಸೇವೆ ನೀಡುವವರ ಜೊತೆ ಒಪ್ಪಂದ ಮಾಡಿಕೊಳ್ಳಲು ಭಾರತದ ಎರಡನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿಯಾದ ಇನ್ಫೊಸಿಸ್ ಮುಂದಾಗಿದೆ.

ತನ್ನಲ್ಲಿ ಕೆಲಸ ಮಾಡುವ ಒಂದು ಲಕ್ಷ ಸಿಬ್ಬಂದಿ ಹಾಗೂ ಅವರ ಕುಟುಂಬದ ಸದಸ್ಯರ ಲಸಿಕೆಯ ವೆಚ್ಚವನ್ನು ತಾನೇ ಭರಿಸುವುದಾಗಿ ಎಚ್‌ಡಿಎಫ್‌ಸಿ ಬ್ಯಾಂಕ್ ಪ್ರಕಟಿಸಿದೆ.

# ಕೆಲವು ದೇಶಗಳಿಗೆ ತೈಲ ಪೂರೈಕೆ ಕಡಿತ

ನವದೆಹಲಿ/ಸಿಂಗಪುರ (ರಾಯಿಟರ್ಸ್): ಸೌದಿ ಅರೇಬಿಯಾ ದೇಶವು ಉತ್ತರ ಏಷ್ಯಾದ ಕನಿಷ್ಠ ನಾಲ್ಕು ದೇಶಗಳಿಗೆ ಏಪ್ರಿಲ್‌ನಲ್ಲಿ ಪೂರೈಕೆ ಆಗಬೇಕಿರುವ ಕಚ್ಚಾ ತೈಲದ ಪ್ರಮಾಣದಲ್ಲಿ ಕಡಿತ ಮಾಡಿದೆ. ಕಡಿತದ ಪ್ರಮಾಣವು ಗರಿಷ್ಠ ಶೇಕಡ 15ರವರೆಗೆ ಇರಲಿದೆ. ಆದರೆ, ಭಾರತಕ್ಕೆ ಪೂರೈಸಲಿರುವ ಕಚ್ಚಾ ತೈಲದ ಪ್ರಮಾಣವನ್ನು ಸೌದಿ ಅರೇಬಿಯಾ ಕಡಿಮೆ ಮಾಡಿಲ್ಲ.

ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳು ಹಾಗೂ ಆ ದೇಶಗಳ ಮಿತ್ರರಾಷ್ಟ್ರಗಳು (ಒಪೆಕ್ +) ಏಪ್ರಿಲ್‌ನಲ್ಲಿ ಕೂಡ ತೈಲ ಉತ್ಪಾದನೆ ಹೆಚ್ಚಿಸದಿರುವ ತೀರ್ಮಾನ ಕೈಗೊಂಡಿವೆ.

ಈ ತೀರ್ಮಾನದ ಬೆನ್ನಿಗೇ, ಸೌದಿ ಅರೇಬಿಯಾ ದೇಶವು ಈ ನಿರ್ಧಾರಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಚೀನಾದ ತೈಲ ಸಂಸ್ಕರಣಾ ಕಂಪನಿಗಳಿಗೆ ಸೌದಿ ಅರೇಬಿಯಾದಿಂದ ಬರುವ ಕಚ್ಚಾ ತೈಲದ ಪ್ರಮಾಣದಲ್ಲಿ ತುಸು ಕಡಿತ ಆಗಲಿದೆ.

ಜಪಾನ್‌ಗೆ ಸೌದಿಯಿಂದ ಬರುವ ಕಚ್ಚಾ ತೈಲದ ಪ್ರಮಾಣದಲ್ಲಿನ ಕಡಿತವು ಶೇ 10ರಿಂದ ಶೇ 15ರವರೆಗೆ ಇರಲಿದೆ ಎಂದು ಗೊತ್ತಾಗಿದೆ.

ಭಾರತಕ್ಕೆ ಪೂರೈಸುವ ಕಚ್ಚಾ ತೈಲದ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಭಾರತದ ತೈಲ ಸಂಸ್ಕರಣಾ ಕಂಪನಿಗಳು ಮಾಡಿದ್ದ ಮನವಿಯನ್ನು ಸೌದಿ ಪುರಸ್ಕರಿಸಿಲ್ಲವಾದರೂ, ಪೂರೈಕೆ ಕಡಿತ ಮಾಡಿಲ್ಲ ಎಂದು ಮೂಲಗಳು ಹೇಳಿವೆ.

# ಕಾರ್ಪೊರೇಷನ್, ಆಂಧ್ರ ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ ಬದಲು

ಬೆಂಗಳೂರು: ಆಂಧ್ರ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಜೊತೆ ವಿಲೀನಗೊಂಡಿರುವ ಪರಿಣಾಮವಾಗಿ ಎರಡೂ ಬ್ಯಾಂಕ್‌ಗಳ ಐಎಫ್‌ಎಸ್‌ಸಿ ಕೋಡ್‌ಗಳು ಬದಲಾಗಿವೆ.

ಆದರೆ, ಗ್ರಾಹಕರ ಬ್ಯಾಂಕ್ ಖಾತೆ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಹಳೆಯ ಐಎಫ್‌ಎಸ್‌ಸಿ ಕೋಡ್‌ಗಳು ಏಪ್ರಿಲ್ 1ರಿಂದ ಬಳಕೆಯಲ್ಲಿ ಇರುವುದಿಲ್ಲ ಎಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪ್ರಕಟಣೆಯಲ್ಲಿ ತಿಳಿಸಿದೆ.

ಆಂಧ್ರ ಬ್ಯಾಂಕ್‌ನ ಐಎಫ್‌ಎಸ್‌ಸಿ ಕೋಡ್ 'ಯುಬಿಐಎನ್08' ಮತ್ತು ಕಾರ್ಪೊರೇಷನ್ ಬ್ಯಾಂಕ್‌ನ ಐಎಫ್‌ಎಸ್‌ಸಿ ಕೋಡ್ 'ಯುಬಿಐಎನ್09'ರಿಂದ ಆರಂಭವಾಗುತ್ತದೆ.

ಬದಲಾದ ಐಎಫ್‌ಎಸ್‌ಸಿ ಮತ್ತು ಎಂಐಸಿಆರ್ ಕೋಡ್‌ಗಳನ್ನು ಹೊಂದಿರುವ ಹೊಸ ಚೆಕ್ ಬುಕ್‌ಗಳನ್ನು ಗ್ರಾಹಕರಿಗೆ ವಿತರಿಸಲಾಗುವುದು ಎಂದು ತಿಳಿಸಲಾಗಿದೆ.

ಐಎಫ್‌ಎಸ್‌ಸಿ ಕೋಡ್ ಪಡೆಯಲು ಗ್ರಾಹಕರು IFSC <OLD IFSC> ಎಂದು 09223008486 ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸುವಂತೆ ಅಥವಾ ಗ್ರಾಹಕರ ಸೇವಾ ಕೇಂದ್ರದ 1800-208-2244/1800-425-1515 ಸಂಖ್ಯೆಗಳಿಗೆ ಕರೆ ಮಾಡುವಂತೆ ಸೂಚಿಸಲಾಗಿದೆ. www.unionbankofindia.co.in ವೆಬ್‌ಸೈಟ್‌ನಲ್ಲಿ ಐಎಫ್‌ಎಸ್‌ಸಿ ಕೋಡ್ ತಿಳಿದುಕೊಳ್ಳಬಹುದು. ಬ್ಯಾಂಕ್ ಶಾಖೆಗೆ ಭೇಟಿ ನೀಡಿ, ಮೊಬೈಲ್ ಆ್ಯಪ್, ಇಂಟರ್‌ನೆಟ್ ಬ್ಯಾಂಕಿಂಗ್ ಅಥವಾ ಎಟಿಎಂ ಮೂಲಕ ಹೊಸ ಚೆಕ್ ಬುಕ್‌ಗೆ ಮನವಿ ಸಲ್ಲಿಸುವಂತೆ ಗ್ರಾಹಕರಿಗೆ ಯೂನಿಯನ್ ಬ್ಯಾಂಕ್ ಸೂಚನೆ ನೀಡಿದೆ.



ರಿಷಭ್ ಪಂತ್ –ರಾಯಿಟರ್ಸ್ ಚಿತ್ರ

## ಬೆರಗು ಮೂಡಿಸಿದ ರಿಷಭ್ ಸ್ವೀಪ್

ಅಹಮದಾಬಾದ್: ಶುಕ್ರವಾರ ರಾತ್ರಿ ಇಂಗ್ಲೆಂಡ್ ತಂಡದ ವೇಗಿ ಜೋಫ್ರಾ ಆರ್ಚರ್ ಎಸೆತವನ್ನು ರಿವರ್ಸ್ ಸ್ವೀಪ್ ಮೂಲಕ ಸಿಕ್ಸರ್‌ಗೆ ಎತ್ತಿದ ಭಾರತದ ಎಡಗೈ ಬ್ಯಾಟ್ಸ್‌ಮನ್ ರಿಷಭ್ ಪಂತ್ ಆಟವು ಕ್ರಿಕೆಟ್ ಲೋಕದಲ್ಲಿ ಅಚ್ಚರಿ ಮೂಡಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಸಂಚಲನಕ್ಕೂ ಕಾರಣವಾಗಿದೆ.

ಹೋದ ವಾರ ಇಲ್ಲಿಯೇ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ರಿಷಭ್, ಇಂಗ್ಲೆಂಡ್ ತಂಡದ ಅನುಭವಿ, ವೇಗದ ಬೌಲರ್ ಜೇಮ್ಸ್ ಆ್ಯಂಡರ್ಸನ್ ಅವರ ವೇಗದ ಎಸೆತವನ್ನು ರಿವರ್ಸ್ ಸ್ವೀಪ್ ಮೂಲಕ ಬೌಂಡರಿಗೆರೆ ದಾಟಿಸಿದ್ದರು. ಜೋಫ್ರಾ ಮತ್ತು ಆ್ಯಂಡರ್ಸನ್ ಸದ್ಯ ವಿಶ್ವದ ಶ್ರೇಷ್ಠ ವೇಗಿಗಳಾಗಿದ್ದಾರೆ.

'ಜೋಫ್ರಾ ಅವರು ಹಾಕಿದ ಆ ಎಸೆತವು ಪ್ರತಿ ಗಂಟೆಗೆ 90 ಕಿ.ಮೀ ವೇಗದ್ದಾಗಿತ್ತು. ಅದನ್ನು ರಿವರ್ಸ್ ಸ್ವೀಪ್ ಮೂಲಕ ಸಿಕ್ಸರ್ ಎತ್ತಿದ ರಿಷಭ್ ಹೊಸ ಸಾಧನೆ ಮಾಡಿದ್ದಾರೆ. ಅವರ ಧೈರ್ಯವನ್ನು ಮೆಚ್ಚಬೇಕು' ಎಂದು ಇಂಗ್ಲೆಂಡ್‌ನ ಮಾಜಿ ಕ್ರಿಕೆಟಿಗ ಕೆವಿನ್ ಪೀಟರ್ಸನ್ ಟ್ವೀಟ್ ಮಾಡಿದ್ದಾರೆ.

'ರಿವರ್ಸ್ ಸ್ವೀಪ್‌ನಲ್ಲಿ ಆ್ಯಂಡರ್ಸನ್‌ಗೆ ಬೌಂಡರಿ, ಜೋಫ್ರಾಗೆ ಸಿಕ್ಸರ್. ಇದು ರಿಷಭ್ ಪಂತ್ ಜಗತ್ತು' ಎಂದು ಭಾರತದ ಮಾಜಿ ಆಟಗಾರ ವಾಸೀಂ ಜಾಫರ್ ಟ್ವೀಟ್ ಮಾಡಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೂ ರಿಷಭ್ ಅವರನ್ನು ಅಭಿನಂದಿಸಿದೆ.

### ಇಂಗ್ಲೆಂಡ್ ಬೌಲರ್‌ಗಳ ಪಾರುಪತ್ಯ; ಶ್ರೇಯಸ್ ಅಯ್ಯರ್, ರಿಷಭ್ ಪಂತ್ ದಿಟ್ಟ ಆಟಕ್ಕೆ ಸಿಗದ ಫಲ

# ಜೋಫ್ರಾ ಮೋಡಿ: ಇಂಗ್ಲೆಂಡ್ ಜಯಭೇರಿ

ಅಹಮದಾಬಾದ್ (ಪಿಟಿಐ): ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್ ಬೌಲಿಂಗ್ ಮತ್ತು ನಾಯಕ ಏಯಾನ್ ಮಾರ್ಗನ್ ಅವರ ತಂತ್ರಗಾರಿಕೆಗೆ ಶುಕ್ರವಾರ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗೆಲುವು ಒಲಿಯಿತು.

ಭಾರತ ತಂಡದ ಎದುರಿನ ಐದು ಪಂದ್ಯಗಳ ಟ್ವೆಂಟಿ –20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಗೆದ್ದ ಪ್ರವಾಸಿ ಬಳಗವು 1–0 ಮುನ್ನಡೆ ಸಾಧಿಸಿತು. ಒತ್ತಡದಲ್ಲಿಯೂ ಅಂದವಾದ ಅರ್ಧಶತಕ ಗಳಿಸಿದ ಆತಿಥೇಯ ತಂಡದ ಶ್ರೇಯಸ್ ಅಯ್ಯರ್ (67; 48ಎಸೆತ, 8ಬೌಂಡರಿ 1ಸಿಕ್ಸರ್) ಮತ್ತು ದಿಟ್ಟ ಬ್ಯಾಟಿಂಗ್ ಮಾಡಿದ ರಿಷಭ್ ಪಂತ್ (21; 23ಎಸೆತ, 2 ಬೌಂಡರಿ, 1ಸಿಕ್ಸರ್ ) ಆಟ ಮಾತ್ರ ಭಾರತದ ಅಭಿಮಾನಿಗಳ ಮನದಲ್ಲಿ ಉಳಿಯಿತು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 124 ರನ್ ಗಳಿಸಿತು. ಈ ಸಣ್ಣ ಮೊತ್ತದ ಗುರಿಯನ್ನು ಇಂಗ್ಲೆಂಡ್ ತಂಡವು ಸುಲಭವಾಗಿ ಸಾಧಿಸಿತು. 15.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 130 ರನ್ ಗಳಿಸಿ ಗೆದ್ದಿತು. ಆರಂಭಿಕ ಬ್ಯಾಟ್ಸ್‌ಮನ್ ಜೇಸನ್ ರಾಯ್ (49) ಮತ್ತು ಜೋಸ್ ಬಟ್ಲರ್ (28) ಮೊದಲ ವಿಕೆಟ್‌ಗೆ 72 ರನ್ ಸೇರಿಸಿ ಜಯವನ್ನು ಸುಗಮಗೊಳಿಸಿದರು.

**ಶ್ರೇಯಸ್ ಆಟ:** ಮುಂಬೈ ಆಟಗಾರ ಶ್ರೇಯಸ್ ಕ್ರೀಸ್‌ಗೆ ಬಂದಾಗ ಆರಂಭಿಕ ಆಟಗಾರ ಕೆ.ಎಲ್. ರಾಹುಲ್, ನಾಯಕ ವಿರಾಟ್ ಕೊಹ್ಲಿ ಮತ್ತು ಶಿಖರ್ ಧವನ್ ಔಟಾಗಿ ಡಗ್‌ಔಟ್ ಸೇರಿದ್ದರು. ಆದರೆ, ಜೋಫ್ರಾ ಆರ್ಚರ್ ಅವರ ವೇಗದ ಎಸೆತದಲ್ಲಿ ರಿವರ್ಸ್ ಸ್ವೀಪ್ ಮೂಲಕ ಸಿಕ್ಸರ್ ಬಾರಿಸಿ, ಆತ್ಮವಿಶ್ವಾಸದಿಂದ ಆಡುತ್ತಿದ್ದ ರಿಷಭ್ ಪಂತ್ ಕ್ರೀಸ್‌ನಲ್ಲಿದ್ದರು. ಸ್ಕೋರ್‌ಬೋರ್ಡ್‌ನಲ್ಲಿ ಭಾರತದ ಮೊತ್ತವು ಮೂರು ವಿಕೆಟ್‌ಗಳಿಗೆ 20 ರನ್‌ಗಳಾಗಿತ್ತು. ಇನಿಂಗ್ಸ್‌ನಲ್ಲಿ ಇನ್ನೂ 15 ಓವರ್‌ಗಳು ಬಾಕಿ ಇದ್ದವು.



ಭಾರತ ತಂಡದ ಶ್ರೇಯಸ್ ಅಯ್ಯರ್ ಬ್ಯಾಟಿಂಗ್

ಈಚೆಗೆ ಇದೇ ಅಂಗಳದಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಶತಕ ಬಾರಿಸಿ ಭಾರತದ ಗೆಲುವಿನ ರೂವಾರಿಯಾಗಿದ್ದ ರಿಷಭ್ ಚುಟುಕು ಪಂದ್ಯದಲ್ಲಿಯೂ ಭರವಸೆಯ ಆಟವಾಡಿದರು. ಅವರ ದಿಟ್ಟತನದ ಹೊಡೆತಗಳಿಗೆ ಇಂಗ್ಲೆಂಡ್ ಬೌಲರ್‌ಗಳ ಮುಖದಲ್ಲಿ ಚಿಂತೆಯ ಗೆರೆಗಳು ಮೂಡಿದ್ದವು. ದೆಹಲಿಯ ರಿಷಭ್ ಜೊತೆಗೂಡಿದ ಶ್ರೇಯಸ್ ಚೇತೋಹಾರಿ ಆಟವಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 28 ರನ್‌ಗಳನ್ನು ಸೇರಿಸಿ ಭರವಸೆ ಮೂಡಿಸಿದರು.

ಆದರೆ, ಹತ್ತನೇ ಓವರ್‌ನಲ್ಲಿ ಬೆನ್ ಸ್ಟೋಕ್ಸ್ ಎಸೆತವನ್ನು ಸಿಕ್ಸರ್‌ಗೆ ಎತ್ತಲು ಪ್ರಯತ್ನಿಸಿದ ಪಂತ್, ಜಾನಿ ಬೆಸ್ಟೋಗೆ ಕ್ಯಾಚಿತ್ತರು. ಆಗ ಮತ್ತೆ ತಂಡದಲ್ಲಿ ಆತಂಕ ಮೂಡಿತು. ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ ತುಸು ತಾಳ್ಮೆಯಿಂದ ಆಡಿದರು.

ಶ್ರೇಯಸ್‌ಗೆ ಹೆಚ್ಚು ಅವಕಾಶ ಬಿಟ್ಟುಕೊಟ್ಟರು. ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ ಶ್ರೇಯಸ್, 36 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಹಾರ್ದಿಕ್ ಅವರೊಂದಿಗೆ ಐದನೇ ವಿಕೆಟ್ ಜೊತೆಯಾಟದಲ್ಲಿಯೂ 54 ರನ್ ಸೇರಿಸಿದರು. ಆದರೂ ತಂಡವು 100ರ ಗಡಿ ದಾಟಿದ್ದು 17ನೇ ಓವರ್‌ನಲ್ಲಿ. ಇದರಿಂದಾಗಿ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. 18ನೇ ಓವರ್‌ನಲ್ಲಿ ಜೋಫ್ರಾ ಸತತ ಎರಡು ಎಸೆತಗಳಲ್ಲಿ ಹಾರ್ದಿಕ್ ಮತ್ತು ಶಾರ್ದೂಲ್ ಠಾಕೂರ್ ವಿಕೆಟ್ ಕಬಳಿಸಿದರು. ಜೋರ್ಡಾನ್ ಹಾಕಿದ ಕೊನೆಯ ಓವರ್‌ನಲ್ಲಿ ಶ್ರೇಯಸ್ ಸಿಕ್ಸರ್ ಎತ್ತುವ ಪ್ರಯತ್ನ ಮಾಡಿದರು. ಆದರೆ ಬೌಂಡರಿ ಲೈನ್‌ನಲ್ಲಿ ಡೇವಿಡ್ ಮಲಾನ್ ಪಡೆದ ಆಕರ್ಷಕ ಕ್ಯಾಚ್‌ಗೆ ಶ್ರೇಯಸ್ ನಿರ್ಗಮಿಸಬೇಕಾಯಿತು.

**ಸೊನ್ನೆ ಸುತ್ತಿದ ಕೊಹ್ಲಿ:** ಇಂಗ್ಲೆಂಡ್ ತಂಡದ ನಾಯಕ ಏಯಾನ್ ಮಾರ್ಗನ್ ತಂತ್ರಗಾರಿಕೆಯು ಆರಂಭದಲ್ಲಿಯೇ ಫಲ ನೀಡಿತು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಜೋಫ್ರಾ ಆರ್ಚರ್ ಅವರ ಸ್ವಿಂಗ್ ಎಸೆತವು ಆಫ್‌ಸ್ಟಂಪ್ ಹೊರಗೆ ಇತ್ತು. ಅದನ್ನು ಡ್ರೈವ್ ಮಾಡಲು ಹೋದ ರಾಹುಲ್ ಬ್ಯಾಟ್‌ಗೆ ತಾಗಿದ ಚೆಂಡು ಒಳನುಗ್ಗಿ ಸ್ಟಂಪ್ ಎಗರಿಸಿತು.ನಂತರದ ಓವರ್‌ನಲ್ಲಿ ಆದಿಲ್ ರಶೀದ್ ಲೆಗ್‌ಸ್ಪಿನ್ ಆಡಲು ವಿರಾಟ್ ಕೊಹ್ಲಿ ಆಯ್ಕೆ ಮಾಡಿಕೊಂಡ ಹೊಡೆತವು ತಪ್ಪಾಗಿತ್ತು. ಕ್ರಿಸ್ ಜೋರ್ಡಾನ್‌ಗೆ ಸುಲಭದ ಕ್ಯಾಚ್ ನೀಡಿದ ಕೊಹ್ಲಿ ಸೊನ್ನೆ ಸುತ್ತಿದರು.

### ಸ್ಕೋರ್‌ಕಾರ್ಡ್

**ಭಾರತ 7ಕ್ಕೆ 124 (20 ಓವರ್‌ಗಳಲ್ಲಿ)**

| | |
|---|---|
| ಶಿಖರ್ ಧವನ್ ಬಿ ಮಾರ್ಕ್ ವುಡ್ | 4 |
| ಕೆ.ಎಲ್.ರಾಹುಲ್ ಬಿ ಜೋಫ್ರಾ ಆರ್ಚರ್ | 1 |
| ವಿರಾಟ್ ಕೊಹ್ಲಿ ಸಿ ಕ್ರಿಸ್ ಜೋರ್ಡಾನ್ ಬಿ ಆದಿಲ್ ರಶೀದ್ | 0 |
| ರಿಷಭ್ ಪಂತ್ ಸಿ ಜಾನಿ ಬೆಸ್ಟೊ ಬಿ ಬೆನ್ ಸ್ಟೋಕ್ಸ್ | 21 |
| ಶ್ರೇಯಸ್ ಅಯ್ಯರ್ ಸಿ ಡೇವಿಡ್ ಮಲಾನ್ ಬಿ ಕ್ರಿಸ್ ಜೋರ್ಡಾನ್ | 67 |
| ಹಾರ್ದಿಕ್ ಪಾಂಡ್ಯ ಸಿ ಕ್ರಿಸ್ ಜೋರ್ಡಾನ್ ಬಿ ಜೋಫ್ರಾ ಆರ್ಚರ್ | 19 |
| ಶಾರ್ದೂಲ್ ಠಾಕೂರ್ ಸಿ ಡೇವಿಡ್ ಮಲಾನ್ ಬಿ ಜೋಫ್ರಾ ಆರ್ಚರ್ | 0 |
| ವಾಷಿಂಗ್ಟನ್ ಸುಂದರ್ ಔಟಾಗದೆ | 3 |
| ಅಕ್ಷರ್ ಪಟೇಲ್ ಔಟಾಗದೆ | 7 |
| ಇತರೆ (ವೈಡ್ 2) | 2 |

**ವಿಕೆಟ್ ಪತನ:** 1–2 (ರಾಹುಲ್, 1.2), 2–3 (ವಿರಾಟ್, 2.3), 3–20 (ಧವನ್, 4.6), 4–48 (ರಿಷಭ್, 9.6), 5–102 (ಹಾರ್ದಿಕ್, 17.2), 6–102 (ಶಾರ್ದೂಲ್, 17.3), 7–117 (ಶ್ರೇಯಸ್, 19.3)

**ಬೌಲಿಂಗ್:** ಆದಿಲ್ ರಶೀದ್ 3–0–14–1, ಜೋಫ್ರಾ ಆರ್ಚರ್ 4–1–23–3, ಮಾರ್ಕ್ ವುಡ್ 4–0–20–1, ಕ್ರಿಸ್ ಜೋರ್ಡಾನ್ 4–0–27–1, ಬೆನ್ ಸ್ಟೋಕ್ಸ್ 3–0–25–1, ಸ್ಯಾಮ್ ಕರನ್ 2–0–15–0

**ಇಂಗ್ಲೆಂಡ್ 2ಕ್ಕೆ 130 (15.3 ಓವರ್‌ಗಳಲ್ಲಿ)**

| | |
|---|---|
| ಜೇಸನ್ ರಾಯ್ ಎಲ್‌ಬಿಡಬ್ಲ್ಯು ಬಿ ವಾಷಿಂಗ್ಟನ್ ಸುಂದರ್ | 49 |
| ಜೋಸ್ ಬಟ್ಲರ್ ಎಲ್‌ಬಿಡಬ್ಲ್ಯು ಬಿ ಯಜುವೇಂದ್ರ ಚಾಹಲ್ | 28 |
| ಡೇವಿಡ್ ಮಲಾನ್ ಔಟಾಗದೆ | 24 |
| ಜಾನಿ ಬೆಸ್ಟೊ ಔಟಾಗದೆ | 26 |
| ಇತರೆ (ವೈಡ್ 3) | 3 |

**ವಿಕೆಟ್ ಪತನ:** 1–72 (ಬಟ್ಲರ್, 7.6), 2–89 (ಜೇಸನ್ ರಾಯ್, 11.1)

**ಬೌಲಿಂಗ್:** ಅಕ್ಷರ್ ಪಟೇಲ್ 3–0–24–0, ಭುವನೇಶ್ವರ ಕುಮಾರ್ 2–0–15–0, ಯಜುವೇಂದ್ರ ಚಾಹಲ್ 4–0–44–1, ಶಾರ್ದೂಲ್ ಠಾಕೂರ್ 2–0–16–0 , ಹಾರ್ದಿಕ್ ಪಾಂಡ್ಯ 2–0–13–0, ವಾಷಿಂಗ್ಟನ್ ಸುಂದರ್ 2.3–0–18–1

**ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ ಎಂಟು ವಿಕೆಟ್‌ಗಳ ಜಯ; ಸರಣಿಯಲ್ಲಿ 1–0 ಮುನ್ನಡೆ

**ಪಂದ್ಯಶ್ರೇಷ್ಠ:** ಜೋಫ್ರಾ ಆರ್ಚರ್

**ಮುಂದಿನ ಪಂದ್ಯ:** ಮಾರ್ಚ್ 14ರಂದು, ಅಹಮದಾಬಾದ್‌ನಲ್ಲಿ

## ಸುದ್ದಿ 2 ನಿಮಿಷ

### ಮನೆಗೆ ಮರಳಿದ ಬಿಷನ್ ಸಿಂಗ್

ನವದೆಹಲಿ (ಪಿಟಿಐ): ಮೂರು ವಾರಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಾಜಿ ಕ್ರಿಕೆಟಿಗ ಬಿಷನ್ ಸಿಂಗ್ ಬೇಡಿ ಅವರು ಗುರುವಾರ ಮನೆಗೆ ಮರಳಿದ್ದಾರೆ.

74 ವರ್ಷದ ಬೇಡಿ ಅವರು ಹೃದಯದ ಬೈಪಾಸ್ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಇಲ್ಲಿಯ ಶ್ರೀ ಗಂಗಾರಾಮ್ ಆಸ್ಪತ್ರೆಯಲ್ಲಿ ಅವರು ಈ ಚಿಕಿತ್ಸೆ ಪಡೆದಿದ್ದರು. ಅದರ ನಂತರ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿದ್ದರಿಂದ ಅದಕ್ಕೂ ಶಸ್ತ್ರಚಿಕಿತ್ಸೆ ಆಗಿತ್ತು.

'ಶಸ್ತ್ರಚಿಕಿತ್ಸೆ ಮಾಡಿದ್ದ ಹೃದಯದ ಮೂರು ರಕ್ತನಾಳಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಫೆ. 18ರಂದು ಡಾ. ಗಣೇಶ್ ಶಿವಮಣಿ ಅವರು ಬೈಪಾಸ್ ಸರ್ಜರಿ ಮಾಡಿದ್ದರು. ಬೇಡಿಯವರು ಚೇತರಿಸಿಕೊಂಡಿದ್ದು, ಗುರುವಾರ ಮನೆಗೆ ಕಳುಹಿಸಲಾಗಿದೆ' ಎಂದು ಆಸ್ಪತ್ರೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



### ಬಿಎಫ್‌ಸಿ ಅಭ್ಯಾಸ ಆರಂಭ

ಬೆಂಗಳೂರು (ಪಿಟಿಐ): ಹೊಸ ಕೋಚ್ ಮಾರ್ಕೊ ಪೆಜಯೊಲಿ ಮಾರ್ಗದರ್ಶನದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತರಬೇತಿ ಶುಕ್ರವಾರ ಆರಂಭಗೊಂಡಿತು. ಇಂಡಿಯನ್ ಸೂಪರ್ ಲೀಗ್ ಟೂರ್ನಿಯಲ್ಲಿ ನೀರಸ ಪ್ರದರ್ಶನ ನೀಡಿದ ನಂತರ ಕೋಚ್ ಕಾರ್ಲಸ್ ಕ್ವದ್ರತ್ ತಂಡವನ್ನು ತೊರೆದಿದ್ದರು. ಹಂಗಾಮಿ ಕೋಚ್ ನೌಶಾದ್ ಮೂಸಾ ಮಾರ್ಗದರ್ಶನದಲ್ಲಿ ಉಳಿದ ಪಂದ್ಯಗಳನ್ನು ತಂಡ ಆಡಿತ್ತು.

ಈ ನಡುವೆ ಮಾರ್ಕೊ ಅವರನ್ನು ತಂಡದ ಆಡಳಿತ ನೇಮಕ ಮಾಡಿಕೊಂಡಿತ್ತು. ಎಎಫ್‌ಸಿ ಕಪ್ ಟೂರ್ನಿಗೆ ಸಜ್ಜಾಗುತ್ತಿರುವ ಬಿಎಫ್‌ಸಿಗೆ ಸದ್ಯ ನಾಯಕ ಸುನಿಲ್ ಚೆಟ್ರಿ ಲಭ್ಯರಿಲ್ಲ. ಕೋವಿಡ್–19 ಸೋಂಕು ತಗುಲಿರುವ ಕಾರಣ ಅವರು ಕಣಕ್ಕೆ ಇಳಿಯುತ್ತಿಲ್ಲ. ಹೊಸದಾಗಿ ತಂಡವನ್ನು ಸೇರಿಕೊಂಡಿರುವ ರೊಂಡು ಮುಸಾವು ಕಿಂಗ್ ತರಬೇತಿಗೆ ಹಾಜರಾಗಿದ್ದಾರೆ.

'ತಂಡದ ಜೊತೆ ಮೊದಲ ತರಬೇತಿ ಕಾರ್ಯಕ್ರಮ ಖುಷಿ ಕೊಟ್ಟಿತು. ಆಟಗಾರರು ನನ್ನ ಜೊತೆಗೆ ಕಳೆದ ಕ್ಷಣಗಳಲ್ಲಿ ಸಂತಸಗೊಂಡಿದ್ದಾರೆ ಎಂಬುದು ನನ್ನ ಅನಿಸಿಕೆ. ಮೊದಲ ತರಬೇತಿಯಲ್ಲೇ ಸಂಪೂರ್ಣ ಸಾಮರ್ಥ್ಯದಲ್ಲಿ ಆಡುವ ಭರವಸೆ ಮೂಡಿಸಿದ್ದಾರೆ. ಇದು ಅಭಿನಂದನಾರ್ಹ' ಎಂದು ಮಾರ್ಕೊ ಹೇಳಿದರು.

'ಬಿ' ತಂಡದ ಜಗದೀಪ್ ಸಿಂಗ್, ದಮೈತ್‌ಫಂಗ್ ಲಿಂಗ್ಡೊ ಮತ್ತು ಒಮೇಗಾ ವನ್‌ಲಾಲ್‌ರೈತುಂಗ ಸೇರಿದಂತೆ ಒಟ್ಟು 22 ಮಂದಿ ಆಟಗಾರರು ತರಬೇತಿಯಲ್ಲಿ ಪಾಲ್ಗೊಂಡಿದ್ದರು. ತಂಡದ ಎಎಫ್‌ಸಿ ಕಪ್ ಅರ್ಹತಾ ಸುತ್ತಿನ ಎರಡನೇ ಹಂತದ ಪಂದ್ಯ ಏಪ್ರಿಲ್ 14ರಂದು ಗೋವಾದ ಜಿಎಂಸಿ ಕ್ರೀಡಾಂಗಣದಲ್ಲಿ ನಡೆಯಲಿದೆ.

### ದಕ್ಷಿಣ ಆಫ್ರಿಕಾ ಎದುರಿನ 3ನೇ ಏಕದಿನ ಪಂದ್ಯ; ಪೂನಂ 2ನೇ ಅರ್ಧಶತಕ

# ಲೀ ಆಟಕ್ಕೆ ಮಣಿದ ಭಾರತ ಮಹಿಳೆಯರು

ಲಖನೌ (ಪಿಟಿಐ): ಮೊದಲ ಪಂದ್ಯದಲ್ಲಿ ಅಮೋಘ ಜೊತೆಯಾಟದ ಮೂಲಕ ತಂಡಕ್ಕೆ ಸುಲಭ ಜಯ ಗಳಿಸಿಕೊಟ್ಟ ಆರಂಭಿಕ ಬ್ಯಾಟರ್ ಲಿಜೆಲಿ ಲೀ ಶುಕ್ರವಾರ ಇಲ್ಲಿ ಮತ್ತೊಮ್ಮೆ ತಮ್ಮ ಬ್ಯಾಟಿಂಗ್ ವೈಭವ ಪ್ರದರ್ಶಿಸಿದರು. ಅವರ ಮೋಹಕ ಶತಕದ (ಔಟಾಗದೆ 132; 131 ಎಸೆತ, 16 ಬೌಂಡರಿ, 2 ಸಿಕ್ಸರ್) ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ಭಾರತ ಎದುರಿನ ಏಕದಿನ ಸರಣಿಯ ಮೂರನೇ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಏಕಾನ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 249 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 46.3 ಓವರ್‌ಗಳಲ್ಲಿ ತಂಡ ನಾಲ್ಕು ವಿಕೆಟ್‌ಗಳಿಗೆ 223 ರನ್ ಗಳಿಸಿದ್ದಾಗ ಮಳೆ ಸುರಿಯಿತು. ಹೀಗಾಗಿ ಡಕ್ವರ್ಥ್ ಲೂಯಿಸ್ ನಿಯಮದಡಿ ದಕ್ಷಿಣ ಆಫ್ರಿಕಾ ಆರು ರನ್‌ಗಳಿಂದ ಗೆದ್ದಿತು. ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ 2–1ರ ಮುನ್ನಡೆ ಸಾಧಿಸಿತು.

ತಂಡಕ್ಕೆ ಆರಂಭಿಕ ಬ್ಯಾಟರ್‌ಗಳಾದ ಲೀ ಮತ್ತು ಲೌರಾ ವೊಲ್ವಾರ್ಟ್ 41 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿಕೊಟ್ಟರು. ವೊಲ್ವಾರ್ಟ್ ವಿಕೆಟ್ ಉರುಳಿದ ನಂತರ ಲೀ ಮತ್ತು ಲಾರಾ ಗೊಡಾಲ್ 40 ರನ್‌ಗಳ ಜೊತೆಯಾಟ ಆಡಿದರು. ನಂತರ ವಿಕೆಟ್‌ಗಳು ಉರುಳುತ್ತಿದ್ದರೂ ಲೀ ಏಕಾಂಗಿಯಾಗಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.



ಲಿಜೆಲಿ ಲೀ –ಟ್ವಿಟರ್ ಚಿತ್ರ

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಆತಿಥೇಯರನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ತಂಡ ಖಾತೆ ತೆರೆಯುವ ಮೊದಲೇ ಇನಿಂಗ್ಸ್‌ನ ಎರಡನೇ ಎಸೆತದಲ್ಲಿ ಜೆಮಿಮಾ ರಾಡ್ರಿಗಸ್ ಔಟಾಗಿ ಮರಳಿದರು. ನಂತರ ಸ್ಮೃತಿ ಮಂದಾನ ಮತ್ತು ಪೂನಂ ರಾವತ್ ಕೆಚ್ಚೆದೆಯಿಂದ ಆಡಿ ಎರಡನೇ ವಿಕೆಟ್‌ಗೆ 63 ರನ್‌ಗಳ ಜೊತೆಯಾಟ ಆಡಿದರು. ಸ್ಮೃತಿ ಔಟಾದ ನಂತರ ಪೂನಂ ಮತ್ತು ನಾಯಕಿ ಮಿಥಾಲಿ ರಾಜ್ 77 ರನ್‌ಗಳನ್ನು ಸೇರಿಸಿದರು.

ಪೂನಂ (77; 108ಎ, 11 ಬೌಂ) ಸತತ ಎರಡನೇ ಅರ್ಧಶತಕ ಗಳಿಸಿದರು. ಹರ್ಮನ್‌ಪ್ರೀತ್ ಕೌರ್ ಮತ್ತು ದೀಪ್ತಿ ಶರ್ಮಾ ಕೂಡ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಹೀಗಾಗಿ ತಂಡಕ್ಕೆ ಸ್ಪರ್ಧಾತ್ಮಕ ಮೊತ್ತ ಗಳಿಸಲು ಸಾಧ್ಯವಾಯಿತು.

**ಸಂಕ್ಷಿಪ್ತ ಸ್ಕೋರು: ಭಾರತ:** 50 ಓವರ್‌ಗಳಲ್ಲಿ 5ಕ್ಕೆ 248 (ಸ್ಮೃತಿ ಮಂದಾನ 25, ಪೂನಂ ರಾವತ್ 77, ಮಿಥಾಲಿ ರಾಜ್ 36, ಹರ್ಮನ್‌ಪ್ರೀತ್ ಕೌರ್ 36, ದೀಪ್ತಿ ಶರ್ಮಾ 36; ಶಬ್ನಿಮ್ ಇಸ್ಮಾಯಿಲ್ 46ಕ್ಕೆ2, ಮರಿಜನೆ ಕಾಪ್ 47ಕ್ಕೆ1, ತೂಮಿ ಸೇಖುಖೂನೆ 53ಕ್ಕೆ1, ಅನಿ ಬಾಸ್ 29ಕ್ಕೆ1); **ದಕ್ಷಿಣ ಆಫ್ರಿಕಾ:** 46.3 ಓವರ್‌ಗಳಲ್ಲಿ 4ಕ್ಕೆ223 (ಲಿಜೆಲಿ ಲೀ ಔಟಾಗದೆ 132, ಮಿಗ್ನನ್ ಡು ಪ್ರೀಜ್ 37; ಜೂಲನ್ ಗೋಸ್ವಾಮಿ 20ಕ್ಕೆ2, ರಾಜೇಶ್ವರಿ ಗಾಯಕವಾಡ್ 39ಕ್ಕೆ1, ದೀಪ್ತಿ ಶರ್ಮಾ 39ಕ್ಕೆ1). **ಫಲಿತಾಂಶ:** ದಕ್ಷಿಣ ಆಫ್ರಿಕಾ ತಂಡಕ್ಕೆ ಆರು ರನ್‌ಗಳ ಜಯ (ಡಕ್ವರ್ಥ್ ಲೂಯಿಸ್ ನಿಯಮದಡಿ); ಸರಣಿಯಲ್ಲಿ 2–1ರ ಮುನ್ನಡೆ.

## ಹತ್ತು ಸಾವಿರ ರನ್‌ಗಳ ಒಡತಿ ಮಿಥಾಲಿ ರಾಜ್

ಲಖನೌ (ಪಿಟಿಐ): ಭಾರತ ಮಹಿಳಾ ಏಕದಿನ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹತ್ತು ಸಾವಿರ ರನ್‌ಗಳನ್ನು ಗಳಿಸಿದ ಸಾಧನೆ ಮಾಡಿದರು.

ದಕ್ಷಿಣ ಆಫ್ರಿಕಾ ವಿರುದ್ಧ ಇಲ್ಲಿ ನಡೆದ ಮೂರನೇ ಏಕದಿನ ಪಂದ್ಯದ 28ನೇ ಓವರ್‌ನಲ್ಲಿ ಆ್ಯನ್ ಬಾಷ್ ಅವರ ಎಸೆತವನ್ನು ಬೌಂಡರಿಗಟ್ಟುವ ಮೂಲಕ ಈ ಹಿರಿಮೆಗೆ ಪಾತ್ರರಾದರು. ಪಂದ್ಯದಲ್ಲಿ ಅವರು 36 ರನ್ ಗಳಿಸಿದರು.



ಮಿಥಾಲಿ ರಾಜ್–ಪಿಟಿಐ ಚಿತ್ರ

ಹತ್ತು ಸಾವಿರ ರನ್ ಗಳಿಸಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡಿದ್ದಾರೆ.

ಅವರ ಈ ಸಾಧನೆಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೇರಿದಂತೆ ಹಲವು ಪ್ರಮುಖ ಆಟಗಾರರು ಶ್ಲಾಘಿಸಿದ್ದಾರೆ.

38 ವರ್ಷದ ಮಿಥಾಲಿ, ಇಂಗ್ಲೆಂಡ್‌ನ ಚಾರ್ಲೆಟ್ ಎಡ್ವರ್ಡ್ಸ್ ಅವರ ಜೊತೆ 10 ಸಾವಿರ ರನ್ ಪೂರೈಸಿದವರ ಎಲೀಟ್ ಕ್ಲಬ್ ಸೇರಿದ್ದಾರೆ.

**ಪದಾರ್ಪಣೆ:** 1999ರಲ್ಲಿ ಮಿಲ್ಟನ್ ಕೆನೆಸ್‌ನಲ್ಲಿ ಐರ್ಲೆಂಡ್ ಎದುರು ನಡೆದ ಏಕದಿನ ಪಂದ್ಯ. **ಬ್ಯಾಟಿಂಗ್ ಶೈಲಿ** : ಬಲಗೈ ಆಟಗಾರ್ತಿ **ಬೌಲಿಂಗ್**: ಸ್ಪಿನ್ನರ್

| ಮಾದರಿ | ಪಂದ್ಯ | ರನ್ | ಗರಿಷ್ಠ | ಶತಕ | ಅರ್ಧಶತಕ |
|---|---|---|---|---|---|
| ಟೆಸ್ಟ್ | 10 | 663 | 214 | 1 | 4 |
| ಏಕದಿನ | 212 | 6974 | 125* | 7 | 54 |
| ಟಿ–20 | 89 | 2364 | 97* | - | 17 |

**ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದವರು**

| ಆಟಗಾರ್ತಿ | ದೇಶ | ಆಡಿದ ಒಟ್ಟು ಪಂದ್ಯ (ಮೂರೂ ಮಾದರಿಗಳು) | ರನ್ |
|---|---|---|---|
| ಚಾರ್ಲೆಟ್ ಎಡ್ವರ್ಡ್ಸ್ | ಇಂಗ್ಲೆಂಡ್ | 309 | 10,273 |
| ಮಿಥಾಲಿ ರಾಜ್ | ಭಾರತ | 311 | 10,001 |
| ಸೂಜಿಬೆ ಬೇಟ್ಸ್ | ನ್ಯೂಜಿಲೆಂಡ್ | 247 | 7,849 |
| ಸ್ಟೆಫಾನಿ ಟೇಲರ್ | ವೆಸ್ಟ್ ಇಂಡೀಸ್ | 234 | 7,816 |
| ಮೆಗ್ ಲ್ಯಾನಿಂಗ್ | ಆಸ್ಟ್ರೇಲಿಯಾ | 193 | 6,900 |

## ಐಎಸ್‌ಎಲ್: ಮುಂಬೈ–ಎಟಿಕೆಎಂಬಿ ಹಣಾಹಣಿ

ಮಡಗಾಂವ್ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಮುಂಬೈ ಸಿಟಿ ಎಫ್‌ಸಿ ಹಾಗೂ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡಗಳು ಶನಿವಾರ ಸೆಣಸಲಿವೆ.

ಸೆಮಿಫೈನಲ್‌ನಲ್ಲಿ ಆತಿಥೇಯ ಎಫ್‌ಸಿ ಗೋವಾವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿರುವ ಮುಂಬೈ ಸಿಟಿ ತಂಡ ತುಸು ಹೆಚ್ಚೇ ಆತ್ಮವಿಶ್ವಾಸದಲ್ಲಿದೆ.

ಇದೇ ಮೊದಲ ಬಾರಿ ಫೈನಲ್ ತಲುಪಿರುವ ಮುಂಬೈ ಚಾಂಪಿಯನ್ ಪಟ್ಟದ ನಿರೀಕ್ಷೆಯಲ್ಲಿದೆ. ಕೋಚ್ ಸೆರ್ಜಿಯೊ ಲೋಬೆರಾ ಕೂಡ ಇದೇ ವಿಶ್ವಾಸದಲ್ಲಿದ್ದಾರೆ.

'ಎಟಿಕೆಎಂಬಿ ಉತ್ತಮ ಆಟಗಾರರನ್ನು ಒಳಗೊಂಡ ಅತ್ಯುತ್ತಮ ತಂಡ. ಆದರೆ ನಾವು ಪಂದ್ಯದ ಮೇಲೆ ಹೆಚ್ಚು ಗಮನಹರಿಸಿ, ಸಾಧ್ಯವಾದಷ್ಟು ಉತ್ತಮ ಸಾಮರ್ಥ್ಯ ತೋರಲು ಪ್ರಯತ್ನಿಸುತ್ತೇವೆ. ಯಾವುದೇ ವಿಶೇಷವಾದ ಕಾರ್ಯತಂತ್ರಗಳನ್ನು ಹೆಣೆದಿಲ್ಲ. ಶತ ಪ್ರತಿಶತ ಪ್ರಯತ್ನ ಇದ್ದೇ ಇರುತ್ತದೆ' ಎಂದು ಲೋಬೆರಾ ಹೇಳಿದ್ದಾರೆ.

ಮುಂಬೈ ತಂಡದ ಆಯ್ಕೆಯಲ್ಲಿ ಒಂದಷ್ಟು ಗೊಂದಲಗಳಿವೆ. ಮಂದಾರ ರಾವ್ ದೇಸಾಯಿ ಅಮಾನತುಗೊಂಡಿರುವ ಕಾರಣ ಅವರ ಸ್ಥಾನಕ್ಕೆ ಬೇರೊಬ್ಬರನ್ನು ಆಯ್ಕೆ ಮಾಡಬೇಕಿದೆ.

ಪಂದ್ಯ ಆರಂಭ ಸಂಜೆ 7.30

ಸ್ಥಳ: ಫಟೋರ್ಡಾ ಕ್ರೀಡಾಂಗಣ, ಮಡಗಾಂವ್

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನಾಕೌಟ್ ಪಂದ್ಯಗಳಲ್ಲಿ ಅದ್ಭುತ ದಾಖಲೆಗಳ ಬಲ ಹೊಂದಿರುವ ಆಂಟೋನಿಯೊ ಹಬಾಸ್ ತರಬೇತಿಯಲ್ಲಿ ಎಟಿಕೆಎಂಬಿ ಪಳಗಿದೆ. ಅವರ ನೇತೃತ್ವದಲ್ಲಿ ಎಟಿಕೆ ತಂಡವು ಈಗಾಗಲೇ ಎರಡು ಬಾರಿ ಪ್ರಶಸ್ತಿ ಜಯಿಸಿದೆ. ಇಲ್ಲಿ ಗೆದ್ದರೆ ಸತತ ಎರಡನೇ ಬಾರಿ (ಒಟ್ಟಾರೆ ಮೂರು) ತಂಡವೊಂದನ್ನು ಚಾಂಪಿಯನ್ ಆಗಿಸಿದ ಶ್ರೇಯ ಅವರ ಪಾಲಾಗಲಿದೆ.

'ಗೆಲ್ಲುವೊಂದೇ ನಮ್ಮ ಕಾರ್ಯತಂತ್ರ. ಈ ಹಣಾಹಣಿಗೆ ನಮ್ಮ ತಂಡ ಸಂಪೂರ್ಣ ಸಜ್ಜಾಗಿದೆ. ಹಿಂದಿನ ಪಂದ್ಯಗಳ ಫಲಿತಾಂಶಗಳ ಕುರಿತು ತಲೆಕೆಡಿಸಿಕೊಳ್ಳುವುದಿಲ್ಲ' ಎಂದು ಹಬಾಸ್ ನುಡಿದರು.

# ಟೂಲ್‌ಕಿಟ್ ಪ್ರಕರಣ: ಮತ್ತೊಬ್ಬ ಆರೋಪಿಗೆ ಬಂಧನದಿಂದ ರಕ್ಷಣೆ

ನವದೆಹಲಿ (ಪಿಟಿಐ): ರೈತರ ಪ್ರತಿಭಟನೆಗೆ ಸಂಬಂಧಿಸಿದ ಟೂಲ್‌ಕಿಟ್ ಅನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಆರೋಪ ಹೊತ್ತಿರುವ ಪರಿಸರ ಕಾರ್ಯಕರ್ತ ಶುಭಮ್ ಕರ್ ಚೌಧರಿ ಅವರಿಗೆ ಬಂಧನದಿಂದ ಮಧ್ಯಂತರ ರಕ್ಷಣೆಯನ್ನು ಮೂರು ದಿನಗಳವರೆಗೆ ವಿಸ್ತರಿಸಿ ದೆಹಲಿ ನ್ಯಾಯಾಲಯ ಶುಕ್ರವಾರ ಆದೇಶ ನೀಡಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಚೌಧರಿ ಅವರು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಯನ್ನು ಮುಂದೂಡುವಂತೆ ಪೊಲೀಸರು ಮನವಿ ಮಾಡಿದರು.

ನಂತರ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಧರ್ಮೇಂದರ್ ರಾಣಾ ಅವರು ಆರೋಪಿಗಳಿಗೆ ಮಧ್ಯಂತರ ರಕ್ಷಣೆಯನ್ನು ವಿಸ್ತರಿಸಿದರು.

ಚೌಧರಿ ಅವರಿಗೆ ಬಾಂಬೆ ಹೈಕೋರ್ಟ್‌ನ ಗೋವಾ ನ್ಯಾಯಪೀಠ ಇತ್ತೀಚೆಗೆ ಜಾಮೀನು ನೀಡಿತ್ತು. ಇದೇ ಪ್ರಕರಣದ ಸಹ ಆರೋಪಿಗಳಾದ ಪರಿಸರ ಕಾರ್ಯಕರ್ತೆ ದಿಶಾ ರವಿ ಮತ್ತು ಶಾಂತನು ಮುಕುಲ್ ಅವರು ಸಲ್ಲಿಸಿರುವ ನಿರೀಕ್ಷಣಾ ಜಾಮೀನಿನ ಅರ್ಜಿಯ ವಿಚಾರಣೆ ಮಾರ್ಚ್ 15ರಂದು ನಡೆಯಲಿರುವ ಕಾರಣ, ಅಲ್ಲಿಯವರೆಗೂ ಈ ವಿಚಾರಣೆಯನ್ನು ಮುಂದೂಡುವಂತೆ ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಿದರು.

ಮುಂದಿನ ವಿಚಾರಣೆಯ ದಿನಾಂಕದವರೆಗೆ ಆರೋಪಿಗಳ ವಿರುದ್ಧ ಯಾವುದೇ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ನ್ಯಾಯಾಲಯ ನಿರ್ದೇಶಿಸಿತು.

## ಮದನ್ ಉತ್ತರಾಖಂಡ ಬಿಜೆಪಿ ಘಟಕದ ಅಧ್ಯಕ್ಷ

ನವದೆಹಲಿ (ಪಿಟಿಐ): ಹರಿದ್ವಾರ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಆಯ್ಕೆಯಾಗಿರುವ ಮದನ್ ಕೌಶಿಕ್ ಅವರನ್ನು ಉತ್ತರಾಖಂಡ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರನ್ನಾಗಿ ಪಕ್ಷ ನೇಮಕ ಮಾಡಿದೆ. ಇದುವರೆಗೆ ಅಧ್ಯಕ್ಷರಾಗಿದ್ದ ಶಾಸಕ ಬಂಶಿಧರ್ ಭಾಗವತ್ ಅವರು, ನೂತನ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ಸರ್ಕಾರದಲ್ಲಿ ಸಚಿವರಾಗುವ ನಿರೀಕ್ಷೆ ಇದೆ.



ಮದನ್ ಕೌಶಿಕ್

ಉತ್ತರಾಖಂಡದಲ್ಲಿ ರಜಪೂತರು ಮತ್ತು ಬ್ರಾಹ್ಮಣರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ನೂತನ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ರಜಪೂತ ಸಮುದಾಯಕ್ಕೆ ಸೇರಿದವರು. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಬ್ರಾಹ್ಮಣ ಸಮುದಾಯದವರ ನೇಮಕಾತಿ ನಡೆದಿದೆ ಎಂದು ಹೇಳಲಾಗಿದೆ. ರಾಜ್ಯದಲ್ಲಿ ಮುಂದಿನ ವರ್ಷದ ಆರಂಭದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ.

## ಸಿಬಿಐ ನಿರ್ದೇಶಕರ ನೇಮಕ: ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಕಾಯಂ ನಿರ್ದೇಶಕರೊಬ್ಬರನ್ನು ನೇಮಿಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಕೆಯಾದ ಅರ್ಜಿಯ ಮೇರೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರದಿಂದ ಪ್ರತಿಕ್ರಿಯೆ ಕೇಳಿದೆ.

'ಕಾಮನ್ ಕಾಸ್' ಹೆಸರಿನ ಸರ್ಕಾರೇತರ ಸಂಘಟನೆಯೊಂದು ಸಲ್ಲಿಸಿದ ಈ ಅರ್ಜಿಯ ಮೇರೆಗೆ ಎರಡು ವಾರದೊಳಗೆ ಉತ್ತರ ನೀಡಲು ಸೂಚಿಸಿ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಎಸ್.ರವೀಂದ್ರ ಭಟ್ ಅವರಿದ್ದ ಪೀಠ ಕೇಂದ್ರಕ್ಕೆ ನೋಟಿಸ್ ಜಾರಿಗೊಳಿಸಿತು.

'ಈ ಹಿಂದಿನ ಸಿಬಿಐ ನಿರ್ದೇಶಕ ರಿಶಿ ಕುಮಾರ್ ಶುಕ್ಲಾ ಅವರ ಅಧಿಕಾರ ಅವಧಿ ಫೆಬ್ರುವರಿ 2ಕ್ಕೆ ಕೊನೆಗೊಂಡಿದೆ. ದೆಹಲಿ ವಿಶೇಷ ಪೊಲೀಸ್ ವ್ಯವಸ್ಥೆ (ಡಿಎಸ್‌ಪಿಇ) ಕಾಯ್ದೆಯ 4ಎ ಸೆಕ್ಷನ್ ಪ್ರಕಾರ, ಸಿಬಿಐಗೆ ಕಾಯಂ ನಿರ್ದೇಶಕರೊಬ್ಬರನ್ನು ನೇಮಿಸಲು ಸರ್ಕಾರ ವಿಫಲವಾಗಿದೆ' ಎಂದು ಅರ್ಜಿದಾರರು ದೂರಿದ್ದರು.

'ಕಾಯಂ ನಿರ್ದೇಶಕರ ನೇಮಕ ಆಗದ ಕಾರಣ ಸಿಬಿಐ ಕೆಲಸಗಳಿಗೆ ತೊಂದರೆಯಾಗಿದೆ. ಮುಂದಿನ ವಾರವೇ ಈ ವಿಚಾರವನ್ನು ಮತ್ತೆ ಕೈಗೆತ್ತಿಕೊಳ್ಳಬೇಕು' ಎಂದು ಎನ್‌ಜಿಒ ಪರ ವಕೀಲ ಪ್ರಶಾಂತ್ ಭೂಷಣ್ ಕೋರಿದರು.

'ಮರಾಠಾ ಮೀಸಲಾತಿ ವಿಷಯದ ಬಗ್ಗೆ ನ್ಯಾಯಪೀಠ ಕಲಾಪ ನಡೆಸಲಿರುವುದರಿಂದ ಮುಂದಿನ ವಾರ ಪೀಠದಿಂದ ಈ ವಿಚಾರವನ್ನು ಕೈಗೆತ್ತಿಕೊಳ್ಳುವುದು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಹೇಳಿತು. ಹಾಗಿದ್ದರೆ ಸಿಬಿಐ ನಿರ್ದೇಶಕರ ಆಯ್ಕೆಗಾಗಿ ಆಯ್ಕೆ ಸಮಿತಿಯ ಸಭೆಯನ್ನಾದರೂ ಕರೆಯಲು ಕೇಂದ್ರಕ್ಕೆ ತಿಳಿಸಿ ಎಂದು ಪ್ರಶಾಂತ್ ಭೂಷಣ್ ಕೋರಿದರು.

'ನಾವು ನೋಟಿಸ್ ಜಾರಿಗೊಳಿಸುತ್ತಿದ್ದೇವೆ' ಎಂದು ಪೀಠ ಉತ್ತರಿಸಿತು.

ಸಿಬಿಐ ನಿರ್ದೇಶಕರ ಸ್ಥಾನ ತೆರವಾಗುವುದಕ್ಕೆ ಕನಿಷ್ಠ 1ರಿಂದ 2 ತಿಂಗಳ ಮುಂಚಿತವಾಗಿಯೇ ಹೊಸ ನಿರ್ದೇಶಕರ ಆಯ್ಕೆಗೆ ಕೇಂದ್ರ ಕ್ರಮ ಆರಂಭಿಸುವ ನಿಟ್ಟಿನಲ್ಲೂ ಕೇಂದ್ರಕ್ಕೆ ನಿರ್ದೇಶಕ ನೀಡಬೇಕು ಎಂದು ಪ್ರಶಾಂತ್ ಭೂಷಣ್ ಅವರು ಅರ್ಜಿಯಲ್ಲಿ ಒತ್ತಾಯಿಸಿದ್ದಾರೆ.



ಲಾವೊ ಒಟೆನ್ಸ್

## ಧ್ವನಿಸುರುಳಿಯ ಅನ್ವೇಷಕ ಲಾವೊ ಒಟೆನ್ಸ್ ನಿಧನ

ದ ಹಾಗ್ (ಎಪಿ): ಧ್ವನಿಸುರುಳಿಗಳ ಟೇಪ್ (ಕ್ಯಾಸೆಟ್) ಅನ್ನು ಅನ್ವೇಷಿಸಿದ್ದ ನೆದರ್ಲೆಂಡ್ಸ್‌ನ ಲಾವೊ ಒಟೆನ್ಸ್ ಶನಿವಾರ ನಿಧನರಾದರು. ಅವರಿಗೆ 94 ವರ್ಷವಾಗಿತ್ತು. ಫಿಲಿಪ್ಸ್ ಕಂಪನಿ ಇದನ್ನು ದೃಢಪಡಿಸಿದೆ. ಕಾಂಪ್ಯಾಕ್ಟ್ ಡಿಸ್ಕ್ ಅಭಿವೃದ್ಧಿಪಡಿಸಲು ಒಟೆನ್ಸ್ ಅವರು ಫಿಲಿಪ್ಸ್ ಕಂಪನಿಗೆ ನೆರವಾಗಿದ್ದರು.

ಡೆಲ್ಫ್‌ನ ಪ್ರತಿಷ್ಠಿತ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದಿದ್ದ ಅವರು 1952ರಲ್ಲಿ ಫಿಲಿಪ್ಸ್ ಕಂಪನಿ ಸೇರಿದ್ದರು. ಕಂಪನಿಯ ಉತ್ಪನ್ನಗಳ ಅಭಿವೃದ್ಧಿ ವಿಭಾಗದ ಮುಖ್ಯಸ್ಥರಾಗಿದ್ದು, ಟೇಪ್ ರೆಕಾರ್ಡರ್‌ಗೆ ಪರ್ಯಾಯವನ್ನು ಅನ್ವೇಷಿಸಲು ಒತ್ತು ನೀಡಿದ್ದರು.

ಧ್ವನಿ ಸಂಗ್ರಹಣ ಟೇಪ್ ಮತ್ತು ಪ್ಲೇಯರ್‌ಗಳು ಸುಲಭವಾಗಿ ಬಳಸುವಂತೆ ಇರಬೇಕು ಮತ್ತು ದೊರೆಯಬೇಕು ಎಂಬುದು ಇವರ ಗುರಿಯಾಗಿತ್ತು. ಧ್ವನಿಸುರುಳಿ ಮತ್ತು ಟೇಪ್ ರೆಕಾರ್ಡರ್‌ಗಳು 90ನೇ ದಶಕದ ಅಂತ್ಯದವರೆಗೂ ಅಸಂಖ್ಯ ಸಂಗೀತ ಪ್ರಿಯರು ಹಾಗೂ ಕೇಳುಗರ ಮೆಚ್ಚಿನ ಸಾಧನಗಳಾಗಿದ್ದವು.

## ಮಾತೃ ಪ್ರತಿಷ್ಠಾನಕ್ಕೆ ಗೆಲುವು

ಬೆಂಗಳೂರು: ಜ್ಯೋತಿ ಗಳಿಸಿದ ಎರಡು ಗೋಲುಗಳು ಮಾತೃ ಪ್ರತಿಷ್ಠಾನ ತಂಡದ ಜಯಕ್ಕೆ ಕಾರಣವಾದವು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕರ್ನಾಟಕ ಮಹಿಳಾ ಲೀಗ್ ಸೂಪರ್ ಡಿವಿಷನ್ ಪಂದ್ಯದಲ್ಲಿ ಮಾತೃ ಪ್ರತಿಷ್ಠಾನ 2–1ರಿಂದ ಪರಿಕ್ರಮ ಎಫ್‌ಸಿ ಎದುರು ಗೆದ್ದಿತು.

ಜ್ಯೋತಿ (20 ಹಾಗೂ 48ನೇ ನಿಮಿಷ) ಗೋಲು ದಾಖಲಿಸಿದರೆ, ಪರಿಕ್ರಮ ತಂಡದ ಶೋಭನಾ ಸೆಲ್ವನ್ (33ನೇ ನಿಮಿಷ) ಒಂದು ಗೋಲು ಹೊಡೆದರು.

ಶನಿವಾರ ನಡೆಯುವ ಪಂದ್ಯದಲ್ಲಿ ಬೆಂಗಳೂರು ಸಾಕರ್ ಗೆಲಾಕ್ಸಿ–ಸ್ಯಾಮ್‌ಜರ್ಸ್ ಬೆಳಗಾವಿ ಸೆಣಸಲಿವೆ.

## ಬೆಂಗಳೂರು ರೇಸ್

### 'ಸಿಂಟಿಲೇಟಿಂಗ್ ಲಾಸ್' ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು 'ಸಿಂಟಿಲೇಟಿಂಗ್ ಲಾಸ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅಲ್ಟೇರ್ 10, ಸಿಜ್ಲರ್ 2, ಫಿಯರ್ಸ್ ಫೈಟರ್ 9
2ನೇ ರೇಸ್: ರೂಲ್ ಆಫ್ ಎಂಗೇಜ್‌ಮೆಂಟ್ 6, ಓಷನ್ ಡ್ಯೂನ್ಸ್ 1, ಇಂಪೆಕೆಬಲ್ 4
3ನೇ ರೇಸ್: ಮಿಟ್‌ಸುರೊ 2, ಓನ್ ಲೆಗಸಿ 11, ವಾರ್ ಚೀಫ್ಟನ್ 7
4ನೇ ರೇಸ್: ಆರ್ಲೆಟ್ 1, ರಾಯಲ್ ಬ್ಲಾಸಮ್ 8, ಸದರ್ನ್ ಅರಿಸ್ಟೊಕ್ರಾಟ್ 6
5ನೇ ರೇಸ್: ಮೌಂಟೇನ್ ಲಯನ್ 1, ಸೀ ಮೈ ಹೀಲ್ಸ್ 8, ಕ್ಲಾಸಿಕ್ ಚಾರ್ಮ್ 9
6ನೇ ರೇಸ್: ಅಲೆಕ್ಸಾಂಡ್ರೆ ಡುಮಾಸ್ 8, ವೆಲೋಸಿಡಾಡ್ 3, ಮಾಲ್ವ 4
7ನೇ ರೇಸ್: ಸಿಂಟಿಲೇಟಿಂಗ್ ಲಾಸ್ 4, ಚಾಸ್ಲಿ 1, ಸಿಲ್ವೇರಿಯಸ್ 3
8ನೇ ರೇಸ್: ಮಿಸ್ಟಿಕ್ ಐ 2, ಕಾಪರ್ ಸನರೈನಸ್ 1, ಬೆಳ್ಳಿದೀಪ 9
9ನೇ ರೇಸ್: ಸ್ಟ್ರೈಕಿಂಗ್ ಮೆಮೋರಿ 5, ಮಾರ್ಕೊ ಪೊಲೊ 1, ಅನದರ್ ರೈನ್‌ಬೊ 7

**ಉತ್ತಮ ಬೆಟ್: ಮಿಸ್ಟಿಕ್ ಐ**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ | 3ನೇ ಟ್ರಿಬಲ್ |
|---|---|---|---|
| 5,6,7,8,9 | 1,2,3 | 4,5,6 | 7,8,9 |

### ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕನ ಅಭ್ಯಾಸ

# ನೆಟ್ಸ್‌ನಲ್ಲಿ ಧೋನಿ ಸಿಕ್ಸರ್ ಮೇನಿಯಾ

ಚೆನ್ನೈ: ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಈ ವರ್ಷದ ಆವೃತ್ತಿಯು ಮುಂದಿನ ತಿಂಗಳು ಆರಂಭವಾಗಲಿದೆ.

ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ, ಸಿಕ್ಸರ್ ಸಿಡಿಸುವ ಅಭ್ಯಾಸದೊಂದಿಗೆ ನೆಟ್ಸ್‌ನಲ್ಲಿ ತಾಲೀಮು ಆರಂಭಿಸಿದರು.

ಚೆಪಾಕ್‌ನ ನೆಟ್ಸ್‌ನಲ್ಲಿ ಅವರು ಅಭ್ಯಾಸ ಮಾಡಿದ ವಿಡಿಯೊವನ್ನು ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ. ಮತ್ತೆ ಪ್ಯಾಡ್ ಕಟ್ಟಿ ನೆಟ್ಸ್‌ಗಿಳಿದು ಹಳೆಯ ಶೈಲಿಯಲ್ಲಿ ಸಿಕ್ಸರ್ ಸಿಡಿಸುವ ಮೂಲಕ ಧೋನಿ ಗಮನ ಸೆಳೆದರು.

ಫ್ರಂಟ್ ಫೂಟ್, ನೇರ ಡ್ರೈವ್‌ಗಳ ಮೂಲಕ ಅವರು ಚೆಂಡನ್ನು ಖಾಲಿ ಗ್ಯಾಲರಿಗೆ ಎತ್ತಿದರು.

ಹೋದ ವರ್ಷ ನವೆಂಬರ್‌ನಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದಿದ್ದ ಐಪಿಎಲ್‌ನಲ್ಲಿ ಅವರು ಆಡಿದ್ದರು. ಅದರ ನಂತರ ಈಗ ಮತ್ತೆ ಬ್ಯಾಟ್ ಹಿಡಿದಿದ್ದಾರೆ.



ಮಹೇಂದ್ರಸಿಂಗ್ ಧೋನಿ

ಹೋದ ವರ್ಷ ಅವರು ಸೀಮಿತ ಓವರ್‌ಗಳ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.

ಹೋದ ಟೂರ್ನಿಯಲ್ಲಿ ಧೋನಿ ಬಳಗ ಏಳನೇ ಸ್ಥಾನಕ್ಕೆ ಕುಸಿದಿತ್ತು. ಪ್ಲೇ ಆಫ್ ಪ್ರವೇಶಿಸದೇ ಹೊರಬಿದ್ದು ನಿರಾಸೆ ಮೂಡಿಸಿತ್ತು.

ಈ ಬಾರಿಯ ಐಪಿಎಲ್ ಏಪ್ರಿಲ್ 9ರಿಂದ ಆರಂಭವಾಗಿ ಮೇ 30ರ ವರೆಗೆ ನಡೆಯಲಿದೆ. ಚೆನ್ನೈ ಸೂಪರ್ ಕಿಂಗ್ಸ್ ತಂಡವು ತನ್ನ ಮೊದಲ ಪಂದ್ಯವನ್ನು ಏಪ್ರಿಲ್ 10ರಂದು ಮುಂಬೈನಲ್ಲಿ ಆಡಲಿದೆ. ಡೆಲ್ಲಿ ಕ್ಯಾಪಿಟಲ್ಸ್ ಸವಾಲನ್ನು ಎದುರಿಸಲಿದೆ.

**ಮುಖ್ಯಾಂಶಗಳು**

- ಮುಂದಿನ ತಿಂಗಳು ಆರಂಭ ಆಗಲಿರುವ ಐಪಿಎಲ್
- ಚೆಪಾಕ್ ಅಂಗಣದಲ್ಲಿ ಅಭ್ಯಾಸ ಮಾಡಿದ ಧೋನಿ
- ಕಳೆದ ಆವೃತ್ತಿಯಲ್ಲಿ ಸಿಎಸ್‌ಕೆಗೆ ಏಳನೇ ಸ್ಥಾನ

## ಸ್ನೂಕರ್: ಸೆಮಿಗೆ ಪಂಕಜ್ ಅಡ್ವಾಣಿ

ಬೆಂಗಳೂರು: ಎಂ.ಎಸ್.ಅರುಣ್ ಅವರನ್ನು ಸೋಲಿಸಿದ ಪಂಕಜ್ ಅಡ್ವಾಣಿ ಬೆಂಗಳೂರು ಸ್ನೂಕರ್ ಅಕಾಡೆಮಿಯ ಅಖಿಲ ಭಾರತ 15–ರೆಡ್ ಓಪನ್ ಸ್ನೂಕರ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿದರು. ಪಂಕಜ್ ಅವರಿಗೆ 93-80, 99-20, 114 -0, 71 -6, 69-24 ಫ್ರೇಮ್‌ಗಳಿಂದ ಜಯ ಒಲಿಯಿತು. ಸೌರವ್ ಕೊಠಾರಿ 80-19, 21-80, 20-93, 114 -13, 72-44, 10-84, 66-17, 84-12ರಲ್ಲಿ ಶ್ರೀಕೃಷ್ಣ ಎದುರು, ಯೋಗೇಶ್ ಕುಮಾರ್ 25-67, 66-38, 30-79, 69-15, 77-07, 69-35, 79- 10ರಲ್ಲಿ, ಶಹಬಾಜ್ ಖಾನ್ ವಿರುದ್ಧ ಗೆಲುವು ದಾಖಲಿಸಿದರು ಎಂದು ತಿಳಿಸಲಾಗಿದೆ.



ಪಂಕಜ್ ಅಡ್ವಾಣಿ

300 ಅಧಿಕಾರಿಗಳ ಜತೆ ಬಿಬಿಎಂಪಿ ಆಯುಕ್ತ ಎನ್‌.ಮಂಜುನಾಥ ಪ್ರಸಾದ್ ಸಭೆ

# ಹೆಚ್ಚುತ್ತಿರುವ ಕೋವಿಡ್: ಕಟ್ಟೆಚ್ಚರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರು 300ಕ್ಕೂ ಹೆಚ್ಚು ಅಧಿಕಾರಿಗಳ ಜತೆ ಶುಕ್ರವಾರ ಆನ್‌ಲೈನ್ ಸಭೆ ನಡೆಸಿದರು.

‘ಇತ್ತೀಚಿನ ಅಂಕಿ–ಅಂಶಗಳನ್ನು ನೋಡಿದಾಗ ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚಳವಾಗುತ್ತಿವೆ. ನಗರದಲ್ಲಿ ಸಭೆ, ಸಮಾರಂಭಗಳು, ಆರ್ಥಿಕ ಚಟುವಟಿಕೆಗಳು ಪೂರ್ಣಪ್ರಮಾಣದಲ್ಲಿ ಆರಂಭವಾಗಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡದ ಕಾರಣ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ತಿಂಗಳಲ್ಲಿ ನಿತ್ಯ 300ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಗುರುವಾರ ಒಂದೇ ದಿನ 478 ಪ್ರಕರಣಗಳು ವರದಿಯಾಗಿವೆ’ ಎಂದು ಮಂಜುನಾಥ‍ಪ್ರಸಾದ್ ಆತಂಕ ವ್ಯಕ್ತಪಡಿಸಿದರು.

ಸೋಂಕು ಉಲ್ಬಣಗೊಳ್ಳುವುದನ್ನು ಪರಿಣಾಮಕಾರಿಯಾಗಿ ತಡೆಯಲು ಎಲ್ಲ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಈ ಸಂಬಂಧ ಎಲ್ಲ ಅಧಿಕಾರಿಗಳು ಒಂದು ತಂಡದಂತೆ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

‘ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಇನ್ನಿತರ ಆಸ್ಪತ್ರೆಗಳಲ್ಲಿ ಕೋವಿಡ್ ಪರೀಕ್ಷೆಗೆ ಬಂದವರ ಸರಿಯಾದ ಮೊಬೈಲ್ ಸಂಖ್ಯೆ, ವಿಳಾಸ ಮತ್ತು ಪಿನ್ ಕೋಡ್ ಪಡೆಯಬೇಕು. ಒಟಿಪಿ ಪರಿಶೀಲಿಸಿ ಸಮರ್ಪಕ ವಿಳಾಸ ಪಡೆಯಬೇಕು. ಇದರಿಂದ ಸೋಂಕಿತ ವ್ಯಕ್ತಿಗಳನ್ನು ತ್ವರಿತವಾಗಿ ಪತ್ತೆಹಚ್ಚಲು ಸಾಧ್ಯವಾಗುತ್ತದೆ’ ಎಂದು ತಿಳಿಸಿದರು.

ನಗರದಲ್ಲಿ ಕೋವಿಡ್ ಪರೀಕ್ಷೆಗಳನ್ನು ಹೆಚ್ಚಳ ಮಾಡಬೇಕು. 141 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಂಚಾರಿ ಪರೀಕ್ಷಾ ತಂಡಗಳು ಸೇರಿ ಸುಮಾರು 500 ತಂಡಗಳಿವೆ. ಇರುವ ಸಿಬ್ಬಂದಿಯನ್ನು ಸಮರ್ಪಕವಾಗಿ ಬಳಸಿಕೊಂಡು ಹೆಚ್ಚು ಪರೀಕ್ಷೆಗಳನ್ನು ಮಾಡಬೇಕು ಎಂದು ಹೇಳಿದರು.

‘ಖಾಸಗಿ ಕ್ಲಿನಿಕ್‌ಗಳಲ್ಲಿ ಸ್ವಾಬ್ ಸಂಗ್ರಹಕ್ಕಾಗಿ ಕಿಟ್‌ಗಳನ್ನು ನೀಡಿ ಸಂಜೆ ಅದನ್ನು ಸಂಗ್ರಹಿಸಿ ಲ್ಯಾಬ್‌ಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ರೋಗ ಲಕ್ಷಣ ಇರುವವರಿಗೆ ಕೋವಿಡ್ ಪರೀಕ್ಷೆ ಮಾಡಬೇಕು. ಹೆಚ್ಚು ಪರೀಕ್ಷೆ ಮಾಡುವುದರಿಂದ ಸೋಂಕು ಪತ್ತೆಯಾದವರನ್ನು ಪ್ರತ್ಯೇಕವಾಗಿ ಇರಿಸಿ ಸೋಂಕು ಹರಡುವುದನ್ನು ತಡೆಯಬಹುದು’ ಎಂದು ಹೇಳಿದರು.

‘ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ಪತ್ತೆ ಕಾರ್ಯವನ್ನು ಸರಿಯಾಗಿ ಮಾಡಬೇಕು. ಪ್ರತಿ ವಾರ್ಡ್‌ನಲ್ಲಿ ಎರಡು ಅಥವಾ ಮೂರು ಪ್ರಕರಣಗಳು ಕಂಡು ಬರುತ್ತಿವೆ. ಸೋಂಕಿತರ ಮನೆಗೆ ಭೇಟಿ ನೀಡಿ, ಸೋಂಕಿತ ವ್ಯಕ್ತಿ ಕಳೆದ 15 ದಿನಗಳಲ್ಲಿ ಯಾರ‍್ಯಾರನ್ನು ಭೇಟಿಯಾಗಿದ್ದರು, ಎಲ್ಲೆಲ್ಲಿ ಹೋಗಿದ್ದರು ಎಂಬ ನಿಖರ ಮಾಹಿತಿ ಪಡೆದು ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ಪತ್ತೆ ಕಾರ್ಯ ನಡೆಸಬೇಕು’ ಎಂದು ಸೂಚನೆ ನೀಡಿದರು.

‘ಸೋಂಕಿತರಲ್ಲಿ ಬಹುತೇಕರು ಮನೆಯಲ್ಲೇ ಪ್ರತ್ಯೇಕವಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಅವರಿಗೆ ಪ್ರತಿದಿನ ಕರೆ ಮಾಡಿ ಆರೋಗ್ಯ ವಿಚಾರಿಸಬೇಕು. ಮನೆಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ನಡೆಸಬೇಕು. ಬೇರೆ ರೋಗಗಳಿದ್ದರೆ ಅಥವಾ ವಯಸ್ಸಾಗಿದ್ದರೆ ಆಸ್ಪತ್ರೆಗೆ ದಾಖಲಿಸಬೇಕು’ ಎಂದು ಅವರು ತಿಳಿಸಿದರು.



ಬಿಬಿಎಂಪಿ ಆಯುಕ್ತ ಎನ್‌. ಮಂಜುನಾಥ ಪ್ರಸಾದ್ ಅವರು ಎಂ.ಆರ್‌. ಪಾಳ್ಯದ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಲಸಿಕೆ ಎರಡನೇ ಡೋಸ್ ಪಡೆದುಕೊಂಡರು

### ವಿದ್ಯಾರ್ಥಿ ನಿಲಯದಲ್ಲಿ 7 ಜನರಿಗೆ ಕೋವಿಡ್

ವಿದ್ಯಾಪೀಠ ಸರ್ಕಾರಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ ನಿಲಯದ 7 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ.

ಸೋಂಕಿನ ಲಕ್ಷಣ ಇದ್ದವರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಶುಕ್ರವಾರ ವರದಿ ಬಂದಿದೆ. ಎಲ್ಲರೂ ಸಂಪರ್ಕಕ್ಕೆ ಸಿಕ್ಕಿದ್ದು, ಅವರೊಂದಿಗೆ ಸಮಾಲೋಚನೆ ನಡೆಸಿ ಜಯನಗರದ ಸಂಜಯ್ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅವರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಎಲ್ಲರಿಗೂ ನೆಗೆಟಿವ್ ವರದಿ ಬಂದಿದೆ. ಅವರ ಮೇಲೆ ನಿಗಾ ಇಡಲಾಗಿದ್ದು, ಸೋಂಕಿನ ಲಕ್ಷಣ ಕಾಣಿಸಿದರೆ ಮತ್ತೆ ಪರೀಕ್ಷೆ ನಡೆಸಲಾಗುವುದು. ಏಳು ದಿನಗಳ ಬಳಿಕ ಮತ್ತೊಮ್ಮೆ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯ ಎಂದು ತಿಳಿಸಲಾಗಿದೆ ಎಂದು ಬಿಬಿಎಂಪಿ ಆರೋಗ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

### ಜನಸಂದಣಿ ಪ್ರದೇಶಗಳಲ್ಲಿ ಮಾರ್ಷಲ್‌ಗಳ ನಿಯೋಜನೆ

‘ಕೋವಿಡ್ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮುಂದಿನ ಎರಡು ತಿಂಗಳುಗಳ ಕಾಲ ಮಾರ್ಷಲ್‌ಗಳು ಇನ್ನೂ ಹೆಚ್ಚಿನ ಕೆಲಸ ಮಾಡಬೇಕು’ ಎಂದು ಮಂಜುನಾಥಪ್ರಸಾದ್ ಹೇಳಿದರು.

‘ಚಿತ್ರಮಂದಿರ, ಮಾರುಕಟ್ಟೆ, ಮದುವೆ ಮನೆ, ಮಾಲ್, ರೆಸ್ಟೋರೆಂಟ್ ಹಾಗೂ ಹೆಚ್ಚು ಜನ ಸೇರುವ ಸ್ಥಳಗಳ ಕಡೆ ಮಾರ್ಷಲ್‌ಗಳನ್ನು ನಿಯೋಜನೆ ಮಾಡಬೇಕು. ಕೋವಿಡ್ ನಿಯಮಗಳನ್ನು ಪಾಲನೆ ಮಾಡದಿದ್ದರೆ ನಿಯಮಾನುಸಾರ ದಂಡ ವಿಧಿಸಬೇಕು. ಕೋವಿಡ್ ನಿಯಮಗಳ ಬಗ್ಗೆ ಆಟೋರಿಕ್ಷಾಗಳಲ್ಲಿ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸಬೇಕು’ ಎಂದು ಸೂಚನೆ ನೀಡಿದರು.

### ಲಸಿಕೆ ಹೆಚ್ಚಿಸಲು ಕ್ರಮ

ಪಾಲಿಕೆ ವ್ಯಾಪ್ತಿಯಲ್ಲಿ ಮೊದಲ, ಎರಡನೇ ಹಾಗೂ ಮೂರನೇ ಹಂತದಲ್ಲಿ ಲಸಿಕೆ ನೀಡಲಾಗುತ್ತಿದ್ದು, ಇದುವರೆಗೆ ಸುಮಾರು 3 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ.

320ಕ್ಕೂ ಹೆಚ್ಚು ಲಸಿಕಾ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದ್ದು, ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡವರು ನೇರವಾಗಿ ಆಸ್ಪತ್ರೆಗಳಿಗೆ ಬಂದು ಲಸಿಕೆ ಪಡೆಯಲಿದ್ದಾರೆ. ಕೊಳೆಗೇರಿ ಪ್ರದೇಶದಲ್ಲಿ ವಾಸಿಸುವವರಿಗೆ ಆಶಾ ಕಾರ್ಯಕರ್ತರ ಮೂಲಕ ಲಸಿಕೆ ಪಡೆಯಲು ಅರಿವು ಮೂಡಿಸಬೇಕು ಎಂದರು.



ಡಾ. ಬಸವರಾಜ ಸಬರದ, ಮಂಜುನಾಥ್ ಚಾಂದ್, ಡಾ.ಎಚ್‌.ಎಸ್‌. ಅನುಪಮಾ ಅವರಿಗೆ ‘ಶ್ರೀಮತಿ ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಮುರಳೀಧರ್ ಹಾಲಪ್ಪ, ಸರಸ್ವತಿ ಶ್ರೀನಿವಾಸ ರಾಜು, ನಿರುಪಮಾ ರಾಘವೇಂದ್ರ ರಾವ್, ಬರಗೂರು ರಾಮಚಂದ್ರಪ್ಪ, ಡಾ.ಸಿ.ಎನ್‌. ಮಂಜುನಾಥ್ ಇದ್ದಾರೆ —ಪ್ರಜಾವಾಣಿ ಚಿತ್ರ

ಡಾ.ಸಿ.ಎನ್‌. ಮಂಜುನಾಥ್ ಕಿವಿಮಾತು

# ‘ಕೋವಿಡ್ ಬಗ್ಗೆ ಇನ್ನೂ 6 ತಿಂಗಳು ಎಚ್ಚರ ಅಗತ್ಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಕೇರಳದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದೆ. ರಾಜ್ಯದಲ್ಲಿ ಕೂಡ ಸೋಂಕಿತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಹಾಗಾಗಿ, ಇನ್ನೂ ಆರು ತಿಂಗಳು ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಜತೆಗೆ ಹೆಚ್ಚಿನ ಜಾಗರೂಕತೆ ವಹಿಸಬೇಕಿದೆ’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಡಾ.ಬರಗೂರು ರಾಮಚಂದ್ರಪ್ಪ ಪ್ರತಿಷ್ಠಾನವು ಶುಕ್ರವಾರ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಡಾ.ಎಚ್.ಎಸ್. ಅನುಪಮಾ, ವಿಮರ್ಶಕ ಡಾ. ಬಸವರಾಜ ಸಬರದ ಹಾಗೂ ಮಂಜುನಾಥ್ ಚಾಂದ್ ಅವರಿಗೆ ‘ಶ್ರೀಮತಿ ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು. ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಬಹುಮಾನ ಒಳಗೊಂಡಿದೆ.

‘ಇತ್ತೀಚಿನ ದಿನಗಳಲ್ಲಿ ಮದುವೆ, ಜಾತ್ರೆ, ಸಭೆ–ಸಮಾರಂಭ ಸೇರಿದಂತೆ ಸಾರ್ವಜನಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳು ಹೆಚ್ಚಾಗಿವೆ. ದೇವಾಲಯಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಜನರು ಸೇರುತ್ತಿದ್ದಾರೆ. ಆದ್ದರಿಂದ ದೇವಾಲಯದ ಅರ್ಚಕರಿಗೂ ಕೋವಿಡ್ ಪರೀಕ್ಷೆ ಮಾಡುವ ಅಗತ್ಯವಿದೆ. ಸಾರ್ವಜನಿಕ ಸ್ಥಳದಲ್ಲಿ ಜನರು ಗುಂಪಾಗಿ ಸೇರಬಾರದು. ಸರಿಯಾದ ರೀತಿಯಲ್ಲಿ ಮುಖಗವಸನ್ನು ಧರಿಸಿ, ಪರಸ್ಪರ ಅಂತರವನ್ನು ಕಾಯ್ದುಕೊಳ್ಳಬೇಕು. ಕೋವಿಡ್ ಲಸಿಕೆಯ ಬಗೆಗಿನ ವದಂತಿಗಳಿಗೆ ಕಿವಿಗೊಡಬಾರದು. ಲಸಿಕೆ ಸುರಕ್ಷಿತವಾಗಿದೆ’ ಎಂದು ಡಾ.ಮಂಜುನಾಥ್ ತಿಳಿಸಿದರು.

### ಮಕ್ಕಳಲ್ಲಿ ಹೆಚ್ಚುತ್ತಿದೆ ಜ್ವರ ಸಮಸ್ಯೆ

**ಬೆಂಗಳೂರು:** ಬಿಸಿಲಿನ ಧಗೆ ಹೆಚ್ಚಾಗುತ್ತಿರುವುದರಿಂದ ನಗರದಲ್ಲಿ 1ರಿಂದ 5 ವರ್ಷದೊಳಗಿನ ಮಕ್ಕಳು ಅನಾರೋಗ್ಯಕ್ಕೆ ಈಡಾಗುತ್ತಿರುವುದು ಪೋಷಕರನ್ನು ಚಿಂತೆಗೆ ದೂಡಿದೆ.

ಶಾಲೆಗೆ ತೆರಳುತ್ತಿರುವ ಮಕ್ಕಳಲ್ಲಿಯೂ ಜ್ವರ ಮತ್ತು ಗಂಟಲು ಕೆರೆತದಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ.

‘ಕಳೆದ ಎರಡು ವಾರದ ಅವಧಿ ಪರಿಗಣಿಸಿದರೆ ಜ್ವರದ ಸಮಸ್ಯೆಯಿಂದ ಆಸ್ಪತ್ರೆಗೆ ಬರುತ್ತಿರುವ ಮಕ್ಕಳ ಪ್ರಮಾಣದಲ್ಲಿ ಶೇ 30ರಷ್ಟು ಹೆಚ್ಚಾಗಿದೆ. 1ರಿಂದ 5 ವರ್ಷದ ಮಕ್ಕಳಲ್ಲಿ ಶೀತ, ಕೆಮ್ಮು, ಜ್ವರ, ಉಬ್ಬಸ, ಮಲಬದ್ಧತೆ, ವಾಂತಿಯ ಸಮಸ್ಯೆಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿವೆ’ ಎಂದು ಆಸ್ಟರ್ ಸಿಎಂಐ ಆಸ್ಪತ್ರೆಯ ಮಕ್ಕಳ ಚಿಕಿತ್ಸಾ ತಜ್ಞ ಡಾ. ಕೆ.ಎ. ಸುಧೀರ್ ಹೇಳಿದರು.

‘ಬಿಸಿಲಿನ ಧಗೆ ಹೆಚ್ಚಾಗುತ್ತಿರುವುದರಿಂದ ಮಕ್ಕಳಲ್ಲಿ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಈ ರೀತಿಯ ಜ್ವರದಿಂದ ಬಳಲುತ್ತಿರುವ ಮಕ್ಕಳು ಮೂರ‍್ನಾಲ್ಕು ದಿನಗಳಲ್ಲಿ ಗುಣಮುಖರಾಗುತ್ತಾರೆ’ ಎಂದು ಹೆಬ್ಬಾಳದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಡಾ. ಶರಿಲ್ ಹೆಗ್ಡೆ ಹೇಳಿದರು.

# ಹೋಟೆಲ್ ಸಿಬ್ಬಂದಿಗೆ ಪ್ರತಿ 15 ದಿನಗಳಿಗೊಮ್ಮೆ ಪರೀಕ್ಷೆ ಕಡ್ಡಾಯ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಹೋಟೆಲ್ ಸಿಬ್ಬಂದಿ 15 ದಿನಗಳಿಗೊಮ್ಮೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥಪ್ರಸಾದ್ ತಿಳಿಸಿದರು.

ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳ ಜತೆ ಆನ್‌ಲೈನ್ ಸಭೆ ನಡೆಸಿದ ಅವರು, ‘ಹೋಟೆಲ್‌ಗಳ ಬಳಿ ಪಾಲಿಕೆ ತಂಡ ಬಂದು ಉಚಿತವಾಗಿ ಕೋವಿಡ್ ಪರೀಕ್ಷೆ ಮಾಡಲಿದೆ. ಕೋವಿಡ್ ಸೋಂಕು ಪತ್ತೆಯಾದ ವ್ಯಕ್ತಿಯನ್ನು ಕೂಡಲೇ ಐಸೋಲೇಟ್ ಮಾಡಿದಾಗ ಸೋಂಕು ಹರಡುವ ಪ್ರಮಾಣ ಕಡಿಮೆಯಾಗಲಿದೆ. ಜೊತೆಗೆ ಮುಂಜಾಗ್ರತೆ ವಹಿಸಬಹುದಾಗಿದೆ. ಹೋಟೆಲ್ ಮಾಲೀಕರು ಸಹಕರಿಸಬೇಕು’ ಎಂದು ಅವರು ಹೇಳಿದರು.

ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಅಡುಗೆ ಮಾಡುವವರು, ಊಟ ಬಡಿಸುವವರು ಕೈಗವಸು ಮತ್ತು ಮಾಸ್ಕ್ ಧರಿಸಬೇಕು. ಹೋಟೆಲ್‌ಗಳಲ್ಲಿ ಕಡ್ಡಾಯವಾಗಿ 6 ಅಡಿ ಅಂತರ ಕಾಯ್ದುಕೊಳ್ಳಬೇಕು. ಮಾಸ್ಕ್ ಧರಿಸದಿದ್ದರೆ ಹೋಟೆಲ್ ಒಳಗೆ ಬರಲು ಅನುಮತಿ ನೀಡಬಾರದು. ಊಟ ಮಾಡುವಾಗ ಮತ್ತು ಕಾಫಿ ಕುಡಿಯುವಾಗ ಮಾತ್ರ ಮಾಸ್ಕ್ ತೆರೆಯಲು ಅವಕಾಶ ನೀಡಬೇಕು. ಪ್ರತಿ ಯೊಬ್ಬರಿಗೂ ಥರ್ಮಲ್ ಸ್ಕ್ಯಾನ್ ಮಾಡಿಯೇ ಒಳಗೆ ಬಿಡಬೇಕು. ಪ್ರವೇಶ ದ್ವಾರದಲ್ಲಿ ಸ್ಯಾನಿಟೈಸರ್ ಇಡಬೇಕು.ಬೀದಿ ಬದಿಯ ಹೋಟೆಲ್‌ಗಳ ಮೇಲೆ ಮಾರ್ಷಲ್‌ಗಳು ನಿಗಾ ವಹಿಸಲಿದ್ದು, ನಿಯಮ ಪಾಲಿಸದಿದ್ದರೆ ದಂಡ ವಿಧಿಸಲಿದ್ದಾರೆ ಎಂದರು.

ಹೋಟೆಲ್ ಸಿಬ್ಬಂದಿಯಲ್ಲಿ 60 ವರ್ಷ ಮೇಲ್ಪಟ್ಟವರು ಅಥವಾ ಅನ್ಯ ಕಾಯಿಲೆಗಳಿಂದ ಬಳಲುವವರಿದ್ದರೆ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡು ಲಸಿಕೆ ಪಡೆಯಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ಉಚಿತವಾಗಿ ಲಸಿಕೆ ಪಡೆಯಬಹುದು ಎಂದು ಹೇಳಿದರು.


### ನಗರದ ಕೋವಿಡ್ ಪ್ರಕರಣಗಳು




ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು 1ರಿಂದ 5ರವರೆಗೆ ತರಗತಿ ಆರಂಭಿಸಿರುವ ಮಾಹಿತಿ ಬಂದಿದೆ. ಆ ಶಿಕ್ಷಣ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇವೆ

**ಎಸ್. ಸುರೇಶ್‌ಕುಮಾರ್,** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

### ‘ಶಿಕ್ಷಕರಿಗೆ ಲಸಿಕೆ ನೀಡಿ’



ದೊರೆಸ್ವಾಮಿ

**ಬೆಂಗಳೂರು:** ‘ರಾಜ್ಯದಲ್ಲಿನ ಎಲ್ಲ ಶಿಕ್ಷಕರನ್ನು ಕೊರೊನಾ ಸೇನಾನಿಗಳು ಎಂದು ಪರಿಗಣಿಸಿ, ಅವರಿಗೂ ಆದ್ಯತೆ ಮೇರೆಗೆ ಕೊರೊನಾ ಲಸಿಕೆ ನೀಡಬೇಕು’ ಎಂದು ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಸಲಹೆ ನೀಡಿದ್ದಾರೆ.

‘ಆದ್ಯತಾ ಪಟ್ಟಿಯಲ್ಲಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗಿನ ಎಲ್ಲ ಬೋಧಕರನ್ನೂ ಪರಿಗಣಿಸಬೇಕು. ಅವರಿಗೆ ಲಸಿಕೆ ವಿತರಿಸಿ ಶಾಲಾ– ಕಾಲೇಜುಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಸುಗಮವಾಗಿ ನಡೆಯಲು ಅವಕಾಶ ಮಾಡಿ ಕೊಡಬೇಕು’ ಎಂದೂ ಹೇಳಿದ್ದಾರೆ.

ಕ್ವಾಡ್ ರಾಷ್ಟ್ರಗಳ ನಾಯಕರ ನಿರ್ಣಯ

# ‘ಸುರಕ್ಷಿತ, ಕೈಗೆಟಕುವ ಲಸಿಕೆ ಉತ್ಪಾದನೆಗೆ ಬದ್ಧ’

**ವಾಷಿಂಗ್ಟನ್, ನವದೆಹಲಿ (ಪಿಟಿಐ):** ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ನಿಯಂತ್ರಿಸಲು ಸುರಕ್ಷಿತ, ಕೈಗೆಟಕುವ ಮತ್ತು ಪರಿಣಾಮಕಾರಿ ಲಸಿಕೆ ಉತ್ಪಾದನೆಗೆ ಒಗ್ಗೂಡಿ ಕಾರ್ಯನಿರ್ವಹಿಸಲು ‘ಕ್ವಾಡ್’ ರಾಷ್ಟ್ರಗಳ ನಾಯಕರು ನಿರ್ಣಯ ಕೈಗೊಂಡಿದ್ದಾರೆ.

‘ಕ್ವಾಡ್’ ರಾಷ್ಟ್ರಗಳ ನಾಯಕರಾದ ಭಾರತದ ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಮತ್ತು ಜಪಾನ್ ಪ್ರಧಾನಿ ಯೊಶಿಹಿಡೆ ಸೂಗಾ ಅವರು ನಡೆಸಿದ ಮೊದಲ ವರ್ಚುವಲ್ ಸಭೆ ಬಳಿಕ ಈ ಬಗ್ಗೆ ಜಂಟಿ ಹೇಳಿಕೆ ಬಿಡುಗಡೆ ಮಾಡಲಾಗಿದೆ.

‘ನಮ್ಮ ಜನರ ಸುರಕ್ಷತೆ ಕಾಪಾಡಲು ಬದ್ಧರಾಗಿದ್ದೇವೆ. ವಿಶ್ವ ಆರೋಗ್ಯಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳ ಸಹಯೋಗದೊಂದಿಗೆ ಇಂಡೊ–ಪೆಸಿಫಿಕ್ ಪ್ರದೇಶದ ದೇಶಗಳಿಗೆ ಲಸಿಕೆ ಪೂರೈಸಲು ಸಹಭಾಗಿತ್ವ ಹೊಂದಲಾಗುವುದು’ ಎಂದು ಈ ನಾಯಕರು ತಿಳಿಸಿದ್ದಾರೆ.

‘ಕೊರೊನಾ ವೈರಸ್ ಹಬ್ಬುವುದನ್ನು ನಿಯಂತ್ರಿಸದಿದ್ದರೆ ಯಾರೂ ಸುರಕ್ಷಿತವಾಗಿ ಇರಲು ಸಾಧ್ಯವಿಲ್ಲ. ಹೀಗಾಗಿ, ಜಾಗತಿಕ ಆರೋಗ್ಯದ ದೃಷ್ಟಿಯಿಂದ ಮತ್ತು ಆರ್ಥಿಕ ಪುನಶ್ಚೇತನವನ್ನು ತ್ವರಿತ ಗತಿಯಲ್ಲಿ ಸಾಧಿಸಲು ಲಸಿಕೆ ಉತ್ಪಾದನೆಗೆ ಆದ್ಯತೆ ನೀಡಬೇಕಾಗಿದೆ’ ಎಂದಿದ್ದಾರೆ.

‘ವೈದ್ಯಕೀಯ, ವೈಜ್ಞಾನಿಕ, ಹಣಕಾಸು, ಉತ್ಪಾದನಾ ವಲಯ, ವಿತರಣೆ ವ್ಯವಸ್ಥೆ ಮತ್ತು ಅಭಿವೃದ್ಧಿ ಸಾಮರ್ಥ್ಯಗಳನ್ನು ಒಗ್ಗೂಡಿಸಿ ಪರಿಣಾಮಕಾರಿ ಲಸಿಕೆ ಉತ್ಪಾದನೆಗೆ ತಜ್ಞರ ಕಾರ್ಯನಿರ್ವಹಣೆ ತಂಡವನ್ನು ರಚಿಸಲಾಗುವುದು’ ಎಂದು ನಾಯಕರು ತಿಳಿಸಿದ್ದಾರೆ.

ಸಭೆಯ ಬಗ್ಗೆ ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವಿದೇಶಾಂಗ ಕಾರ್ಯದರ್ಶಿ ಹರ್ಷ ವರ್ಧನ್ ಶ್ರಿಂಗ್ಲಾ, ‘2022ರ ವೇಳೆಗೆ ಶತಕೋಟಿ ಡೋಸ್‌ನಷ್ಟು ಲಸಿಕೆ ಉತ್ಪಾದನೆ ಬಗ್ಗೆ ಚರ್ಚಿಸಲಾಗಿದೆ’ ಎಂದು ಹೇಳಿದ್ದಾರೆ.

ಪ್ರಜಾಪ್ರಭುತ್ವದ ಮೌಲ್ಯಗಳಿಂದ ನಾವು ಒಗ್ಗಟ್ಟಾಗಿದ್ದೇವೆ.ಮುಕ್ತ, ಒಳಗೊಳ್ಳುವಿಕೆಗೆ ಬದ್ಧರಾಗಿದ್ದೇವೆ. ಇಂಡೊ–ಪೆಸಿಫಿಕ್ ಪ್ರದೇಶದ ರಾಷ್ಟ್ರಗಳ ಪ್ರಗತಿಗೆ ಶ್ರಮಿಸುತ್ತೇವೆ

**ನರೇಂದ್ರ ಮೋದಿ,** ಪ್ರಧಾನಿ



ಸಿನಿಮೋತ್ಸವ ಸಮಾರಂಭದಲ್ಲಿ ಜೋನಾಥನ್ ಝಡ್ಕಾ ಮತ್ತು ಕೆ.ಜಿ, ರಾಘವನ್ ಚರ್ಚಿಸಿದರು. ಚಿತ್ರನಟ ಎಚ್‌.ಜಿ. ದತ್ತಾತ್ರೇಯ ಇದ್ದರು —ಪ್ರಜಾವಾಣಿ ಚಿತ್ರ

# ಇಸ್ರೇಲಿ ಚಲನಚಿತ್ರೋತ್ಸವ ಆರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭವನ್ಸ್ ಫಿಲಂ ಸೊಸೈಟಿ ಆಯೋಜಿಸಿರುವ ಇಸ್ರೇಲಿ ಚಲನಚಿತ್ರೋತ್ಸವವು ಇಲ್ಲಿನ ಭಾರತೀಯ ವಿದ್ಯಾ ಭವನದಲ್ಲಿ ಶುಕ್ರವಾರ ಆರಂಭವಾಯಿತು. ಇದೇ ಭಾನುವಾರದವರೆಗೆ (ಮಾ.14) ಸಿನಿಮೋತ್ಸವ ಮುಂದುವರಿಯಲಿದೆ.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಭವನದ ಖಿಂಚ ಸಭಾಂಗಣದಲ್ಲಿ ನಡೆಯುತ್ತಿರುವ ಈ ಚಲನಚಿತ್ರೋತ್ಸವವನ್ನು ಇಸ್ರೇಲ್‌ನ ಭಾರತದ ರಾಯಭಾರಿ ಜೋನಾಥನ್ ಝಡ್ಕಾ ಉದ್ಘಾಟಿಸಿದರು.

‘ಇಸ್ರೇಲ್‌ನ ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಪ್ರತಿಬಿಂಬಿಸುವ ಸಿನಿಮಾಗಳು ಉತ್ಸವದಲ್ಲಿ ಪ್ರದರ್ಶನ ಕಾಣುತ್ತಿವೆ. ಈ ಅವಕಾಶವನ್ನು ಸಿನಿಪ್ರಿಯರು ಸದುಪಯೋಗಪಡಿಸಿಕೊಳ್ಳಬೇಕು’ ಎಂದು ಝಡ್ಕಾ ಹೇಳಿದರು.

ಹಿರಿಯ ನಟ ಎಚ್.ಜಿ. ದತ್ತಾತ್ರೇಯ ಮಾತನಾಡಿ, ‘ಫಿಲ್ಮ್ ಸೊಸೈಟಿಗಳು ನೂತನ ತಂತ್ರಜ್ಞಾನವನ್ನು ಬಳಸಿಕೊಂಡು ಉತ್ತಮವಾಗಿ ಚಲನಚಿತ್ರೋತ್ಸವಗಳನ್ನು ಆಯೋಜಿಸುತ್ತಿರುವುದು ಸ್ವಾಗತಾರ್ಹ. ಸದಭಿರುಚಿಯ ಚಿತ್ರಗಳು ಸಿನಿಪ್ರಿಯರನ್ನು ರಂಜಿಸಲಿವೆ’ ಎಂದರು.

‘ಡೆಸ್ಪರಾಡೊ ಸ್ಕ್ವೇರ್’ ಚಿತ್ರ ಪ್ರದರ್ಶನದೊಂದಿಗೆ ಚಿತ್ರೋತ್ಸವ ಪ್ರಾರಂಭವಾಯಿತು. ಮಧ್ಯಾಹ್ನ 3ಕ್ಕೆ ‘ಕ್ಯಾಂಪ್ ಫೈರ್’ ಸಿನಿಮಾ ಪ್ರದರ್ಶಿಸಲಾಯಿತು.

ಭಾರತೀಯ ವಿದ್ಯಾಭವನದ ಮುಖ್ಯಸ್ಥ ಕೆ.ಜಿ. ರಾಘವನ್ ಹಾಗೂ ನಿರ್ದೇಶಕ ಎಚ್.ಎನ್. ಸುರೇಶ್ ಹಾಜರಿದ್ದರು.

ಶನಿವಾರ ಬೆಳಿಗ್ಗೆ 11.30ಕ್ಕೆ ‘ಹಾಲ್ಫನ್ ಹಿಲ್ ಡಸ್‌ನಾಟ್ ಆನ್ಸರ್’, ಮಧ್ಯಾಹ್ನ 3ಕ್ಕೆ ‘ಹೊಗಿಗಾ ಬಿ ಸ್ನೋಕರ್’ ಮತ್ತು ಭಾನುವಾರ 11.30ಕ್ಕೆ ‘ಕೊಲಂಬಿಯನ್ ಲವ್’ ಮತ್ತು 3ಕ್ಕೆ ‘ಅಲೆಕ್ಸಾ ಇನ್ ಲವ್‌ಸಿಕ್’ ಪ್ರದರ್ಶನಗೊಳ್ಳಲಿವೆ.



**ರಥೋತ್ಸವ**

ನೆಲಮಂಗಲ ಪಟ್ಟಣದ ಅಡೇಪೇಟೆ ರುದ್ರೇಶ್ವರ ಸ್ವಾಮಿ ರಥೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಆರ್‌ಎಸ್‌ಎಸ್‌ನ ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಮತ

# ‘ಅಡಿಗರು ಸ್ವಾಭಿಮಾನಿ, ಅಹಂಕಾರಿಯಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಗೋಪಾಲಕೃಷ್ಣ ಅಡಿಗರು ಸ್ವಾಭಿಮಾನದಿಂದ ಬದುಕಿದವರು. ಅವರಲ್ಲಿ ಅಹಂ ಭಾವ ಕಿಂಚಿತ್ತೂ ಇರಲಿಲ್ಲ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಜೈನ್ ವಿಶ್ವವಿದ್ಯಾಲಯ ಹಾಗೂ ಗೋಪಾಲಕೃಷ್ಣ ಅಡಿಗ ಶತಮಾನ ಪ್ರತಿಷ್ಠಾನದ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಎಂ.ಗೋಪಾಲಕೃಷ್ಣ ಅಡಿಗರ ವ್ಯಕ್ತಿತ್ವ ಮತ್ತು ಸಾಹಿತ್ಯ’ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

‘ಅಡಿಗರು ಭಾರತದ ಪ್ರಮುಖ ಕವಿಗಳಲ್ಲಿ ಅಗ್ರರೆನಿಸಿಕೊಂಡಿದ್ದರು. ಅವರು ಕನ್ನಡದ ಕಾವ್ಯ ಲೋಕಕ್ಕೆ ಹೊಸ ಮೆರುಗು ನೀಡಿದವರು. ಆಗಿನ ಕಾಲದ ಯುವ ಸಾಹಿತಿಗಳಿಗೆ ಪ್ರೇರಕ ಶಕ್ತಿಯೂ ಆಗಿದ್ದರು’ ಎಂದರು.

‘ಕನ್ನಡಕ್ಕಾಗಿ ಅವರ ಮನಸ್ಸು ಸದಾ ತುಡಿಯುತ್ತಿತ್ತು. ಯಾವುದೇ ಕಾರ್ಯಕ್ರಮಕ್ಕೆ ಕರೆದರೂ ಹೋಗುತ್ತಿದ್ದರು. ಅನೇಕ ಸಲ ಅವರನ್ನು ನಾವು ಸೈಕಲ್‌ನಲ್ಲಿ ಕರೆದುಕೊಂಡು ಹೋಗಿದ್ದೆವು. ಸಮಾಜವಾದಿ ವಿಚಾರಗಳಲ್ಲಿ ನಂಬಿಕೆ ಇಟ್ಟಿದ್ದ ಅಡಿಗರು ವೈಚಾರಿಕ ಸಂಘರ್ಷ ಮತ್ತು ದ್ವಂದ್ವಗಳನ್ನು ಎದುರಿಸಿದ್ದರು. ನಂಬಿದ ಆದರ್ಶ ಮತ್ತು ಸಿದ್ಧಾಂತಕ್ಕಾಗಿ ಪ್ರಾಂಶುಪಾಲ ಹುದ್ದೆಯನ್ನೂ ತ್ಯಜಿಸಿದ್ದರು’ ಎಂದು ತಿಳಿಸಿದರು.

‘ನೆಹರೂ ವಿಚಾರಧಾರೆಗಳನ್ನು ಅವರು ಒಪ್ಪುತ್ತಿರಲಿಲ್ಲ. ಲಂಕೇಶ್ ಹಾಗೂ ಅಡಿಗರ ನಡುವೆ ಯಾವುದೋ ವಿಚಾರಕ್ಕೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಹೀಗಾಗಿ 27 ವರ್ಷ ಒಬ್ಬರ ಮುಖ ಮತ್ತೊಬ್ಬರು ನೋಡಿರಲಿಲ್ಲ’ ಎಂದರು.

ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ಬಳ್ಳಿ ಮಾತನಾಡಿ, ‘ಅಡಿಗರು ತಮ್ಮ ಪಾಂಡಿತ್ಯದ ಮೂಲಕ ವಿರೋಧಿಗಳ ಮನಸ್ಸನ್ನೂ ಗೆದ್ದಿದ್ದರು. ಬಡ ಮಕ್ಕಳ ಮೇಲೆ ಅವರಿಗೆ ವಿಶೇಷ ಅಕ್ಕರೆ ಇತ್ತು. ಆ ಮಕ್ಕಳ ಶಾಲಾ ಶುಲ್ಕವನ್ನೂ ಭರಿಸುತ್ತಿದ್ದರು’ ಎಂದು ತಿಳಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತಕುಮಾರ್, ‘ಊರುಗೋಲು ಬಯಸದೇ ಬದುಕಿದವರು ಅಡಿಗರು. ಅಹಂ ಅವರ ಹತ್ತಿರವೂ ಸುಳಿಯಲಿಲ್ಲ’ ಎಂದು ಹೇಳಿದರು.

ಅಕಾಡೆಮಿಯ ರಿಜಿಸ್ಟ್ರಾರ್ ಎನ್. ಕರಿಯಪ್ಪ ಇದ್ದರು.




ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಬಿ.ವಿ.ವಸಂತಕುಮಾರ್ (ಎಡದಿಂದ ಎರಡನೆಯವರು) ಹಾಗೂ ದತ್ತಾತ್ರೇಯ ಹೊಸಬಾಳೆ ಚರ್ಚಿಸಿದರು. (ಎಡದಿಂದ ಮೂರನೆಯವರು) ನೃಪತುಂಗ ವಿ.ವಿ.ಕುಲಪತಿ ಶ್ರೀನಿವಾಸ ಬಳ್ಳಿ, ಜೈನ್ ವಿ.ವಿ. ಭಾಷಾ ನಿಕಾಯದ ಮುಖ್ಯಸ್ಥೆ ಮೈಥಿಲಿ ರಾವ್ ಇದ್ದಾರೆ —ಪ್ರಜಾವಾಣಿ ಚಿತ್ರ

### ‘ಚಲನಚಿತ್ರ ಅಕಾಡೆಮಿ ವಿರುದ್ಧ ಅಪಪ್ರಚಾರ ಸಲ್ಲದು’

**ಬೆಂಗಳೂರು:** ಈ ಬಾರಿಯ ‘ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ’ವನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯೇ ನಡೆಸಲಿದ್ದು, ಈ ಸಂಬಂಧ ಯಾವುದೇ ಅಪಪ್ರಚಾರಗಳಿಗೂ ಕಿವಿಗೊಡದಂತೆ ಅಕಾಡೆಮಿ ಅಧ್ಯಕ್ಷ ಸುನಿಲ್ ಪುರಾಣಿಕ್ ಮನವಿ ಮಾಡಿದ್ದಾರೆ.

‘ಚಲನಚಿತ್ರೋತ್ಸವದ ಬಗ್ಗೆ ಸರ್ಕಾರಿ ಆದೇಶವು ಇನ್ನೂ ಹೊರ ಬೀಳದಿರುವ ಕಾರಣ, ಯಾವುದೇ ಗುತ್ತಿಗೆದಾರರಿಗಾಗಲಿ ಅಥವಾ ಬೇರೆ ಯಾರಿಗೂ ಆದೇಶ ನೀಡಿಲ್ಲ. ಸರ್ಕಾರದ ನಿಯಮಗಳ ಅನುಸಾರ ಅನೇಕ ವಿಭಾಗಗಳ ಟೆಂಡರ್ ಕರೆದಿದ್ದು, ಯಾರು ಬೇಕಾದರೂ ಟೆಂಡರ್‌ನಲ್ಲಿ ಭಾಗವಹಿಸಬಹುದು. ಇದರಲ್ಲಿ ಸ್ವಜನಪಕ್ಷಪಾತಕ್ಕೆ ಅವಕಾಶ ಇಲ್ಲ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘13ನೇ ಚಲನಚಿತ್ರೋತ್ಸವ ಸಂಬಂಧ ಕೆಲವರು ನಡೆಸುತ್ತಿರುವ ಅಪಪ್ರಚಾರದಲ್ಲಿ ಹುರುಳಿಲ್ಲ. ಚಿತ್ರೋತ್ಸವಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳೂ ಪಾರದರ್ಶಕವಾಗಿವೆ’ ಎಂದು ಹೇಳಿದ್ದಾರೆ.



ಸಿಯಾಚಿನ್ ಪ್ರದೇಶದಲ್ಲಿ ಮೃತಪಟ್ಟ ಸೈನಿಕ ಹನುಮಂತಪ್ಪ ಕೊಪ್ಪದ ಅವರ ಕುಟುಂಬಕ್ಕೆ ಆರ್ಥಿಕ ನೆರವನ್ನು ಹಿತಚಿಂತನಾ ಟ್ರಸ್ಟ್ ನೀಡಿತು. ಸಂಸ್ಥೆಯ ಅಧ್ಯಕ್ಷ ರಾಮಸ್ವಾಮಿ, ಯಲಹಂಕ ಶಾಸಕ ಎಸ್‌.ಆರ್‌.ವಿಶ್ವನಾಥ್, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಉಪಾಧ್ಯಕ್ಷರಾದ ವೀಣಾ ರಮೇಶ್, ಪುಟ್ಟಮ್ಮ ಮತ್ತು ಗೋಪಾಲಪುರ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಕಮಲಮ್ಮ ಉಪಸ್ಥಿತರಿದ್ದರು.

# ‘ಧ್ವಜ ಹಾರಿಸಿ ಬರ್ಬೇಕು, ಇಲ್ಲ ಮೈ ಮೇಲೆ ಹೊದ್ದು ಬರ್ಬೇಕು’

ಪ್ರಜಾವಾಣಿ ವಾರ್ತೆ

**ಹೆಸರಘಟ್ಟ:** ’ಯುದ್ಧ ಭೂಮಿಯಲ್ಲಿ ನಮ್ಮ ರಾಷ್ಟ್ರ ಧ್ವಜವನ್ನು ಹಾರಿಸಬೇಕು. ಇಲ್ಲದಿದ್ದರೆ ಶತ್ರುಗಳ ಜೊತೆ ಹೋರಾಡಿ ವೀರ ಮರಣವನ್ನು ಹೊಂದಿ ಮೈಮೇಲೆ ರಾಷ್ಟ್ರ ಧ್ವಜವನ್ನು ಹೊದ್ದು ಬರಬೇಕು. ಆಗಲೇ ಬದುಕು ಸಾರ್ಥಕವಾಗುವುದು‘ ಎಂದು ಲ್ಯಾನ್ಸ್ ನಾಯಕ ಹನುಮಂತಪ್ಪ ಕೊಪ್ಪದ ಅವರ ಪತ್ನಿ ಮಹಾದೇವಿ ಹೇಳಿದರು.

ಬೊಮ್ಮಶೆಟ್ಟಿಹಳ್ಳಿ ಗ್ರಾಮದ ಹಿತ ಚಿಂತನಾ ಟ್ರಸ್ಟ್ ತೋಟಗೆರೆ ಗ್ರಾಮದಲ್ಲಿ ಆಯೋಜಿಸಿದ್ದ ಸೂರ್ಯ ಲಕ್ಷ ದೀಪೋತ್ಸವದಲ್ಲಿ ಅವರು ಮಾತನಾಡಿದರು.

’ಪತಿ ಹನುಮಂತಪ್ಪ ಕೊಪ್ಪದ ಅವರು 6 ದಿನಗಳ ಕಾಲ ಸಿಯಾಚಿನ್‌ನ ಹಿಮ ಕುಸಿತ ಪ್ರದೇಶದಲ್ಲಿ ಜೀವನ್ಮರಣದ ಹೋರಾಟ ಮಾಡಿ ವೀರ ಮರಣ ಹೊಂದಿದರು. ಅವರು ತಮ್ಮ ಮೈ ಮೇಲೆ ರಾಷ್ಟ್ರಧ್ವಜ ಹೊದ್ದು ಬಂದರು. ಅವರ ಬಗ್ಗೆ ನನಗೆ ಹೆಮ್ಮೆ ಇದೆ‘ ಎಂದರು.

ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿದರು.

### ಸತತ ಹಿಮಪಾತ: ಕಾಶ್ಮೀರದಲ್ಲಿ ಸಿಲುಕಿದ ರಾಜ್ಯದ ಹತ್ತು ಜನ

**ವಿಜಯನಗರ (ಹೊಸಪೇಟೆ):** ಸತತ ಹಿಮಪಾತ ಆಗುತ್ತಿರುವುದರಿಂದ ನಗರದ ಇಬ್ಬರು, ಹುಬ್ಬಳ್ಳಿಯ ಎಂಟು ಜನ ಜಮ್ಮು ಮತ್ತು ಕಾಶ್ಮೀರದ ಸೋನ್‌ಮರ್ಗ್‌ನ ಖಾಸಗಿ ಹೋಟೆಲ್‌ನಲ್ಲಿ ಮೂರು ದಿನಗಳಿಂದ ಸಿಲುಕಿಕೊಂಡಿದ್ದಾರೆ.

ಸತತ ಹಿಮಪಾತಕ್ಕೆ 10 ಅಡಿಗಿಂತ ಅಧಿಕ ಹಿಮ ಸಂಗ್ರಹವಾಗಿದೆ. ಹೋಟೆಲ್‌ನಿಂದ ಹೊರಬರಲು ಆಗದೆ ಅಲ್ಲಿಯೇ ಸಿಲುಕಿಕೊಂಡಿದ್ದಾರೆ. ಗುರುವಾರದಿಂದ (ಮಾ.11) ವಿದ್ಯುತ್ ಸಂಪರ್ಕ ಕೂಡ ಕಡಿತಗೊಂಡಿದೆ. ಹೋಟೆಲ್‌ನಲ್ಲಿ ಸಂಗ್ರಹಿಸಿಟ್ಟಿದ್ದ ಡೀಸೆಲ್ ಕೂಡ ಖಾಲಿ ಆಗಿರುವುದರಿಂದ ಅನ್ಯ ವ್ಯವಸ್ಥೆ ಇಲ್ಲವಾಗಿದೆ. ಆದರೆ, ಊಟಕ್ಕೆ ಯಾವುದೇ ತೊಂದರೆ ಆಗಿಲ್ಲ.

ನಗರದ ಪ್ರಕಾಶ್ ಮೆಹರವಾಡೆ, ಅವರ ಪತ್ನಿ ಸುಧಾ ಮೆಹರವಾಡೆ ಹಾಗೂ ಹುಬ್ಬಳ್ಳಿಯ ಇವರ 8 ಜನ ಸಂಬಂಧಿಕರು ಒಟ್ಟಿಗೆ ಮಾ. 5ರಂದು ಬೆಂಗಳೂರು, ನವದೆಹಲಿ ಮೂಲಕ ಶ್ರೀನಗರ ತಲುಪಿದ್ದಾರೆ. ಮಾ. 9 ರಂದು ಸೋನ್‌ಮರ್ಗ್‌ಕ್ಕೆ ತೆರಳಿ ಹೋಟೆಲ್‌ನಲ್ಲಿ ಉಳಿದಿದ್ದಾರೆ. ಸತತ ಹಿಮಪಾತ ಆಗುತ್ತಿರುವುದರಿಂದ ಮೂರು ದಿನಗಳಿಂದ ಅಲ್ಲಿಂದ ಹೊರಬರಲು ಸಾಧ್ಯವಾಗಿಲ್ಲ.

‘ವಿಷಯ ಖಾತೆ ಸಚಿವ ಆನಂದ್ ಸಿಂಗ್ ಅವರು ಕರೆ ಮಾಡಿ ಧೈರ್ಯ ಹೇಳಿದ್ದಾರೆ. ಸುರಕ್ಷಿತವಾಗಿ ಕರೆ ತರಲು ವ್ಯವಸ್ಥೆ ಮಾಡುವ ಭರವಸೆ ಕೊಟ್ಟಿದ್ದಾರೆ’ ಎಂದು ಪ್ರಕಾಶ್ ತಿಳಿಸಿದ್ದಾರೆ.


ಪ್ರತಿಮಾ ಎನ್. ರಾವ್



# ಹಾಡುತ್ತಾ ಬದುಕು ಕಟ್ಟಿದ ದಿಟ್ಟೆ

**ಬಡತನವೆಂಬ ಸವಾಲು ಎದುರಿಸಿ ರಾಜ್ಯಮಟ್ಟದ ಜಾನಪದ ಗಾಯಕಿಯಾಗಿ ಸಾಧನೆ ಮಾಡಿದ್ದಾರೆ ದೊಡ್ಡಬಳ್ಳಾಪುರದ ನಿರ್ಮಲಾ ಡಿ.ಆರ್.**

**ಸುಕೃತ ಎಸ್.**

‘ನಾನು ಸಣ್ಣವಳಿದ್ದಾಗಲೇ ನನ್ನ ತಂದೆ, ಅಮ್ಮನನ್ನು ಬಿಟ್ಟು ಹೋದರು. ಅಲ್ಲಿಂದ ಇಲ್ಲಿಯವರೆಗೆ ನಾನು ಅವರ ಮುಖ ನೋಡಿಲ್ಲ. ತಳ್ಳುಗಾಡಿ ಹೋಟೆಲ್‌ನಿಂದ ಬಂದ ಹಣದಿಂದ ನಮ್ಮ ಜೀವನ ನಡೆದಿತ್ತು. ಹೀಗೆ ಗುರುತೇ ಇಲ್ಲದೆ ಪ್ರಾರಂಭವಾದ ನನ್ನ ಬದುಕು ಇಂದು ಸಮಾಜದಲ್ಲಿ ನಾಲ್ಕು ಜನ ಗುರುತಿಸುವ ಮಟ್ಟಕ್ಕೆ ಬಂದಿದೆ’ ಎಂದು ಬಹಳ ಆತ್ಮವಿಶ್ವಾಸ ಮತ್ತು ಆತ್ಮತೃಪ್ತಿಯಿಂದ ನುಡಿಯುತ್ತಾರೆ ಜಾನಪದ ಗಾಯನದ ಮೂಲಕ ಹೆಸರು ಮಾಡಿರುವ ನಿರ್ಮಲಾ ಡಿ.ಆರ್.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನವರಾದ ನಿರ್ಮಲಾ ಮೇಲೆ ಅವರ ಅಜ್ಜಿಯ ಪ್ರಭಾವ ಹೆಚ್ಚಿದೆಯಂತೆ. ಅಜ್ಜಿಯಿಂದಲೇ ನಿರ್ಮಲಾ ಅವರಿಗೆ ಗಾಯನದ ಕಡೆ ಆಸಕ್ತಿ ಮೂಡಿದ್ದು. ಶಾಲೆಗಳಲ್ಲಿ ನಡೆಯುತ್ತಿದ್ದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ನಿರ್ಮಲಾ ಅವರ ಗಾಯನವನ್ನು ಒಮ್ಮೆ ಒಬ್ಬರು ಶಾಲಾ ಇನ್‌ಸ್ಪೆಕ್ಟರ್ ಕೇಳಿ, ಇವರ ಹೆಸರಲ್ಲಿ ₹ 10 ಸಾವಿರ ಠೇವಣಿ ಇಟ್ಟಿದ್ದರಂತೆ. ‘ನನ್ನ ಏಳಿಗೆಯ ಉದ್ದಕ್ಕೂ ಈ ರೀತಿಯಾಗಿ ನನಗೆ ಹಲವರು ಹೆಚ್ಚಿನ ಸಹಾಯ ಮಾಡಿದ್ದಾರೆ. ಅವರೆಲ್ಲರಿಗೂ ನಾನು ಆಭಾರಿ’ ಎಂದು ಅವರು ಸ್ಮರಿಸುತ್ತಾರೆ. ತಮ್ಮ ಸಾಧನೆಯಲ್ಲಿ ಗುರು ಕೆ. ಮಹಲಿಂಗಯ್ಯ ಅವರು ಪಾತ್ರ ಹೆಚ್ಚಿದೆ ಎನ್ನಲು ಮರೆಯುವುದಿಲ್ಲ.

ನಿರ್ಮಲಾ ಶಾಲಾ– ಕಾಲೇಜು ದಿನಗಳಿಂದಲೇ ಜಾನಪದ ಹಾಡುಗಳ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯ ಮಟ್ಟದಲ್ಲಿ ಬಹುಮಾನ ಪಡೆದುಕೊಂಡಿದ್ದಾರೆ. ಅಲ್ಲಿಂದ ಪ್ರಾರಂಭವಾದ ಅವರ ಸಂಗೀತ ಯಾನ, ಇಂದು ರಾಜ್ಯದಾದ್ಯಂತ ಎರಡು ಸಾವಿರಕ್ಕೂ ಹೆಚ್ಚಿನ ಕಾರ್ಯಕ್ರಮವನ್ನು ದಾಟಿ ಮುನ್ನಡೆಯುತ್ತಿದೆ. ಖಾಸಗಿ ವಾಹಿನಿಯ ‘ಕನ್ನಡ ಕೋಗಿಲೆ’ ಎನ್ನುವ ರಿಯಾಲಿಟಿ ಶೋನಲ್ಲೂ ಭಾಗವಹಿಸಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕೂಡ ಇವರು ಅಭ್ಯಾಸ ಮಾಡಿದ್ದಾರೆ. 2017ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯೆಯಾಗಿ ಬಹಳ ಸಣ್ಣ ವಯಸ್ಸಿನಲ್ಲೇ ನೇಮಕಗೊಂಡಿದ್ದರು.

‘ಮನಸಿಗಂಟಿದ ಕೊಳೆಯ ತಿಕ್ಕಿ ತೊಳೆದುಕೊ...’ ಎಂದು ನಿರ್ಮಲಾ ಅವರು ಹಾಡಿದ ಹಾಡು ಇತ್ತೀಚೆಗೆ ವೈರಲ್ ಆಗಿತ್ತು. ಮನುಷ್ಯ ತನ್ನ ಸಂಕುಚಿತ ಭಾವನೆಯೊಂದ ಹೊರಬಂದು, ಸಹಬಾಳ್ವೆ, ಪ್ರೀತಿಯಿಂದ ಬದುಕಬೇಕು ಎನ್ನುವ ಸಂದೇಶ ಇರುವ ಈ ಗೀತೆಯನ್ನು ಬಹಳ ಅದ್ಭುತವಾಗಿ ಹಾಡಿದ್ದಾರೆ ನಿರ್ಮಲಾ.


ನಿರ್ಮಲಾ

‘ಗಾಯನವೂ ಒಂದು ಶಕ್ತಿಯುತವಾದ ಮನರಂಜನಾ ಮಾಧ್ಯಮ. ಇದನ್ನು ಜನರ ಮನಪರಿವರ್ತನೆಗೆ ಸಮರ್ಥವಾಗಿ ಬಳಸಿಕೊಳ್ಳಬೇಕು. ಇದನ್ನೇ ನಾನು ‘ಭೂಮ್ತಾಯಿ ಬಳಗ’ ಎನ್ನುವ ತಂಡದ ಮೂಲಕ ಸಾಧಿಸ ಹೊರಟಿದ್ದೇನೆ’ ಎನ್ನುತ್ತಾರೆ ಅವರು. ಈ ಬಳಗವು ರಾಜ್ಯದಾದ್ಯಂತ ಸಂಚರಿಸಿ ಪರಿಸರ ಗೀತೆ, ಜಾನಪದ ಗೀತೆಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ.

ತಮ್ಮ ಗುರು ಜನಾರ್ದನ್ ಕೆಸರಗದ್ದೆ ಅವರು ಸ್ಥಾಪಿಸಿದ ‘ಭೂಮ್ತಾಯಿ ಬಳಗ’ ತಂಡವನ್ನು ನಿರ್ಮಲಾ ಅವರು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ‘ಹೆಣ್ಣೊಬ್ಬಳು ಗಂಡು ಮಕ್ಕಳೇ ಹೆಚ್ಚಿರುವ ತಂಡವನ್ನು ಮುನ್ನಡೆಸುವುದು ಎಂದರೆ ಸವಾಲಿನ ಕೆಲಸವೇ ಹೌದು. ಏಕೆಂದರೆ ಸಮಾಜದಲ್ಲಿ ಬಹುತೇಕರು ಇಂಥದ್ದನ್ನು ಒಪ್ಪಿಕೊಳ್ಳುವ ಮನಸ್ಥಿತಿ ಹೊಂದಿಲ್ಲ. ಆದರೆ, ನಮ್ಮ ತಂಡ ಇದಕ್ಕೆ ವ್ಯತಿರಿಕ್ತವಾದುದು. ನನ್ನನ್ನು ಬಹಳ ಪ್ರೀತಿ ಮತ್ತು ಗೌರವದಿಂದ ನಡೆಸಿಕೊಳ್ಳುತ್ತಾರೆ’ ಎಂದು ಬಹಳ ಪ್ರೀತಿಯಿಂದ ಹೇಳುತ್ತಾರೆ ನಿರ್ಮಲಾ.

‘ನನಗಿಂತ ಹೆಚ್ಚು ಚೆನ್ನಾಗಿ ಹಾಡುವ ನನ್ನ ಸ್ನೇಹಿತೆಯರು ಇದ್ದಾರೆ. ಅವರು ಈಗ ಗೃಹಿಣಿಯರು. ಆದರೆ, ನನ್ನ ಕುಟುಂಬ ನನ್ನನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿದೆ. ನನ್ನ ಗಂಡ ರವಿಶಾಸ್ತ್ರಿ, ನನ್ನ ತಾಯಿ ವಿಜಯಲಕ್ಷ್ಮೀ ಎಲ್ಲರೂ ನನಗೆ ಸಹಾಯ ಮಾಡುತ್ತಾರೆ. ನೀನು ಇನ್ನಷ್ಟು ಮುಂದೆ ಹೋಗಬೇಕು ಎಂದು ಪ್ರೋತ್ಸಾಹಿಸುತ್ತಾರೆ’ ಎನ್ನುತ್ತಾರೆ ನಿರ್ಮಲಾ.

ಜನಪರವಾದ ಎಲ್ಲ ಹೋರಾಟಗಳಲ್ಲೂ ನಿರ್ಮಲಾ ಭಾಗವಹಿಸಿ ಗೀತೆಗಳನ್ನು ಹಾಡಿದ್ದಾರೆ. 2006ರಲ್ಲಿ ಕರ್ನಾಟಕ ಸರ್ಕಾರ ಆಯೋಜಿಸಿದ್ದ ರಾಜ್ಯ ಮಟ್ಟದ ಕಲಾ ಪ್ರತಿಭೋತ್ಸವದಲ್ಲಿ ಜಾನಪದ ಗಾಯನದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ❖

**ಬೆಂಗಳೂರಿನ ಪ್ರತಿಮಾ ಎನ್. ರಾವ್ ಈಗ ಭಾರತದ ಗಾಲಿಕುರ್ಚಿ ಟೆನಿಸ್‌ನಲ್ಲಿ ನಂಬರ್ ಒನ್ ಆಟಗಾರ್ತಿಯಾಗಿದ್ದಾರೆ. ಒಂಬತ್ತು ವರ್ಷಗಳ ಹಿಂದೆ ಗಾಲಿಕುರ್ಚಿ ಟೆನಿಸ್ ಆಡಲು ಶುರು ಮಾಡಿದಾಗ ವ್ಯಂಗ್ಯ ಮಾಡಿ ನಕ್ಕವರೇ ಈಗ ಅಭಿನಂದಿಸುವ ಮಟ್ಟಕ್ಕೆ ಪ್ರತಿಮಾ ಬೆಳೆದಿದ್ದಾರೆ.**

# ಬದುಕು ಬದಲಿಸಿದ ಗಾಲಿಕುರ್ಚಿ ಟೆನಿಸ್

**ನಿರೂಪಣೆ: ಗಿರೀಶ ದೊಡ್ಡಮನಿ**

**ನಾನು** 2012ಕ್ಕಿಂತ ಮುಂಚೆ ಒಂದು ಸಲವೂ ಟೆನಿಸ್ ಆಟವಾಡಿರಲೇ ಇಲ್ಲ. ನನ್ನ ಆಂಟಿಯ ಸ್ನೇಹಿತರಾದ ಸೀತಾರಾಮ್ ಅವರು ಟೆನಿಸ್ ಆಡುತ್ತಿದ್ದರು. ‘ಒಮ್ಮೆ ಕೆಎಸ್‌ಎಲ್‌ಟಿಎಗೆ ಬಂದು ಗಾಲಿಕುರ್ಚಿ ಟೆನಿಸ್ ಆಡುವುದನ್ನು ನೋಡಿ’ ಎಂದು ಬಹಳಷ್ಟು ಸಲ ಹೇಳಿದ್ದರು. ಅದೊಂದು ದಿನ ಅವರೊಂದಿಗೆ ಕಬ್ಬನ್ ಪಾರ್ಕ್‌ನಲ್ಲಿರುವ ಕೆಎಸ್‌ಎಲ್‌ಟಿಎಗೆ ಹೋದೆ. ಗಾಲಿಕುರ್ಚಿ ಟೆನಿಸ್ ನನ್ನ ಮನಗೆದ್ದಿತು. ಬಹುವಾಗಿ ಆಕರ್ಷಿಸಿದ ಆಟವನ್ನು ಅಪ್ಪಿಕೊಂಡೆ. ಅದು ನನ್ನ ಬದುಕು ಬದಲಿಸಿತು.

ಮೂರನೇ ವಯಸ್ಸಿನಲ್ಲಿ ಪೋಲಿಯೊದಿಂದಾಗಿ ಕಾಲಿನ ಸ್ವಾಧೀನ ಕಳೆದುಕೊಂಡ ಮೇಲೆ ಕ್ಯಾಲಿಪರ್ಸ್ ನೆರವಿನಿಂದ ಬದುಕು ಸಾಗಿಸಿದ್ದೆ. ಓದು, ಮನೆ ಮತ್ತು ಕೆಲಸ ಸಿಕ್ಕ ಮೇಲೆ ಕಚೇರಿಯಷ್ಟೇ ನನ್ನ ಬದುಕಾಗಿತ್ತು. ಆದರೆ, ಅದೊಮ್ಮೆ ಕ್ರೀಡೆಯಲ್ಲಿ ಏನಾದರೂ ಸಾಧಿಸಬೇಕು ಎಂಬ ಛಲ ಮೂಡಿತು. ಅಥ್ಲೆಟಿಕ್ಸ್, ಆರ್ಚರಿಯಲ್ಲಿ ಪ್ರಯತ್ನಿಸಿದೆ. ಆದರೆ, ಗಾಲಿಕುರ್ಚಿ ಟೆನಿಸ್ ಮನಸೂರೆಗೊಂಡಿತು. ಟೆನಿಸ್ ಆಡಲು ಆರಂಭಿಸುತ್ತೇನೆ ಎಂದಾಗ ವ್ಯಂಗ್ಯವಾಗಿ ನಕ್ಕವರು ಅದೆಷ್ಟೋ ಜನ. ಅದನ್ನು ಚಾಲೆಂಜ್ ಆಗಿ ತೆಗೆದುಕೊಂಡೆ. ಗಾಲಿಕುರ್ಚಿ ಉಪಯೋಗಿಸುವುದನ್ನು ಕಲಿಯಲು ಒಂದು ತಿಂಗಳು ತೆಗೆದುಕೊಂಡೆ. ಏಕೆಂದರೆ ಅದು ವಿಶೇಷ ವಿನ್ಯಾಸದಿಂದ ಇರುವ ಗಾಲಿಕುರ್ಚಿ. ಕೋರ್ಟ್‌ನಲ್ಲಿ ಚೆಂಡನ್ನು ಹೊಡೆಯಲು ಚಲಿಸಲು ಅನುಕೂಲವಾಗುವಂತಹ ತಂತ್ರಜ್ಞಾನ ಅದರಲ್ಲಿರುತ್ತದೆ. ಅದನ್ನು ಬಳಸಲು ಕಲಿತ ನಂತರ ಆತ್ಮವಿಶ್ವಾಸ ಹೆಚ್ಚಿತು.

ಆಗ ಕೆಎಸ್‌ಎಲ್‌ಟಿಎ (ಕರ್ನಾಟಕ ರಾಜ್ಯ ಲಾನ್‌ಟೆನಿಸ್ ಸಂಸ್ಥೆ)ನಲ್ಲಿ ವಾರಾಂತ್ಯದ ಎರಡು ದಿನ ಮಾತ್ರ ವ್ಹೀಲ್‌ಚೇರ್ ಟೆನಿಸ್ ಪಟುಗಳಿಗೆ ಅಭ್ಯಾಸ ಮಾಡಲು ಅವಕಾಶ ಇತ್ತು. ನನ್ನಂತೆ ಇದ್ದ ಒಂದಿಷ್ಟು ಗೆಳೆಯರೊಂದಿಗೆ ಅಲ್ಲಿ ಅಭ್ಯಾಸ ಮಾಡುತ್ತಿದ್ದೆ. 2015ರಲ್ಲಿ ನಡೆದ ಒಂದು ಟೂರ್ನಿಯಲ್ಲಿ ರನ್ನರ್ ಅಪ್ ಆದೆ. ಆಗ ಅಲ್ಲಿಯ ಮುಖ್ಯ ಕೋಚ್ ನಿರಂಜನ್ ರಮೇಶ್ ನನ್ನ ಆಟ ಗಮನಿಸಿದರು. ‘ಪ್ರತಿದಿನದ ಅಭ್ಯಾಸಕ್ಕೆ ಬನ್ನಿ, ತರಬೇತಿ ಕೊಡುತ್ತೇವೆ. ಶುಲ್ಕದ ಬಗ್ಗೆ ಯೋಚನೆ ಮಾಡಬೇಡಿ. ಆಡಲು ಬನ್ನಿ’ ಎಂದರು. ಆ ದಿನ ನನ್ನ ಜೀವನಕ್ಕೆ ಹೊಸ ತಿರುವು ಲಭಿಸಿತು. ಸಾಧನೆಯ ಹಾದಿಯಲ್ಲಿ ಗಾಲಿಕುರ್ಚಿ ಸಾಗುತ್ತಿದೆ. ಈ ಟೆನಿಸ್ ಕಲಿತ ಮೇಲೆ ಬದುಕು ಭಾವನಾತ್ಮಕವಾಗಿ, ಸೃಜನಾತ್ಮಕವಾಗಿ ಮತ್ತು ಸಕಾರಾತ್ಮಕವಾಗಿ ಬದಲಾಗಿದೆ. ಮೊದಲೆಲ್ಲ ಅಭದ್ರತೆ ಕಾಡುತ್ತಿತ್ತು. ಶಾಲೆ, ಕಚೇರಿಗಳಿಗೆ ಹೋಗಲು ಒಬ್ಬರು ಜೊತೆಗೆ ಬರಬೇಕಿತ್ತು. ಆದರೆ ಟೆನಿಸ್ ಆಡಲು ಆರಂಭಿಸಿದ ಮೇಲೆ ಒಬ್ಬಳೇ ಪ್ರಯಾಣ ಮಾಡುತ್ತೇನೆ.

ಇನ್ನು ಆಟದ ಬಗ್ಗೆ ಹೇಳುವುದಾದರೆ.. ಸತತವಾಗಿ ರಾಷ್ಟ್ರೀಯ ನಂಬರ್ ಒನ್ ಸ್ಥಾನವನ್ನು ಉಳಿಸಿಕೊಂಡು ಬಂದಿದ್ದೇನೆ. 2020ರಲ್ಲಿ ಟೂರ್ನಿಗಳು ಇರಲಿಲ್ಲ. 2021ರಲ್ಲಿ ಈಗ ನಡೆದ ಎರಡು ಟೂರ್ನಿಗಳಲ್ಲಿಯೂ ಪ್ರಶಸ್ತಿ ಗೆದ್ದಿದ್ದೇನೆ. ಸಾಮಾನ್ಯರಿಗೆ ಇರುವ ಟೆನಿಸ್ ಆಟದ ಬಹುತೇಕ ನಿಯಮಗಳು ಇಲ್ಲಿಯೂ ಇವೆ. ಆದರೆ, ನಮ್ಮ ಟೆನಿಸ್‌ನಲ್ಲಿ ಚೆಂಡು ಎರಡು ಬೌನ್ಸ್ ರಿಟರ್ನ್‌ಗೆ ಅವಕಾಶ ಇದೆ. ಗಾಲಿಕುರ್ಚಿ ಮಾತ್ರ 3.5 ಲಕ್ಷ ರೂಪಾಯಿ ಮೌಲ್ಯದ್ದು. ವಿಷ್‌ಬೆರಿ ಕ್ರೌಡ್‌ಫಂಡಿಂಗ್ ಮೂಲಕ ಹಣ ಸಂಗ್ರಹಿಸಿ ವ್ಹೀಲ್‌ಚೇರ್ ತೊಗೊಂಡೆ.

ಅಂತರರಾಷ್ಟ್ರೀಯ ಟೂರ್ನಿಗೂ ಹೋಗಿಬಂದೆ. ಅಲ್ಲಿಯ ಪದ್ಧತಿಯೇ ಬೇರೆ. ವಿದೇಶದಲ್ಲಿ ಪ್ರತಿಯೊಬ್ಬ ಆಟಗಾರನಿಗೆ ವೈಯಕ್ತಿಕ ಕೋಚ್ ಮತ್ತು ಅನುಕೂಲಗಳು ಇರುತ್ತವೆ. ನಮಗೆ ಅದರ ಕೊರತೆ ಇದೆ. ಇಲ್ಲಿ ಸರ್ಕಾರಗಳಿಂದ ಆ ಮಟ್ಟದ ಸಹಾಯ ಸಿಗುತ್ತಿಲ್ಲ.

### ಮಗನ ಸಹಕಾರ

ಬಹಳಷ್ಟು ಬದಲಾವಣೆ ತಂದ ಟೆನಿಸ್‌ನಲ್ಲಿ ಸಾಧನೆ ಮಾಡಲು ನನ್ನ ಮಗನ ಸಹಕಾರ ದೊಡ್ಡದು. ನಾನು ಬೇರೆ ರಾಜ್ಯಗಳಿಗೆ ಮತ್ತು ದೇಶಗಳಿಗೆ ಆಡಲು ಹೋದಾಗ ತನ್ನ ಶಾಲೆ, ಓದನ್ನು ನಿರ್ವಹಿಸಿಕೊಳ್ಳುತ್ತಿದ್ದ. ಆತನಿಗೆ ಹೆಚ್ಚು ಸಮಯ ಕೊಡಲು ನನಗೆ ಸಾಧ್ಯವಾಗುತ್ತಿರಲಿಲ್ಲ. ನನ್ನ ಯಶಸ್ಸಿನಲ್ಲಿ ಆತನಿಗೂ ಶ್ರೇಯ ಸಲ್ಲಬೇಕು. ಈಗ ಅವನು ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದಾನೆ. ವಾಲಿಬಾಲ್ ಆಟಗಾರನೂ ಹೌದು.

ನಾನು ಕಾರ್ಯನಿರ್ವಹಿಸುವ ಜಿವಿಕೆಎಂಆರ್‌ಐನಲ್ಲಿ ಬಹಳ ಬೆಂಬಲ ನೀಡುತ್ತಿದ್ದಾರೆ. ರಜೆಗಳನ್ನು ನೀಡುತ್ತಿದ್ದಾರೆ. ಬಹಳ ಸಹಕಾರ ಇದೆ. ಟೆನಿಸ್ ದುಬಾರಿ ಕ್ರೀಡೆಯಾಗಿರುವುದರಿಂದ ಪ್ರಾಯೋಜಕರ ಅವಶ್ಯಕತೆಯೂ ನನಗಿದೆ. ಆದರೆ ದುಡ್ಡಿಗಿಂತಲೂ ದೊಡ್ಡದೆಂದರೆ ಆತ್ಮತೃಪ್ತಿ. ಅದನ್ನು ನನಗೆ ಈ ಟೆನಿಸ್ ನೀಡಿದೆ. ವ್ಯಂಗ್ಯ ಮಾಡಿ ನಕ್ಕವರೆಲ್ಲರೂ ಬಂದು ಅಭಿನಂದಿಸಿದಾಗ ಸಿಗುವ ಖುಷಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ❖

# ಮಹಿಳಾ ಕ್ರಿಕೆಟ್‌ನಲ್ಲಿ ಹೊಸ ಭಾಷ್ಯ ಬರೆದ ಹರ್ಮನ್‌ಪ್ರೀತ್

**ವಿಕ್ರಂ ಕಾಂತಿಕೆರೆ**

**ಎಡಗೈ** ಸ್ಪಿನ್ನರ್ ಹಾಕಿದ ಎಸೆತ, ಪಿಚ್ ಆಗುವ ಮೊದಲೇ ಮುನ್ನುಗ್ಗಿ ಮಿಡ್‌ಆಫ್‌ಗೆ ಮೋಹಕ ಹೊಡೆತ.... ಚೆಂಡು ಬೌಂಡರಿ ಗೆರೆ ದಾಟಿದ್ದೇ ಗೊತ್ತಾಗಲಿಲ್ಲ. ಅದೇ ರೀತಿಯ ಮತ್ತೊಂದು ಎಸೆತಕ್ಕೂ ಭರ್ಜರಿ ಹೊಡೆತ; ಮೇಲೆ ಚಿಮ್ಮಿದ ಚೆಂಡು ಹೋಗಿ ಬಿದ್ದದ್ದು ಬೌಂಡರಿ ಗೆರೆಯ ಆಚೆ. ಲೆಗ್ ಬ್ರೇಕ್ ಗೂಗ್ಲಿಗೂ ಅದೇ ಮಾದರಿಯ ಸ್ವಾಗತ; ನಾಲ್ಕು ಹೆಜ್ಜೆ ಮುಂದಿಕ್ಕಿ ಮಿಡ್‌ಆನ್‌ಗೆ ಸ್ಮ್ಯಾಷ್... ಮುಗಿಲೆತ್ತರಕ್ಕೆ ಚಿಮ್ಮಿದ ಚೆಂಡು ಬಿದ್ದದ್ದು ಪ್ರೇಕ್ಷಕರ ಸ್ಟ್ಯಾಂಡ್ ಮೇಲೆ. ಒಂದು ಎಸೆತಕ್ಕೆ ಮೊಣಕಾಲೂರಿ ದಂಡನೆ, ಮತ್ತೊಂದಕ್ಕೆ ಕಟ್‌ಶಾಟ್. ಲೆಗ್ ಸ್ಟಂಪ್‌ಮೇಲೆ ನುಗ್ಗಿ ಬಂದ ವೇಗಿಗಳ ಎಸೆತಕ್ಕೆ ಫ್ಲಿಕ್ ‘ಶಾಕ್’...

2017ರ ಮಹಿಳೆಯರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾದ ವೇಗಿಗಳಾದ ಮೆಘಾನ್ ಶೂಟ್, ಎಲಿಸ್ ಪೆರಿ, ಎಲಿಸ್ ವಿಲಾನಿ, ಸ್ಪಿನ್ನರ್‌ಗಳಾದ ಜೆಸ್ ಜೊನಾಸೆನ್, ಆ್ಯಶ್ಲಿ ಗಾರ್ಡನರ್ ಮತ್ತು ಕ್ರಿಸ್ಟೆನ್ ಬೀಮ್ಸ್ ಅವರ ಎಸೆತಗಳನ್ನು ಸಿಕ್ಸರ್‌ಗೆ ಎತ್ತಿದ, ಬೌಂಡರಿಗೆ ಅಟ್ಟಿದ ಬಗೆ ಇದು. ಈ ರೀತಿಯ ಸ್ಫೋಟಕ, ಮೋಹಕ ಬ್ಯಾಟಿಂಗ್ ಮಾಡಿ ಭಾರತದ ನಾಲ್ಕನೇ ಕ್ರಮಾಂಕದ ಆಟಗಾರ್ತಿ ಹರ್ಮನ್‌ಪ್ರೀತ್ ಕೌರ್ ಅಂದು ಗಳಿಸಿದ್ದು ಅಜೇಯ 171 ರನ್. 115 ಎಸೆತಗಳಲ್ಲಿ ಗುಡ್ಡೆ ಹಾಕಿದ ಈ ಮೊತ್ತಕ್ಕಾಗಿ ಅವರು 20 ಬಾರಿ ಚೆಂಡನ್ನು ಬೌಂಡರಿಯಾಚೆ ದಾಟಿಸಿದ್ದರೆ ಏಳು ಸಲ ಚೆಂಡು ಸ್ಟ್ಯಾಂಡ್‌ಗಳಲ್ಲಿ ಬಿದ್ದಿತ್ತು.

ಮಹಿಳಾ ಕ್ರಿಕೆಟ್‌ನಲ್ಲಿ ಇಂಥ ಬ್ಯಾಟಿಂಗ್ ಕಾಣಸಿಗುವುದು ವಿರಳ. ಭಾರತದ ಮಟ್ಟಿಗೆ ಮಹಿಳಾ ಕ್ರಿಕೆಟ್‌ನ ಬ್ಯಾಟಿಂಗ್‌ಗೆ ಹೊಸ ಭಾಷ್ಯ ಬರೆದ ಅವರು ಇದೀಗ ‘ಶತಕ’ದ ಸಾಧನೆ ಮಾಡಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಮೂರು ಮತ್ತು ಚುಟುಕು ಕ್ರಿಕೆಟ್‌ನಲ್ಲಿ ಒಂದು ಶತಕ ಸಿಡಿಸಿರುವ ಹರ್ಮನ್‌ಪ್ರೀತ್ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಆಡಿದ್ದು ವೈಯಕ್ತಿಕ ನೂರನೇ ಪಂದ್ಯ. ಟಿ20ಯಲ್ಲಿ ಈಗಾಗಲೇ 114 ಪಂದ್ಯಗಳನ್ನು ಆಡಿದ್ದು ಎರಡೂ ಮಾದರಿಗಳಲ್ಲಿ ನೂರು ದಾಟಿದ ಸಾಧನೆಯ ಅಪರೂಪದ ಆಟಗಾರ್ತಿಯಾಗಿದ್ದಾರೆ.

ಮಹಿಳಾ ಏಕದಿನ ಕ್ರಿಕೆಟ್‌ನಲ್ಲಿ 100 ಪಂದ್ಯಗಳನ್ನು ಆಡಿರುವವರು 42 ಮಂದಿ ಮಾತ್ರ. ಭಾರತದವರ ಪಟ್ಟಿಯಲ್ಲಿ ಐದನೆಯವರು ಹರ್ಮನ್‌ಪ್ರೀತ್ ಕೌರ್. ಮಹಿಳಾ ಕ್ರಿಕೆಟ್‌ನಲ್ಲಿ 200 ಪಂದ್ಯ ಆಡಿರುವವರು ಒಬ್ಬರೇ. ಅವರು, ಭಾರತದ ಮಿಥಾಲಿ ರಾಜ್. ಜೂಲನ್ ಗೋಸ್ವಾಮಿ 182, ಅಂಜುಮ್ ಚೋಪ್ರಾ 127, ಅಮಿತಾ ಶರ್ಮಾ 116 ಪಂದ್ಯ ಆಡಿದ್ದಾರೆ.


ಹರ್ಮನ್‌ಪ್ರೀತ್ ಕೌರ್

### ಗಂಡು ಮಗುವಿನ ಅಂಗಿ ತಂದಿದ್ದ ತಂದೆ

ಹರ್ಮನ್‌ಪ್ರೀತ್ ಕೌರ್ ಅವರ ತಂದೆ ಹರ್ಮಂದರ್ ಸಿಂಗ್ ಭುಲ್ಲರ್ ಹಿಂದೊಮ್ಮೆ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಕುತೂಹಲಕಾರಿ ಅಂಶವೊಂದನ್ನು ಉಲ್ಲೇಖಿಸಿದ್ದರು. 1989ರ ಮಾರ್ಚ್ 8ರಂದು, ಹರ್ಮನ್‌ಪ್ರೀತ್ ಕೌರ್ ಜನಿಸಿದ ದಿನ ಹರ್ಮಂದರ್, ಗಂಡುಮಗುವಿಗೆ ತೊಡಿಸುವ ಅಂಗಿ ತೆಗೆದುಕೊಂಡು ಬಂದಿದ್ದರಂತೆ. ಆದರೆ ಜನಿಸಿದ ಮಗು ಗಂಡು ಆಗಿರಲಿಲ್ಲ. ಆದರೂ ಏನಾಯಿತು, ಪುರುಷರ ಪಾರಮ್ಯ ಇರುವ ಕ್ರಿಕೆಟ್‌ನಲ್ಲಿ ಮಹಿಳೆಯೂ ಪುರುಷರ ಹಾಗೆಯೇ ಶಕ್ತಿಶಾಲಿ ಹೊಡೆಗಳ ಮೂಲಕ ಮಿಂಚಬಲ್ಲಳು ಎಂಬುದನ್ನು ಮಗಳು ಸಾಬೀತು ಮಾಡಿದ್ದಾರೆ. ಅಂತರರಾಷ್ಟ್ರೀಯ ಮಹಿಳಾ ದಿನದಂದು ಜನಿಸಿದ ಈ ಪ್ರತಿಭೆ ಮಹಿಳೆಗೂ ಗೌರವ ತಂದಿದ್ದಾರೆ; ಕ್ರಿಕೆಟ್‌ನ ಸೊಬಗನ್ನೂ ಹೆಚ್ಚಿಸಿದ್ದಾರೆ. ಇದೀಗ 32ನೇ ವಯಸ್ಸಿಗೆ ಕಾಲಿಡುವ ಹಿಂದಿನ ದಿನ ಕ್ರಿಕೆಟ್ ಜೀವನದ ಮಹತ್ವದ ಮೈಲುಗಲ್ಲನ್ನೂ ದಾಟಿದ್ದಾರೆ, ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ (2009ರ ಮಹಿಳೆಯರ ವಿಶ್ವಕಪ್) ಮಾರ್ಚ್ ಏಳರಂದೇ ನೂರನೇ ಪಂದ್ಯ ಆಡಿದ್ದಾರೆ!

ರಾಜ್ಯಮಟ್ಟದ ಬ್ಯಾಸ್ಕೆಟ್‌ಬಾಲ್ ಆಟಗಾರರಾಗಿರುವ ತಂದೆ ಹ್ಯಾಂಡ್‌ಬಾಲ್ ಕೂಡ ಆಡಿದ್ದು ಕ್ಲಬ್ ಮಟ್ಟದಲ್ಲಿ ಕ್ರಿಕೆಟ್ ಕ್ರೀಡೆಯಲ್ಲೂ ಛಾಪು ಮೂಡಿಸಿದ್ದರು. ಮಗಳನ್ನು ಅಥ್ಲೀಟ್ ಮಾಡಬೇಕೆಂಬುದು ಅವರ ಆಸೆಯಾಗಿತ್ತು. ಆದರೆ ಆದದ್ದು ಬೇರೆಯೇ...

ವೀರೇಂದ್ರ ಸೆಹ್ವಾಗ್ ಅವರ ಅಭಿಮಾನಿಯಾಗಿರುವ ಹರ್ಮನ್‌ಪ್ರೀತ್ ಕೌರ್ ಮೂಲತಃ ಆಕ್ರಮಣಕಾರಿ ಆಟಗಾರ್ತಿ. ಆದರೆ ಒಮ್ಮೆ ಅಜಿಂಕ್ಯ ರಹಾನೆ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವುದನ್ನು ನೋಡಿ ತಾಳ್ಮೆಯ ಮಹತ್ವವನ್ನು ಅರಿತುಕೊಂಡಿದ್ದರಂತೆ.

ಹರ್ಮನ್‌ಪ್ರೀತ್‌ಗೆ ಪದಾರ್ಪಣೆ ಪಂದ್ಯದಲ್ಲಿ ಬ್ಯಾಟಿಂಗ್ ಮಾಡಲು ಅವಕಾಶ ಸಿಕ್ಕಿರಲಿಲ್ಲ. ಮೂರು ದಿನಗಳ ನಂತರ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಬ್ಯಾಟ್ ಮಾಡಿದರು. ಗಳಿಸಿದ್ದು ಎಂಟೇ ರನ್. ನಂತರದ ಐದು ಇನಿಂಗ್ಸ್‌ಗಳಲ್ಲಿ ಸಾಧನೆ ಏನೂ ಇರಲಿಲ್ಲ. ಮುಂದಿನ ವರ್ಷ ಮುಂಬೈನಲ್ಲಿ ನಡೆದ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಅವರ ನೈಜ ಸಾಮರ್ಥ್ಯ ಹೊರಹೊಮ್ಮಿತು. 113 ಎಸೆತಗಳಲ್ಲಿ ಒಂಬತ್ತು ಬೌಂಡರಿ ಒಳಗೊಂಡ 84 ರನ್ ಅವರಲ್ಲಿ ಆತ್ಮವಿಶ್ವಾಸವನ್ನೂ ತಂಡದ ಆಡಳಿತದಲ್ಲಿ ನಿರೀಕ್ಷೆಯನ್ನೂ ಮೂಡಿಸಿತು. 2012ರ ಮಾರ್ಚ್‌ನಲ್ಲಿ ನಡೆದ ಒಟ್ಟು ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಅರ್ಧಶತಕ ಸಿಡಿಸಿ ಮಿಂಚಿದರು. 2013 ಅವರಿಗೆ ಚೇತರಿಕೆ ತುಂಬಿದ ವರ್ಷವಾಗಿತ್ತು. ನಂತರ ಹೇಳಿಕೊಳ್ಳುವಂಥ ಸಾಧನೆಯೇನೂ ಆಗಿರಲಿಲ್ಲ. ಆದರೆ ವಿಶ್ವಕಪ್‌ನಲ್ಲಿ ಕಂಡ ಸ್ಫೋಟಕ ಇನಿಂಗ್ಸ್ ಅವರ ಖ್ಯಾತಿಯನ್ನು ಮುಗಿಲೆತ್ತರಕ್ಕೆ ಏರಿಸಿತ್ತು.

ಆ ಇನಿಂಗ್ಸ್ ನಂತರ ಹರ್ಮನ್‌ಪ್ರೀತ್ ಕೌರ್ ಭಾರತ ತಂಡದ ಅವಿಭಾಜ್ಯ ಅಂಗವೇ ಆಗಿದ್ದಾರೆ. 2018 ಮತ್ತು 2019ರಲ್ಲಿ ವೈಯಕ್ತಿಕವಾಗಿ ಅನೇಕ ಏಳು–ಬೀಳು ಕಂಡಿದ್ದರೂ ತಂಡದಲ್ಲಿ ಅವರ ಉಪಸ್ಥಿತಿ ಇತರರಿಗೆ ಪ್ರೇರಣೆಯಾಗುತ್ತಿದೆ. ಅಜೇಯ 171 ರನ್ ಗಳಿಸಿದ ನಂತರ ಹರ್ಮನ್‌ಪ್ರೀತ್ ಒಟ್ಟು 17 ಇನಿಂಗ್ಸ್‌ಗಳನ್ನು ಆಡಿದ್ದಾರೆ. ಅವುಗಳಲ್ಲಿ ಎರಡು ಅರ್ಧಶತಕಗಳು ಮಾತ್ರ ಮೂಡಿಬಂದಿವೆ. ಮುಂದಿನ ವರ್ಷದ ವಿಶ್ವಕಪ್ ದೃಷ್ಟಿಯಲ್ಲಿರಿಸಿಕೊಂಡು ಭಾರತ ತಂಡ ಇದೀಗ ‘ಕೋವಿಡೋತ್ತರ’ ಸರಣಿ ಆಡಲು ಕಣಕ್ಕೆ ಇಳಿದಿದೆ. ತಂಡಕ್ಕೆ ಹರ್ಮನ್‌ಪ್ರೀತ್ ಏನು ಕೊಡುಗೆ ನೀಡುತ್ತಾರೆ ಎಂಬುದನ್ನು ಕಾದುನೋಡಬೇಕು. ❖

# ಅಂದ ಹೆಚ್ಚಿಸುವ ಆ್ಯಂಟಿಕ್ ಆಭರಣ

**ಕೊರಳನ್ನಪ್ಪುವ** ದೊಡ್ಡದಾದ ಲಕ್ಷ್ಮಿ ಪದಕವಿರುವ ನೆಕ್ಲೇಸ್, ದಪ್ಪ ಮಣಿಗಳಿರುವ ಗಣೇಶನ ವಿಗ್ರಹದ ಪದಕವಿರುವ ಹಾರ, ಅಗಲವಾದ ಬಳೆಗಳ ಮೇಲೆ ಮುತ್ತಿನ ಮಣಿಗಳ ಜೋಡಣೆ.. ಹೀಗೆ ನೋಡಿದ ತಕ್ಷಣ ಕಣ್ಮನ ಸೆಳೆಯುವ ಚಿನ್ನದ ಆ್ಯಂಟಿಕ್ ಆಭರಣಗಳು ಇಂದಿನ ಟ್ರೆಂಡ್.

ನೋಡಲು ಹಳೆಯ ಒಡವೆಯಂತೆ ಕಂಡರೂ ವಿನ್ಯಾಸದ ಮೂಲಕವೇ ಗಮನ ಸೆಳೆಯುವ ಆ್ಯಂಟಿಕ್ ಆಭರಣಗಳು ಈಗಿನ ಯುವತಿಯರಿಗೆ ಅಚ್ಚುಮೆಚ್ಚು. ಮೋಹಕ ವಿನ್ಯಾಸದ ಆ್ಯಂಟಿಕ್ ಆಭರಣಗಳು ಸಾಂಪ್ರದಾಯಿಕ ನೋಟ ನೀಡುತ್ತವೆ. ಅದರಲ್ಲೂ ಮದುವೆ– ಮುಂಜಿಯಂತಹ ಕಾರ್ಯಕ್ರಮಗಳಿಗೆ ಆ್ಯಂಟಿಕ್ ಆಭರಣಗಳನ್ನು ಹೆಚ್ಚಾಗಿ ಖರೀದಿಸಲಾಗುತ್ತಿದೆ.


ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಫ್ಯಾಷನ್ ಷೋನಲ್ಲಿ ಆ್ಯಂಟಿಕ್ ಆಭರಣಗಳನ್ನು ಧರಿಸಿದ ರೂಪದರ್ಶಿ

ಆ್ಯಂಟಿಕ್ ಆಭರಣಗಳಿಗೆ ಕೆಂಪುಮಿಶ್ರಿತ ಪಾಲಿಶ್ ನೀಡುವುದು, ಆಭರಣಗಳ ಮೇಲೆ ಅಲ್ಲಲ್ಲಿ ಮಾಣಿಕ್ಯ, ಪಚ್ಚೆಯಂತಹ ಅಮೂಲ್ಯ ಹರಳುಗಳನ್ನು ಜೋಡಿಸುವುದು ಈಗ ಟ್ರೆಂಡ್‌ನಲ್ಲಿದೆ. ಮದುವೆಯಂತಹ ಶುಭ ಸಮಾರಂಭಗಳಿಗೆ ಆಧುನಿಕ ವಿನ್ಯಾಸದ ಒಡವೆಗಿಂತ ಆ್ಯಂಟಿಕ್ ಆಭರಣಕ್ಕೆ ಬೇಡಿಕೆಯೂ ಹೆಚ್ಚಿದೆ ಎನ್ನುವುದು ಅಭರಣ ಮಾರಾಟಗಾರರ ಅಭಿಪ್ರಾಯ.

ಹಿಂದೆಲ್ಲಾ ಸರ, ಬಳೆಗಷ್ಟೇ ಸೀಮಿತವಾಗಿದ್ದ ಈ ವಿನ್ಯಾಸ ಈಗ ಕಿವಿಯೋಲೆ, ಸೊಂಟದ ಪಟ್ಟಿ, ಬೈತಲೆ ಬೊಟ್ಟು ಹೀಗೆ ಬಹುತೇಕ ಎಲ್ಲಾ ಬಗೆಯ ಒಡವೆಗಳಲ್ಲೂ ಕಂಡು ಬರುತ್ತಿದೆ. ❖

## ಮಕ್ಕಳಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ

# ಪೋಷಕರಲ್ಲಿರಲಿ ಸುರಕ್ಷತೆಯ ಕೀಲಿಕೈ


ರೇಷ್ಮಾ

'ನಾನು ಆನ್‌ಲೈನ್ ತರಗತಿಗೆ ನೆರವಾಗಲಿ ಎಂದು ನನ್ನ ಮಗಳಿಗೆ ಮೊಬೈಲ್ ಕೊಡಿಸಿದ್ದೆ. ಮೊದಲು ಪಾಠ ಕೇಳಲು, ನೋಟ್ಸ್ ಬರೆಯಲಷ್ಟೇ ಮೊಬೈಲ್ ಬಳಸುತ್ತಿದ್ದ ಮಗಳು ಈಗ ದಿನವಿಡೀ ಮೊಬೈಲ್ ಹಿಡಿದಿರುತ್ತಾಳೆ. ಮೊನ್ನೆ ಯಾಕೆ ಇಷ್ಟೊಂದು ಮೊಬೈಲ್ ಬಳಸುತ್ತಾಳೆ ಎಂದು ಪರಿಶೀಲಿಸಿದಾಗ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಎಲ್ಲವನ್ನೂ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ತನ್ನ ಖಾತೆ ತೆರೆದಿದ್ದಳು. ಅಲ್ಲದೇ ಫೇಸ್‌ಬುಕ್‌ನಲ್ಲಿ ಈಗಾಗಲೇ 200ಕ್ಕೂ ಹೆಚ್ಚು ಸ್ನೇಹಿತರಾಗಿದ್ದರು. ನನಗೆ ಶಾಕ್ ಆಗಿತ್ತು. ಆಕೆಗಿನ್ನೂ 11 ವರ್ಷ. ಅಲ್ಲದೇ ತನ್ನ ಫೋಟೊಗಳನ್ನೆಲ್ಲಾ ಅಪ್‌ಲೋಡ್ ಮಾಡಿದ್ದು ಪರಿಚಯ ಇಲ್ಲದವರೆಲ್ಲಾ ಲೈಕ್, ಕಮೆಂಟ್ ಮಾಡಿದ್ದರು. ಇದನ್ನೆಲ್ಲಾ ನೋಡಿ ತುಂಬಾ ಭಯವಾಯ್ತು. ಕೇಳಿದರೆ 'ನನ್ನ ಸ್ನೇಹಿತರೆಲ್ಲರ ಬಳಿ ಫೇಸ್‌ಬುಕ್ ಇದೆ, ಅದಕ್ಕೆ ನಾನು ಅಕೌಂಟ್ ಓಪನ್ ಮಾಡಿದೆ' ಎನ್ನುತ್ತಾಳೆ' ಎಂದು ಸ್ನೇಹಿತೆಯ ಬಳಿ ಗೋಳು ತೋಡಿಕೊಂಡಿದ್ದಳು ಸುಮಾ.

ಇತ್ತೀಚೆಗೆ ಸುಮಾಳಂತೆ ಹಲವು ಪೋಷಕರು ತಮ್ಮ ಮಕ್ಕಳ ಸಾಮಾಜಿಕ ಜಾಲತಾಣಗಳ ಬಳಕೆ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಈಗ 10– 12 ವಯಸ್ಸಿನ ಮಕ್ಕಳು ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಸ್ನಾಪ್‌ಚಾಟ್‌ನಂತಹ ಸಾಮಾಜಿಕ ಮಾಧ್ಯಮಗಳನ್ನು ಬಳಸುತ್ತಿದ್ದಾರೆ. ಆದರೆ ಅವುಗಳ ಸಮರ್ಪಕ ಬಳಕೆಯ ಕುರಿತ ತಿಳಿವಳಿಕೆ ಅವರಿಗಿರುವುದಿಲ್ಲ. ಅಲ್ಲದೇ ಆ ಮೂಲಕ ಅಪರಿಚಿತರಿಗೆ ವೈಯಕ್ತಿಕ ಮಾಹಿತಿಗಳು, ಫೋಟೊಗಳು ಸಿಗುವಂತೆ ಮಾಡುತ್ತಿದ್ದಾರೆ. ಇದು ಪೋಷಕರಲ್ಲಿ ಆತಂಕ ಹೆಚ್ಚುವಂತೆ ಮಾಡಿದೆ.

ಹಾಗಾದರೆ ಮಕ್ಕಳು ಯಾವ ವಯಸ್ಸಿನಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಶುರು ಮಾಡಬಹುದು ಎಂಬ ಪ್ರಶ್ನೆ ಕಾಡುವುದು ಸಹಜ. 13 ವರ್ಷ ದಾಟಿದ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸಬಹುದು ಎನ್ನುತ್ತದೆ 'ಚಿಲ್ಡ್ರನ್ಸ್ ಆನ್‌ಲೈನ್ ಪ್ರೈವೆಸಿ ಅಂಡ್ ಪ್ರೊಟೆಕ್ಷನ್ ಆ್ಯಕ್ಟ್ (ಸಿಒಪಿಪಿಎ)'.

'ಸಾಮಾಜಿಕ ಜಾಲತಾಣಗಳ ಬಳಕೆ ಸರಿ, ತಪ್ಪು ಎನ್ನುವುದಕ್ಕಿಂತ ಅದು ನಿಮ್ಮ ಮಗುವಿನ ವಯಸ್ಸಿಗೆ ಸೂಕ್ತವಾಗಿದೆಯೇ ಎಂಬುದು ಮುಖ್ಯವಾಗುತ್ತದೆ. ಸಾಮಾಜಿಕ ಜಾಲತಾಣಗಳ ಬಳಕೆಗೆ ಯಾವ ವಯಸ್ಸು ಸೂಕ್ತ ಎಂಬ ಕಾನೂನು ಇದೆ. ಆದರೆ ಆ ಕಾನೂನಿಗಿಂತ ಪೋಷಕರು ತಮ್ಮ ಮಕ್ಕಳಲ್ಲಿ ತಿಳಿವಳಿಕೆ ಮೂಡಿಸುವುದು ಅಗತ್ಯವಾಗಿದೆ. ಇದರೊಂದಿಗೆ ಮಕ್ಕಳ ಸಾಮಾಜಿಕ ಜಾಲತಾಣಗಳ ಮೇಲೆ ಪೋಷಕರು ನಿಗಾ ವಹಿಸುವುದು ತುಂಬಾ ಮುಖ್ಯವಾಗುತ್ತದೆ' ಎನ್ನುತ್ತಾರೆ ನಿಮ್ಹಾನ್ಸ್‌ನ ಮಕ್ಕಳ ಮತ್ತು ಹದಿಹರೆಯದ ಮನೋವೈದ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ರಾಜೇಂದ್ರ ಮಾದೇಗೌಡ ಕಿರಗಸೂರು.



### ಪೋಷಕರಿಗೆ ಅರಿವಿಲ್ಲದೇ ಬಳಕೆ

ಇತ್ತೀಚೆಗೆ ಹಲವು ಮಕ್ಕಳು ತಮ್ಮ ಪೋಷಕರಿಗೆ ತಿಳಿಯದಂತೆ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ. ಇದರೊಂದಿಗೆ ತಂತ್ರಜ್ಞಾನದ ಬಗೆಗಿನ ಅವರಿಗಿರುವ ಅತಿಯಾದ ತಿಳಿವಳಿಕೆಯು ತಂದೆತಾಯಿ ಮೋಸ ಹೋಗುವಂತೆ ಮಾಡುತ್ತಿದೆ. ಜೊತೆಗೆ ಕೆಲವೊಂದು ಆ್ಯಪ್‌ಗಳು ಹಾಗೂ ತಂತ್ರಗಳು ಸಾಮಾಜಿಕ ಜಾಲತಾಣಗಳನ್ನು ಮುಚ್ಚಿಡಲು ನೆರವಾಗುತ್ತಿವೆ. ಇದರಿಂದ ಮಕ್ಕಳು ತಂದೆ–ತಾಯಿಯನ್ನು ಸುಲಭವಾಗಿ ಮೂರ್ಖರನ್ನಾಗಿಸುತ್ತಿದ್ದಾರೆ. ಪೋಷಕರು ಮಕ್ಕಳಿಂದಾಗಿ ಇಂಥದ್ದನ್ನು ಅನುಭವಿಸಬಾರದು ಎಂದರೆ ಅವರಿಗೆ ಯಾವ ವಯಸ್ಸಿನಲ್ಲಿ ಸ್ಮಾರ್ಟ್‌ಫೋನ್ ನೀಡಬೇಕು ಹಾಗೂ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸಲು ಸೂಕ್ತ ವಯಸ್ಸು ಯಾವುದು ಎಂಬುದರ ಬಗ್ಗೆ ತಿಳಿದುಕೊಳ್ಳುವುದು ಮುಖ್ಯ.

**ಸಾಮಾಜಿಕ ಜಾಲತಾಣಗಳ ಬಳಕೆಯಿಂದಾಗುವ ಅಪಾಯಗಳು**

- ಆಕ್ರಮಣಕಾರಿ, ಹಿಂಸಾತ್ಮಕ ಹಾಗೂ ಲೈಂಗಿಕ ವಿಷಯಗಳಿಗೆ ಸಂಬಂಧಿಸಿದ ಕಮೆಂಟ್‌ಗಳು ಹಾಗೂ ಚಿತ್ರಗಳಂತಹ ಅನುಚಿತ ಅಥವಾ ಅಸಂಬದ್ಧ ವಿಷಯಗಳಿಗೆ ತನ್ನನ್ನು ತಾನು ಒಡ್ಡಿಕೊಳ್ಳುವುದು.
- ತನಗೆ ಅಥವಾ ಇತರರಿಗೆ ಸಂಬಂಧಿಸಿದ ಮುಜುಗರವೆನ್ನಿಸುವ ಅಥವಾ ಪ್ರಚೋದನಕಾರಿ ಫೋಟೊಗಳು ಅಥವಾ ವಿಡಿಯೊಗಳನ್ನು ಅಪ್‌ಲೋಡ್ ಮಾಡುವುದು.
- ಅಪರಿಚಿತರೊಂದಿಗೆ ಫೋನ್ ನಂಬರ್, ಜನ್ಮದಿನಾಂಕ ಹಾಗೂ ತಾವಿರುವ ಸ್ಥಳ ಮುಂತಾದ ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳುವುದು.
- ಸೈಬರ್ ಬುಲ್ಲಿಯಿಂಗ್
- ಅನಗತ್ಯ ಜಾಹೀರಾತು ಹಾಗೂ ಮಾರ್ಕೆಟಿಂಗ್ ವಿಷಯಗಳ ಬಗ್ಗೆ ಹೆಚ್ಚು ಗಮನ ಹರಿಸುವುದು ಹಾಗೂ ಅವುಗಳನ್ನು ಬಳಸಿಕೊಳ್ಳುವುದು.

**ಸಮಸ್ಯೆಗಳನ್ನು ನಿರ್ವಹಿಸುವುದು ಹೇಗೆ?**

- ಸಾಮಾಜಿಕ ಜಾಲತಾಣಗಳ ಆಗುಹೋಗುಗಳ ಬಗ್ಗೆ ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡುವುದು.
- ಸುರಕ್ಷಿತ ಅಂತರ್ಜಾಲ ಸೇವೆ ಸಿಗುವಂತೆ ಮಾಡುವುದು.
- ಸಾಮಾಜಿಕ ಜಾಲತಾಣಗಳಲ್ಲಿ ಬರುವ ಪೋಸ್ಟ್‌ಗಳಿಗೆ ಹೇಗೆ ಪ್ರತಿಕ್ರಿಯೆ ನೀಡಬೇಕು ಎಂಬುದರ ಬಗ್ಗೆ ತಿಳಿವಳಿಕೆ ನೀಡುವುದು.
- ಪಾಸಿಟಿವ್ ಕಮೆಂಟ್ ನೀಡುವುದನ್ನು ಕಲಿಸುವುದು, ಅಪರಿಚಿತರಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸದಂತೆ ನೋಡಿಕೊಳ್ಳುವುದು.
- ಸಾಮಾಜಿಕ ಜಾಲತಾಣಗಳ ಅತೀ ಬಳಕೆಯಿಂದ ಆಗುವ ತೊಂದರೆಗಳ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಸುವುದು.
- ಅವರ ಪಾಸ್‌ವರ್ಡ್ ಹಾಗೂ ಲಾಗಿನ್ ಐಡಿ ಪಡೆದು ಆಗಾಗ ಪರಿಶೀಲನೆ ಮಾಡುವುದು.
- ಅಪರಿಚಿತ ಸಂಬಂಧಗಳ ಬಗ್ಗೆ ಎಚ್ಚರಿಕೆ ಮೂಡಿಸುವುದು.
- ಸ್ನೇಹಿತರಿಂದ ಆಗುವ ಸಮಸ್ಯೆಗಳ ಬಗ್ಗೆಯೂ ತಿಳಿಸಿ ಹೇಳುವುದು.
- ಪ್ರತಿ ತಿಂಗಳು ಮಕ್ಕಳ ಸಾಮಾಜಿಕ ಜಾಲತಾಣದ ಚಟುವಟಿಕೆಯ ಬಗ್ಗೆ ಅಪ್‌ಡೇಟ್ ಪಡೆಯುವುದು.

> ಮಕ್ಕಳು ಯಾವ ವಯಸ್ಸಿಗೆ ಸಾಮಾಜಿಕ ಜಾಲತಾಣವನ್ನು ಬಳಸಬಹುದು ಎಂಬ ಬಗ್ಗೆ ಪೋಷಕರಿಗೆ ಅರಿವಿರಬೇಕು. ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸಲು ಆರಂಭಿಸಿದ ಮೇಲೆ ಯಾವ ರೀತಿ ನಿಯಂತ್ರಿಸಬೇಕು; ಅದರಿಂದಾಗುವ ತೊಂದರೆಗಳ ಬಗ್ಗೆ ಅವರಲ್ಲಿ ಹೇಗೆ ಅರಿವು ಮೂಡಿಸಬೇಕು ಎಂಬ ತಿಳಿವಳಿಕೆಯೂ ಪೋಷಕರಿಗಿರಬೇಕು.

### ನಿಯಂತ್ರಣ ಸಲ್ಲ

ಹದಿಹರೆಯದ ಮಕ್ಕಳಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆಗೆ ನಿಯಂತ್ರಣ ಹೇರುವುದು ಒಳ್ಳೆಯದಲ್ಲ. ಒಂದು ವೇಳೆ ನಿಯಂತ್ರಣ ಹೇರಿದರೆ ಅವರು ರಹಸ್ಯ ಮಾರ್ಗಗಳಿಂದ ಅವುಗಳನ್ನು ಬಳಸಲು ಆರಂಭಿಸುತ್ತಾರೆ. ಆ ಕಾರಣಕ್ಕೆ ಕೆಲವೊಂದು ನಿಯಮ ಹಾಗೂ ಷರತ್ತುಗಳನ್ನು ವಿಧಿಸುವ ಮೂಲಕ ಬಳಸಲು ಅನುಮತಿ ನೀಡಬೇಕು. ಮಕ್ಕಳ ಸಾಮಾಜಿಕ ಜಾಲತಾಣದ ಫ್ರೆಂಡ್ಸ್ ಲಿಸ್ಟ್, ಅವರ ಚಟುವಟಿಕೆಯ ಮೇಲೆ ಪೋಷಕರು ಸದಾ ಗಮನ ಹರಿಸುವುದು ಮುಖ್ಯವಾಗುತ್ತದೆ. ಜೊತೆಗೆ ಸಾಮಾಜಿಕ ಜಾಲತಾಣದಿಂದಾಗುವ ಅಪಾಯಗಳ ಬಗ್ಗೆಯೂ ಪೋಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು

**– ಡಾ. ರಾಜೇಂದ್ರ ಮಾದೇಗೌಡ ಕಿರಗಸೂರು,** ಮಕ್ಕಳ ಮತ್ತು ಹದಿಹರೆಯದ ಮನೋವೈದ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ, ನಿಮ್ಹಾನ್ಸ್ ಬೆಂಗಳೂರು

### ಮಕ್ಕಳ ಮೇಲೆ ನಿಗಾ: ಸಲಹೆ

- ವೈಯಕ್ತಿಕ ಮಾಹಿತಿಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡದಂತೆ ನೋಡಿಕೊಳ್ಳುವುದು.
- ಪ್ರತಿದಿನ ಪ್ರೈವೆಸಿ ಹಾಗೂ ಲೊಕೇಷನ್ ಸೆಟ್ಟಿಂಗ್ಸ್‌ಗಳನ್ನು ಪರಿಶೀಲನೆ ಮಾಡುವುದು.
- ಲಾಗಿನ್ ಪಾಸವರ್ಡ್, ಮೊಬೈಲ್ ಪಾಸ್‌ವರ್ಡ್ ಇತ್ಯಾದಿಗಳನ್ನು ಯಾರೊಂದಿಗೂ ಹಂಚಿಕೊಳ್ಳದಂತೆ ತಿಳಿಸಿ ಹೇಳುವುದು.
- ಸಾರ್ವಜನಿಕ ಕಂಪ್ಯೂಟರ್‌ಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸಿದ ನಂತರ ಮರೆಯದೇ ಲಾಗ್‌ಆಫ್ ಮಾಡಲು ತಿಳಿಸುವುದು. ಆದಷ್ಟು ಸಾರ್ವಜನಿಕ ಕಂಪ್ಯೂಟರ್‌ಗಳಲ್ಲಿ ಸಾಮಾಜಿಕ ಜಾಲತಾಣ ಬಳಸದೇ ಇರುವುದು ಉತ್ತಮ.
- ಹಲವು ಸಾಮಾಜಿಕ ಜಾಲತಾಣಗಳಲ್ಲಿ ಒಂದೇ ಬಾರಿಗೆ ಪೋಸ್ಟ್ ಆಗುವ ಆಯ್ಕೆಯನ್ನು ಡಿಸೇಬಲ್ ಮಾಡುವುದು.
- ಮಕ್ಕಳ ಮನಸ್ಸಿಗೆ ಘಾಸಿಗೊಳಿಸುವಂತಹ ಪೋಸ್ಟ್ ಮಾಡುವ ಹಾಗೂ ಕಮೆಂಟ್ ಮಾಡುವ ವ್ಯಕ್ತಿಗಳನ್ನು ಬ್ಲಾಕ್ ಮಾಡುವುದು.

# ದೈಹಿಕ ಕ್ಷಮತೆ ಹೆಚ್ಚಳಕ್ಕೆ ದೊಣ್ಣೆ ಮೆಣಸು, ಸಿಂಪಿ

ಮನಸ್ವಿ

ಕೋವಿಡ್–19 ಬಂದಾಗಿನಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವ ಬಗ್ಗೆ ಜನರು ಹೆಚ್ಚು ತಲೆ ಕೆಡಿಸಿಕೊಂಡಿದ್ದಾರೆ. ಯೋಗ, ವ್ಯಾಯಾಮದಿಂದ ದೇಹವನ್ನ ಕಾಪಾಡಿಕೊಳ್ಳುವ ಜೊತೆಗೆ ಆಹಾರದಲ್ಲೂ ಕಟ್ಟುನಿಟ್ಟು ಪಥ್ಯವನ್ನು ಪಾಲಿಸುತ್ತಿದ್ದಾರೆ. ದೇಹದಲ್ಲಿ ರೋಗ ನಿರೋಧಕಶಕ್ತಿಯನ್ನು ಹೆಚ್ಚಿಸುವ ಆಹಾರ ಪದಾರ್ಥಗಳ ಸೇವನೆ ಹೆಚ್ಚಿದೆ. ಅಂತಹ ಆಹಾರ ಪದಾರ್ಥಗಳು ದೇಹವನ್ನು ಕಾಯಿಲೆಗಳಿಂದ ರಕ್ಷಿಸುತ್ತವೆ. ಎಲ್ಲ ಕಾಲಕ್ಕೂ ಸಲ್ಲುವ, ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುವ ಕೆಲವು ಆಹಾರ ಪದಾರ್ಥಗಳು ಇಲ್ಲಿವೆ.



**ಕೆಂಪು ದೊಣ್ಣೆ ಮೆಣಸು:** ಪಲ್ಯ, ಬೋಂಡಾ–ಬಜ್ಜಿಯಂತಹ ಖಾದ್ಯ ತಯಾರಿಸಲು ದೊಣ್ಣೆಮೆಣಸು ಬಳಸುವುದು ಸಾಮಾನ್ಯ. ಆದರೆ ಆದಷ್ಟು ಹೆಚ್ಚು ಕೆಂಪುದೊಣ್ಣೆ ಮೆಣಸನ್ನು ಬಳಸಬೇಕು. ಇದರಿಂದ ಆರೋಗ್ಯ ಸಮಸ್ಯೆಗಳಿಂದ ದೂರ ಇರಬಹುದು. ಇದರಲ್ಲಿರುವ ವಿಟಮಿನ್ ಸಿ ಅಂಶ ದೇಹದಲ್ಲಿ ಪ್ರತಿರಕ್ಷಣಾ ವ್ಯವಸ್ಥೆ ಹೆಚ್ಚುವಂತೆ ಮಾಡುತ್ತದೆ. ಅಲ್ಲದೇ ಶೀತ, ಜ್ವರದಂತಹ ಸಾಮಾನ್ಯ ರೋಗ ಬಾರದಂತೆ ತಡೆಯುತ್ತದೆ.



**ಗ್ರೀನ್ ಟೀ ಸೇವನೆ:** ಈ ಕಾಲದಲ್ಲಿ ಕಾಫಿ, ಟೀ ಸೇವನೆಗಿಂತ ಗ್ರೀನ್ ಟೀ ಸೇವನೆ ಬಹಳ ಉತ್ತಮ. ಇದು ದೇಹವು ಕಾಯಿಲೆಗಳ ವಿರುದ್ಧ ಹೋರಾಡಲು ನೆರವಾಗುತ್ತದೆ. ಇದರಲ್ಲಿ ಆ್ಯಂಟಿ ಆಕ್ಸಿಡೆಂಟ್ ಅಂಶ ಹೆಚ್ಚಿದ್ದು ದೇಹದಲ್ಲಿನ ಕೆಟ್ಟ ಕೊಬ್ಬಿನಂಶದ ಸಂಗ್ರಹಣೆಯನ್ನು ನಿಯಂತ್ರಿಸುತ್ತದೆ. ಇದರಲ್ಲಿ ಸ್ವಲ್ಪ ಪ್ರಮಾಣದ ಕೆಫೀನ್ ಅಂಶವಿದ್ದು ಇದು ದೇಹವನ್ನು ಆವರಿಸುವ ಆಲಸ್ಯವನ್ನು ದೂರ ಮಾಡುತ್ತದೆ.

**ಸೋಂಪು ಸೇವಿಸಿ:** ಸೋಂಪಿ (ಫೆನೆಲ್) ನಲ್ಲಿ ವಿಟಮಿನ್ ಸಿ ಅಂಶ ಅಧಿಕವಾಗಿದೆ. ಅಲ್ಲದೇ ದೇಹಕ್ಕೆ ಅವಶ್ಯಕವಾಗುವ ಖನಿಜಾಂಶಗಳಾದ ಪೊಟ್ಯಾಷಿಯಂ, ಕಬ್ಬಿಣಾಂಶ, ಕ್ಯಾಲ್ಸಿಯಂ, ಜಿಂಕ್, ಸತು, ಸಿಲೆನಿಯಂ ಅಂಶಗಳು ಹೆಚ್ಚಿರುತ್ತವೆ. ಇದರ ಸೇವನೆಯಿಂದ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುವುದಲ್ಲದೇ ಸೋಂಕು ಉಂಟಾಗುವುದನ್ನು ತಪ್ಪಿಸಬಹುದು.

**ಚಿಪ್ಪಿನೊಳಗಿನ ಆಹಾರ:** ಸಿಂಪಿ ಅಥವಾ ಕಪ್ಪೆಚಿಪ್ಪು ಸೇವನೆ ತುಂಬಾ ಉತ್ತಮ. ಇದರಲ್ಲಿರುವ ವಿಟಮಿನ್ ಸಿ ಹಾಗೂ ಇ ಅಂಶ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚುವಂತೆ ಮಾಡಿ ಕಾಯಿಲೆಗಳಿಂದ ದೇಹವನ್ನು ರಕ್ಷಿಸುತ್ತದೆ.

**ಸಾಮನ್ ಮೀನು:** ಮಾಂಸಾಹಾರಿಗಳು ಹೆಚ್ಚು ಇಷ್ಟಪಡುವ ಸಾಮನ್ ಮೀನನ್ನು ಸೇವಿಸುವುದು ಸೂಕ್ತ. ಇದು



ದೇಹದಲ್ಲಿ ಟಿ–ಜೀವಕೋಶಗಳ ಸಂಖ್ಯೆಯನ್ನು ಹೆಚ್ಚಿಸಿ ರೋಗ ನಿರೋಧಕ ಶಕ್ತಿ ಹೆಚ್ಚುವಂತೆ ಮಾಡುತ್ತದೆ. ದೇಹದಲ್ಲಿ ಟಿ–ಜೀವಕೋಶಗಳ ಸಂಖ್ಯೆ ಅಧಿಕ ಇರುವವರಲ್ಲಿ ಕಾಯಿಲೆ ಕಡಿಮೆ ಎಂಬ ಮಾತಿದೆ. ಅಷ್ಟೇ ಅಲ್ಲದೇ ಇದರಲ್ಲಿ ವಿಟಮಿನ್ ಡಿ ಅಂಶ ಅಧಿಕವಿದೆ. ಅದರೊಂದಿಗೆ ಒಮೆಗಾ–3 ಕೊಬ್ಬಿನಂಶವು ಇದರಲ್ಲಿ ಹೆಚ್ಚಿರುತ್ತದೆ.

# ವಯಸ್ಸಿನ ಅಂತರ ಹೆಚ್ಚಿದ್ದರೆ ಮಗುವಾಗುವುದು ಕಷ್ಟವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ಪ್ರಶ್ನೆ: ನನಗೆ 28 ವರ್ಷ, ಪತಿಗೆ 38 ವರ್ಷ ವಯಸ್ಸು. ಮದುವೆಯಾಗಿ 6 ತಿಂಗಳುಗಳಾಗಿವೆ., ಇನ್ನಾರು ತಿಂಗಳು ಮಕ್ಕಳು ಬೇಡ ಅಂದುಕೊಂಡಿದ್ದೀನಿ. ಋತುಚಕ್ರ ನಿಯಮಿತವಾಗಿದೆ. ನನಗೆ ಹಾಗೂ ಪತಿಗೆ 10 ವರ್ಷ ಅಂತರವಿದ್ದು, ಇದರಿಂದ ಮಕ್ಕಳಾಗುವುದು ಕಷ್ಟವೇ?**

**ದೀಕ್ಷಾ, ಮಂಗಳೂರು**

ಉತ್ತರ: ಅಂಡಾಣು ಮತ್ತು ಪುರುಷರ ವೀರ್ಯಾಣುಗಳ ಸಮಾಗಮದಿಂದ ಭ್ರೂಣೋತ್ಪತ್ತಿಯಾಗಿ ಸಂತಾನ ಪ್ರಾಪ್ತಿಯಾಗುವುದು. ಹೆಣ್ಣಿನಲ್ಲಿ ಋತುಚಕ್ರ ಆರಂಭದಿಂದ ಅಂದರೆ ಸುಮಾರು 12– 13 ವರ್ಷದೊಳಗಾಗಿ ಋತುಬಂಧದವರೆಗೆ ಅಂದರೆ ಸುಮಾರು 48 ರಿಂದ 50 ವರ್ಷವಾಗುವುದರೊಳಗೆ ಅಂಡಾಣು ಬಿಡುಗಡೆಯಾಗುತ್ತಿದ್ದರೂ, ಆರೋಗ್ಯವಂತ ಸಂತಾನಪ್ರಾಪ್ತಿಗಾಗಿ ಸೂಕ್ತ ವಯಸ್ಸು 22 ರಿಂದ 35 ವರ್ಷಗಳೊಳಗಾಗಿ. ಅದ್ದರಿಂದ ತಡಮಾಡದೇ ಮಗುವನ್ನು ಪಡೆಯಲು ಪ್ರಯತ್ನಿಸಿ. ಪುರುಷರಲ್ಲಿ ಹದಿವಯಸ್ಸಿನಲ್ಲಿ ಆರಂಭವಾಗುವ ವೀರ್ಯಾಣುಗಳ ಉತ್ಪಾದನಾಕ್ರಿಯೆ 70ವರ್ಷಗಳವರೆಗೂ ಅಡೆತಡೆಯಿಲ್ಲದೇ ಮುಂದುವರಿಯುತ್ತದೆ. ಲೈಂಗಿಕ ಆಸಕ್ತಿ ಹಾಗೂ ಚೋದಕಶಕ್ತಿ ಕೂಡ ಹೆಚ್ಚಿನ ಮಹಿಳೆಯರಲ್ಲಿ ಬೇಗನೆ ಕ್ಷೀಣಿಸುತ್ತಾ ಬರುತ್ತದೆ. ಆದರೆ ಆರೋಗ್ಯವಂತ ಪುರುಷರಲ್ಲಿ ಇವೆರಡೂ ಪ್ರಕ್ರಿಯೆ ಬಹಳ ನಿಧಾನವಾಗಿ ಕ್ಷೀಣಿಸುತ್ತಾ ಬರುತ್ತದೆ. ಆದ್ದರಿಂದ ನಿಮ್ಮಿಬ್ಬರ ನಡುವೆ ವಯಸ್ಸಿನ ಅಂತರದ ಬಗ್ಗೆ ನಿಮಗೆ ಆತಂಕಬೇಡ. ಆದರೆ ತಡ ಮಾಡಬೇಡಿ, ಅದಷ್ಟು ಬೇಗ ಮಗು ಹೊಂದಲು ಪ್ರಯತ್ನಿಸಿ, ಅಂದರೆ ಋತುಚಕ್ರದ 12ನೇ ದಿನದಿಂದ 18 ದಿನದವರೆಗೆ ತಪ್ಪದೇ ಸತಿ-ಪತಿಗಳ ಮಿಲನವಾದಲ್ಲಿ ಸಂತಾನ ಫಲಪ್ರದವಾಗುತ್ತದೆ. ವಿಫಲವಾದರೆ ತಜ್ಞವೈದ್ಯರನ್ನು ಸಂಪರ್ಕಿಸಿ.

- **ಪ್ರಶ್ನೆ: ನನಗೆ 31 ವರ್ಷ, ಮದುವೆ ನಿಶ್ಚಯವಾಗಿದೆ. ಶಾಲೆಯಲ್ಲಿ ಶಿಕ್ಷಕಿಯಾಗಿದ್ದರಿಂದ 2 ವರ್ಷ ಮಗು ಬೇಡವೆಂದು ತೀರ್ಮಾನಿಸಿದ್ದೇನೆ. ತಡವಾದರೆ ಏನೂ ತೊಂದರೆಯಿಲ್ಲವೇ?**

**ಹೆಸರು, ಊರು ಇಲ್ಲ,**

ಉತ್ತರ: ನಿಮಗೆ ಕುಟುಂಬದ, ಉದ್ಯೋಗದ ಹೊಣೆಗಾರಿಕೆ, ಮಕ್ಕಳ ಜಂಜಾಟ ತಕ್ಷಣವೇ ಬೇಡ ಎನಿಸಿರಬೇಕು. ಆದರೆ ಮೇಲೆ ತಿಳಿಸಿದ ಹಾಗೆ ಹೆಣ್ಣಿನ ಸಂತಾನೋತ್ಪತ್ತಿ ಸಾಮರ್ಥ್ಯ 30 ವರ್ಷಗಳ ನಂತರ ಕಡಿಮೆಯಾಗುತ್ತಾ ಬರುವುದಲ್ಲದೆ ಗರ್ಭಧಾರಣೆ ತಡವಾದಾಗ ಗರ್ಭಪಾತ, ಅಕಾಲಿಕ ಹೆರಿಗೆ, ಮಗುವಿನ ಅಸಮರ್ಪಕ ಬೆಳವಣಿಗೆ, ಆಟಿಸಮ್ ಮತ್ತು ಡೌನ್‌ಸಿಂಡ್ರೋಮ್ ಆಗುವ ಸಂಭವ ಹೆಚ್ಚು. ಜೊತೆಗೆ ಗರ್ಭಿಣಿಯರಲ್ಲಿ ಮಧುಮೇಹ ಸಮಸ್ಯೆ, ಏರುರಕ್ತದೊತ್ತಡದ ಸಮಸ್ಯೆ, ಸಿಜೇರಿಯನ್ ಆಗುವ ಸಂಭವ, ಅಸಮರ್ಪಕ ಸ್ತನ್ಯಪಾನ, ಇವೆಲ್ಲವುಗಳ ಸಾಧ್ಯತೆ ಹೆಚ್ಚಾಗಬಹುದು. ಆದ್ದರಿಂದ ತಡಮಾಡದೇ ಮಗು ಬೇಕೆಂದಿದ್ದರೆ ಬೇಗನೆ ಪ್ರಯತ್ನಿಸಿ. ಆರೋಗ್ಯವಂತ ಮಗುವನ್ನು ಪಡೆಯಿರಿ.

- **ಪ್ರಶ್ನೆ: ನನಗೆ 25 ವರ್ಷ. 20 ವರ್ಷವಿರುವಾಗಲೇ ನಾನು ಪ್ರೇಮವಿವಾಹ ಮಾಡಿಕೊಂಡು ಮೊದಲ ತಿಂಗಳೇ ಗರ್ಭ ಧರಿಸಿ ಮಗು ಬೇಡವೆಂದು ಮಾತ್ರೆ ತೆಗೆದುಕೊಂಡೆ. ಹಾಗೇ ಕಾರಣಾಂತರಗಳಿಂದ 3 ಬಾರಿ ಗರ್ಭವನ್ನು ನಾನೇ ಹಾಳು ಮಾಡಿಕೊಂಡು ಬಿಟ್ಟೆ. ಆದರೆ ಈಗ ಮಗು ಬೇಕೆಂದು ಪ್ರಯತ್ನಿಸುತ್ತಿದ್ದರೂ ಎರಡರಿಂದ ಎರಡೂವರೆ ತಿಂಗಳಿಗೆ ಒಟ್ಟು ನಾಲ್ಕು ಬಾರಿ ಗರ್ಭಪಾತ ಆಗಿದೆ. ವೈದ್ಯರು ಪರೀಕ್ಷಿಸಿ ಏನೂ ತೊಂದರೆ ಇಲ್ಲ ಅಂದಿದ್ದಾರೆ. ನನಗೆ ಭಯ ಆಗ್ತಿದೆ. ಇದಕ್ಕೆ ಪರಿಹಾರವೇ ಇಲ್ಲವೇ?**

**ಆಶಾ, ಊರಿನ ಹೆಸರಿಲ್ಲ**

ಉತ್ತರ: ಆಶಾರವರೆ, ನೀವು ಪ್ರೇಮವಿವಾಹವಾಗಿದ್ದೇನೂ ತಪ್ಪಿಲ್ಲ. ಆದರೆ ಮದುವೆಯ ಉದ್ದೇಶ ಮೊದಲನೆಯದಾಗಿ ಗಂಡುಹೆಣ್ಣಿನ ಬಯಕೆಗಳನ್ನು ಪೂರೈಸುತ್ತಾ ಒಂದೇ ಮನಸ್ಸಿನಿಂದ ಪರಸ್ಪರ ಸಹಕರಿಸುತ್ತಾ ಬಾಳುವುದು. ಎರಡನೆಯದಾಗಿ ಅದರ ಫಲವಾಗಿ ಅನಿವಾರ್ಯವಾಗಿಯೋ ಅಥವಾ ಅವಶ್ಯವಾಗಿಯೋ ಸಂತಾನ ಪಡೆಯುವುದು. ಯಶಸ್ವಿ ದಾಂಪತ್ಯದಲ್ಲಿ ಜೀವನದ ಅವಿಭಾಜ್ಯ ಅಂಗವಾದ, ನಾಳೆ ಹುಟ್ಟಬಹುದಾದ ಮಕ್ಕಳ ಸಂಖ್ಯೆ ಎಷ್ಟಿರಬೇಕು? ಮಕ್ಕಳಾಗುವ ವೈಜ್ಞಾನಿಕ ಪ್ರಕ್ರಿಯೆ ಹೇಗೆ? ಮಕ್ಕಳಾಗದ ಹಾಗೆ ಹೇಗೆ ಲೈಂಗಿಕಸುಖವನ್ನು ಪಡೆಯುವುದು? ಎಂಬುದನ್ನು ಸತಿಪತಿಯರಿಬ್ಬರೂ ತಿಳಿದಿರಬೇಕು. ಗರ್ಭಧಾರಣೆ ಒಂದು ಅಪೇಕ್ಷಿತ ಸಂಭ್ರಮವಾಗಬೇಕೇ ಹೊರತು ಅನಪೇಕ್ಷಿತ ಅವಘಡವಾದಾಗ, ಗರ್ಭಪಾತದಂತಹ ಪ್ರಕ್ರಿಯೆಯಿಂದ ಎಷ್ಟೇ ವ್ಯವಸ್ಥಿತವಾಗಿ ಮಾಡಿದರೂ ಕೂಡ ಗರ್ಭಕೋಶಕ್ಕೆ ಸೋಂಕಾಗಬಹುದು, ಗರ್ಭನಾಳದ ಅಡೆತಡೆಯಾಗಬಹುದು. ಹೀಗಾಗಿ ನೀವಷ್ಟೇ ಅಲ್ಲ ವಿವಾಹವಾಗಿ ಉತ್ತಮ ದಾಂಪತ್ಯ ಹೊಂದಬಯಸುವ ಪ್ರತಿಯೊಬ್ಬರೂ ಸಂತಾನೋತ್ಪತ್ತಿಕ್ರಿಯೆ, ಸಂತಾನ ನಿಯಂತ್ರಣ ಕ್ರಮಗಳ ಬಗ್ಗೆ ಅರಿವು ಹೊಂದಬೇಕು. ತಜ್ಞವೈದ್ಯರ ಸಲಹೆ ಪಡೆಯಬೇಕು. ನೀವೀಗ ಚಿಂತಿಸದೇ ಧೈರ್ಯದಿಂದಿದ್ದು ಮತ್ತೆ ಮಗು ಪಡೆಯಲು ತಜ್ಞರನ್ನು ಸಂಪರ್ಕಿಸಿ. ದಿನಾ 5 ಮಿ.ಗ್ರಾಂ ಫೋಲಿಕ್ ಆಸಿಡ್ ಮಾತ್ರೆ ತೆಗೆದುಕೊಳ್ಳಿ. ಗರ್ಭನಾಳ ಅಡೆತಡೆ ಇದೆಯೇ ಎಂದು ಪರೀಕ್ಷಿಸಿಕೊಳ್ಳಿ (ಟ್ಯೂಬ್ ಟೆಸ್ಟ್). ನಿಮ್ಮ ಪತಿಯ ವೀರ್ಯತಪಾಸಣೆಯೂ ಆಗಲಿ. ನಿಮಗೆ ಮಗು ಆಗುತ್ತದೆ ಎಂಬ ಭರವಸೆಯಿಂದಿರಿ.

### ಸ್ಪಂದನ...


ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ನಳಪಾಕ

# ಚಿಕನ್ ಗ್ರೇವಿ, ರೆಸ್ಟೋರೆಂಟ್ ಸ್ಟೈಲ್ ಕಬಾಬ್

ರೇಖಾ ಎಂ.

## ಚಿಕನ್ ಬಿರಿಯಾನಿ



**ಬೇಕಾಗುವ ಸಾಮಗ್ರಿಗಳು :** ಸೋನಾ ಮಸೂರಿ ಅಕ್ಕಿ- ಅರ್ಧ ಕೆಜಿ, ಚಿಕನ್ - ಅರ್ಧ ಕೆಜಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ - 2 ಚಮಚ, ಅಡುಗೆಎಣ್ಣೆ, ಪಲಾವ್ ಎಲೆ -2 , ಚಕ್ಕೆ - 3, ಲವಂಗ - 10, ಏಲಕ್ಕಿ - 6, ಮರಾಠಿ ಮೊಗ್ಗು - 4, ಕಲ್ಲು ಹೂ - 3, ತುಪ್ಪ - 2 ಚಮಚ, ಗರಂ ಮಸಾಲೆ ಪುಡಿ - 1 ಚಮಚ, ಖಾರದಪುಡಿ - 2 ಚಮಚ, ಅರಿಸಿನ - ಅರ್ಧ ಚಮಚ, ಕೊತ್ತಂಬರಿ ಪುಡಿ - 1 ಚಮಚ, ಟೊಮೆಟೊ - 4, ರುಚಿಗೆ ತಕ್ಕಷ್ಟು ಉಪ್ಪು, ಈರುಳ್ಳಿ - 2, ಹಸಿಮೆಣಸಿನಕಾಯಿ - 8, ಮೊಸರು - 1 ಕಪ್, ನಿಂಬೆಹಣ್ಣು - ಅರ್ಧ, ಕೊತ್ತಂಬರಿ ಸೊಪ್ಪು - 1 ಹಿಡಿ, ಪುದಿನ -1 ಹಿಡಿ

**ತಯಾರಿಸುವ ವಿಧಾನ:** ಒಂದು ದೊಡ್ಡ ಪಾತ್ರೆಗೆ ಎಣ್ಣೆ, ತುಪ್ಪ ಹಾಕಿ ಬಿಸಿಯಾದ ಮೇಲೆ ಪಲಾವ್ ಎಲೆ, ಚಕ್ಕೆ, ಲವಂಗ, ಏಲಕ್ಕಿ, ಮರಾಠಿ ಮೊಗ್ಗು, ಕಲ್ಲು ಹೂ ಹಾಕಿ ಹುರಿದುಕೊಳ್ಳಿ. ಅದಕ್ಕೆ ಕತ್ತರಿಸಿದ ಈರುಳ್ಳಿ, ಹಸಿಮೆಣಸಿನಕಾಯಿ ಹಾಕಿ ಬಾಡಿಸಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಹಾಕಿ ಹಸಿವಾಸನೆ ಹೋಗುವ ತನಕ ಹುರಿಯಿರಿ. ನಂತರ ಖಾರದ ಪುಡಿ, ಅರಿಸಿನ ಪುಡಿ ಹಾಕಿ. ಟೊಮೊಟೊ, ಉಪ್ಪು ಹಾಕಿ ಗೊಜ್ಜಿನ ರೀತಿ ಆಗುವ ತನಕ ಹುರಿದುಕೊಳ್ಳಿ. ಇದಕ್ಕೆ ತೊಳೆದು ಇಟ್ಟಿರುವ ಚಿಕನ್ ತುಂಡುಗಳನ್ನು ಹಾಕಿ, ಕೊತ್ತಂಬರಿ ಸೊಪ್ಪು, ಪುದಿನ, ಮೊಸರು ಹಾಕಿ ಕಲೆಸಿಕೊಳ್ಳಿ. ನಂತರ ಕೊತ್ತಂಬರಿಪುಡಿ, ಗರಂ ಮಸಾಲೆ ಪುಡಿ ಹಾಕಿ ಮಿಶ್ರಣ ಮಾಡಿ, ಮುಚ್ಚಳ ಹಾಕಿ 15 ನಿಮಿಷ ಮಧ್ಯಮ ಉರಿಯಲ್ಲಿ ಇಡಿ. ಚಿಕನ್ ಅರೆ ಬೆಂದ ನಂತರ 3 ಲೋಟ ನೀರು ಹಾಕಿ 10 ನಿಮಿಷ ಕುದಿಸಿ. ಅದಕ್ಕೆ ತೊಳೆದ ಅಕ್ಕಿ ಹಾಕಿ, ನಿಂಬೆರಸ ಸೇರಿಸಿ 15 ನಿಮಿಷ ದೊಡ್ಡ ಉರಿಯಲ್ಲಿ ಮುಚ್ಚಳ ಮುಚ್ಚಿ ಬೇಯಿಸಿಕೊಳ್ಳಿ. ಮುಕ್ಕಾಲು ಭಾಗ ಬೆಂದ ನಂತರ ಮತ್ತೆ ಪಾತ್ರೆಗೆ ಮುಚ್ಚಳ ಮುಚ್ಚಿ ಯಾವುದಾದರೂ ತೂಕ ಇರುವ ವಸ್ತು ಇಟ್ಟು ಅತೀ ಕಡಿಮೆ ಉರಿಯಲ್ಲಿ 15 ನಿಮಿಷ ಧಮ್ ಕಟ್ಟಿ ಇಡಿ. ಈಗ ಬಲು ರುಚಿಯಾದ ಚಿಕನ್ ಬಿರಿಯಾನಿ ಸಿದ್ಧ.

## ಚಿಕನ್ ಗ್ರೇವಿ



**ಬೇಕಾಗುವ ಸಾಮಗ್ರಿಗಳು:** ಚಿಕನ್ - ಅರ್ಧ ಕೆಜಿ, ಖಾರದಪುಡಿ - ಅರ್ಧ ಚಮಚ, ಅರಿಸಿನ ಪುಡಿ - ಅರ್ಧ ಟೀ ಚಮಚ, ಕೊತ್ತಂಬರಿ ಪುಡಿ - ಅರ್ಧ ಚಮಚ, ಬೆಳ್ಳುಳ್ಳಿ - 15 ಎಸಳು, ಶುಂಠಿ - 2 ಇಂಚು, ಈರುಳ್ಳಿ - 2, ಹಸಿರು ಮೆಣಸಿನಕಾಯಿ - 5,
ಟೊಮೆಟೊ - ಚಿಕ್ಕದು 1, ಪುದೀನ - 6 ಎಲೆ, ಕೊತ್ತಂಬರಿ ಸೊಪ್ಪು - 1 ಹಿಡಿ, ನಿಂಬೆಹಣ್ಣು - 1/2, ಕರಿಬೇವು - ಸ್ವಲ್ಪ, ಚಕ್ಕೆ - 1 ತುಂಡು, ಲವಂಗ - 2, ಏಲಕ್ಕಿ - 1, ಸೋಂಪು - 1/4 ಟೀ ಚಮಚ, ಕರಿಮೆಣಸು - 1/2 ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಅಡುಗೆ ಎಣ್ಣೆ.

**ತಯಾರಿಸುವ ವಿಧಾನ:** ಒಲೆ ಮೇಲೆ ಬಾಣಲೆ ಇಟ್ಟು 3 ಚಮಚ ಎಣ್ಣೆ ಹಾಕಿ ಬಿಸಿ ಮಾಡಿ. ಕತ್ತರಿಸಿದ ಈರುಳ್ಳಿ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ ಸೇರಿಸಿ, ಇದರ ಜೊತೆ ಚಕ್ಕೆ, ಲವಂಗ, ಏಲಕ್ಕಿ, ಸೋಂಪು, ಕರಿಮೆಣಸು ಹಾಕಿ ಚನ್ನಾಗಿ ಹುರಿದುಕೊಳ್ಳಿ. ಅರ್ಧ ಭಾಗ ಹುರಿದ ನಂತರ ಟೊಮೆಟೊ ಹಾಕಿ, ಟೊಮೆಟೊ ನೀರು ಬಿಡುವವರೆಗೂ ಹುರಿಯಿರಿ. ಹುರಿದ ಮಿಶ್ರಣ ಬದಿಗೆ ಇಡಿ. ಸ್ವಲ್ಪ ತಣ್ಣಗೆ ಆದ ಮೇಲೆ ಅದಕ್ಕೆ ಪುದಿನ, ಕೊತ್ತಂಬರಿ ಸೊಪ್ಪು, ಸ್ವಲ್ಪ ನೀರು ಸೇರಿಸಿ ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಕೊಳ್ಳಿ. ಈಗ ಅದೇ ಬಾಣಲೆಗೆ ತೊಳೆದ ಚಿಕನ್ ಹಾಕಿ, ಸ್ವಲ್ಪ ಕರಿಬೇವಿನ ಸೊಪ್ಪು, ಉಪ್ಪು ಹಾಕಿ 10 ನಿಮಿಷ ಚೆನ್ನಾಗಿ ಹುರಿದುಕೊಳ್ಳಿ. ಅರ್ಧ ಚಿಕನ್ ಬೆಂದ ನಂತರ ಖಾರದಪುಡಿ, ಅರಿಸಿನ ಪುಡಿ, ಕೊತ್ತಂಬರಿಪುಡಿ, ಸ್ವಲ್ಪ ಉಪ್ಪು ಹಾಕಿ ಹುರಿಯಿರಿ. 3 ನಿಮಿಷಗಳ ನಂತರ ರುಬ್ಬಿದ ಮಸಾಲೆ ಹಾಕಿಕೊಳ್ಳಿ, ಇದಕ್ಕೆ ಸ್ವಲ್ಪ ನೀರು ಹಾಕಿ ಮಿಶ್ರಣ ಮಾಡಿಕೊಳ್ಳಿ, 15 ನಿಮಿಷ ಮಧ್ಯಮ ಉರಿಯಲ್ಲಿ ಮುಚ್ಚಳ ಮುಚ್ಚಿ ಬೇಯಿಸಿಕೊಳ್ಳಿ. ಚಿಕನ್ ಬೆಂದ ನಂತರ ರುಚಿಯಾದ ಚಿಕನ್ ಗ್ರೇವಿ ಸವಿಯಲು ಸಿದ್ಧ.

## ರೆಸ್ಟೋರೆಂಟ್ ಸ್ಟೈಲ್ ಚಿಕನ್ ಕಬಾಬ್



ಬೇಕಾಗುವ ಸಾಮಗ್ರಿಗಳು: ಚಿಕನ್ - ಅರ್ಧ ಕೆಜಿ, ಮೈದಾಹಿಟ್ಟು-3 ಚಮಚ, ಕಾರ್ನ್ ಫ್ಲೋರ್ - 2 ಚಮಚ, ಅಕ್ಕಿಹಿಟ್ಟು - 1 ಚಮಚ, ಮೊಟ್ಟೆ - 1, ಅಚ್ಚ ಖಾರದ ಪುಡಿ - 1 ಚಮಚ, ಕೊತ್ತಂಬರಿ ಪುಡಿ - ಅರ್ಧ ಚಮಚ, ಗರಂ ಮಸಾಲೆ ಪುಡಿ - ಅರ್ಧ ಚಮಚ, ಕರಿಮೆಣಸಿನ ಪುಡಿ- ಕಾಲು ಚಮಚ, ಅರಿಸಿನ - ಕಾಲು ಚಮಚ, ಜೀರಿಗೆ ಪುಡಿ - ಅರ್ಧ ಚಮಚ, ಕೆಂಪು ಫುಡ್ ಕಲರ್ - 1 ಚಿಟಿಕೆ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ - 1 ಚಮಚ, ಒಂದು ನಿಂಬೆ ಹಣ್ಣಿನ ರಸ, ಅಡುಗೆ ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಒಂದು ಪಾತ್ರೆಗೆ ಮೈದಾ ಹಿಟ್ಟು, ಕಾರ್ನ್ ಫ್ಲೋರ್, ಅಕ್ಕಿ ಹಿಟ್ಟು, ಮೊಟ್ಟೆ, ಖಾರದಪುಡಿ, ಕೊತ್ತಂಬರಿ ಪುಡಿ, ಗರಂ ಮಸಾಲೆ ಪುಡಿ, ಕರಿಮೆಣಸಿನ ಪುಡಿ, ಅರಿಸಿನ ಪುಡಿ, ಜೀರಿಗೆ ಪುಡಿ, ಕೆಂಪು ಫುಡ್ ಕಲರ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ, ಇದಕ್ಕೆ ಸ್ವಲ್ಪ ಉಪ್ಪು ಸೇರಿಸಿಕೊಳ್ಳಿ. ನಂತರ ಮೊಟ್ಟೆ, ಶುಂಠಿ ಬೆಳ್ಳುಳ್ಳಿ ಪೇಸ್ಟ್, ನಿಂಬೆರಸವನ್ನು ಹಾಕಿ ಚೆನ್ನಾಗಿ ಗಟ್ಟಿಯಾದ ಹದಕ್ಕೆ ಕಲೆಸಿಕೊಳ್ಳಿ. ಇದಕ್ಕೆ ಚಿಕನ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಅರ್ಧ ಗಂಟೆ ಮುಚ್ಚಳ ಹಾಕಿ ಬದಿಗೆ ಇಡಿ. ಒಂದು ಬಾಣಲೆಗೆ ಎಣ್ಣೆ ಹಾಕಿ ಕಾಯಲು ಇಡಿ. ಈಗ ಮಿಶ್ರಣ ಮಾಡಿದ ಒಂದೊಂದೆ ಚಿಕನ್ ಎಣ್ಣೆಯಲ್ಲಿ ಹಾಕಿ, ಮಧ್ಯಮ ಉರಿಯಲ್ಲಿ ಬೇಯಿಸಿ.